ಸುದರ್ಶನ ಪ್ರಕಾಶನ

1959


ನಕ್ಷತ್ರ ಗಾನ
ಇಂದಿರಾತನಯ
ಸುದರ್ಶನ
ಪ್ರಕಾಶನ

Mr. K. Srinivasa Rao
Sundar Cafe Boarding House
HOSPET

ನಕ್ಷತ್ರ ಗಾನ

(ಕಾಂಚನಗೀತೆಯ ಎರಡನೆ ಭಾಗ)

ಇಂದಿರಾತನಯ

ಸುದರ್ಶನ ಪ್ರಕಾಶನ
ತಾರಾನಿವಾಸ :: ತಿಪಟೂರು

ಸುದರ್ಶನ ಪ್ರಕಟನೆ ಐವತ್ತ ಐದು

ಸುದರ್ಶನ ಕಾದಂಬರಿ ನಲವತ್ತ ಎರಡು

ಪ್ರಥಮ ಮುದ್ರಣ: ಮಾರ್ಚಿ ೧೯೫೯

ಮುಖಚಿತ್ರ : ಜಿ. ಕೆ. ಮೂರ್ತಿ

ಅಕ್ಷರ ರಚನೆ : ಎಸ್. ಎಲ್. ನಾರಾಯಣ್

ಬೆಲೆ : ರೂ. ೨-೦೦

ಮುದ್ರಣ:

ಇಂಡಿಯಾ ಪ್ರೆಸ್, ಮೈಸೂರು

ಅರಿಕೆ

ಬಹುಕಾಲದಿಂದಲೂ ನನ್ನ ಕನ್ನಡ ಜನತೆ ನಿರೀಕ್ಷಿಸುತ್ತಿದ್ದ 'ನಕ್ಷತ್ರ ಗಾನ' ಇಷ್ಟು ತಡವಾಗಿ ಹೊರಬರುತ್ತಿರುವುದಕ್ಕೆ ಕ್ಷಮೆ ಯಾಚಿಸುತ್ತೇನೆ.

ನಂದನವನ್ನು ನರಕವನ್ನಾಗಿಸಿದ, ಸಮಾಜದ ಹಚ್ಚುಹಳಿಯ ಸಮಸ್ಯೆಯ ಭೂತದ ಚಿತ್ರಣವಾದ ಈ ಕೃತಿ ಈಗಾಗಲೇ ಪ್ರಕಟವಾಗಿರುವ, 'ಕಾಂಚನಗೀತೆ' ಕಾದಂಬರಿಯ ಉತ್ತರ ಭಾಗ.

ಸುದರ್ಶನ ಪ್ರಕಾಶನದ ಆತ್ಮೀಯ ಮಿತ್ರರಾದ ಶ್ರೀ ಮತ್ತು ಶ್ರೀಮತಿ ತಾ. ರಾ. ನಾಗರಾಜ ಅವರು ಆದರದಿಂದ ಈ ಕೃತಿಯನ್ನು ಪ್ರಕಟಿಸುತ್ತಿರುವುದಕ್ಕಾಗಿ ಕೃತಜ್ಞನಾಗಿದ್ದೇನೆ.

ಇಂದಿರಾತನಯ

ಅರ್ಪಣೆ

ದಿವಂಗತರಾದ ನನ್ನ ಮಾವನವರಿಗೆ—

ಇಂದಿರಾತನಯ

೧

‘ ಮೈಸೂರು........ಮೈಸೂರು........’

ಮೈಸೂರಿನ ಹೆಸರು ಶಾಮುವಿನ ಕಿವಿಯಲ್ಲಿ ಮಧುರವಾಗಿ ಪ್ರತಿಧ್ವನಿಸುತ್ತಿತ್ತು. ‘ ನವ ಕರ್ನಾಟಕ ’ ದಿನಪತ್ರಿಕೆಯ ಉಪಸಂಪಾದಕನಾಗಿ ಕೆಲಸಕ್ಕೆ ಸೇರಿದ ಮೇಲೆ, ಪತ್ರಿಕೆಯ ಪ್ರತಿನಿಧಿಯಾಗಿ ಮೈಸೂರಿಗೆ ತೆರಳುವ ಸುಯೋಗ ದೊರಕಿದುದಕ್ಕೆ ಅವನಿಗೆ ತುಂಬಾ ಸಂತೋಷವಾಗಿತ್ತು.

ಎರಡು ದಿನಗಳ ಹಿಂದೆ ತಂದೆಯೊಡನೆ ಅಗ್ರಹಾರಕ್ಕೆ ಬಂದಿದ್ದ ರಾತ್ರಿ—

“ ಗೋವಿಂದಯ್ಯನವರ ಅಡ್ರೆಸ್ಸು ಕೊಟ್ಟಿದ್ದಾರಲ್ಲಾ ನಿಮ್ಮ ತಂದೆ—ಯಾಕೆ ಗೊತ್ತೆ ಶಾಮು ? ”

—ಎಂದು ಕೇಳಿದ್ದರು ತಾಯಿ ವೆಂಕಮ್ಮ.

“ ಸುಮ್ಮನೆ ಅವರ ಪರಿಚಯ ಮಾಡಿಕೊಂಡು, ಕ್ಷೇಮಸಮಾಚಾರ ವಿಚಾರಿಸಿಕೊಂಡು ಬರುವುದಕ್ಕಿರಬೇಕಮ್ಮ.”

“ ಅಷ್ಟೇ ಅಲ್ಲ ಮಗು, ಇನ್ನೂ ಒಂದು ವಿಶೇಷವಿದೆ ! ”

“ ಅದೇನಮ್ಮ, ಅಂತಹ ವಿಶೇಷ ? ”

—ಶಾಮು ಕುತೂಹಲದಿಂದ ಕೇಳಿದ್ದ.

“ ನಾನು ಹೇಳಿದರೆ ನೀನು ಸಿಟ್ಟುಮಾಡಿಕೊಳ್ಳುತ್ತೀಯೋ ಅಥವಾ ನಗುತ್ತೀಯೋ ? ”

“ ನಕ್ಕರೆ ನಗಬಹುದು. ಸಿಟ್ಟಂತೂ ಖಂಡಿತ ಮಾಡಿಕೊಳ್ಳುವುದಿಲ್ಲ ಹೇಳಮ್ಮ.”

ಎರಡು ಕ್ಷಣ ತಡೆದು ವೆಂಕಮ್ಮ ಹೇಳಿದ್ದರು—

“ ಗೋವಿಂದಯ್ಯನವರಿಗೆ ಒಬ್ಬಳು ಮಗಳಿದ್ದಾಳಂತೆ. ಅವರಿಗೆ ಭೂಮಿ–ಕಾಣಿ, ಆಸ್ತಿ–ಪಾಸ್ತಿ ತುಂಬಾ ಇದೆಯಂತೆ. ಆ ಹುಡುಗಿಯನ್ನು

ನಿನಗೇ ಕೊಡಬೇಕೊಂತ ಹಿಂದೆ ಒಂದುಸಾರಿ ಮಾತು ಬಂದಿತ್ತು. ನಾಣಿಯ ಮದುವೆಯ ಮಾತುಕತೆ ನಡೆಯುವಾಗ, 'ನನ್ನ ತಂಗಿಯ ಮಗಳೊಬ್ಬ ಳಿದ್ದಾಳೆ. ಅವಳನ್ನು ನಿಮ್ಮ ಇನ್ನೊಬ್ಬ ಹುಡುಗನಿಗೆ ಮಾಡಿಕೊಳ್ಳಬಹುದು' ಎಂದು ಶ್ರೀಕಂಠಯ್ಯನವರು ಹೇಳಿದ್ದ ಮಾತು ನನಗೆ ಚೆನ್ನಾಗಿ ಜ್ಞಾಪಕವಿದೆ. ಬಹುಶಃ ಅದಕ್ಕೇ ಇರಬೇಕು—ನಿಮ್ಮ ತಂದೆ 'ಗೋವಿಂದಯ್ಯನವರ ಮನೆಗೆ ಖಂಡಿತ ಹೋಗಿ ಬಾ' ಎಂದು ಹೇಳುತ್ತಿರುವುದು!"

"ಇದ್ದರೂ ಇರಬಹುದಮ್ಮ. ಅಪ್ಪನಿಗೆ ಯಾವಾಗಲೂ ಮದುವೆಯ ಯೋಚನೆಯೇ—ವರದಕ್ಷಿಣೆಯ ಯೋಚನೆ! ಹಣ ಬರುವ ದಾರಿ ಹುಡುಕು ವುದೇ ಅವರಿಗೆ ಕೆಲಸ!"

—ಎಂದು ನಕ್ಕು ನುಡಿದಿದ್ದ ಶಾಮು.

ಇದೀಗ ಅಗ್ರಹಾರದಿಂದ ಮೈಸೂರಿಗೆ ತೆರಳುತ್ತಿರುವ ಅವನ ಮನಸ್ಸಿನ ತುಂಬಾ ಬಣ್ಣಬಣ್ಣದ ಕನಸುಗಳು ತುಂಬಿಕೊಂಡಿದ್ದವು.

ಮೈಸೂರಿಗೆ ಹೋಗುತ್ತಿರುವುದು ಇದೇ ಮೊದಲು. ಅಲ್ಲಿ ಎಂತೆಂತಹ ಹೊಸ ಅನುಭವಗಳೋ ಏನೋ! ಅಲ್ಲದೆ, ತಂದೆಯ ಯೋಜನೆಯಂತೆ ತಾನು ಮದುವೆಯಾಗಬೇಕಾದ—ಬಹುದಾದ ಹುಡುಗಿಯನ್ನು ನೋಡುವ ಸಂಭ್ರಮ!

"ಇವತ್ತು ನಿಜವಾಗಿಯೂ ನಿನ್ನ ಮುಖ ತುಂಬಾ ಗೆಲುವಾಗಿದೆ ಶಾಮು"

—ಎಂದ ಜೊತೆಯಲ್ಲಿ ಪ್ರಯಾಣಮಾಡುತ್ತಿದ್ದ ಗೆಳೆಯ ಲಕ್ಷ್ಮಣ.

"ಹೌದು. ಹೊಸ ಅನುಭವಗಳನ್ನು ಪಡೆಯುವ ಕುತೂಹಲದಲ್ಲಿ ಉತ್ಸಾಹ-ಸಂತೋಷ ಇರಬೇಕಾದದ್ದೇ ಅಲ್ಲವೇ?"

—ಶಾಮು ನಕ್ಕು ಉತ್ತರಿಸಿದ.

ರೈಲು ಮೈಸೂರು ತಲಪಿದಾಗ, ಗೆಳೆಯರಿಬ್ಬರೂ ಇಳಿದರು. ಲಕ್ಷ್ಮಣ ರಮಾವಿಲಾಸ ಅಗ್ರಹಾರದಲ್ಲಿದ್ದ ತನ್ನ ಮನೆಗೆ ಶಾಮುವನ್ನು ಕರೆದುಕೊಂಡು ಹೋದ.

"ಮೈಸೂರಿಗೆ ಬಂದಿರುವುದು ಇದೇ ಮೊದಲು ಲಕ್ಷ್ಮಣ. ಈ ಊರಿನಲ್ಲಿ ನೋಡಬೇಕಾದ್ದು ಏನೇನಿದೆಯೋ ಎಲ್ಲವನ್ನೂ ತೋರಿಸಿಬಿಡು."

" ಅಗತ್ಯವಾಗಿ ಆಗಲಿ."

" ನಾನು ಅರಮನೆಯನ್ನು ನೋಡಬೇಕು. ಒಳಗೆ ಬಿಡುತ್ತಾರೆಯೇ ?"

" ಅರಮನೆ ಕಚೇರಿಗೆ ಹೋಗಿ 'ಪಾಸ್' ತೆಗೆದುಕೊಂಡು ಬರೋಣ. ಆ ಮೇಲೆ ಒಳಗೆ ಹೋಗಬಹುದು."

" ಸರಿ. ಹಾಗೇ ಮಾಡಿದರಾಯಿತು "

—ಎಂದ ಶಾಮು.

ಊಟ ಉಪಚಾರಗಳಿಗೆ ಲಕ್ಷ್ಮಣನ ಮನೆಯಲ್ಲೇನೂ ಕೊರತೆಯಿರಲಿಲ್ಲ. ಗೆಳೆಯರಿಬ್ಬರೂ ಆ ದಿನ ಸಂಪೂರ್ಣ ವಿಶ್ರಾಂತಿ ತೆಗೆದುಕೊಂಡು, ಸುಖವಾಗಿ ಕಳೆದರು.

ಮರುದಿನ ಬೆಳಗಾದೊಡನೆ ಇಬ್ಬರೂ ಸರಸ್ವತೀಪುರದ ಕಡೆಗೆ ಹೊರಟರು. ಹೊಸದಾಗಿ ಆರಂಭವಾಗಿದ್ದ ಸ್ಟುಡಿಯೋ ಒಳಗೆ ಹೋಗಿ, ಛಾಯಾಗ್ರಾಹಕ ಯಂತ್ರ, ಶಬ್ದಗ್ರಾಹಕ ಯಂತ್ರ, ಚಿತ್ರೀಕರಣದ ವೇದಿಕೆ—ಮೊದಲಾದುವುಗಳನ್ನು ನೋಡಿದುದಾಯಿತು. ಸ್ಟುಡಿಯೋ ವ್ಯವಸ್ಥಾಪಕರು ಅತಿಥಿಗಳನ್ನು ಆದರದಿಂದ ಸತ್ಕರಿಸಿದರು. ಮಧ್ಯಾಹ್ನದ ಕಾರ್ಯಕ್ರಮದಲ್ಲಿ—ಚಿತ್ರದ ಮುಹುರ್ತೋತ್ಸವದಲ್ಲಿ ಭಾಗವಹಿಸಿದನಂತರ ಗೆಳೆಯರಿಬ್ಬರೂ ಮನೆಗೆ ಮರಳಿದರು.

ಮುಂದಿನ ಮೂರು ದಿನಗಳಲ್ಲಿ ಮಹಾರಾಜರ ಅರಮನೆ, ಮನರಂಜಕ ಉದ್ಯಾನವನವಿಹಾರ, ಜಗನ್ಮೋಹನ ಚಿತ್ರಶಾಲೆ, ಚಾಮುಂಡಿಬೆಟ್ಟ, ಕಣ್ತಣಿಸುವ ಕೃಷ್ಣರಾಜಸಾಗರ— ಮೊದಲಾದುವನ್ನು ನೋಡಿದುದಾಯಿತು.

" ಸದ್ಯಕ್ಕೆ ಇಷ್ಟು ಸಾಕು. ಇನ್ನೊಂದು ಸಾರಿ ಬಂದಾಗ ನಂಜನಗೂಡಿಗೆ ಹೋಗಿಬರೋಣ "

—ಎಂದ ಲಕ್ಷ್ಮಣ.

" ನಾನು ಇಲ್ಲೊಬ್ಬರನ್ನು ನೋಡುವುದು ಇನ್ನೂ ಬಾಕಿ ಇದೆ "

—ಎನ್ನುತ್ತಾ ಶಾಮು ತನ್ನ ತಂದೆ ಕೊಟ್ಟ ವಿಳಾಸವನ್ನು ಲಕ್ಷ್ಮಣನಿಗೆ ತೋರಿಸಿದ.

" ಓಹೋ ! ಗೋವಿಂದಯ್ಯನವರೋ ? "

—ಎಂದ ಆಶ್ಚರ್ಯದಿಂದ ಲಕ್ಷ್ಮಣ.

" ನಿನಗೆ ಗೊತ್ತೆ ಲಕ್ಷ್ಮಣ ಇವರು ? "

" ಗೊತ್ತಿಲ್ಲದೆ ಉಂಟೆ !.... ಇವರು ಮೈಸೂರಿನಲ್ಲಿ ತುಂಬಾ ಪ್ರಸಿದ್ಧರಾದ ದೊಡ್ಡಮನುಷ್ಯರು."

" ಹೇಗೆ ? "

" ದಾನ–ಧರ್ಮ ಮಾಡುವುದರಲ್ಲಿ ಗೋವಿಂದಯ್ಯನವರು ಎತ್ತಿದಕೈ. ಹಿಂದೆ ಅವರು ನಗರಸಭೆಯ ಸದಸ್ಯರಾಗಿದ್ದಾಗ, ಈ ಮೊಹಲ್ಲಾದ ನಿವಾಸಿಗಳಿಗೆಲ್ಲಾ ಬಹಳ ಉಪಕಾರಮಾಡಿದ್ದಾರೆ. ಎಲ್ಲಾ ಕೋಮಿನ ವಿದ್ಯಾರ್ಥಿಗಳಿಗೂ ಅನುಕೂಲವಾಗಲೆಂದು ಒಂದು ಹಾಸ್ಟಲು ಕಟ್ಟುವುದಕ್ಕೆ ಹದಿನೈದು ಸಾವಿರ ರೂಪಾಯಿ ದಾನಮಾಡಿದ್ದಾರೆ. ಇಷ್ಟಾದರೂ ತುಂಬಾ ನಿರಾಡಂಬರ ವ್ಯಕ್ತಿ. ಬಹು ಸರಳಜೀವಿ."

" ಅವರನ್ನು ನಾನು ನೋಡಬೇಕಾಗಿದೆ ಲಕ್ಷ್ಮಣ."

" ಅದಕ್ಕೇನು—ಹೋಗೋಣ. ಅವರ ಮನೆ ಇಲ್ಲೇ ಇದೆ."

" ದೇವರಾಜ ಮೊಹಲ್ಲಾ ಎಂದಿದೆಯಲ್ಲಾ ಅವರ ವಿಳಾಸದಲ್ಲಿ. ಅದು ಇಲ್ಲಿಗೆ ತುಂಬಾ ದೂರವಾಗುತ್ತದೆಯೋ ? "

" ಇಲ್ಲ ಶಾಮು. ಇಲ್ಲೇ ಹತ್ತಿರದಲ್ಲಿದೆ "

—ಎಂದ ಲಕ್ಷ್ಮಣ.

ಅನಂತರ ಇಬ್ಬರೂ ವಿಳಾಸವನ್ನು ಪತ್ತೆ ಹಚ್ಚಲು ಹೊರಟರು. ಪರಕಾಲಸ್ವಾಮಿಗಳ ಮಠಕ್ಕೆ ಹತ್ತಿರದಲ್ಲೇ ಗೋವಿಂದಯ್ಯನವರ ಮನೆ. ಹುಡುಕಲು ಹೆಚ್ಚು ಹೊತ್ತಾಗಲಿಲ್ಲ.

ಬಾಗಿಲಿನ ಬಳಿಗೆ ಬಂದ ಶಾಮು—

" ಗೋವಿಂದಯ್ಯನವರ ಮನೆ ಇದೇನೇ ? "

— ಎಂದು ಕೇಳಿದ.

" ಹೌದು. ಯಾರು ನೀವು ? "

—ಕನ್ನಡಕ ಹಾಕಿಕೊಂಡು ಸುಮಾರು ಆರು ಅಡಿ ಎತ್ತರವಿದ್ದ ಕೆಂಪು ಹುಡುಗಿಯೊಬ್ಬಳು ಒಳಗಿನಿಂದ ಬಂದು ಕೇಳಿದಳು.

" ನಾನು ಬೆಂಗಳೂರಿನಿಂದ ಬಂದಿದ್ದೇನೆ. ಗೋವಿಂದಯ್ಯನವರನ್ನು ನೋಡಬೇಕಾಗಿತ್ತು."

" ತಮ್ಮ ಪರಿಚಯ ಕೇಳಬಹುದೇ ? "

" ನಾನು ' ನವ ಕರ್ನಾಟಕ ' ದಿನಪತ್ರಿಕೆಯ ಉಪಸಂಪಾದಕ."

" ತುಂಬಾ ಸಂತೋಷ. ಗೋವಿಂದಯ್ಯನವರು ನಮ್ಮ ತಂದೆ. ಅವರಿಂದ ನಿಮಗೇನಾಗಬೇಕಿತ್ತು ? ಅವರ ವಿಷಯವಾಗಿ ನಿಮ್ಮ ಪತ್ರಿಕೆಯಲ್ಲೇನಾದರೂ ಬರೆಯುತ್ತೀರಾ ? "

" ಹಾಗೇನೂ ಇಲ್ಲ. ನಾನು ಅವರನ್ನು ನೋಡಬೇಕಾಗಿದೆ. ನಮ್ಮ ತಂದೆಗೆ ಗೋವಿಂದಯ್ಯನವರು ಪರಿಚಿತರಂತೆ. ಅದಕ್ಕೋಸ್ಕರ ಅವರನ್ನು ಕಂಡುಬರಲು ಹೇಳಿದ್ದಾರೆ."

" ನಿಮ್ಮ ತಂದೆಯವರ ಹೆಸರು ? "

" ನಾಗಪ್ಪನವರು ಅಂತ. ರಿಟೈರ್ಡ್ ಸ್ಕೂಲ್ ಮೇಷ್ಟ್ರು. ಕೋಟಿ ತಾಲ್ಲೋಕು ಅಗ್ರಹಾರದಲ್ಲಿದ್ದಾರೆ."

" ಹೋ ! ನಮ್ಮ ಲಲಿತು ಮಾವನವರ ಮಕ್ಕಳೋ ? "

" ಹೌದು."

" ನೀವು ಅವರ ಕೊನೆಯ ಮಗ ಅಲ್ಲವೆ ? "

" ಹ್ಞಂ."

" ದಯವಿಟ್ಟು ಒಳಗೆ ಬನ್ನಿ. ನನಗೆ ಮೊದಲೇ ಗೊತ್ತಾಗಲಿಲ್ಲ. ಬಾಗಿಲಿನಲ್ಲೇ ನಿಲ್ಲಿಸಿ ತೊಂದರೆಕೊಟ್ಟೆ."

—ಎನ್ನುತ್ತಾ ಆ ಹುಡುಗಿ—ಸರೋಜ ಒಳಕ್ಕೆ ಸ್ವಾಗತಿಸಿದಳು.

ಶಾಮು ನಿಟ್ಟುಸಿರಿಡುತ್ತಾ, 'ತೆಂಗಿನ ಮರದಹಾಗಿರುವ ಈ ಹುಡುಗಿಯನ್ನೇ ತಾನು ಮದುವೆಯಾಗಬೇಕಾಗಿರುವುದು ! ' ಎಂದು ಮನಸ್ಸಿನಲ್ಲಿಯೇ ಅಂದುಕೊಂಡ.

ಲಕ್ಷ್ಮಣ ಮುಸಿಮುಸಿ ನಗುತ್ತಾ ಶಾಮುವಿನ ಮುಖ ನೋಡಿದ.

ಗೆಳೆಯರಿಬ್ಬರೂ ಒಳಕ್ಕೆ ಬಂದು, ವಿಶಾಲವಾದ ಅಂಗಳದಲ್ಲಿದ್ದ ಸೋಫಾದ ಮೇಲೆ ಕುಳಿತರು.

ಸುಮಾರು ಐದು ನಿಮಿಷಗಳಾದರೂ ಗೋವಿಂದಯ್ಯನವರ ಸುಳಿವಿಲ್ಲದ್ದನ್ನು ಕಂಡು ಶಾಮು ಕೇಳಿದ—

" ಗೋವಿಂದಯ್ಯನವರು ಮನೆಯಲ್ಲಿಲ್ಲವೇನು ? "

" ಒಳಗಡೆ ಇದ್ದಾರೆ. ಪೂಜೆ ಮುಗಿಯುತ್ತಾ ಬಂದಿತು. ಇನ್ನೇನು ಬರುತ್ತಾರೆ "

—ಎಂದಳು ಆಗ ತಾನೆ ಹೊರಗೆ ಬಂದ ಸರೋಜ.

ಎರಡು ನಿಮಿಷಗಳ ಬಳಿಕ ಎರಡು ಬಟ್ಟಲು ಕಾಫಿ ಬಂದಿತು.

" ಇದಕ್ಕೇನವಸರ ? ಗೋವಿಂದಯ್ಯನವರೂ ಬರಲಿ "

—ಎಂದ ಶಾಮು.

ಅವನ ಮಾತಿನ ಹಿಂದೆಯೇ ಬಂದರು ಗೋವಿಂದಯ್ಯ.

ಶಾಮು ತನ್ನ ಪರಿಚಯವನ್ನು ಅವರ ಮುಂದೆಯೇ ಅರಿಕೆ ಮಾಡಿಕೊಂಡ. ಅನಂತರ ಲಕ್ಷ್ಮಣನನ್ನೂ ಅವರಿಗೆ ಪರಿಚಯ ಮಾಡಿಸಿದ.

" ಇಷ್ಟು ಹತ್ತಿರದ ಸಂಬಂಧದವನಾಗಿ ನೀನು ಈ ಮನೆಯಲ್ಲಿಯೇ ಇಳಿದುಕೊಳ್ಳದಿದ್ದುದಕ್ಕಾಗಿ ನನಗೆ ತುಂಬಾ ಅಸಮಾಧಾನವಾಗಿದೆ "

—ಎಂದು ಕಳಕಳಿಯಿಂದ ನುಡಿದರು ಗೋವಿಂದಯ್ಯ.

" ಸ್ನೇಹಿತರ ಬಲವಂತ. ಮೊದಲೇ ಅವರಿಗೆ ಮಾತು ಕೊಟ್ಟದ್ದೆ. ಇನ್ನೊಂದು ಸಾರಿ ಬಂದಾಗ ನಿಮ್ಮಲ್ಲಿಯೇ ಇಳಿದುಕೊಳ್ಳುತ್ತೇನೆ."

" ಇನ್ನೊಂದು ಸಾರಿಯ ಮಾತು ಈಗೇಕೆ ? ಈಗಲೇ ಇಲ್ಲಿಗೆ ಬಂದು ಇದ್ದು ಬಿಡು."

" ಇಲ್ಲ. ಈಗಾಗಲೇ ನಾನು ಬಂದು ನಾಲ್ಕು ದಿನಗಳಾದುವು. ಇವತ್ತು ರಾತ್ರಿ ರೈಲಿಗೆ ಹೊರಡಬೇಕು."

" ಅದು ಖಂಡಿತ ಸಾಧ್ಯವಿಲ್ಲಪ್ಪ. ಈ ಮನೆಯಲ್ಲಿ ನೀನು ಒಪ್ಪತ್ತು ಊಟಮಾಡಿ, ಇದ್ದು ಹೋಗದಿದ್ದರೆ ನನಗೆ ಸಮಾಧಾನವೇ ಇಲ್ಲ "

—ಎಂದರು ಗೋವಿಂದಯ್ಯ.

ಬಹಳ ಬಲವಂತ ಮಾಡಿದ ಮೇಲೆ, ಶಾಮು ಅವರ ಮನೆಯಲ್ಲಿ ನಿಲ್ಲಲೇ ಬೇಕಾಯಿತು.

" ಸರೋಜಾ, ಇದೇನಮ್ಮಾ ಇವರಿಗೆ ಮೊದಲು ಕಾಫಿ ಕೊಟ್ಟು ಬಿಟ್ಟದ್ದೀ—ತಿಂಡಿ ಕೊಡದೆ ? "

—ಗೋವಿಂದಯ್ಯನವರು ಅಡಿಗೆಮನೆಯ ಕಡೆಗೆ ನೋಡುತ್ತಾ ಹೇಳಿದರು.

" ಇಲ್ಲಪ್ಪ. ನೀವು ಬರುವುದು ಹೊತ್ತಾಗಬಹುದೆಂದು ಅವರಿಗೆ ಮೊದಲು ಕಾಫಿ ಕೊಟ್ಟೆ. ನೀವು ಬಂದ ಮೇಲೆ ಮೂವರಿಗೂ ಒಟ್ಟಿಗೇ ತಿಂಡಿ ಕೊಡೋಣ ಎಂದು ಸುಮ್ಮನಾದೆ "

—ಎಂದಳು ಸರೋಜ.

ಸ್ವಲ್ಪ ಹೊತ್ತಿನಲ್ಲಿಯೇ ತಿಂಡಿಯ ತಟ್ಟೆಗಳೂ—ನೀರಿನ ಬಟ್ಟಲುಗಳೂ ಅಂಗಳದಲ್ಲಿದ್ದ ಮೇಜಿನ ಮೇಲಕ್ಕೆ ಬಂದವು.

" ತಾವು ಪುರಸಭೆಯ ಚುನಾವಣೆಗೆ ಮತ್ತೆ ನಿಲ್ಲಲೇ ಇಲ್ಲವಲ್ಲ ! "

—ಎಂದು ಲಕ್ಷ್ಮಣ ಮಾತು ಪ್ರಾರಂಭಿಸುತ್ತಾ ತಿಂಡಿಯ ತಟ್ಟೆಗೆ ಕೈಹಾಕಿದ.

" ಒಂದು ಸಾರಿ ನಿಂತಿದ್ದುದು ಸಾಲದೆ ? ಇಷ್ಟಕ್ಕೂ ಪುರಸಭೆಯ ಸದಸ್ಯನಾಗಿ ನಾನು ಏನು ತಾನೆ ನನ್ನ ಸುತ್ತುಮುತ್ತಲಿನ ಜನರಿಗೆ ಸೇವೆ ಮಾಡಬಲ್ಲೆ ? "

" ನೀವು ಮಾಡಿದಷ್ಟು ಸೇವೆಯನ್ನು ಪ್ರತಿಯೊಬ್ಬ ಸದಸ್ಯನೂ ಮಾಡಿದ್ದರೆ ಮೈಸೂರು ನಗರ ಅಮರಾವತಿಯನ್ನು ಮೀರಿಸುತ್ತಿತ್ತು ! ನೀರಿನ ಸರಬರಾಜು, ದೀಪದ ಅವಶ್ಯಕತೆ, ಒಳ್ಳೆಯ ರಸ್ತೆಗಳ ನಿರ್ಮಾಣ, ಚರಂಡಿ ವ್ಯವಸ್ಥೆ—ಇತ್ಯಾದಿಗಳೆಲ್ಲಾ ಉತ್ತಮಗೊಂಡಿರುವುದು ನಿಮ್ಮಿಂದಲೇ. ಈ ಮೊಹಲ್ಲಾದ ನಿವಾಸಿಗಳು ನಿಮ್ಮ ಸೇವೆಯನ್ನೂ ಉಪಕಾರವನ್ನೂ ಎಂದೆಂದಿಗೂ ಮರೆಯಲಾರರು "

—ಎಂದ ಲಕ್ಷ್ಮಣ.

ಗೋವಿಂದಯ್ಯನವರು ಏನೂ ಮಾತನಾಡದೆ ಮನಸ್ಸಿನಲ್ಲಿಯೇ ಕೃತಜ್ಞತೆ ಸೂಚಿಸಿದರು.

ತಿಂಡಿಯ ತಟ್ಟೆಗಳು ಬರಿದಾದವು. ಮತ್ತೊಮ್ಮೆ ಕಾಫಿ ಸಮಾರಾಧನೆ ಮುಗಿಯಿತು.

ಲಕ್ಷ್ಮಣ ಹೊರಡಲನುವಾದುದನ್ನು ಕಂಡು—

" ಇದೇನು ಹೊರಟುಬಿಟ್ಟೆಯಲ್ಲ ! "

— ಎಂದ ಶಾಮು.

" ಇನ್ನೇನು ಮಾಡಲಿ ?....ನೀನಂತೂ ಬರುವ ಹಾಗಿಲ್ಲ. ನಾನೂ ಹೋಗಬೇಡವೆ ? "

" ನಾನೂ ನಿನ್ನ ಜೊತೆಯಲ್ಲಿಯೇ ಬರುತ್ತಿದ್ದೆ. ಆದರೆ ಗೋವಿಂದಯ್ಯ ನವರಿಗೆ ಅಸಮಾಧಾನವಾಗುತ್ತದೆ."

" ಸರಿ. ಒಂದು ದಿನ ಇದ್ದು ಬಿಟ್ಟು ಬಾ. ನಿನ್ನ ಹಾಸಿಗೆ–ಪೆಟ್ಟಿಗೆ ಗಳನ್ನೂ ನಮ್ಮ ಆಳಿನ ಕೈಯ್ಯಲ್ಲಿ ಇಲ್ಲಿಗೆ ಕಳುಹಿಸುತ್ತೇನೆ "

—ಎಂದು ಲಕ್ಷ್ಮಣ ಮನಸ್ಸಿಲ್ಲದ ಮನಸ್ಸಿನಿಂದ ಶಾಮುವನ್ನು ಅಲ್ಲಿಯೇ ಬಿಟ್ಟು ಹೊರಟುಹೋದ.

ಸ್ವಲ್ಪ ಹೊತ್ತಿನ ನಂತರ ಗೋವಿಂದಯ್ಯನವರು ಸರೋಜೆಯನ್ನು ಕರೆದು–

" ನಾನು ಅಂಗಡಿಗೆ ಹೋಗುತ್ತೇನಮ್ಮ. ಶಾಮುವನ್ನು ಸರಿಯಾಗಿ ನೋಡಿಕೋ "

—ಎಂದು ಹೇಳಿ ಹೊರಹೊರಟರು.

ಅಂಗಳಕ್ಕೆ ಬಂದ ಸರೋಜ—

" ಇನ್ನೊಂದು ಕಪ್ಪು ಕಾಫಿ ಕೊಡಲೆ ? "

—ಎಂದು ಶಾಮುವಿನ ಕಡೆಗೆ ನೋಡುತ್ತಾ ಕೇಳಿದಳು.

" ಕಾಫಿ–ಸಿಗರೇಟುಗಳೇ ಪತ್ರಿಕೋದ್ಯೋಗಿಗೆ ಅನ್ನ–ಆಹಾರ ! ಈಗಾಗಲೇ ನಿಮ್ಮ ಮನೆಯಲ್ಲೇ ಎರಡು ಸಾರಿ ಕಾಫಿ ಆಯಿತಲ್ಲಾ ! "

—ಎಂದು ನಕ್ಕ ಶಾಮು.

ಸರೋಜ ಇನ್ನೆರಡು ಬಟ್ಟಲು ಕಾಫಿಯನ್ನು ತಂದು, ಒಂದನ್ನು ಶಾಮುವಿಗೆ ಕೊಟ್ಟು, ಇನ್ನೊಂದನ್ನು ತಾನು ತೆಗೆದುಕೊಂಡಳು.

" ಮನೆಯಲ್ಲಿ ಇನ್ನಾರೂ ಕಾಣುವುದಿಲ್ಲವಲ್ಲಾ ? "

—ಶಾಮು ಕೇಳಿದ.

" ಯಾರು ಕಾಣಬೇಕು ? "

" ನಿಮ್ಮ ತಾಯಿ ?....ಅಣ್ಣ, ತಮ್ಮ, ತಂಗಿ....? "

" ನಮ್ಮ ತಾಯಿ ನನಗೆ ಮೂರು ವರ್ಷ ವಯಸ್ಸಾಗಿದ್ದಾಗಲೇ ತೀರಿ ಕೊಂಡರು. ನನ್ನ ತಮ್ಮ ಬೆಂಗಳೂರಿನಲ್ಲಿ ಇಂಜಿನೀರಿಂಗ್ ಓದುತ್ತಿದ್ದಾನೆ. ನಾವಿಬ್ಬರೇ ನಮ್ಮ ತಂದೆಗೆ ಮಕ್ಕಳು."

" ನೀವೂ ಓದುತ್ತಿದ್ದೀರಾ ? "

" ಇಲ್ಲ. ನನಗೆ ಹೋದ ವರ್ಷ ಬಿ.ಎ. (ಆನರ್ಸ್) ಆಯಿತು "

—ಎಂದಳು ಸರೋಜ.

ಶಾಮುವಿಗೆ ಆಶ್ಚರ್ಯವಾಯಿತು. ಏಕೆಂಬುದು ಅವನಿಗೇ ತಿಳಿಯಲಿಲ್ಲ.

ಕಾಫಿ ಮುಗಿಯುತ್ತಿದ್ದಂತೆಯೇ ಶಾಮುವಿನ ಕಣ್ಣುಗಳು ಅಂಗಳವನ್ನೆಲ್ಲಾ ಪರಾಂಬರಿಸಿತು.

" ಬನ್ನಿ ಶಾಮು, ಮನೆ ನೋಡುವಿರಂತೆ "

—ಎಂದು ಸರೋಜ ಅವನನ್ನು ಕರೆದೊಯ್ದಳು.

ಮನೆಯ ಕೊಠಡಿಗಳನ್ನೆಲ್ಲಾ ತೋರಿಸಿ, ಅವುಗಳ ಉಪಯೋಗವನ್ನು ವಿವರಿಸಿದ ಸರೋಜ ಶಾಮುವನ್ನು ಮಹಡಿಯ ಮೇಲಕ್ಕೆ ಕರೆದುಕೊಂಡು ಬಂದಳು.

ಸುಸಜ್ಜಿತವಾದ ಕೋಣೆಯೊಂದರಲ್ಲಿ ಬುರುಕಿ ಹಾಕಿಟ್ಟಿದ್ದ ವೀಣೆಯನ್ನು ಕಂಡು—

" ಇದು ಯಾರದ್ದು ? "

—ಎಂದು ಕೇಳಿದ ಶಾಮು.

" ನನ್ನದೇ "

—ಎಂದಳು ಸರೋಜ.

" ಹಾಗಾದರೆ ನಿಮಗೆ ಸಂಗೀತವೂ ಬರುತ್ತದೆಯೇ ? "

" ಏನೋ ಅಲ್ಪಸ್ವಲ್ಪ ಕಲಿತಿದ್ದೇನೆ. ಬೇಜಾರಾದಾಗ ಹಾಡಿಕೊಳ್ಳುವುದಕ್ಕೆ."

" ಪರವಾಗಿಲ್ಲ "

—ಎಂದು ಮೆಚ್ಚುಗೆಯ ಮಂದಹಾಸವನ್ನು ಸೂಚಿಸಿದ ಶಾಮು.

" ಏಕೆ, ಸಂಗೀತವೆಂದರೆ ನಿಮಗೆ ಇಷ್ಟವಿಲ್ಲವೆ ? "

" ಯಾರಾದರೂ ಸೊಗಸಾಗಿ ವೀಣೆ ನುಡಿಸುತ್ತಿದ್ದರೆ ಅಥವಾ ಹಾಡುತ್ತಿದ್ದರೆ ನನಗೆ ಬೇರೇನೂ ಬೇಡ !....ಕೇಳುತ್ತ ಕೇಳುತ್ತ ನನ್ನನ್ನು ನಾನೇ ಮರೆತುಬಿಡುತ್ತೇನೆ."

" ಯಾವ ಹಾಡು ನಿಮಗೆ ಇಷ್ಟ ? "

" ದಾಸರ ಪದಗಳು, ಕನ್ನಡನುಡಿಯ ದೇವರ ನಾಮಗಳು, ಕುವೆಂಪು-ಬೇಂದ್ರೆಯವರ ಭಾವಗೀತೆಗಳು—ಯಾವುದಾದರೂ ಸರಿಯೇ. ನೀವು ಹಾಡುತ್ತೀರಾ ? "

" ನನಗೆ ಹಾಡುವುದಕ್ಕೆ ಸರಿಯಾದ ಶಾರೀರವೇ ಇಲ್ಲ. ನಿಮಗೆ ಹಾಡು ಕೇಳಬೇಕೆಂದು ಇಷ್ಟವಿದ್ದರೆ ಹೇಳಿ...."

" ಯಾರಿದ್ದಾರೆ ಹಾಡುವವರು ? "

" ಪಕ್ಕದ ಮನೆಯಲ್ಲಿ ಗಿರಿಜ ಅಂತ ಒಬ್ಬ ಹುಡುಗಿ ಇದ್ದಾಳೆ. ಬಹಳ ಸೊಗಸಾಗಿ ಹಾಡುತ್ತಾಳೆ. ಅವಳನ್ನು ಕರೆಯುತ್ತೇನೆ "

—ಎಂದಳು ಸರೋಜ.

ಮಧ್ಯಾಹ್ನದ ವೇಳೆಗೆ ಗೋವಿಂದಯ್ಯನವರು ಅಂಗಡಿಯಿಂದ ಹಿಂದಿರುಗಿದರು. ಶಾಮು ಅವರೊಡನೆ ಕುಳಿತು ಲೋಕಾಭಿರಾಮವಾಗಿ ಮಾತನಾಡುತ್ತಾ ಊಟಮಾಡಿದ. ಗೋವಿಂದಯ್ಯನವರಂತೂ ಮಧ್ಯೆ ಮಧ್ಯೆ ಉಪಚಾರ ಹೇಳುವುದನ್ನು ಮರೆಯಲಿಲ್ಲ.

' ಪದವೀಧರೆಯಾದ ಹುಡುಗಿಗೆ ಸೊಗಸಾಗಿ ಅಡಿಗೆ ಮಾಡುವುದಕ್ಕೂ ಬರುತ್ತದೆ '—ಎಂದು ಮನಸ್ಸಿನಲ್ಲಿಯೇ ಅಂದುಕೊಂಡು ಸಂತೋಷಿಸಿದ ಶಾಮು.

ಗೋವಿಂದಯ್ಯನವರು ಸ್ವಲ್ಪಹೊತ್ತು ತಮ್ಮ ಕೋಣೆಯಲ್ಲಿ ಕುಳಿತು ವಿಶ್ರಮಿಸಿಕೊಂಡರು. ಅನಂತರ ಅಂಗಡಿಗೆ ಹೋಗುವಾಗ—

" ಶಾಮು, ನೀನು ಕೃಷ್ಣರಾಜಸಾಗರ ನೋಡಿದೆಯಾ ? "

—ಎಂದು ಕೇಳಿದರು.

" ಹ್ಞಾಂ. ನಿನ್ನೆಯೇ ನೋಡಿದೆ. ಆದರೆ ಅಲ್ಲಿ ದೀಪದ ವ್ಯವಸ್ಥೆ ಮಾಡಿರಲಿಲ್ಲ.

" ಹೌದು, ಶನಿವಾರ-ಭಾನುವಾರಗಳಲ್ಲಿ ಮಾತ್ರ ದೀಪಾಲಂಕಾರ ಮಾಡುತ್ತಾರೆ. ಮಿಕ್ಕ ದಿನಗಳಲ್ಲೇನೂ ಅಂತಹ ಸಂಭ್ರಮವಿಲ್ಲ."

" ಇನ್ನೊಂದು ಸಾರಿ ಬಂದಾಗ, ಒಂದು ಭಾನುವಾರ ಹೋಗಿ ನೋಡಿಕೊಂಡು ಬರಬೇಕು."

"ಯಾಕೆ, ಅಷ್ಟು ದೂರದ ಯೋಚನೆ? ನಾಳಿದ್ದೇ ಭಾನುವಾರ. ನಮ್ಮ ಕಾರಿನಲ್ಲೇ ಹೋಗಿ ನೋಡಿಕೊಂಡು ಬಂದರಾಯಿತು."

"ಹಾಗಾದರೆ ನಾನು ಭಾನುವಾರದವರೆಗೂ ಇಲ್ಲಿಯೇ ಇರಬೇಕೇ?"

"ಅಪರೂಪಕ್ಕೆ ಬಂದವನು ಮುಖ ತೋರಿಸಿ ಹೊರಟು ಹೋಗ ಬೇಕೆಂದಿರುವೆಯಾ?"

"ಹಾಗೇನೂ ಇಲ್ಲ. ಇವತ್ತು ಇಡೀ ದಿನ ಇಲ್ಲಿಯೇ ಇರುತ್ತೇನಲ್ಲ."

"ಇನ್ನೂ ಎರಡು ದಿನ ಹೆಚ್ಚಿಗೆ ಇದ್ದರೆ ಏನು ನಷ್ಟ?"

"ನಷ್ಟದ ಪ್ರಶ್ನೆಯಲ್ಲ. ನಾನು ನಾಳೆಯೇ ಕೆಲಸಕ್ಕೆ ಹಾಜರಾಗ ಬೇಕಾಗಿದೆ. ಭಾನುವಾರದ ಪತ್ರಿಕೆಯಲ್ಲಿ, ಇಲ್ಲಿ ಸ್ಟುಡಿಯೋ ಪ್ರಾರಂಭ ವಾಗಿರುವ ವಿಷಯವನ್ನು ವಿವರಿಸುವ ಲೇಖನವನ್ನು ಬರೆದು ಪ್ರಕಟಿಸಬೇಕು."

"ಪರವಾಗಿಲ್ಲ ಶಾಮು. ಇಲ್ಲಿಯೇ ಕುಳಿತು ಲೇಖನ ಬರೆದು, ಅಂಚೆ ಯಲ್ಲಿ ಕಳುಹಿಸಿ ಕೊಡು. ಇನ್ನೂ ನಾಲ್ಕು ದಿನ ರಜ ಬೇಕೆಂದು ಬರೆದು ಹಾಕು"

—ಎಂದರು ಗೋವಿಂದಯ್ಯ.

ಅವರ ಮಾತಿಗೆ ಉತ್ತರಿಸಲಾಗದೆ ಶಾಮು ಒಪ್ಪಿಕೊಂಡ.

ಗೋವಿಂದಯ್ಯನವರು ಮಧ್ಯಾಹ್ನದ ಕಾಫಿ ಕುಡಿದು ಕಾರು ಹತ್ತಿ ಅಂಗಡಿಯ ಕಡೆಗೆ ಹೊರಟರು.

ಸ್ವಲ್ಪ ಹೊತ್ತಿನ ಬಳಿಕ ಸರೋಜ ನೆರೆಮನೆಗೆ ಹೋಗಿ ಗಿರಿಜೆಯನ್ನು ಕರೆತಂದಳು.

ಮೊದಲ ನೋಟದಲ್ಲಿಯೇ ಶಾಮುವನ್ನು ತುಂಬಾ ಆಕರ್ಷಿಸಿದ್ದಳು ಗಿರಿಜ.

"ಬಾ ಗಿರಿಜಾ, ಈ ಕಡೆ ಕೂತುಕೋ"

—ಎಂದಳು ಸರೋಜ.

ಆದರೆ ಶಾಮುವಿನ ಎದುರಿಗೆ ಬಂದು ಕುಳಿತುಕೊಳ್ಳಲು ಗಿರಿಜೆಯ ಸಂಕೋಚಸ್ವಭಾವ ಸಮ್ಮತಿಸಲಿಲ್ಲ.

"ನೋಡಿ ಶಾಮು, ಇವಳೇ ನಮ್ಮ ನೆರೆಮನೆಯ ಬಿಳಿಕೋಗಿಲೆ."

—ಸರೋಜ ಗಿರಿಜೆಯನ್ನು ತೋರಿಸುತ್ತಾ ಹೇಳಿದಳು.

ಶಾಮು ನಸುನಕ್ಕ.

" ನೀವು ಬರೆದ ಕಥೆಗಳನ್ನೆಲ್ಲಾ ಓದಿ ತುಂಬಾ ಮೆಚ್ಚಿಕೊಂಡಿದ್ದಾಳೆ. ನಿಮ್ಮ ಕೆಲವು ಕವಿತೆಗಳನ್ನು ಹಾಡಲು ಅಭ್ಯಾಸಮಾಡಿಕೊಂಡಿದ್ದಾಳೆ."

—ಸರೋಜ ಪರಿಚಯ ಮಾಡಿಸಿದಾಗ ಗಿರಿಜ ನಾಚಿಕೆಯಿಂದ ತಲೆ ತಗ್ಗಿಸಿದಳು.

" ಪರವಾಗಿಲ್ಲ ಕೂತುಕೋ ಬಾರೆ ಗಿರಿಜ. ನಿನ್ನ ಹಾಡು ಕೇಳಬೇಕೆಂತ ತುಂಬಾ ಆಸೆಪಟ್ಟಿದ್ದಾರೆ! "

—ಎನ್ನುತ್ತಾ ಅವಳ ಕೈ ಹಿಡಿದು ಕರೆದುಕೊಂಡು ಬಂದಳು ಸರೋಜ. ಅವಳ ಬಲವಂತಕ್ಕೆ ಶಾಮುವಿನ ಎದುರುಗಡೆ ನೆಲ ನೋಡುತ್ತಾ ಕುಳಿತಳು ಗಿರಿಜ.

" ಹ್ಞೂಂ....ಹೊರಡಲಿ ಸ್ವರ "

—ಎಂದು ನಗುನಗುತ್ತ ಸರೋಜ ಆಜ್ಞೆ ಮಾಡಿದಳು.

ಆದರೆ ತಂಬೂರಿಯ ಶ್ರುತಿಯಿಲ್ಲದೆ ಹಾಡುವಳೇ ಆ ಹುಡುಗಿ?

" ತಾಳು ತಂಬೂರಿ ತರುತ್ತೇನೆ "

—ಎನ್ನುತ್ತಾ ಎದ್ದು ಹೋದಳು ಸರೋಜ.

ಶಾಮು ಲಜ್ಜೆಯ ಮೂರ್ತಿಯಾದ ಗಿರಿಜೆಯನ್ನು ಕಣ್ಣು ತುಂಬಾ ನೋಡಿದ. ಆಕ್ಷಣ ಅವನಿಗೆ ಇಸ್ಪೇಟ್ ಎಲೆಯ 'ಇಸ್ಪೇಟ್' ಗುರುತು ನೆನಪಾಯಿತು. ಮರುಕ್ಷಣವೇ 'ಕ್ಲಾವರ್' ಜ್ಞಾಪಕಕ್ಕೆ ಬಂದಿತು. 'ಛೆ, ತಾನು ಕವಿಯಾಗಿ, ಗಿರಿಜೆಯ ಸೌಂದರ್ಯವನ್ನು 'ಇಸ್ಪೇಟ್' ಎಲೆಗೂ, 'ಕ್ಲಾವರ್' ಎಲೆಗೂ ಹೋಲಿಸುವುದು ಶುದ್ಧ ನಾಚಿಕೆಗೇಡು!' ಎಂದುಕೊಂಡ. ಅವನ ಮನಸ್ಸು ಕಲ್ಪನಾಲೋಕಕ್ಕೆ ಓಡಿತು. ಗಿರಿಜೆಯ ಮುಖ ತುಂಬಿದ ಚಂದ್ರಮನಂತೆ ದುಂಡಾಗಿದೆಯೆಂದು ಹೊಳೆಯಿತು. ತಿದ್ದಿದ ಹುಬ್ಬು, ಮಿಂಚಿನ ಕಣ್ಣು, ತುಂಬಿದ ಕೆನ್ನೆ, ಮಾಟವಾದ ಎದೆ, ಸಾಧಾರಣ ಬಿಳುಪಿನ ಮೈ—ಅವಳನ್ನು ಸಾಧಾರಣ ಸೌಂದರ್ಯವತಿಯೆಂದು ಸಾರುತ್ತಿದ್ದವು. ಆದರೆ ಶಾಮು ಆ ಸೌಂದರ್ಯಕ್ಕೆ ಮಾರುಹೋಗಿರಲಿಲ್ಲ; ಅವಳ ಮುಗ್ಧತೆಗೆ ಮರುಳಾಗಿದ್ದ.

ಸರೋಜ ತಂಬೂರಿಯನ್ನು ತಂದು ಶ್ರುತಿ ಮಾಡಿದಳು. ಗಿರಿಜ ಅವಳ ಮುಖವನ್ನೊಮ್ಮೆ ನೋಡಿ ತುಟಿಯಲ್ಲಿಯೇ ನಕ್ಕಳು.

" ಹ್ಞಂ. ಇನ್ನು ಪ್ರಾರಂಭವಾಗಲಿ "

—ಎನ್ನುತ್ತಾ ಸರೋಜ ತಂಬೂರಿಯನ್ನು ಮಿಾಟತೊಡಗಿದಳು.

ಗಿರಿಜೆಯ ಗಾನ ಆರಂಭವಾಯಿತು—

—' ಧರ್ಮವೇ ಜಯವೆಂಬ ದಿವ್ಯಮಂತ್ರ........'

—' ನಾ ನಿನ್ನ ಧ್ಯಾನದೊಳಿರಲು........'

—' ತನು ನಿನ್ನದು ಜೀವನ ನಿನ್ನದು........'

—ಮೊದಲಾದ ಹಾಡುಗಳು ಒಂದರ ಹಿಂದೊಂದು ಧಾರಾವಾಹಿಯಾಗಿ ಗಿರಿಜೆಯ ಸುಮಧುರ ಕಂಠದಿಂದ ಹರಿದುಬಂದವು.

ಕೊನೆಗೆ—

' ಬಿನ್ನಹಕೆ ಬಾಯಿಲ್ಲವಯ್ಯಾ........'

—ಎಂಬ ಹಾಡನ್ನು ಹಾಡಿ ಮುಗಿಸಿದಳು ಗಿರಿಜ. ಆ ಹಾಡು ಹೇಳುವಾಗ ಅವಳಿಗೆ ತಡೆಯಲಾರದಷ್ಟು ನಗು ಬಂದಿತ್ತು.

" ತುಂಬಾ ಚೆನ್ನಾಗಿದೆ "

—ಎಂದು ಮೆಚ್ಚಿಕೆ ಸೂಚಿಸಿದ ಶಾಮು.

" ಏನು ? "

—ತುಂಟ ನಗೆ ನಗುತ್ತಾ ಸರೋಜ ಪ್ರಶ್ನಿಸಿದಳು.

" ಹಾಡು—ಹಾಡಿದ ಕಂಠ."

" ಹಾಡಿದ ಹುಡುಗಿ ? "

—ಸರೋಜೆಯ ಪ್ರಶ್ನೆಯಿಂದ ಗಿರಿಜೆಯ ಮುಖ ಕೆಂಪಾಯಿತು.

ಇನ್ನೂ ಸಂಗೀತದ ಅಮಲಿನಲ್ಲಿಯೇ ಇದ್ದ ಶಾಮು—

" ಅವಳೂ ಚೆನ್ನಾಗಿದ್ದಾಳೆ ! "

—ಎಂದು ನುಡಿದಾಗ ಗಿರಿಜ ತಲೆತಗ್ಗಿಸಿದಳು.

" ಹಾಗಾದರೆ ಮದುವೆಯಾಗಬಹುದಲ್ಲಾ ! "

" ಮದುವೆ....? "

" ಹೌದು "

" ಯಾರು ? "

" ನೀವು ! "

" ನಾನೇ ? "

" ಹುಜ್ಞಂ "

ಶಾಮು ಘೊಳ್ಳನೆ ನಕ್ಕು ಬಿಟ್ಟ.

" ಯಾಕೆ ನಗುತ್ತೀರಿ ? ಗಿರಿಜ ತುಂಬಾ ಒಳ್ಳೆಯ ಹುಡುಗಿ. ಇಂಟರ್ ಮೀಡಿಯಟ್‌ನಲ್ಲಿ ಒಂದು ವರ್ಷ ಓದಿದ್ದಾಳೆ. ಅವಳ ತಂದೆ ರಿಟೈರ್ಡ್ ಪೋಲೀಸ್ ಇನ್ಸ್‌ಪೆಕ್ಟರು. ಹೆಸರು ಜಯರಾಯರು ಅಂತ. ಅವರಿಗೆ ಮೂವರು ಹೆಣ್ಣುಮಕ್ಕಳು, ಒಬ್ಬ ಗಂಡುಮಗ. ಮೊದಲನೆಯ ಮಗಳಿಗೆ ಮದುವೆಯಾಗಿದೆ. ಎರಡನೆಯವಳೇ ಗಿರಿಜ. ನೀವು ಒಪ್ಪಿದರೆ ನಾನೇ ಈ ಮದುವೆಗೆ ಏರ್ಪಾಡು ಮಾಡಿಬಿಡುತ್ತೇನೆ "

—ಸರೋಜೆಯ ಮಾತು ಕೇಳಿ ನಾಚಿಕೆ ಸಹಿಸಲಾರದೆ ಗಿರಿಜ ಓಡಿ ಹೋದಳು.

ಶಾಮು ಮೃದುವಾಗಿ ನಗುತ್ತಾ ನುಡಿದ—

" ಮದುವೆ ಎಂದರೆ ಅಷ್ಟು ಸುಲಭವಾಗಿ ಆಗುತ್ತದೆಯೇ ಸರೋಜಾ ? "

" ಏಕೆ, ಮದುವೆಯಾಗುವುದರಲ್ಲಿ ಕಷ್ಟವೇನಿದೆ ? "

" ತುಂಬಾ ಕಷ್ಟವಿದೆ ಸರೋಜ. ನಿಮಗೆ ತಿಳಿಯದು. ಈ ವಿಷಯದಲ್ಲಿ ನಿಮಗೆ ಅನುಭವವಿದ್ದಿದ್ದರೆ ನೀವು ಈ ಪ್ರಶ್ನೆಯನ್ನೇ ಕೇಳುತ್ತಿರಲಿಲ್ಲ."

" ನಿಮಗೆ ಮಾತ್ರ ಅನುಭವವಿದೆಯೆ ? "

—ತುಂಟ ನಗೆ ನಗುತ್ತಾ ಸರೋಜ ಮುಂದುವರಿಸಿದಳು :

ನನ್ನ ಹಾಗೆಯೇ ನಿಮಗೂ ಮದುವೆಯಾಗಿಲ್ಲವಲ್ಲಾ :....ಅನುಭವ ಹೇಗೆ ಬಂದಿತು ? "

" ಹೌದು. ನನಗೂ ಸ್ವಾನುಭವವಿಲ್ಲ. ಆದರೆ ಅನುಭವಿಸುತ್ತಿರುವವರನ್ನು ಸದಾ ನೋಡಿ ನೋಡಿ, ಅವರ ಅನುಭವವೇ ನನ್ನ ಅನುಭವವೆನೋ ಎನ್ನುವಷ್ಟರ ಮಟ್ಟಿಗೆ ಆಗಿದೆ ಸರೋಜ "

—ಎಂದು ಶಾಮು ನಕ್ಕ.

" ಬೇರೆಯವರ ಅನುಭವ ಕಂಡು ನೀವೇಕೆ ಹೆದರುತ್ತೀರಿ ಶಾಮು ? "

" ಈ ವಿಷಯದಲ್ಲಿ ಹೆದರುವಂತಹದೇನೂ ಇಲ್ಲ ಸರೋಜ. ಆದರೆ ಪರಸ್ಪರ ಸಂಬಂಧ ಬೆಳಸುವಾಗ ಹಲವಾರು ತೊಡಕಿನ ಸಮಸ್ಯೆಗಳು ಉದ್ಭವಿಸುತ್ತವೆ. ಅವುಗಳನ್ನೆದುರಿಸುವುದೇ ತುಂಬಾ ಕಷ್ಟ."

" ಅಂತಹ ತೊಡಕಿನ ಸಮಸ್ಯೆ ಏನಿದೆಯೋ ನಾ ಕಾಣೆ ! "

—ಎಂದು ಉದಾಸೀನದಿಂದ ನಕ್ಕು ನುಡಿದಳು ಸರೋಜ.

ಶಾಮು ತನ್ನ ತಂದೆಯ ' ವರದಕ್ಷಿಣೆ ವಾದ 'ವನ್ನು ಅವಳಿಗೆ ವಿವರಿಸಲು ಹಿಂಜರಿದು, ಮಾತಿನ ವಾಹಿನಿಯನ್ನು ಬೇರೆಡೆಗೆ ತಿರುಗಿಸಿದ—

" ಆದಿರಲಿ, ನೀವಿನ್ನೂ ಮದುವೆಯಾಗದೆ ಇದ್ದೀರಲ್ಲಾ—ಏಕೆ ? "

" ಓದಿದ ಹುಡುಗಿ ಅಂತ ಕೆಲವರಿಗೆ ಹೆದರಿಕೆ ! ವಯಸ್ಸು ಹೆಚ್ಚು ಅಂತ ಕೆಲವರ ಆಕ್ಷೇಪಣೆ. ಎಂತಹ ಯೋಗ್ಯತೆಯುಳ್ಳ ಗಂಡೇ ಆಗಲಿ, ವರದಕ್ಷಿಣೆ ಮಾತ್ರ ಒಂದು ಕಾಸೂ ಕೊಡುವುದಿಲ್ಲವೆಂದು ಅಪ್ಪನ ಹಟ !—ಈ ಮೂರು ಕಾರಣಗಳೂ ಇಲ್ಲದಿದ್ದರೆ ನನಗೂ ಮದುವೆ ಆಗಿಹೋಗುತ್ತಿತ್ತು ! "

—ಎಂದು ನಗುನಗುತ್ತಾ ನಿಜಸಂಗತಿಯನ್ನೇ ತಿಳಿಸಿದಳು ಸರೋಜ.

" ವಯಸ್ಸು ಹೆಚ್ಚು ಅಂದರೆ....? "

" ಹ್ಞೂಂ, ಈಗಾಗಲೇ ರಜತಮಹೋತ್ಸವ ಮುಗಿಯಿತು !....ಈಗ ಇಪ್ಪತ್ತಾರು ! "

—ಸರೋಜ ನಗುವಿನಲ್ಲೇ ಮಾತು ಮಾಯಿಸಿದಳು.

ಶಾಮು ತೃಪ್ತಿಯ ನಿಟ್ಟುಸಿರಿಟ್ಟು—

' ಸದ್ಯ ಬದುಕಿದೆ ! ತನಗಿನ್ನೂ ಇಪ್ಪತ್ತನಾಲ್ಕು ವರ್ಷ. ಈ ಇಪ್ಪತ್ತಾರು ವರ್ಷದ ಹುಡುಗಿಯನ್ನು ಮದುವೆಯಾಗು ಎಂದು ವರದಕ್ಷಿಣೆಯ ಭೂತಪೀಡಿತರಾದ ತಂದೆ ನಾಗಪ್ಪನವರು ಬಲವಂತಮಾಡುವಹಾಗಿಲ್ಲ '

—ಎಂದು ಮನಸ್ಸಿನಲ್ಲಿಯೇ ಅಂದುಕೊಂಡ.

ಆ ರಾತ್ರಿ ಊಟವಾದ ಬಳಿಕ, ಶಾಮುವಿಗೆ ಮಹಡಿಮೇಲಿನ ಕೋಣೆಯೊಂದರಲ್ಲಿ ಹಾಸಿಗೆ ಹಾಸಿಕೊಟ್ಟಳು ಸರೋಜ. ಅನಂತರ ಭಾನುವಾರದ ' ನವ ಕರ್ನಾಟಕ ' ಪತ್ರಿಕೆಗೆ ಲೇಖನ ಬರೆಯಲು ಬೇಕಾದ ವ್ಯವಸ್ಥೆಯನ್ನೂ ಮಾಡಿಕೊಟ್ಟು ಹಿಂತಿರುಗಿದಳು.

ಸುಮಾರು ಅರ್ಧರಾತ್ರಿಯ ವೇಳೆಗೆ 'ಸ್ಟುಡಿಯೋ ಸಂದರ್ಶನ'ದ ಬಗ್ಗೆ ವಿವರವಾದ ಲೇಖನವೊಂದನ್ನು ಬರೆದು ಮುಗಿಸಿ ಶಾಮು ಮಲಗಿದ. ಆದರೆ ನಿದ್ರೆಯೇ ಬರಲಿಲ್ಲ. ಅವನ ಮನಸ್ಸಿನ ತುಂಬಾ ಗಿರಿಜೆಯೇ ತುಂಬಿ ಕೊಂಡಿದ್ದಳು. ಅವಳ ಸುತ್ತ ಬಣ್ಣದ ಕನಸು ಕಟ್ಟುವುದರಲ್ಲಿಯೇ ಮಗ್ನ ನಾಗಿದ್ದ ಶಾಮು.

ನಿದ್ರೆ ಬಂದಮೇಲೆಯೂ ಶಾಮುವಿಗೆ ಗಿರಿಜೆಯ ಕನಸೇ. ಆ ಕನಸ್ಸಿನಲ್ಲಿ ಸರೋಜೆಯು ಆಡಿದ ಮದುವೆಯ ಮಾತುಕತೆ, ಗಿರಿಜೆಯ ಮುಗ್ಧ-ರೂಪ ಲಾವಣ್ಯಗಳೇ ತುಂಬಿಕೊಂಡು, ಅವು ಅವನ ನೆನಪಿನಲ್ಲಿ ಅಚ್ಚಳಿಯದೆ ಉಳಿದುಹೋದವು.

ಮರುದಿನವೂ ಗಿರಿಜೆಯನ್ನು ಕರೆತಂದಳು ಸರೋಜ. ಹಿಂದಿನ ದಿನ ದಂತೆಯೇ ಹಾಡು ಪ್ರಾರಂಭವಾಯಿತು. ಶಾಮು ಮೈಮರೆತು ಗಿರಿಜೆಯ ಗಾನವಾಹಿನಿಯಲ್ಲಿ ತೇಲಿಹೋದ.

ಸರೋಜ ಮೂವರಿಗೂ ಕಾಫಿ ತಂದಳು. ಓರೆಗಣ್ಣಿನಲ್ಲಿಯೇ ಶಾಮು ವನ್ನು ನೋಡುತ್ತಾ ಕಾಫಿಯ ಬಟ್ಟಲನ್ನು ತುಟಿಗೆ ತಾಗಿಸಿದಳು ಗಿರಿಜ.

ಆ ಸಂಜೆ ಮೂವರೂ ಹೋಗಿ, ಇಲವಾಲ ರಸ್ತೆಯ ಸ್ಟುಡಿಯೋವಿನಲ್ಲಿ ಫೋಟೋ ತೆಗೆಸಿಕೊಂಡರು. ಶಾಮು-ಗಿರಿಜ ಪ್ರತ್ಯೇಕ ಪ್ರತ್ಯೇಕವಾಗಿ ಕುಳಿತುಕೊಂಡು ತಮ್ಮ ಭಾವಚಿತ್ರಗಳನ್ನು ತೆಗೆಸಿಕೊಂಡರು. ಆದರೆ, ಸರೋಜಳ ಒತ್ತಾಯಕ್ಕೆ ಅವರಿಬ್ಬರೂ ಒಟ್ಟಿಗೆ ಕುಳಿತು ಇನ್ನೊಂದು ಭಾವಚಿತ್ರವನ್ನು ತೆಗೆಸಿಕೊಳ್ಳಬೇಕಾಯಿತು.

ರಾತ್ರಿ ಸರೋಜ ಅಡಿಗೆಯ ಕೆಲಸದಲ್ಲಿ ತೊಡಗಿದ್ದಾಗ ಗಿರಿಜ ಬಂದಳು- ಸದ್ದುಮಾಡದೆ. ಶಾಮು ಕೈ ಸನ್ನೆ ಮಾಡಿ, ಮೇಲ್ದನಿಯಲ್ಲಿ ಅವಳನ್ನು ಬಳಿಗೆ ಕರೆದ. ಬರಲೋ—ಬೇಡವೋ ಎಂಬಂತೆ ಬಳುಕುತ್ತಾ ಗಿರಿಜ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಲಜ್ಜೆಯ ರಾಣಿಯಾಗಿ ಶಾಮುವಿನ ಮುಂದೆ ಬಂದು ನಿಂತಳು.

"ಕೂತುಕೋ ಗಿರಿಜಾ...."

—ಶಾಮುವಿನ ಮಾತು ಕೇಳಿಸಲೇ ಇಲ್ಲವೆಂಬಂತೆ ಅವಳು ನಿಂತೇ ಇದ್ದಳು.

ಎರಡು ಕ್ಷಣಗಳ ಬಳಿಕ ಶಾಮುವೇ ಅವಳ ಭುಜ ಹಿಡಿದು ಕೂಡಿಸಿದ.

"ನನ್ನ ಹತ್ತಿರ ಮಾತನಾಡುವುದಕ್ಕೆ ಇಷ್ಟವಿಲ್ಲವೆ?"

ಮೌನದ ಬೊಂಬೆಯಾಗಿದ್ದಳು ಗಿರಿಜ. ಆದರೆ ಅವಳ ಕಣ್ಣು, ಕೆನ್ನೆ, ಆಗತಾನೇ ಅರಳುತ್ತಿರುವ ಮಲ್ಲಿಗೆಯಂತಿದ್ದ ತೆರೆದ ತುಟಿಯ ನಡುವೆ ನಗುತ್ತಿದ್ದ ಧವಳ ದಂತಪಂಕ್ತಿ—ಎಲ್ಲಾ ಮಾತನಾಡುತ್ತಿದ್ದವು!

"ನನ್ನನ್ನು ನೋಡಿದರೆ ನಿನಗೇನನ್ನಿಸುತ್ತದೆ ಗಿರಿಜ?"

—ತಾನು ಹುಚ್ಚು ಪ್ರಶ್ನೆ ಹಾಕುತ್ತಿದ್ದೇನೆಂದು ಶಾಮುವಿಗೆ ಹೊಳೆದೊಡನೆ ತುಸು ನಾಚಿಕೆಯಾಯಿತು.

ಗಿರಿಜ ಮೆಲ್ಲನೆ ತಲೆಯೆತ್ತಿ ಓರೆಗಣ್ಣಿನಿಂದ ಶಾಮುವನ್ನು ನೋಡಿದಳು. ಆ ನೋಟ ಭಾವಪೂರ್ಣವಾಗಿತ್ತು.

"ನಿನಗೆ ತುಂಬಾ ನಾಚಿಕೆ ಅಲ್ಲವೆ?"

ಅವಳು ತಲೆತಗ್ಗಿಸಿದಳು.

"ಈಗಲೇ ಹೀಗಾದರೆ ಮದುವೆಯಾದಮೇಲೆ ಹೇಗೆ?"

ನಗುತ್ತಿದ್ದಳು ಗಿರಿಜ.

ಶಾಮು ಅವಳ ಭುಜದ ಮೇಲೊಂದು ಕೈಯಿಟ್ಟು, ಇನ್ನೊಂದು ಕೈಯಿಂದ ಅವಳ ಮುಂಗೂದಲನ್ನು ನೇವರಿಸಿದ.

ಅಷ್ಟರಲ್ಲಿ—

"ಓಹೋ! ಮದುವೆಗೆ ಮೊದಲೇ ಏನೇನೋ ನಡೆಯುತ್ತಿದೆಯಲ್ಲಾ!"

—ಎನ್ನುತ್ತಾ ಸರೋಜ ಬಂದೇಬಿಟ್ಟಳು ಅಲ್ಲಿಗೆ.

ಹೆದರಿದ ಹರಿಣಿಯಂತೆ ಗಿರಿಜ ದೂರ ಸರಿದು ನಿಂತಳು.

"ಪರವಾಗಿಲ್ಲ. ಎಂದಿದ್ದರೂ ನೀವು ಗಂಡ–ಹೆಂಡತಿಯರೇ ತಾನೆ!"

—ನಗುತ್ತಾ ನುಡಿದಳು ಸರೋಜ.

ಆ ಮಾತು ಕೇಳಿದೊಡನೆ ಗಿರಿಜ ಓಡಿಹೋದಳು.

ಸ್ವಲ್ಪಹೊತ್ತಿನ ಬಳಿಕ ಗೋವಿಂದಯ್ಯನವರು ಬಂದರು. ಶಾಮು ಅವರೊಡನೆ ಲೋಕಾಭಿರಾಮದ ಮಾತಿಗೆ ತೊಡಗಿದ. ಅಡಿಗೆ ಕೆಲಸವನ್ನು ಮುಗಿಸಿದ್ದ ಸರೋಜ ಗಿರಿಜೆಯ ತಾಯಿಯನ್ನು ಕಾಣಲು ನೆರೆಮನೆಗೆ ನಡೆದಳು.

೨

ನೆರೆಮನೆಯಲ್ಲಿದ್ದ ರಿಟೈರ್ಡ್ ಪೋಲೀಸ್ ಇನ್ಸ್‌ಪೆಕ್ಟರ್ ಜಯರಾಯರಿಗೆ ಒಂದು ಗಂಡು ಮತ್ತು ಮೂರು ಹೆಣ್ಣುಮಕ್ಕಳು. ಅವರ ಮೊದಲನೆಯ ಮಗಳಿಗೆ ಮದುವೆಯಾಗಿ ಆಕೆ ತನ್ನ ಗಂಡನೊಡನೆ ತುಮಕೂರಿನಲ್ಲಿ ಸುಖವಾಗಿದ್ದಳು. ಆಗಿನ್ನೂ ಕೆಲಸದಲ್ಲಿದ್ದ ಜಯರಾಯರು ಹಿರಿಯ ಮಗಳ ಮದುವೆಯನ್ನು ಬಹುವಿಜೃಂಭಣೆಯಿಂದಲೇ ಮಾಡಿದ್ದರು. ಅಳಿಯನಿಗೆ ಐದು ಸಾವಿರ ವರದಕ್ಷಿಣೆ ಕೊಟ್ಟು, ಎರಡು ಸಾವಿರ ರೂಪಾಯಿಗಳ ಖರ್ಚಿನಲ್ಲಿ ವರೋಪಚಾರಮಾಡಿ, ಮಗಳಿಗೆ ಸುಮಾರು ಮೂವತ್ತು ಸವರನ್ ಚಿನ್ನದಲ್ಲಿ ಒಡವೆ ಮಾಡಿಸಿ, ಒಳ್ಳೆ ಅದ್ದೂರಿಯಿಂದಲೇ ಐದು ದಿನಗಳ ಮದುವೆಯ ಮಂಗಳಕಾರ್ಯವನ್ನು ಮಾಡಿದ್ದರು. ಆಗ ಅವರಕೈ ಚೆನ್ನಾಗಿ ನಡೆಯುತ್ತಿತ್ತು. ಸಂಪಾದನೆಯೂ ಹೆಚ್ಚಾಗಿತ್ತು. ಆದರೆ ಅವರ ಏಕಮಾತ್ರ ಪುತ್ರ ಬೆಳೆದು ದೊಡ್ಡವನಾದಮೇಲೆ, ಅವರು ಸಂಪಾದಿಸಿಟ್ಟದ್ದೆಲ್ಲಾ ಕರಗುತ್ತಾ ಬಂದಿತು. ಪೋಲೀಸು ಅಧಿಕಾರಿಯ ಮಗ ಪೋಲಿಯಾಗಿ—ಘಟಿಂಗನಾಗಿ ಮನೆಬಿಟ್ಟು ಓಡಿಹೋದ. ಅದೇ ಸಮಯಕ್ಕೆ ಜಯರಾಯರಿಗೆ ಕೆಲಸದಿಂದ ನಿವೃತ್ತಿಯಾಯಿತು. ಅಧಿಕಾರ ದರ್ಪದಿಂದ ಮೆರೆಯುತ್ತಾ ಅಧಿಕವಾಗಿ ಸಂಪಾದಿಸುತ್ತಿದ್ದ ಪೋಲೀಸ್ ಇನ್ಸ್‌ಪೆಕ್ಟರು, ಮಗನ ದುಷ್ಕೃತ್ಯಗಳಿಂದಾಗಿ, ಕ್ರಮೇಣ ಕಾನ್ಸ್‌ಟೇಬಲ್‌ನ ಜೀವನ ಮಟ್ಟಕ್ಕೆ ಇಳಿಯಬೇಕಾಯಿತು.

ಜಯರಾಯರ ಪತ್ನಿ ಜಾನಕಮ್ಮ ತುಂಬಾ ಬುದ್ಧಿವಂತೆ. ಬಡವರ ಮನೆಯಲ್ಲಿ ಹುಟ್ಟಿ, ಜಯರಾಯರ ಕೈಹಿಡಿದು ಉನ್ನತ ಪದವಿಗೇರಿದ್ದರೂ ಆಕೆಗೆ ಅಹಂಕಾರವಿರಲಿಲ್ಲ. ಗಂಡನ ಅಧಿಕಾರ ಕಾಲದಲ್ಲಿ ಆಡಂಬರದ ಸಂಸಾರ ಮಾಡದೆ, ಖರ್ಚು–ವೆಚ್ಚಗಳನ್ನು ಹಿತ–ಮಿತಗೊಳಿಸಿ ಅಲ್ಪ ಸ್ವಲ್ಪ ಉಳಿಸಿಟ್ಟದ್ದರು ಜಾನಕಮ್ಮ. ಇನ್ನೂ ತಮ್ಮ ಇಬ್ಬರು ಹೆಣ್ಣು

ಮಕ್ಕಳಿಗೆ ಮದುವೆಯಾಗಬೇಕಾಗಿರುವ ವಿಷಯವನ್ನು ಉಪೇಕ್ಷಿಸದೆ, ಆಕೆ ತಮ್ಮ ನಗ – ನಾಣ್ಯಗಳನ್ನು ಬಹು ಜೋಪಾನವಾಗಿ ಕಾಪಾಡಿಕೊಂಡಿದ್ದರು. ಆದರೂ ಅವುಗಳಲ್ಲಿ ಸ್ವಲ್ಪಭಾಗ ಘಟಿಂಗ ಪುತ್ರನ ಪಾಲಾಗಿತ್ತು. ಕಳೆದು ಹೋದ ಒಡವೆ ವಸ್ತುಗಳಿಗಾಗಿ ಚಿಂತಿಸದೆ, ಇದ್ದುದರಲ್ಲಿಯೇ ತೃಪ್ತಿಪಟ್ಟು ಕೊಳ್ಳುತ್ತಾ, ಜಾನಕಮ್ಮನವರು ಅಚ್ಚುಕಟ್ಟಾಗಿ ಸಂಸಾರ ನಿರ್ವಹಿಸುವುದ ರಲ್ಲಿಯೇ ನಿರತರಾದರು. ಜಯರಾಯರಿಗೆ ಬರುತ್ತಿದ್ದ ಅಲ್ಪವಾದ ಪೆನ್ಷನ್ ಹಣದಲ್ಲಿ ಜಾನಕಮ್ಮ ಮುಚ್ಚಟೆಯಾಗಿ ಸಂಸಾರ ಮಾಡುತ್ತಿದ್ದುದು ನಿಜ ವಾಗಿಯೂ ಮೆಚ್ಚುವ ಸಂಗತಿಯೇ ಆಗಿದ್ದಿತು.

ಯಾವ ಕೊರತೆಯೂ ಕಾಣಿಸದಂತೆ ತಮ್ಮ ಪತ್ನಿ ಸಂಸಾರ ನೀಸು ತ್ತಿದ್ದುದನ್ನು ಕಂಡು ಜಯರಾಯರಿಗೆ ನೆಮ್ಮದಿಯಾಗಿತ್ತು. 'ನನ್ನಂತಹ ಒರಟನಿಗೆ ಚಿನ್ನದಂತಹ ಹೆಂಡತಿ ಸಿಕ್ಕಿದ್ದು ನಿಜವಾಗಿಯೂ ದೈವಾನುಗ್ರಹ' ಎಂದು ಅವರು ಹಲವಾರುಬಾರಿ ಮನಸ್ಸಿನಲ್ಲಿಯೇ ಅಂದುಕೊಂಡಿದ್ದರು. ಆದರೆ, ಎರಡನೆಯ ಮಗಳು ಗಿರಿಜ ಬೆಳೆದು, ಮದುವೆಯ ವಯಸ್ಸಿಗೆ ಬಂದಾಗ ಅವರ ನೆಮ್ಮದಿ ಕಲಕಿತು. ಮನೆಯ ಸಂಸಾರದ ಚಿಂತೆ ಮಡದಿಯ ಜಾಣತನದಿಂದಾಗಿ ಮಾಯವಾಗಿದ್ದರೂ, ಮಗಳ ಮದುವೆಯ ಚಿಂತೆ ಮಹತ್ತಾಗಿ ಬೆಳೆದು, ಮನಸ್ಸಿನ ತುಂಬಾ ತುಂಬಿಕೊಂಡು ಕಳವಳ ಗೊಳಿಸಿತು.

ಒಂದು ದಿನ ಜಾನಕಮ್ಮನವರು, ಗಿರಿಜೆಗೆ ಒಬ್ಬ ವರನನ್ನು ಹುಡುಕಿ ಕೊಡಬೇಕೆಂದು ತುಮಕೂರಿನಲ್ಲಿದ್ದ ತಮ್ಮ ಹಿರಿಯ ಅಳಿಯನಿಗೆ ಕಾಗದ ಬರೆಸಿದರು. ಆದರೆ, ತಿಂಗಳುಗಳು ಕಳೆದರೂ ಅವನಿಂದ ಪ್ರತ್ಯುತ್ತರ ಬರಲಿಲ್ಲ. ಮಗಳಾದರೂ ಕ್ಷೇಮಸಮಾಚಾರದ ಕಾಗದ ಬರೆಯಬಹುದೆಂದು ಎಣಿಸಿದ್ದರು ಜಾನಕಮ್ಮ. ಆದರೆ ಅವರ ನಿರೀಕ್ಷೆ ನಿಷ್ಫಲವಾಯಿತು.

ಒಮ್ಮೆ ಜಯರಾಯರೇ ತುಮಕೂರಿಗೆ ಹೋದಾಗ ಮಗಳೂ — ಅಳಿಯನೂ ಅವರನ್ನು ನ್ಯಕ್ಕರಿಸಿದರು. ಅಲ್ಲಿ ದೊರೆತ ತಿರಸ್ಕಾರ ಜಯ ರಾಯರಿಗಲ್ಲ; ಅವರ ಬಡತನಕ್ಕೆ. ಮಗಳು ಮತ್ತು ಅಳಿಯನಿಂದಾದ ಅವ ಮರ್ಯಾದೆಗೆ ಬಹುವಾಗಿ ನೊಂದುಕೊಂಡು ಜಯರಾಯರು ಹಿಂತಿರುಗಿದರು. ಈ ವಿಷಯವನ್ನರಿತ ಜಾನಕಮ್ಮನವರಿಗಂತೂ ಆಕಾಶವೇ ಕಳಚಿಬಿದ್ದಂತಾಯಿತು.

ಗಿರಿಜೆಯ ಮದುವೆ ಬರಿಯ ಕನಸು ಎಂದು ನಿಶ್ಚಯಿಸಿಕೊಂಡರು ಪತಿ–ಪತ್ನಿಯರು. ಗಂಡು ಸಿಕ್ಕದೆ ಇದ್ದುದೂ, ಸಿಕ್ಕಿದ ಗಂಡಿಗೆ ಸಾವಿರಾರು ಗಟ್ಲೆ ವರದಕ್ಷಿಣೆ ಸುರಿಯಲು ಸಾಧ್ಯವಾಗದಿದ್ದುದೂ ಅವರ ನಿಶ್ಚಯಕ್ಕೆ ಕಾರಣವಾಗಿದ್ದವು. ಆದರೂ ಜಾನಕಮ್ಮನವರು 'ಬಗವಂತನು ನಮ್ಮ ಕೈ ಬಿಡಲಾರ' ಎಂಬ ಅಚಲವಿಶ್ವಾಸವನ್ನು ತಳೆದು, ತಮ್ಮ ದುಃಖವನ್ನು ನುಂಗಿಕೊಂಡು ಹಸನ್ಮುಖರಾಗಿಯೇ ಇದ್ದರು.

ಆ ರಾತ್ರಿ ಸರೋಜ ಬಂದಾಗ, ಜಾನಕಮ್ಮನವರಿಗೆ ಸ್ವಲ್ಪ ಆಶ್ಚರ್ಯವೇ ಆಯಿತು. ಸಾಮಾನ್ಯವಾಗಿ ಸರೋಜ ತನ್ನ ಮನೆ ಬಿಟ್ಟು ಹೊರಬರುತ್ತಲೇ ಇರಲಿಲ್ಲ. ಜಾನಕಮ್ಮನವರೇ ಆಗಾಗ ಅವಳ ಮನೆಗೆ ಹೋಗಿ, ಸ್ವಲ್ಪ ಹೊತ್ತು ಕುಳಿತು ಮಾತನಾಡಿ ಹಿಂತಿರುಗುತ್ತಿದ್ದರು. ಆದರೆ ಅಂದು ರಾತ್ರಿ ಸರೋಜೆಯೇ ಇದ್ದಕ್ಕಿದ್ದಂತೆ ತಮ್ಮ ಮನೆಗೆ ಬಂದುದು ಜಾನಕಮ್ಮನವರಿಗೆ ಸೋಜಿಗದ ಸಂಗತಿಯೇ ಆಗಿತ್ತು. ಏನೋ ವಿಶೇಷವಿರಬೇಕೆಂದು ಅವರು ಮನಸ್ಸಿನಲ್ಲಿಯೇ ಅಂದುಕೊಂಡರು.

" ಕೆಲಸವೆಲ್ಲಾ ಮುಗಿಯಿತೆ ಜಾನಕಮ್ಮನೋರೇ ? "

—ನಗುನಗುತ್ತಾ ಒಳಗೆಬಂದ ಸರೋಜ ಕೇಳಿದಳು.

" ಏನು ಮಹಾ ಕೆಲಸವಿದೆಯಮ್ಮ ? ಇದ್ದರೂ ಅದರ ಪಾಡಿಗೆ ಅದು ನಡೆಯುತ್ತದೆ. ಬಾಮ್ಮ ಸರೋಜ, ತುಂಬ ಅಪರೂಪಕ್ಕೆ ಬಂದಿದ್ದೀಯೆ "

—ಎನ್ನುತ್ತಾ ಜಾನಕಮ್ಮನವರು ಚಾಪೆ ಹಾಸಿದರು.

" ನಿಮಗೊಂದು ಶುಭ ಸಮಾಚಾರ ಹೇಳುವುದಕ್ಕೆ ಬಂದಿದ್ದೇನಮ್ಮ ! "

" ಹೇಳು ತಾಯಿ."

" ಹೇಳುವುದಕ್ಕೆ ಮೊದಲು ಬಾಯಿ ಸಿಹಿಮಾಡಬೇಕು "

—ಎಂದು ಸರೋಜ ನಕ್ಕು ನುಡಿಯುವಷ್ಟರಲ್ಲಿ ಗಿರಿಜೆಯ ತಂಗಿ ಮೀರಾ ಡಬ್ಬದಲ್ಲಿದ್ದ ಸಕ್ಕರೆಯನ್ನು ತಂದು—

" ಹ್ಞಂ, ಹಿಡಿಯಕ್ಕ....ತೆಗೀ ಬಾಯಿ ! " ಎಂದಳು.

" ನೋಡಿದಿರಾ ಅಮ್ಮ, ಈ ಪೋರಿ ಮಾಡುತ್ತಿರುವ ಕೆಲಸ ! "

—ಎನ್ನುತ್ತಾ ಸರೋಜ ಸಕ್ಕರೆಯನ್ನು ಬಾಯಿಗೆ ಹಾಕಿಕೊಂಡಳು. ಮೀರಾ ಮಾಡಿದ ವಿನೋದಕ್ಕೆ ಎಲ್ಲರೂ ನಕ್ಕರು.

" ಆದಷ್ಟು ಬೇಗ ಈ ವಿಾರಾಗೆ ಮದುವೆಮಾಡಿ ಅವಳನ್ನ ಗಂಡನ ಮನೆಗೆ ಕಳಿಸಿಬಿಡಿ ಅಮ್ಮ"

—ಎಂದು ಸರೋಜ ನುಡಿದಾಗ ವಿಾರಾ ನಸುನಾಚಿ ಓಡಿದಳು.

" ಈ ಎರಡು ಮಕ್ಕಳಿಗೂ ನಾನು ಮದುವೆ ಮಾಡುತ್ತೇನೆಯೆ ಸರೋಜ? ಏನೋ ಆ ದೊಡ್ಡವಳನ್ನು, ಕೈ ಚೆನ್ನಾಗಿ ನಡೆಯುವ ಕಾಲದಲ್ಲಿ ಧಾರೆಯೆರೆದು ಕೊಟ್ಟುದಾಯಿತು. ಈಗಂತೂ ಗಿರಿಜೆಯ ಮದುವೆ ನಮಗೆ ಬರಿಯ ಕನಸಾಗಿಯೇ ಹೋಗಿದೆ"

—ಎಂದು ನಿಟ್ಟುಸಿರಿಟ್ಟು ನುಡಿದರು ಜಾನಕಮ್ಮ.

" ಯೋಚಿಸಬೇಡಿ ಅಮ್ಮ. ಈಗ ಗಿರಿಜೆಗೆ ಮದುವೆಯಾಗುವ ಯೋಗ ತಾನಾಗಿಯೇ ಕೂಡಿ ಬಂದಿದೆ."

" ನಿಜವೇ ಸರೋಜ ? "

" ಹೌದಮ್ಮ. ಗಂಡು ಹೆಣ್ಣನ್ನು ನೋಡಿ ಒಪ್ಪಿದ್ದೂ ಆಗಿದೆ. ಇನ್ನು ಎರಡು ಕಡೆಯ ಹಿರಿಯರೂ ಒಂದೆಡೆ ಕಲೆತು ಲಗ್ನ ನಿಶ್ಚಯಿಸಬೇಕಷ್ಟೆ"

—ಎನ್ನುತ್ತಾ ಸರೋಜ, ಹಿಂದಿನ ದಿನ ಗಿರಿಜ ಶಾಮುವಿನ ಎದುರಿಗೆ ಹಾಡಿದುದು, ಅವನು ಅವಳ ಸಂಗೀತವನ್ನೂ ಅವಳ ರೂಪ-ಲಾವಣ್ಯಗಳನ್ನೂ ಮೆಚ್ಚಿದುದು— ಮೊದಲಾದ ಸಂಗತಿಗಳನ್ನೆಲ್ಲಾ ವಿವರಿಸಿದಳು.

ಸರೋಜೆಯ ಮಾತು ಕೇಳುತ್ತಿದ್ದಂತೆ ಜಾನಕಮ್ಮನವರಿಗೆ ತುಂಬಾ ಉತ್ಸಾಹವೂ ಸಂತೋಷವೂ ಆಯಿತು. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಅವರ ಮುಖದಲ್ಲಿ ಚಿಂತೆಯ ನೆರಳು ಕಾಣಿಸಿಕೊಂಡುದನ್ನು ಕಂಡು ಸರೋಜ ಕೇಳಿದಳು—

" ಯಾಕೆ ಯೋಚಿಸುತ್ತಿದ್ದೀರಿ ಅಮ್ಮ? "

" ಹೌದು ಸರೋಜ. ವರನಂತೂ ಸಿಕ್ಕಿದ; ವಧುವನ್ನೂ ಒಪ್ಪಿದ. ಆದರೆ ವರದಕ್ಷಿಣೆ ಎಷ್ಟು ಕೇಳುತ್ತಾನೆಯೋ? ಎರಡು – ಮೂರು ಸಾವಿರ ಕೇಳಿಬಿಟ್ಟರೆ ಕೊಡುವ ಚೈತನ್ಯ ನಮಗಿದೆಯೆ ? "

—ಎಂದರು ಜಾನಕಮ್ಮ.

ಸರೋಜೆಗೆ ಅವರ ಮಾತು ಚಿಂತಿಸುವ ವಿಷಯವಾಯಿತು.

'ವಿದ್ಯಾವಂತನೂ, ಸುಸಂಸ್ಕೃತನೂ, ಪ್ರಗತಿಮನೋಭಾವದವನೂ ಆದ ಶಾಮು ವರದಕ್ಷಿಣೆ ಕೇಳುವನೆ?'

'ಕೇಳಿದರೂ ಕೇಳಬಹುದು'

—ಎಂದಿತು ಸರೋಜೆಯ ಮನಸ್ಸು.

ಅವಳಿಗೆ ಹೊಳೆದ ಅಭಿಪ್ರಾಯವನ್ನು ಸಮರ್ಥಿಸಲು ಹತ್ತಾರು ಪ್ರಸಂಗಗಳು ಅವಳ ಕಣ್ಮುಂದೆ ಸುಳಿದವು..........

........ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದ ಚಂದ್ರಶೇಖರ ತಾನು ತುಂಬಾ ಪ್ರಗತಿಶೀಲನೆಂದು ತನ್ನ ಸಹಪಾಟಿಗಳೆದುರಿಗೆ ಜಂಭ ಕೊಚ್ಚುತ್ತಿದ್ದ. ಗಂಡಸರಿಂದ ಹೆಂಗಸರಿಗೆ ತುಂಬಾ ಅನ್ಯಾಯವಾಗುತ್ತಿದೆಯೆಂದೂ, ಅದನ್ನು ನಿಲ್ಲಿಸುವುದು ಮುಂದಿನ ಸಭ್ಯ ಜನಾಂಗವಾಗಲಿರುವ ಇಂದಿನ ಬಿಸಿರಕ್ತದ ತರುಣರ ಕರ್ತವ್ಯವೆಂದೂ ಚರ್ಚಾಕೂಟಗಳಲ್ಲಿ ಭಾಷಣ ಬಿಗಿಯುತ್ತಿದ್ದ. ಅಂತಹ ಪ್ರಭೃತಿ ಪ್ರಿಮೆಡಿಕಲ್‌ನಲ್ಲಿದ್ದ ಪ್ರಮೀಳೆಯನ್ನು ಪ್ರೇಮಿಸಿ, ಅವಳನ್ನೇ ಮದುವೆಯಾಗುವೆನೆಂದು ನಂಬಿಸಿ, ಕೊನೆಗೆ ವರದಕ್ಷಿಣೆಯ ಆಸೆಗೆ ಮನಸೋತು, ಹಿರಿಯ ಅಧಿಕಾರಿಗಳೊಬ್ಬರ ಮಗಳನ್ನು ಮದುವೆಯಾದ. ಅವನ ಪ್ರಗತಿ ಮನೋಭಾವ ಎಲ್ಲಿಯವರೆಗೆ ಉಳಿಯಿತು?

...ವರದಕ್ಷಿಣೆಯ ಪದ್ಧತಿಯನ್ನು ಬಹುವಾಗಿ ಖಂಡಿಸುತ್ತಿದ್ದ ತನ್ನ ದೂರದ ಸಂಬಂಧಿ ಧ್ರುವರಾಯ ವಿದೇಶ ಪ್ರವಾಸ ಮಾಡಿಕೊಂಡು ಬರುವ ಆಸೆಯಿಂದ ವರದಕ್ಷಿಣೆಗೆ ಕೈಯೊಡ್ಡಿ ಮದುವೆಯಾಗಲಿಲ್ಲವೆ?

....'ಒಂದು ಗಂಡಿಗೂ ಒಂದು ಹೆಣ್ಣಿಗೂ ಮದುವೆಯಾಗಬೇಕಾದುದು ಪ್ರಪಂಚದಲ್ಲಿನ ಒಂದು ಧರ್ಮ ನಿಯಮ. ಗಂಡಿನ ಅಂತಸ್ತು ಹೆಣ್ಣಿಗಿಂತ ದೊಡ್ಡದು ಎಂಬುದು ಲೋಕದ ತಿಳಿವಳಿಕೆ. ಆ ತಿಳಿವಳಿಕೆಗೆ ತಕ್ಕಂತೆ ಗಂಡು ನಡೆದುಕೊಳ್ಳಬೇಕು. ಇತರರ ತಪ್ಪುಗಳನ್ನು ಮನ್ನಿಸಿ, ಪರೋಪಕಾರ ಬುದ್ಧಿಯಿಂದ ಬಾಳುತ್ತಾ ದೊಡ್ಡವನೆನ್ನಿಸಿಕೊಳ್ಳಬೇಕು. ಮದುವೆಯ ಪ್ರಶ್ನೆ ಬಂದಾಗ ಹೆಣ್ಣಿನ ಕಡೆಯವರಿಗೆ ತೊಂದರೆಯಾಗದಂತೆ ನಡೆದುಕೊಳ್ಳಬೇಕು. ಮದುವೆಯಾದಮೇಲೆಯೂ ಸಹ ಹೆಣ್ಣಿಗೆ ಯಾವ ಬಗೆಯ ಕಷ್ಟವನ್ನೂ ಕೊಡಬಾರದು; ಯಾವ ರೀತಿಯ ದುಃಖವನ್ನೂ ಉಂಟುಮಾಡಬಾರದು. ಹೆಣ್ಣು ಐಶ್ವರ್ಯವಂತಳಾಗಿರಬೇಕಾಗಿಲ್ಲ; ಸೌಂದರ್ಯವತಿಯಾಗಿರಬೇಕಾಗಿಲ್ಲ. ಗುಣ

ವತಿಯಾಗಿಲ್ಲದಿದ್ದರೂ ಅವಳನ್ನು ತಿದ್ದುವ ಶಕ್ತಿ ಗಂಡಿಗಿದೆ. ಆದ್ದರಿಂದ ಗಂಡು ಯಾವುದಕ್ಕೂ ಚಿಂತಿಸಬಾರದು. ಲೋಕಧರ್ಮಕ್ಕನುಗುಣವಾಗಿ ಯಾವುದೋ ಒಂದು ಹೆಣ್ಣನ್ನು ಮದುವೆಯಾಗಬೇಕು ; ಗೃಹಸ್ಥಜೀವನ ನಡೆಸಬೇಕು. ಉಸಿರಿದ್ದಷ್ಟು ದಿನ ಹತ್ತು ಮಂದಿಗೆ ಉಪಕಾರ ಮಾಡುತ್ತಾ ಬಾಳಬೇಕು, ಎಂದು 'ಸಂಸಾರ-ವೇದಾಂತ'ವನ್ನು ಹೇಳುತ್ತಿದ್ದ ತನ್ನ ತಂದೆಯ ಕಡೆಯ ಬಂಧು ವೆಂಕಟರಾಯ ಮೊದಮೊದಲು ತಾನು ಮದುವೆಯಾಗಬಾರದೆಂದು ಪ್ರತಿಭಟಿಸುತ್ತಿದ್ದ. ಬರಬರುತ್ತಾ ಮನಸ್ಸು ಯೌವ್ವನದ ಆಸೆ - ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದರ ಕಡೆಗೆ ಹರಿದು, ಮದುವೆಯಾಗಲು ನಿರ್ಧರಿಸಿದ. ಅವನ ಅದೃಷ್ಟಕ್ಕೆ ಸುಟ್ಟಮೋರೆಯ ಕುರೂಪಿ ಹೆಣ್ಣೊಂದು ತಾಳಿಕಟ್ಟಿಸಿಕೊಳ್ಳಲು ಮುಂದೆ ಬಂದಿತು. ಆ ಹುಡುಗಿ ತನಗೆ ಬೇಡವೆಂದು ಮುಖ ತಿರುಗಿಸಿಕೊಂಡ ವೆಂಕಟರಾಯ. ಮಾವನಾಗಲಿದ್ದ ಮಹಾಲಕ್ಷ್ಮಿಯ ಪುತ್ರ ನೂರು ರೂಪಾಯಿನ ನೂರು ನೋಟುಗಳಿದ್ದ ಒಂದು ಕಟ್ಟನ್ನು ತಾನು ಬೇಟಿಯಾಡಿದ್ದ ವರನ ಕಣ್ಮುಂದೆ ಕುಣಿಸಿದ. ಸೋತಿತು ಗಂಡಿನ ಮನಸ್ಸು—ರೂಪಕ್ಕಲ್ಲ—ರೂಪಾಯಿಗೆ! ಮೋಹಿಸಿದ ವೆಂಕಟರಾಯ ಆ ಮೋಹಿನಿಯನ್ನೇ! ಹತ್ತು ಸಾವಿರದೊಡನೆ ಬಂದ ಹುಡುಗಿ ಗಂಡನಿಗೆ ಬೇಡವಾದ ಹೆಂಡತಿಯಾಗಿ, ಮಾವನ ಮನೆಯಲ್ಲಿ ಕಣ್ಣೀರಿನ ಕೊಳದಲ್ಲಿ ಇಂದಿಗೂ ಈಜಾಡುತ್ತಿದ್ದಾಳೆ. ಕನ್ಯೆಯನ್ನು ಕೊಟ್ಟ ತಂದೆಯ ಕೊರಗು ಕರುಣಾಜನಕವಾಗಿದೆ. ವೆಂಕಟರಾಯನ ವೇದಾಂತ ಮುಗ್ಧನಾರಿಯ ಬಾಳದೀವಿಗೆಯನ್ನಾರಿಸಿ, ಗಾಳಿಗೆ ಹಾರಿಹೋಗಿದೆ...........

—ಹೀಗೆಯೇ ಅನೇಕ ಪ್ರಸಂಗಗಳು, ಕಣ್ಣಾರೆ ಕಂಡ ಘಟನೆಗಳು ಸರೋಜೆಯ ನೆನಪಿನಲ್ಲಿ ಸುಳಿದುಹೋದವು.

'ಲೋಕದ ವ್ಯವಹಾರ ತಿರುಗು ಮುರುಗಾಗಿದೆ. 'ಆಡು-ಮಾಡು'ಗಳಿಗೆ ಅಜಗಜಾಂತರವಿದೆ ಎಂದಮೇಲೆ, ಇಂದು ಪ್ರಗತಿಶೀಲನಾಗಿ ಕಾಣುವ ಶಾಮು ನಾಳೆಯೇ ವಿಗತಿಶೀಲನಾಗಿ ಮಾರ್ಪಟ್ಟರೆ ಆಶ್ಚರ್ಯವೇನು ?'

—ಎಂದುಕೊಂಡಳು ಸರೋಜ.

"ನೀವೇನೂ ಯೋಚಿಸಬೇಡಿ ಅಮ್ಮ. ವರದಕ್ಷಿಣೆಯ ವಿಷಯವಾಗಿ ನಾನೇ ಶಾಮುವನ್ನು ವಿಚಾರಿಸುತ್ತೇನೆ."

"ಸರೋಜ, ನಮ್ಮ ಸ್ಥಿತಿ ನಿನಗೆ ತಿಳಿದೇ ಇದೆ. ಆದರೂ ಕಷ್ಟಪಟ್ಟು ಒಂದು ಸಾವಿರ ಹೊಂದಿಸಿ ವರದಕ್ಷಿಣೆ ಅಂತ ಕೊಡುವುದಕ್ಕೆ ಪ್ರಯತ್ನಿಸುತ್ತೇನೆ."

"ಆಗಲಿ ಅಮ್ಮ. ಹೇಗಾದರೂ ಮಾಡಿ ನಾನು ಶಾಮುವನ್ನು ಒಪ್ಪಿಸುತ್ತೇನೆ."

—ಎನ್ನುತ್ತಾ ಸರೋಜ ತನ್ನ ಮನೆಗೆ ಬಂದಳು.

ರಾತ್ರಿಯ ಊಟ ಮುಗಿಸಿ ಎಲ್ಲರೂ ಮಲಗಿದರು.

ಶಾಮು ಗಿರಿಜೆಯೊಡನೆ ಬಾಳುವ ಸವಿಗನಸಿನಲ್ಲಿ ಮೈಮರೆತ.

೩

ಮರುದಿನ ಭಾನುವಾರ ಬೆಳಗಾದೊಡನೆಯೇ ಜಾನಕಮ್ಮ ಸರೋಜೆಯ ಮನೆಗೆ ಬಂದರು.

"ಇವತ್ತು ಅಡಿಗೆ ಮಾಡಬೇಡ ಸರೋಜ. ಎಲ್ಲರೂ ಅಲ್ಲಿಗೇ ಊಟಕ್ಕೆ ಬಂದುಬಿಡಿ."

"ಏನಮ್ಮ ವಿಶೇಷ ?"

ಸರೋಜೆಯ ಪ್ರಶ್ನೆಗೆ ಜಾನಕಮ್ಮನವರು ಉತ್ತರಿಸಲಿಲ್ಲ.

"ಓಹೋ ! ಅಳಿಮಯ್ಯನಾಗುವವರಿಗೆ ಇವತ್ತು ಔತಣ ಏರ್ಪಾಡು ಮಾಡಿದ್ದೀರೋ ?"

"ಬಡವರು ಏನು ಔತಣ ಮಾಡಿಯಾರು ಸರೋಜ ?"

—ಜಾನಕಮ್ಮನವರು ಸಂಕೋಚದಿಂದ ಕೇಳಿದರು.

"ಪರವಾಯಿಲ್ಲಮ್ಮ. ನೀವೇನೂ ಈಗಲೇ ತೊಂದರೆ ತೆಗೆದುಕೊಳ್ಳಬೇಡಿ."

"ಯಾಕೆ ಸರೋಜ ಹೀಗನ್ನುತ್ತೀ ?"

"ಹೌದಮ್ಮ. ಶಾಮುವಿಗೆ ಇವತ್ತು ಇಲ್ಲೇ ಊಟವಾಗಬೇಕು. ತಂದೆಯವರು ನಿನ್ನೆಯ ರಾತ್ರಿಯೇ 'ನಾಳೆ ಹೋಳಿಗೆ ಮಾಡಿಬಿಡು' ಎಂದು ಅಪ್ಪಣೆ ಕೊಡಿಸಿದ್ದಾರೆ. ಶಾಮುವಿಗೆ ಇದೇ ನಾವು ಮಾಡುವ ಔತಣ ! ನಾಳೆಯ ಬೆಳಗಿನ ಎಕ್ಸ್‌ಪ್ರೆಸ್ ಗಾಡಿಗೆ ಅವರು ಬೆಂಗಳೂರಿಗೆ ಹೊರಟು ಹೋಗುತ್ತಾರೆ"

—ಎಂದಳು ಸರೋಜ.

ಉತ್ಸಾಹದಿಂದ ಬಂದಿದ್ದ ಜಾನಕಮ್ಮನವರ ಮುಖ ಬಾಡಿತು.

ಅದನ್ನು ಗಮನಿಸಿದ ಸರೋಜ—

" ಅಮ್ಮಾ ನನ್ನದೊಂದು ಕೋರಿಕೆ ನೆರವೇರಿಸುತ್ತೀರಾ ? "

—ಎಂದು ಕೇಳಿದಳು.

ಜಾನಕಮ್ಮ ದೈನ್ಯದಿಂದ ಸರೋಜೆಯ ಮುಖವನ್ನು ನೋಡಿದರು.

" ಹೇಳಲೇನಮ್ಮ ? "

" ಹೇಳು ತಾಯಿ "

" ನಿಮ್ಮ ಮನೆಯಲ್ಲಿ ಮಾಡಬೇಕೆಂದಿರುವ ಔತಣವನ್ನು ನಮ್ಮ ಮನೆಯಲ್ಲೇ ಮಾಡಬಹುದು. ಹೋಳಿಗೆ ಮಾಡುವುದರಲ್ಲಿ ನನಗೆ ಅನುಭವ ಸಾಲದು ! "

" ಆದಕ್ಕೇನು ಮಾಡಬೇಕಮ್ಮ. ನಾನೇ ಬಂದು ಬೇಕಾದ್ದು ಮಾಡಿ ಕೊಡುತ್ತೇನೆ."

" ಅಷ್ಟೇ ಸಾಲದಮ್ಮ........"

" ಇನ್ನೇನಾಗಬೇಕು ಸರೋಜ ? "

" ನೀವೆಲ್ಲರೂ ಇಲ್ಲಿಗೇ ಊಟಕ್ಕೆ ಬರಬೇಕು."

" ಆಗಲಮ್ಮ—ಸಂತೋಷ "

—ಎಂದು ಹೇಳಿ ಜಾನಕಮ್ಮನವರು ಹಿಂತಿರುಗಿದರು.

ಉಪಾಹಾರ ಮುಗಿದ ಬಳಿಕ, ಸರೋಜ ತಂದೆಯುನ್ನು ಕರೆದು, ಜಯರಾಯರನ್ನು ಊಟಕ್ಕೆ ಆಮಂತ್ರಿಸಲು ಸೂಚಿಸಿದಳು.

ಶಾಮು ದೇವರಾಜ ಮಾರ್ಕೆಟ್ಟಿನ ಕಡೆಗೆ ಹೋಗಿ, ಅಂದಿನ ' ನವ ಕರ್ನಾಟಕ ' ಪತ್ರಿಕೆಯನ್ನು ಕೊಂಡುತಂದ. ಅದರಲ್ಲಿ ಪಡಿಯಚ್ಚುಗಳೊಡನೆ ಪ್ರಕಟವಾಗಿದ್ದ ಸುಂದರು – ಸ್ವಕಾರ ವಿದೇಶ ಪ್ರವಾಸದ ವಾರ್ತೆಯನ್ನು ಓದಿದಾಗ ಅವನಿಗೆ ಮಹದಾನಂದವಾಯಿತು. " ವಿದೇಶ ಪ್ರವಾಸ ಕೈಗೊಂಡಿರುವ ಶ್ರೀಯುತ ಸುಂದರರಾಯರು ಕನ್ನಡನಾಡಿನ ಪ್ರಸಿದ್ಧ ತರುಣಲೇಖಕರೂ ' ನವಕರ್ನಾಟಕ ' ಪತ್ರಿಕೆಯ ಪ್ರಧಾನೋಪಸಂಪಾದಕರೂ ಆದ ಶ್ರೀ ಶಾಮು ಸುಂದರರ ಅಣ್ಣಂದಿರು " ಎಂಬ ವಾಕ್ಯವನ್ನು ಓದಿದಾಗಲಂತೂ, ಶಾಮುವಿಗೆ ತಾನೇ ವಿದೇಶ ಪ್ರವಾಸಕ್ಕೆ ಹೊರಟಷ್ಟು ಹರ್ಷವಾಯಿತು.

ಸುದ್ದಿಯನ್ನರಿತ ಸರೋಜೆಯೂ ಗೋವಿಂದಯ್ಯನವರೂ ತಮ್ಮ ಸಂತೋಷವನ್ನು ಸೂಚಿಸಿದರು.

ಹಾಗೆಯೇ ಅದರಲ್ಲಿ ಪ್ರಕಟವಾಗಿದ್ದ 'ಸ್ಟುಡಿಯೋ ಸಂದರ್ಶನ'ದ ಲೇಖನವನ್ನು ಓದಿ ಆನಂದಿಸಿದ ಗೋವಿಂದಯ್ಯನವರು ಶಾಮುವಿನ ಆಕರ್ಷಕ ಶೈಲಿಯನ್ನು ಪ್ರಶಂಸಿದರು.

ಒಳಗಡೆ ಜಾನಕಮ್ಮನವರಿಗೆ ಅಡಿಗೆಯ ಕೆಲಸದಲ್ಲಿ ನೆರವಾಗುತ್ತಿದ್ದ ಸರೋಜ ಶಾಮುವಿನ ಲೇಖನ ಪ್ರಕಟವಾಗಿದ್ದ 'ನವಕರ್ನಾಟಕ' ಪತ್ರಿಕೆಯನ್ನು ಓದುವ ಕುತೂಹಲದಿಂದ ಹೊರಗೆ ಬಂದಳು. ಕೂಡಲೇ ಗೋವಿಂದಯ್ಯ—

"ಶಾಮುವಿಗೆ ಇನ್ನೊಂದು ಕಪ್ಪು ಕಾಫಿ ತಂದು ಕೊಡಮ್ಮ" ಎಂದರು.

ಶಾಮುವಿನ ಮುಖವನ್ನೇ ನೋಡುತ್ತಾ—

"ತರುತ್ತೇನಪ್ಪ....ಕಾಫಿಯೇ ಪತ್ರಿಕೋದ್ಯೋಗಿಗಳಿಗೆ ಅಮೃತವಂತೆ!"

ಎಂದು ಮುಗುಳುನಗೆ ನಗುತ್ತಾ ನುಡಿದ ಸರೋಜ ಪತ್ರಿಕೆಯೊಡನೆ ಅಡಿಗೆಯ ಕೋಣೆಗೆ ನಡೆದಳು.

"ಶಾಮು, ನೀನು ಪತ್ರಿಕೋದ್ಯೋಗಿಯಾದುದು ಹೇಗೆ?"

—ಗೋವಿಂದಯ್ಯ ಮಾತಿಗೆ ಆರಂಭಿಸಿದರು.

ತಾನು ಕಾಲೇಜು ವಿದ್ಯಾಭ್ಯಾಸವನ್ನು ಮುಂದುವರಿಸಲಾಗದಿದ್ದಾಗ, ಶ್ರೀ ಲಕ್ಷ್ಮೀನಾರಾಯಣರಾಯರ ನೆರವಿನಿಂದ ಪತ್ರಿಕೋದ್ಯಮಕ್ಕೆ ಪ್ರವೇಶಿಸಿದ ಬಗೆಯನ್ನು ವಿವರಿಸಿದ ಶಾಮು.

ಸರೋಜ ತಂದುಕೊಟ್ಟ ಕಾಫಿಯ ಬಟ್ಟಲನ್ನು ಕೈಗೆ ತೆಗೆದುಕೊಳ್ಳುತ್ತಾ ಗೋವಿಂದಯ್ಯ ಕೇಳಿದರು—

"ನಿನ್ನ ಆಯುಷ್ಯವನ್ನೆಲ್ಲಾ ಪತ್ರಿಕೋದ್ಯಮದಲ್ಲಿಯೇ ಕಳೆಯಬೇಕೆಂದಿರುವೆಯಾ?"

"ಹಾಗೇನೂ ನಾನು ನಿರ್ಧರಿಸಿಲ್ಲ. ಪತ್ರಿಕೋದ್ಯಮದಲ್ಲಿದ್ದರೆ ಪ್ರಪಂಚದ ಪ್ರತಿದಿನದ ಆಗುಹೋಗುಗಳನ್ನು ಅರಿತುಕೊಳ್ಳಬಹುದು. ಬೇರಾವ ಬಗೆಯ ಜೀವನದಿಂದಲೂ, ಉದ್ಯೋಗ–ನೌಕರಿಗಳಿಂದಲೂ ದೊರೆಯದ ವಿಶಿಷ್ಟವಾದ ಅನುಭವವನ್ನು ಪಡೆಯಬಹುದು. ಆದರೆ ನಾನು ಮಾತ್ರ ಹೆಚ್ಚುಕಾಲ ಈ ಉದ್ಯಮದಲ್ಲಿರಲಾರೆ."

"ಮುಂದೆ ಏನು ಮಾಡಬೇಕೆಂದಿರುವೆ?"

" ಯಾರ ಹಂಗೂ ಇಲ್ಲದೆ ಸ್ವತಂತ್ರವಾಗಿದ್ದುಕೊಂಡು ನನ್ನ, ಇಡೀ ಜೀವನವನ್ನೇ ಗ್ರಂಥರಚನೆಗೆ ವಿನಿಯೋಗಿಸಲು ಮಾಡಬೇಕೆಂದಿದ್ದೇನೆ."

" ಕನ್ನಡನಾಡಿನಲ್ಲಿ ಗ್ರಂಥರಚನೆಯು ಕೆಲಸ ಆರ್ಥಿಕ ದೃಷ್ಟಿಯಿಂದ ಲಾಭದಾಯಕವಾದುದಲ್ಲ – ಅಲ್ಲವೇ ? "

" ಹೌದು. ಆದರೆ ಲಾಭದ ದೃಷ್ಟಿಯಿಂದ ನಾನು ಗ್ರಂಥರಚನೆಗೆ ಕೈ ಹಾಕುವುದಿಲ್ಲ. ಆ ಉದ್ದೇಶವೇ ನನಗಿಲ್ಲ."

" ಕನ್ನಡ ಗ್ರಂಥಕರ್ತರು ಎಷ್ಟೋಮಂದಿ ಅಶನ – ವಸನಗಳಿಗೆ ಕಷ್ಟ ಪಡುತ್ತಿರುವುದು ನಿನಗೆ ತಿಳಿಯದೆ ? "

" ಹೌದು. ಈಗಿನ ಸ್ಥಿತಿಯೇನೋ ಹಾಗೆಯೇ ಇದೆ. ಆದರೆ ಮುಂದೆಯೂ ಸಹ ಗ್ರಂಥಕರ್ತರ ಸ್ಥಿತಿಗತಿಗಳು ಹೀಗೆಯೇ ಉಳಿಯುತ್ತವೆ ಯೆಂದು ಊಹಿಸಬೇಕಾಗಿಲ್ಲ. ಪ್ರತಿಭೆಯಿದ್ದು ಬೆಳಕಿಗೆ ಬರಲು ಯತ್ನಿಸುವ ಲೇಖಕರನ್ನು ಕಡೆಗಣಿಸಿ, ಪ್ರಸಿದ್ಧಿಗೆ ಬಂದಿರುವ ಲೇಖಕರ ಕೃತಿಗಳನ್ನು ಮಾತ್ರವೇ ಪ್ರಕಟಿಸಿ ಹೆಚ್ಚು ಬೆಲೆಯಿಟ್ಟು ಮಾರಲು ಹಾತೊರೆಯುವ ಪ್ರಕಾಶಕರು ಮತ್ತು ಗ್ರಂಥಕರ್ತರಿಗೆ ಸಂಭಾವನೆ ಕೊಡಲು ಸತಾಯಿಸುವ ಪ್ರಕಾಶಕರು ಹೆಚ್ಚಾಗಿರುವುದೇ ಕನ್ನಡ ಗ್ರಂಥಕರ್ತನ ಬಡತನಕ್ಕೆ ಮುಖ್ಯ ಕಾರಣ. ಇದೇ ಪರಿಸ್ಥಿತಿ ಪಾಶ್ಚಾತ್ಯ ದೇಶಗಳಲ್ಲಿಯೂ ಸಹ ಸುಮಾರು ೧೯೩೯ರ ವರೆಗಿದ್ದಿತು. ದ್ವಿತೀಯ ಮಹಾಯುದ್ಧ ಆರಂಭವಾದೊಡನೆಯೇ ಬ್ರಿಟನ್ ಮತ್ತು ಅಮೇರಿಕಾ ದೇಶಗಳ ವ್ಯವಹಾರ ರಂಗದಲ್ಲಿ ಅದ್ಭುತವಾದ ಮಾರ್ಪಾಟು ಮೊದಲಾಯಿತು. ಇಂಗ್ಲೀಷ್ ಸಾಮ್ರಾಜ್ಯದಲ್ಲಿ ಪ್ರಬಲವಾದ ಆರ್ಥಿಕ ಮುಗ್ಗಟ್ಟು ತಲೆದೋರಿತು. ಜನರ ಕೈಯಲ್ಲಿ ಹಣದ ಓಡಾಟ ಕಡಿಮೆಯಾಯಿತು. ಇಂತಹ ಸಮಯದಲ್ಲಿ ಬ್ರಿಟಿಷ್ ತನ್ನ ಸೈನಿಕರಿಗೆ ಬೇಕಾದ ಸವಲತ್ತುಗಳನ್ನು ನೀಡಲು ಅಸಮರ್ಥವಾಗಿ, ಅಮೇರಿಕಾ ಅವರ ನೆರವಿಗೆ ಬರಬೇಕಾಯಿತು. ಖಾದ್ಯ, ಪೇಯ, ಮನರಂಜಕ ವಸ್ತು ಸಾಮಗ್ರಿ ಗಳನ್ನು ಒದಗಿಸಲು ಮುಂದೆ ಬಂದ ಅಮೇರಿಕಾ ಪ್ರಪ್ರಥಮವಾಗಿ ಸಾಹಿತ್ಯ ವ್ಯವಹಾರದಲ್ಲಿ ಅಪೂರ್ವ ಕ್ರಾಂತಿಮಾಡಿತು. ಸೈನಿಕರಿಗೆ – ಯುದ್ಧ ಭೂಮಿ ಯಲ್ಲಿರುವವರಿಗೆ – ಬೇಕಾಗುವ ಮನರಂಜಕ ಹಾಗೂ ಮನೋವಿಕಾಸ ಗೊಳಿಸುವ ಸ್ಫೂರ್ತಿದಾಯಕ ಸಾಹಿತ್ಯ ಕೃತಿಗಳನ್ನು ಅತ್ಯಲ್ಪ ಬೆಲೆಗೆ ಸಿದ್ಧ

ಗೊಳಿಸಿ ಪ್ರಕಟಿಸತೊಡಗಿತು. ಆರ್ಥಿಕ ಮುಗ್ಗಟ್ಟನಿಂದಾಗಿ, ಹೆಚ್ಚು ಹಣ ತೆತ್ತು ಪುಸ್ತಕಗಳನ್ನು ಕೊಂಡು ಓದಲು ಅಶಕ್ತರಾಗಿದ್ದ ಸಾಮಾನ್ಯ ಜನರಿಗೆ ಅನಿರೀಕ್ಷಿತವಾಗಿ ಸದವಕಾಶವೊಂದು ದೊರೆಯಿತು. ಈ ಅಲ್ಪಬೆಲೆಯ ಪುಸ್ತಕಗಳನ್ನು ವಾಚನಾಭಿರುಚಿಯುಳ್ಳ ಸಕಲ ಸಾಮಾನ್ಯ ಜನತೆಯೂ ಕೊಂಡು ಓದಲು ಅನುಕೂಲವಾಯಿತು. ಜನತೆಯಲ್ಲಿ ವಾಚನಾಭಿರುಚಿ ಹೆಚ್ಚಿ, ಅವರ ನಿತ್ಯಜೀವನದಲ್ಲಿ ಪುಸ್ತಕಗಳೂ–ಪತ್ರಿಕೆಗಳೂ ಹಾಸುಹೊಕ್ಕಾದವು. ಬಡತನದ ಬೊಂಬೆಗಳಾಗಿದ್ದ ಗ್ರಂಥಕರ್ತರು ಹೊತ್ತುಹೊತ್ತಿಗೆ ಅನ್ನ ನೀರು ಕಂಡು ಬದುಕಿಕೊಂಡರು. ಸಾಮಾಜಿಕ ಜೀವನದಲ್ಲಿ ಆರ್ಥಿಕ ಸಮಾನತೆಯನ್ನು ಗಳಿಸಿ ಮಾನ್ಯತೆಯನ್ನು ದೊರಕಿಸಿಕೊಂಡರು. ಹೀಗೆ ಅವರು ಪಡೆದ ನವಚೇತನದಿಂದಲೇ ರಾಷ್ಟ್ರ ಕಲ್ಯಾಣಕಾರಕವಾದ ಉತ್ತಮೋತ್ತಮ ಸಾಹಿತ್ಯ ಕಲಾಕೃತಿಗಳು ರಚಿಸಲ್ಪಟ್ಟವು. ಇಂದು ಅಮೇರಿಕಾ ಅಗ್ರಗಣ್ಯ ರಾಷ್ಟ್ರವಾಗಿರುವುದಕ್ಕೆ ಅಲ್ಲಿನ ಕೃಷಿ, ಕೈಗಾರಿಕೆ, ವಿಜ್ಞಾನ ಮತ್ತು ರಾಜಕೀಯ ವ್ಯವಹಾರಗಳು ಎಷ್ಟುಮಟ್ಟಿಗೆ ಕಾರಣವಾಗಿವೆಯೋ ಅಷ್ಟೇಮಟ್ಟಿಗೆ ಗ್ರಂಥಕರ್ತರೂ ಕಾರಣರಾಗಿದ್ದಾರೆ. ದೇಶದ ಆಗುಹೋಗುಗಳನ್ನೂ ಜನಜೀವನವನ್ನೂ ಪ್ರತಿಬಿಂಬಿಸುವ, ಪರಿಷ್ಕರಿಸುವ ಪವಿತ್ರ ಕಾರ್ಯದಲ್ಲಿ ಗ್ರಂಥಕರ್ತರು ಮುನ್ನಡೆಯದಿದ್ದರೆ ದೇಶೋನ್ನತಿಯಾಗಲಿ ದೇಶ ಕಲ್ಯಾಣವಾಗಲಿ ಆಗುವುದು ಸಾಧ್ಯವಿಲ್ಲ."

"ಅಮೆರಿಕಾಗೂ ಕರ್ನಾಟಕಕ್ಕೂ ತುಂಬಾ ವ್ಯತ್ಯಾಸವಿದೆ ಶಾಮು!"

"ಆ ವ್ಯತ್ಯಾಸ ಬಹುಕಾಲ ಉಳಿಯುವುದಿಲ್ಲವೆಂದು ನನ್ನ ನಂಬಿಕೆ. ದಿನಗಳೆದಂತೆ ಮಾನವನ ಜೀವನದಲ್ಲಿ ಮಾರ್ಪಾಟು ಆಗಿಯೇ ಆಗುವುದು. ಸಿರಿತನ–ಬಡತನ, ಮೇಲು–ಕೀಳು ಎಂಬ ಭೇದ ಭಾವನೆ ಅಳಿದಂತೆಲ್ಲಾ ಜನತೆಯಲ್ಲಿ ಸಮತೆ–ಸೋದರಭಾವಗಳು ಮೂಡಿ, ಐಕ್ಯತೆಯ ಅಡಿಗಲ್ಲು ತಾನಾಗಿ ಭದ್ರವಾಗುವುದು. ಒಬ್ಬನ ಉನ್ನತಿಗಾಗಿ ಇನ್ನೊಬ್ಬನು ಶ್ರಮಿಸುವ–ಒಬ್ಬನ ಒಳಿತಿಗಾಗಿ ಇನ್ನೊಬ್ಬನು ಆಸಕ್ತಿ ವಹಿಸುವ ನಿಸ್ವಾರ್ಥ ಮನೋಭಾವನೆ ನಮ್ಮ ಜನತೆಯಲ್ಲಿ ಮೂಡಿದಂದೇ ಬಡತನದ ಭೂತ ಸುಟ್ಟು ಬೂದಿಯಾಗುವುದು. ಈ ಬಗೆಯ ಅಹಿಂಸಾತ್ಮಕ ಸಮತಾವಾದವೇ ಭಾರತದ–ಕರ್ನಾಟಕದ ಆಧ್ಯಾತ್ಮಿಕ ಸಂಸ್ಕೃತಿ. ನಮ್ಮ ನಿತ್ಯ ಜೀವನದಲ್ಲಿ ಈ ಸಂಸ್ಕೃತಿ

ಆಚರಣೆಗೆ ಬಂದಲ್ಲಿ, ಹಿಂಸಾತ್ಮಕ ಕ್ರಾಂತಿಯಿಂದ ಸಮತಾವಾದವನ್ನು ಸಾಧಿಸಿರುವ ರಷ್ಯಾ, ಬಂಡವಾಳದ ಬಲದಿಂದ ಮೇರೆ ಮೀರಿ ಮೆರೆಯುತ್ತಿರುವ ಅಮೆರಿಕಾ ದೇಶಗಳಿಗಿಂತ ನಮ್ಮ ರಾಷ್ಟ್ರ ಅಗ್ರಮಾನ್ಯತೆಗೆ ಅರ್ಹವಾಗುತ್ತದೆ. ಈ ದಿಸೆಯಲ್ಲಿ ಗ್ರಂಥಕರ್ತರು ಹೆಚ್ಚು ಶ್ರಮ ವಹಿಸಬೇಕಾಗಿದೆ. ಲೌಕಿಕ ವ್ಯವಹಾರದಲ್ಲಿ ತನ್ಮಯರಾಗಿರುವ ಸಾಮಾಜಿಕರಿಗೆ ಆಧ್ಯಾತ್ಮಿಕ ಸಂಸ್ಕೃತಿಯ ಅರಿವನ್ನುಂಟುಮಾಡಬೇಕಾಗಿದೆ. ಗ್ರಂಥಕರ್ತರ ಈ ಕಾರ್ಯದಲ್ಲಿ ಪ್ರಕಾಶಕರ ಜವಾಬ್ದಾರಿಯೂ ಹೆಚ್ಚಾಗಿದೆ. ಹೆಚ್ಚು ಲಾಭವನ್ನಾಶಿಸದೆ, ಗ್ರಂಥಗಳನ್ನು ಪ್ರಕಟಿಸಿ, ಅವು ಅತ್ಯಲ್ಪ ಬೆಲೆಗೆ ಸಾಮಾನ್ಯ ಜನತೆಯ ಕೈಸೇರುವಂತೆ ಮಾಡಬೇಕಾದುದು ಪ್ರಕಾಶಕರ ಕರ್ತವ್ಯ. ಓದುವ ಹಂಬಲ ಹೆಚ್ಚಿದಂತೆಲ್ಲಾ ಪ್ರಕಾಶಕರ ವ್ಯವಹಾರವೂ ಉತ್ತಮಗೊಂಡು, ಗ್ರಂಥಕರ್ತರ ಸ್ಥಿತಿಗಳೂ ಸುಧಾರಿಸುತ್ತವೆ."

—ಎಂದ ಶಾಮು.

ಅವನು ವರ್ಣಿಸಿದ ಭವಿಷ್ಯದ ಕನಸನ್ನು ಕೇಳಿ ಗೋವಿಂದಯ್ಯನವರಿಗೆ ನಗು ಬಂದಿತು. 'ಈ ಕನಸು ಎಂದಿಗಾದರೂ ನಿಜವಾಗುವುದು ಸಾಧ್ಯವೇ?' ಎಂದು ಮನಸ್ಸಿನಲ್ಲಿಯೇ ಅಂದುಕೊಂಡರು.

"ಅಂತೂ ನೀನು ತುಂಬಾ ಆಶಾವಾದಿ ಶಾಮು!"

"ಹೌದು. ಸಾಮೂಹಿಕ ಜೀವನದಲ್ಲಿ ನಾನು ಆಶಾವಾದಿಯಂತೆ ನಡೆದುಕೊಳ್ಳುತ್ತಿದ್ದೇನೆ. ಆದರೆ, ವ್ಯಕ್ತಿಶಃ ನಾನು ನಿರಾಶಾವಾದಿ!"

—ಎಂದು ನಕ್ಕ ಶಾಮು.

ಮಾತು ಹಾಗೆಯೇ ವಿವಿಧ ವಿಷಯಗಳತ್ತ ಹರಿಯಿತು.

ಸುಮಾರು ಹನ್ನೊಂದು ಗಂಟೆಯ ವೇಳೆಗೆ ಗಿರಿಜೆಯ ತಂಗಿ ಮೀರಾ ಬಂದು, ಆತುರಾತುರದಿಂದ ಅಡಿಗೆ ಮನೆಯ ಕಡೆಗೆ ಧಾವಿಸಿ—

"ಅಣ್ಣಾ ಬಂದಿದ್ದಾನೆ ಅಮ್ಮಾ...ಅಣ್ಣಾ ಬಂದಿದ್ದಾನೆ!"

—ಎಂದು ಒಂದೇ ಉಸಿರಿಗೆ ಆಶ್ಚರ್ಯದ ದನಿಯಲ್ಲಿ ನುಡಿದಾಗ ಜಾನಕಮ್ಮನವರು ಅವಾಕ್ಕಾದರು.

"ಸುಳ್ಳು ಹೇಳ್ತೀಯೇನೇ ಮೀರಾ?"

ಕಣ್ಣಗಲಿಸುತ್ತಾ ಸರೋಜ ಹೆದರಿಸುವ ಧ್ವನಿಯಲ್ಲಿ ಕೇಳಿದಳು.

" ಇಲ್ಲಕ್ಕ, ನಿಜವಾಗಿಯೂ ಅಣ್ಣ ಬಂದಿದ್ದಾನೆ. ನೀನೇ ಬಂದು ನೋಡು – ನಾನು ಸುಳ್ಳು ಹೇಳುತ್ತೇನೇನೋ."

ವಿಾರಾ ಮಾತು ಮುಗಿಸಿದೊಡನೆ ಜಾನಕಮ್ಮ ತಮ್ಮ ಮನೆಯತ್ತ ಧಾವಿಸಿದರು. ಅವರ ಹಿಂದೆಯೇ ವಿಾರಾ ಮತ್ತು ಸರೋಜೆಯರೂ ಜಯರಾಯರ ಮನೆಗೆ ಬಂದರು.

ನಾಲ್ಕು ವರ್ಷಗಳ ಹಿಂದೆ ಓಡಿಹೋಗಿದ್ದ ಜಯರಾಯರ ಏಕಮಾತ್ರ ಪುತ್ರ ಜಗದೀಶ ಹೊರಬಾಗಿಲ ಸನಿಯದ ಜಗುಲಿಯ ಮೇಲೆ ಮೊಣಕಾಲಿಗೆ ತಲೆಯೂರಿ ಕುಳಿತಿದ್ದುದನ್ನು ಕಂಡಾಗ ಜಾನಕಮ್ಮನವರ ಮಾತೃಹೃದಯ ಆನಂದದಿಂದ ತುಂಬಿಹೋಯಿತು. ಮನೆಯಲ್ಲಿದ್ದ ಒಡವೆ, ವಸ್ತ್ರ, ಹಣ ಕಾಸುಗಳನ್ನು ಕದ್ದು ಓಡಿಹೋಗಿದ್ದ ಮಗನ ಶತಾಪರಾಧಗಳೆಲ್ಲಾ ಆ ತಾಯಿಯ ಮನಃಪಟಲದಿಂದ ಹಾರಿಹೋಗಿ, ಆ ಸ್ಥಳದಲ್ಲಿ ಅಪಾರ ವಾತ್ಸಲ್ಯಾಮೃತ ತುಂಬಿಕೊಂಡಿತು.

" ಜಗ್ಗೂ....ಜಗ್ಗೂ...."

ಜಾನಕಮ್ಮ ಮಗನ ಬಳಿಗೈದಿ ಮಮತೆಯ ವಾಣಿಯಲ್ಲಿ ಕೂಗಿದರು.

ಮುಖತೋರಿಸಲು ಹಿಂಜರಿಯುತ್ತಿದ್ದ ಜಗದೀಶ ಮಂಡಿಯ ಮೇಲೂರಿದ್ದ ತಲೆಯನ್ನು ಎತ್ತಲಿಲ್ಲ.

" ಬಾಪ್ಪ, ಇಲ್ಲಿ ಯಾಕೆ ಕೂತುಕೊಂಡೆ?....ಒಳಗೆ ಹೋಗೋಣ ಬಾ"

—ಎನ್ನುತ್ತಾ ಜಾನಕಮ್ಮ ಮಗನ ಕೈಹಿಡಿದು ಮನೆಯೊಳಕ್ಕೆ ಕರೆದುಕೊಂಡು ಹೋದರು. ಮೆಲ್ಲನೆ ಹೆಜ್ಜೆ ಇಡುತ್ತಾ ಅದರ ಹಿಂದೆಯೇ ನಡೆದ ವಿಾರಾ ಮತ್ತು ಸರೋಜ ಬಾಗಿಲ ಮರೆಯಲ್ಲೇ ನಿಂತರು.

ಜಗದೀಶ ತಾನು ಮಾಡಿದ ತಪ್ಪುಗಳಿಗಾಗಿ ಪಶ್ಚಾತ್ತಾಪಪಡುತ್ತಿರಬಹುದೆಂದು ಊಹಿಸಿದ್ದಳು ಸರೋಜ. ಆದರೆ ಜಗದೀಶನ ಮುಖಭಾವ ಆವಳ ಊಹೆಯನ್ನು ಸುಳ್ಳುಮಾಡಿತು.

" ಮೊದಲು ಸ್ನಾನಮಾಡಿ ಬೇರೆ ಬಟ್ಟೆ ಹಾಕಿಕೋಪ್ಪ"

—ಎನ್ನುತ್ತಾ ಜಾನಕಮ್ಮನವರು ನಾಲ್ಕು ವರ್ಷಗಳ ಹಿಂದೆ ಪೆಟ್ಟಿಗೆಯಲ್ಲಿಟ್ಟಿದ್ದ ಅವನ ಬಟ್ಟೆಗಳನ್ನು ತಂದಿತ್ತರು.

ಜಗದೀಶ ಸ್ನಾನದ ಮನೆಗೆ ಹೋದ ಬಳಿಕ, ಮೀರಾ–ಸರೋಜ ಒಳಗೆ ನಡೆದರು.

" ಒಲೆಯಕಡೆ ಸ್ವಲ್ಪ ನೋಡಿಕೋ ಹೋಗಮ್ಮ ಸರೋಜ. ಹೋಳಿಗೆ ಸೂಸಲು ಕೆಟ್ಟುಹೋದೀತು. ಜಗ್ಗೂಗೆ ಸ್ವಲ್ಪ ಕಾಫಿ ಮಾಡಿಕೊಟ್ಟು ನಾನೂ ಬೇಗ ಬಂದು ಬಿಡುತ್ತೇನೆ."

—ಎಂದರು ಜಾನಕಮ್ಮ.

" ಗಿರಿಜ ಎಲ್ಲಿಗೆ ಹೋಗಿದ್ದಾಳಮ್ಮ ? "

" ಸಂಗೀತ ಪಾಠಕ್ಕೆ ಹೋಗಿದ್ದಾಳೆ. ಇನ್ನೇನು ಅವಳೂ ಬರುವ ಹೊತ್ತಾಯಿತು."

" ಸರಿಯಮ್ಮ. ನಾನು ಹೋಗುತ್ತೇನೆ. ಈ ಪೋರಿ ಮೀರಾನಾದರೂ ನನ್ನ ಜೊತೇಲಿ ಬರಲಿ. ಕೆಲಸವಾಗದೆ ಇದ್ದರೂ ಹರಟೆ ಹೊಡೆಯ ಬಹುದು ! "

—ಎಂದು ನಗುತ್ತಾ ಮೀರಾಳೊಡನೆ ಹೊರಹೊರಟಳು ಸರೋಜ.

" ಏನಮ್ಮಾ, ಹುಡುಗ ಮೊದಲಿನ ಹಾಗೆಯೇ ಇದ್ದಾನೋ ಅಥವಾ ಏನಾದರೂ ಬದಲಾಯಿಸಿದ್ದಾನೋ ? "

—ಅಂಗಳಕ್ಕೆ ಬಂದ ಸರೋಜೆಯನ್ನು ಕೇಳಿದರು ಗೋವಿಂದಯ್ಯ.

" ಏನೋಪ್ಪ, ಮುಖ ನೋಡಿದರೆ ಮೊದಲಿನ ಪುಂಡುತನ ಹಾಗೆಯೇ ಇದೆಯೆಂದು ಕಾಣುತ್ತದೆ........"

" ಸರಿ, ಮೊದಲಿನ ಹಾಗೆಯೇ ಇದ್ದರೆ, ಜಯರಾಯರ ಕರ್ಮ ಇನ್ನೂ ಸವೆಯಲಿಲ್ಲ ಅಂತಲೇ ಅರ್ಥ ! "

—ಎನ್ನುತ್ತಾ ಗೋವಿಂದಯ್ಯ ಶಾಮುವಿನ ಕಡೆಗೆ ತಿರುಗಿ, ತುಂಟ ಜಗದೀಶನ ಪೂರ್ವೋತ್ತರಗಳನ್ನು ವಿವರಿಸತೊಡಗಿದರು.

೪

ಜಯರಾಯರಿಗೆ ಉದ್ಯೋಗದಿಂದ ನಿವೃತ್ತಿಯಾದ ಮೇಲೆ 'ಶನಿ' ಹೆಗಲೇರಿದ. ಐದು ಸಾವಿರ ವರದಕ್ಷಿಣೆ ಕೊಟ್ಟು, ಐದು ಸಾವಿರ ಮದುವೆಗೆ ಖರ್ಚುಮಾಡಿ, ಒಟ್ಟು ಹತ್ತು ಸಾವಿರ ರೂಪಾಯಿಗಳನ್ನು ನೀರಿನಂತೆ ವೆಚ್ಚಮಾಡಿ ಮೊದಲನೆಯ ಮಗಳ ಮದುವೆಯನ್ನು ಮಾಡಿದಾಗಲೇ ರಾಯರ ಗ್ರಹಗತಿ ತಿರುಗುಮುರುಗಾಗಿ, ಅವರು ಪಾತಾಳಕ್ಕೆ ಕುಸಿಯುವ ಸೂಚನೆ ಕಾಣಿಸಿಕೊಂಡಿತ್ತು. ಮಗನ ದುರ್ನಡತೆಯಿಂದ ಅಲ್ಪಸ್ವಲ್ಪ ಆಸ್ತಿಯೂ ಕರಗಿದಾಗ, ರಾಯರ ತಲೆಯ ಮೇಲೆ ಮುಗಿಲು ಕಳಚಿಬಿದ್ದಂತಾ ಯಿತು. ಉದ್ಯೋಗದಿಂದ ನಿವೃತ್ತಿಯಾದ ಮೇಲಂತೂ ಅವರು ಸಂಪೂರ್ಣ ವಾಗಿ ಕುಗ್ಗಿ, ಕುಸಿದು, ಹೇಳ ಹೆಸರಿಲ್ಲದಂತಾದರು. ಅಂದಿನಿಂದ ಅವರಿಗೆ ಒಂದು ದಿನ ಕಳೆಯುವುದು ಒಂದು ಯುಗ ಕಳೆದಷ್ಟು ಪ್ರಯಾಸವಾಗಿ ತೋರಿತು. ಬೇಸರವನ್ನು ಪರಿಹರಿಸಿಕೊಳ್ಳಲು, ಗಿರಿಜ ಕಾಲೇಜು ಲೈಬ್ರರಿ ಯಿಂದ ತರುತ್ತಿದ್ದ ಪುಸ್ತಕಗಳನ್ನು ತಿರುವಿಹಾಕ ತೊಡಗಿದರು ಜಯರಾಯರು. ಕ್ರಮೇಣ ಪುಸ್ತಕಗಳ ಮೇಲೆ ಅವರಿಗೆ ಮಮತೆ ಹೆಚ್ಚಿತು. 'ಪುಸ್ತಕಗಳೇ ನನಗೆ ಬಂಧು, ಬಳಗ, ಮಿತ್ರ, ಮಾರ್ಗದರ್ಶಕ. ಪುಸ್ತಕಗಳಿಲ್ಲದೆ ನಾನು ಬದುಕಲಾರೆ' ಎಂದು ನಿರ್ಧರಿಸಿಕೊಂಡ ಜಯರಾಯರು ತಮ್ಮ ಸಮಯವ ನ್ನೆಲ್ಲಾ ಓರಿಯಂಟಲ್ ಲೈಬ್ರರಿಯಲ್ಲೇ ಕಳೆಯತೊಡಗಿದರು. ತಿಂಗಳಿ ಗೊಮ್ಮೆ ತಮ್ಮ ಪೆನ್ಷನ್ ಹಣವನ್ನು ತಂದು ಜಾನಕಮ್ಮನವರ ಕೈಯಲ್ಲಿ ಹಾಕುವುದೊಂದನ್ನು ಬಿಟ್ಟು ಅವರಿಗೆ ಬೇರೆ ಕೆಲಸವೇ ಇರಲಿಲ್ಲ.

ಜಯರಾಯರು ಮನೆ, ಮಡದಿ, ಮಕ್ಕಳನ್ನು ಕಡೆಗಣಿಸಿದಂತೆ ಜಾನ ಕಮ್ಮನವರೂ ಮಾಡಲು ಸಾಧ್ಯವಿರಲಿಲ್ಲ. ಕೈಹಿಡಿದು, ಮುತ್ತೈದೆ ಭಾಗ್ಯ ವನ್ನು ಕರುಣಿಸಿದ ಗಂಡನನ್ನಾಗಲಿ, ತನ್ನ ರಕ್ತದಿಂದ ರೂಪುತಳೆದ—ತಾನು

ಹೆತ್ತ ಮಕ್ಕಳನ್ನಾಗಲೀ ಉಪೇಕ್ಷಿಸಿ, ಉಸಿರಿಟ್ಟುಕೊಂಡಿರುವುದು ಆ ತಾಯೊಡಲಿಗೆ ಸಹಿಸುತ್ತಿರಲಿಲ್ಲ. ಇದ್ದ ಒಬ್ಬನೇ ಮಗ ಓಡಿಹೋದಾಗ, ವಂಶೋದ್ಧಾರಕನನ್ನು ಕಳೆದುಕೊಂಡ ದುಃಖದ ಕಡಲಿನಲ್ಲಿ ದಿನವಹಿ ಮಿಾಯುತ್ತಿದ್ದರು ಜಾನಕಮ್ಮ. ಜಗದೀಶ ಹಿಂತಿರುಗಿ ಬಂದಾನೇ ? ವಂಶವೃಕ್ಷವನ್ನು ಬೆಳೆಸಿಯಾನೇ ? ' ಎಂದು ಅವರು ಹಂಬಲಿಸಿ ಕಂಬನಿ ಕರೆಯುವುದನ್ನು ಆಕಸ್ಮಿಕವಾಗಿ ಜಯರಾಯರು ನೋಡಿದಾಗ ಕೆಂಡವಾಗುತ್ತಿದ್ದರು.

' ಮಗನಂತೆ ಮಗ ! ಅವನು ನಮ್ಮ ಪಾಲಿಗೆ ಸತ್ತು ಎಷ್ಟೋ ವರ್ಷಗಳಾಯಿತು. ಎಂದಾದರೂ ಪಶ್ಚಿಮವಾಹಿನಿಗೆ ಹೋಗಿ ಘಟಶ್ರಾದ್ಧಮಾಡಿ ಬಂದುಬಿಡುತ್ತೇನೆ. ಆಮೇಲೆ ಆ ಪ್ರೇತನ ಜ್ಞಾಪಕ ನಿನಗೆ ಮರೆತು ಹೋಗುತ್ತದೆ.'

—ಎಂದು ನುಡಿ ಕಿಡಿ ಸಿಡಿಸುತ್ತಿದ್ದರು ಸುಡುಗಣ್ಣಿನ ಜಯರಾಯರು.

' ಅಯ್ಯೋ, ಅಮಂಗಳದ ಮಾತೇಕೆ ಆಡುತ್ತೀರಿ ? ಈ ಸಾರಿ ಅವನು ಬಂದರೆ, ಒಳ್ಳೆಯ ಮಾತಿನಲ್ಲಿ ಬುದ್ಧಿಹೇಳಿ, ಇಲ್ಲೇ ಇಟ್ಟುಕೊಂಡು, ಯಾವುದಾದರೂ ಕೆಲಸಕ್ಕೆ ಸೇರಿಸೋಣ. ಹತ್ತು ಜನರ ಹಾಗೆ ಅವನೂ ಒಂದು ಉದ್ಯೋಗಮಾಡಿಕೊಂಡು, ನಮ್ಮ ಕಣ್ಣೆದುರಿಗೆ ಸುಖವಾಗಿರಲಿ '

—ಎಂದು ಗಂಡನನ್ನು ಅಂಗಲಾಚಿ ಬೇಡುತ್ತಿದ್ದರು ಜಾನಕಮ್ಮ.

ಹೆಂಡತಿಯ ಮಾತುಗಳು ತಮ್ಮ ಕಿವಿಗೆ ಬೀಳಲೇ ಇಲ್ಲವೇನೋ ಎಂಬಂತೆ, ಜಯರಾಯರು ಉದಾಸೀನ ಭಾವನೆಯನ್ನು ತಳೆದು ಮನೆಯಿಂದ ಹೊರಟುಹೋಗುತ್ತಿದ್ದರು. ಆದರೆ ಏಕಾಂತದಲ್ಲಿ ಕುಳಿತು, ಆಕಸ್ಮಿಕವಾಗಿ ಮಗನ ವಿಷಯವನ್ನು ಯೋಚಿಸುವಾಗ, ಜಾನಕಮ್ಮನವರ ಮಾತುಗಳು ಅವರ ನೆನಪಿಗೆ ಬಂದು, ಅವರ ಮನಸ್ಸು ಬಿರುಗಾಳಿಯ ಕಡಲಿನಲ್ಲಿ ದಿಕ್ಕುತಪ್ಪಿದ ದೋಣಿ ಯಾವುದೋ ತೀರವನ್ನು ಮುಟ್ಟಿದಂತೆ ಸಮಾಧಾನಗೊಳ್ಳುವುದು. ' ಈ ಸಾರಿ ಜಗದೀಶ ಹಿಂತಿರುಗಿಬಂದರೆ, ಅವನಿಗೆ ಮೃದುವಾದ ಮಾತಿನಲ್ಲಿ ಬುದ್ಧಿಹೇಳಿ, ಒಳ್ಳೆಯ ದಾರಿಯಲ್ಲಿ ಅವನ ಜೀವನದಿಯನ್ನು ತಿರುಗಿಸಬೇಕೆಂದು ಜಯರಾಯರು ತಮ್ಮಷ್ಟಕ್ಕೆ ತಾವೇ ಹೇಳಿಕೊಳ್ಳುತ್ತಿದ್ದರು.

ವರ್ಷಗಳು ಒಂದರ ಹಿಂದೊಂದು ಉರುಳಿದಂತೆ, ಮಗನ ಅಗಲಿಕೆಯ ವೇದನೆ ತಂದೆ–ತಾಯಿಯರನ್ನು ಬಹುವಾಗಿ ಕಾಡತೊಡಗಿತು. ' ಜಗದೀಶ ಹಿಂತಿರುಗಿ ಬಂದಾನೇ ? ' – ಎಂದೂ ಇಬ್ಬರೂ ಹಂಬಲಿಸ ತೊಡಗಿದರು.

ಇದೀಗ ನಾಲ್ಕು ವರ್ಷಗಳು ಕಳೆದಬಳಿಕ, ಜಗದೀಶ ಅನಿರೀಕ್ಷಿತವಾಗಿ ಹಿಂತಿರುಗಿ ಬಂದಿದ್ದಾನೆ. ಜಾನಕಮ್ಮನವರಿಗೆ ಜಗತ್ತಿನ ಸಮಸ್ತನಿಧಿಯೂ ದೊರಕಿದಷ್ಟು ಆನಂದವಾಗಿದೆ. ಹೊರಗೆಹೋಗಿರುವ ತಮ್ಮ ಗಂಡ ಹಿಂತಿರುಗಿ ದೊಡನೆ, ಮಗ ಬಂದಿರುವ ಸುದ್ದಿಯನ್ನು ಕೇಳಿ, ಎಷ್ಟು ಆನಂದಿಸುತ್ತಾರೆಯೋ– ಅದು ಜಾನಕಮ್ಮನವರ ಊಹೆಗೆ ನಿಲುಕದು.

ಜಗದೀಶ ಸ್ನಾನಮುಗಿಸಿ, ಬಟ್ಟೆ ಬದಲಿಸಿಕೊಂಡು, ಅಡಿಗೆ ಮನೆಯ ಬಾಗಿಲಬಳಿ ನಿಂತಾಗ, ಜಾನಕಮ್ಮ ತಮ್ಮ ಕಣ್ಣುಗಳನ್ನು ತಾವೇ ನಂಬ ದಾದರು. ' ತಮಗೆ ಇಷ್ಟು ಸುಂದರರೂಪಿನ, ಇಷ್ಟು ದೊಡ್ಡಮಗ ಇದ್ದಾ ನೆಯೇ " ಎಂದು ಆಕೆ ಬೆಸೆಗೊಂಡರು.

ಜಗದೀಶನಿಗೆ ಸುಮಾರು ಇಪ್ಪತ್ತನಾಲ್ಕುವರ್ಷ ವಯಸ್ಸಾಗಿತ್ತು. ಜಯ ರಾಯರ ನಾಲ್ಕುಮಂದಿ ಮಕ್ಕಳಲ್ಲಿ ಅವನೇ ದೊಡ್ಡವನು. ಅವನ ಬಳಿಕ ಹುಟ್ಟಿದ ಹುಡುಗಿಗೆ, ಅವಳ ಹದಿನೈದನೆಯ ವಯಸ್ಸಿನಲ್ಲಿಯೇ ಮದುವೆ ಯಾಗಿ, ಆಕೆ ಗಂಡನೊಡನೆ ತುಮಕೂರಿನಲ್ಲಿ ಸುಖವಾಗಿದ್ದಳು. ಅವಳಿಗೂ, ಅನಂತರ ಹುಟ್ಟಿದ ಗಿರಿಜೆಗೂ ನಾಲ್ಕು ವರ್ಷಗಳ ಅಂತರ. ಜಾನಕಮ್ಮನವರ ವೃದ್ಧಾಪ್ಯದಲ್ಲಿ ಹುಟ್ಟಿದ ವಿಸಾರಾಗೆ ಈಗ ಹನ್ನೊಂದುವರ್ಷ. ಅವಳೇ ಕೊನೆಯ ಮಗಳು.

ಮಗ ಬುದ್ಧಿವಂತನಾಗಿ, ವಿದ್ಯಾವಂತನಾಗಿ, ಯಾವುದಾದರೂ ಉದ್ಯೋಗದಲ್ಲಿದ್ದಿದ್ದರೆ, ಮನೆಯ ಸಂಸಾರದ ಭಾರವನ್ನು ಅವನ ಹೆಗಲ ಮೇಲೆ ಹೇರಬಹುದಾಗಿತ್ತೆಂದು ಜಯರಾಯರು ಎಷ್ಟೋಬಾರಿ ಅಂದು ಕೊಂಡಿದ್ದರು. ಅವನ ಮದುವೆಯ ಮೂಲಕ ಬರುವ ವರದಕ್ಷಿಣೆಯಿಂದ, ಉಳಿದ ಇಬ್ಬರು ಹೆಣ್ಣುಮಕ್ಕಳ ಮದುವೆ ಮಾಡುವುದು ಸ್ವಲ್ಪಮಟ್ಟಿಗೆ ಸುಲಭ ವಾಗುತ್ತಿತ್ತೆಂದೂ ಅವರು ಯೋಚಿಸಿದ್ದರು. ಪತಿ – ಪತ್ನಿಯರಿಬ್ಬರೂ ವೃದ್ಧಾಪ್ಯದಲ್ಲಿದ್ದುದರಿಂದ, ಅವರಿಗೆ ತಮ್ಮ ಬದುಕು ಗಾಳಿಯ ದೀಪವೆಂಬ ಸಂಗತಿ ಸ್ಪಷ್ಟವಾಗಿ ತಿಳಿದಿತ್ತು. ತಾವು ಬದುಕಿರುವಾಗಲೇ ಗಿರಿಜ ಮತ್ತು

ವಿಹಾರಯರಿಗೆ ಒಂದುದಾರಿ ತೋರಿಸಿ, ಹೆತ್ತವರ ಹೊಣೆಯನ್ನು ಕಳೆದು ಕೊಂಡು, ನಿಶ್ಚಿಂತೆಯಿಂದ ಕೊನೆಯುಸಿರಳೆಯಬೇಕೆಂದು ಅವರಿಬ್ಬರೂ ಎಷ್ಟೋಬಾರಿ ಅಂದುಕೊಂಡಿದ್ದುದುಂಟು. ಬಾಳು ಹಾಳುಮಾಡಿಕೊಂಡಿದ್ದ ಜಗದೀಶನ ಭವಿಷ್ಯದ ಬಗ್ಗೆ, ಅವರೆಂದೂ ಬಹುವಾಗಿ ಚಿಂತಿಸಿ, ಅಧೈರ್ಯಪಟ್ಟುದಿಲ್ಲ. ಹೆಣ್ಣುಮಕ್ಕಳಿಬ್ಬರ ಭವಿಷ್ಯದ ಬಗ್ಗೆಯೇ ಅವರಿಗೆ ಭಯ–ಕಾತರ.

ಶಾಮು ಮೈಸೂರಿಗೆ ಬಂದು ಗಿರಿಜೆಯನ್ನು ನೋಡಿದ ಬಳಿಕ, ಜಾನಕಮ್ಮನವರ ಭಯ – ಚಿಂತೆಗಳು ಒಂದೊಂದಾಗಿ ಮಾಯವಾಗತೊಡಗಿದವು. ಮಗಳ ಮದುವೆಯ ಮಾತುಕತೆಗಳ ಸಂಭ್ರಮದ ಜೊತೆಗೆ, ಓಡಿಹೋಗಿದ್ದ ಮಗ ಹಿಂತಿರುಗಿದ ಸಂತೋಷ ಕೂಡಿಕೊಂಡಿತು. ಇನ್ನು ಪುಟ್ಟ ಪೋರಿ ವಿಹಾರಾಳ ಸಮಸ್ಯೆಯೊಂದು ತಾನೆ ಉಳಿದಿರುವುದು ? ಅದನ್ನು ಅಳಿಯನಾಗಲಿರುವ ಶಾಮುವೋ ಅಥವಾ ಹಿಂತಿರುಗಿಬಂದ ಮಗ ಜಗದೀಶನೋ ನೋಡಿಕೊಳ್ಳುತ್ತಾರೆ ಎಂದು ಬಹು ಸುಲಭವಾಗಿ ನಿಶ್ಚಯಿಸಿಕೊಂಡು ಬಿಟ್ಟರು ಜಾನಕಮ್ಮ.

" ಜಗ್ಗೂ, ಇಷ್ಟುದಿನ ಎಲ್ಲಿಗೆ ಹೊರಟುಹೋಗಿದ್ದೆಯಪ್ಪಾ ? "

—ಕಾಪಿಯ ಬಟ್ಟಲನ್ನು ಮಗನ ಕೈಗಿಡುತ್ತಾ ಕೇಳಿದರು ಜಾನಕಮ್ಮ.

ಕಣ್ಣು ತಗ್ಗಿಸಿದ್ದ ಜಗದೀಶ ಮೌನವಾಗಿ ನಿಂತಿದ್ದ.

" ಇನ್ನುಮೇಲಾದರೂ ಇಲ್ಲಿಯೇ ಇರಪ್ಪಾ–ನಮ್ಮ ಕಣ್ಣೆದುರಿಗೆ."

ಜಾನಕಮ್ಮನವರು ಮಾತು ಮುಗಿಸುವಷ್ಟರಲ್ಲಿ ಜಯರಾಯರು ಒಳಗೆ ಬಂದಿದ್ದರು. ಅವರೆಂದೂ ಅಷ್ಟು ಬೇಗ ಮನೆಗೆ ಬಂದವರಲ್ಲ. ಆದರೆ ಅಂದು ಗೋವಿಂದಯ್ಯನವರ ಮನೆಯಲ್ಲಿ ಊಟಕ್ಕೆ ಕರೆದಿದ್ದುದರಿಂದ, ' ಸ್ವಲ್ಪ ಮುಂಚಿತವಾಗಿಯೇ ಹೋಗೋಣ. ಅವರನ್ನು ಕಾಯಿಸಬಾರದು ' ಎಂದುಕೊಂಡು ಲೈಬ್ರರಿಯಿಂದ ಹೊರಟುಬಂದಿದ್ದರು. ಬಂದೊಡನೆ ಅವರ ಕಣ್ಣಿಗೆ ಕಾಣಿಸಿಕೊಂಡ ಪುತ್ರರತ್ನ–ಜಗದೀಶ.

ರಾಯರು ಬಾಗಿಲು ದಾಟ ಬರುವಷ್ಟರಲ್ಲಿಯೇ ಜಾನಕಮ್ಮ ಅವರಿಗೆ ಕಣ್ಸನ್ನೆ ಮಾಡಿದರು. ಅನಿರೀಕ್ಷಿತವಾಗಿ ಮನೆಗೆ ಮರಳಿರುವ ಮಗನನ್ನು ಮತ್ತೆ ತನ್ನ ಪತಿದೇವರು ಬೈದು ಓಡಿಸಿಯಾರೆಂಬ ಹೆದರಿಕೆ ಆಕೆಗೆ.

ಕಾಫಿ ಕುಡಿದು ಮುಗಿಸಿದ ಜಗದೀಶ ಕೋಣೆಯ ಕಡೆಗೆ ಹೊರಡಲನುವಾದುದನ್ನು ಕಂಡು ಜಾನಕಮ್ಮ—

" ಜಗ್ಗೂ, ನಾನೊಂದು ಮಾತು ಹೇಳುತ್ತೇನೆ—ಕೇಳುತ್ತೀಯಾ ? "

—ಎಂದು ದೈನ್ಯದ ಧ್ವನಿಯಲ್ಲಿ ಕೇಳಿಕೊಂಡರು.

ಜಗದೀಶ ತಾಯಿಯ ಮುಖವನ್ನೇ ಎರಡು ಕ್ಷಣ ನಿಟ್ಟಿಸಿ ನೋಡುತ್ತಾ ಸ್ತಬ್ಧನಾಗಿ ನಿಂತ.

" ಆ ರೂಮಿನಲ್ಲಿ ನಿಮ್ಮ ತಂದೆ ಕೂತಿದ್ದಾರೆ. ಹೋಗಿ, ಅವರ ಕಾಲು ಮುಟ್ಟಿ ನಮಸ್ಕಾರ ಮಾಡಿ ಬಂದುಬಿಡು."

" ಒಂದು ಸಾರಿ ಕೋಣೆಯ ಕಡೆಗೂ, ಮತ್ತೊಂದು ಸಾರಿ ತಾಯಿಯ ಕಡೆಗೂ ನೋಡಿದ ಜಗದೀಶ. ಅನಂತರ ನಿಧಾನವಾಗಿ ಹೆಜ್ಜೆಯಿಡುತ್ತಾ ಜಯರಾಯರು ಕುಳಿತಿದ್ದ ಕೋಣೆಗೆ ಬಂದು, ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿದ,

ಜಯರಾಯರು ಅವಾಕ್ಕಾದರು. ಮಗನ ವರ್ತನೆ ಅವರನ್ನು ಮೂಕರನ್ನಾಗಿಸಿತು.

ನಮಸ್ಕರಿಸಿದ ಬಳಿಕ ಜಗದೀಶ ಹೊರಡಲನುವಾದ. ಅವನು ಕೋಣೆಯ ಬಾಗಿಲು ದಾಟುವಷ್ಟರಲ್ಲಿ ಜಯರಾಯರು ಸುಧಾರಿಸಿಕೊಂಡು—

" ಬಾಪ್ಪ ಇಲ್ಲಿ "

—ಎಂದು ಗದ್ಗದ ಕಂಠದಿಂದ ಮಗನನ್ನು ಕರೆದರು.

ತಂದೆ ಕುಳಿತಿದ್ದ ಮಂಚದ ಬಳಿಗೆ ಬಂದು ನಿಂತು ತಲೆತಗ್ಗಿಸಿದ ಜಗದೀಶ.

" ಕೂತುಕೊ ಬಾ ಈಕಡೆ "

—ಎಂದು ಜಯರಾಯರು ತಮ್ಮ ಪಕ್ಕದಲ್ಲಿದ್ದ ದಿಂಬನ್ನು ಬದಿಗೆ ಸರಿಸಿ ಹೇಳಿದರು.

ತಂದೆಯ ಅಣತಿಯಂತೆ ಅವರ ಪಕ್ಕದಲ್ಲಿ – ತುಸು ದೂರದಲ್ಲಿ ಕುಳಿತ ಜಗದೀಶ ಮುಖವನ್ನು ಗೋಡೆಯ ಕಡೆಗೆ ತಿರುಗಿಸಿದ್ದ.

ಮಗನಿಗೆ ನಾಲ್ಕು ಬುದ್ಧಿಯ ಮಾತು ಹೇಳಬೇಕೆಂದು ನಿಶ್ಚಯಿಸಿದ್ದ ಜಯರಾಯರು, ಹೇಗೆ ಪ್ರಾರಂಭಿಸಬೇಕೆಂದು ತಿಳಿಯದೆ ಮೌನತಾಳಿದರು.

ಸರೋಜೆಯ ಮನೆಯ ಕಡೆ ಹೊರಟದ್ದ ಜಾನಕಮ್ಮನವರು ಆ ಕೋಣೆಯ ಕಡೆಗೆ ಸುಳಿಯದಿದ್ದರೆ, ತಂದೆ – ಮಗನ ನಡುವೆ ಹಬ್ಬಿದ ಮೌನ ಹಾಗೆಯೇ ಇನ್ನೂ ಎಷ್ಟು ಹೊತ್ತು ಉಳಿಯುತ್ತಿತ್ತೋ !

" ಇಬ್ಬರೂ ಇಲ್ಲಿಯೇ ಕುಳಿತಿರಿ. ಎಲ್ಲಿಯೂ ಹೊರಟುಬಿಡಬೇಡಿ. ನಾನು ಸರೋಜೆಯ ಮನೆಗೆ ಹೋಗುತ್ತೇನೆ. ಜಗ್ಗುವೂ ಅಲ್ಲಿಗೇ ಊಟಕ್ಕೆ ಬರಲಿ."

" ಇಲ್ಲ, ನಾನು ಯಾರ ಮನೆಗೂ ಬರುವುದಿಲ್ಲ.... ನನಗೆ ಊಟವೇ ಬೇಡ "

—ಎಂದ ಜಗದೀಶ ದೃಢವಾದ ಧ್ವನಿಯಲ್ಲಿ.

ರಾಯರೂ ಜಾನಕಮ್ಮನವರೂ ಅವನ ಕಡೆಗೊಮ್ಮೆ ನೋಡಿದರು. ಆದರೆ ಜಗದೀಶ ತನ್ನ ದೃಷ್ಟಿಯನ್ನು ಗೋಡೆಯಲ್ಲಿ ಕೀಲಿಸಿದ್ದ.

" ಸರಿ, ನೀನು ಇಲ್ಲಿಯೇ ಊಟಮಾಡುವಿಯಂತೆ – ಅಡಿಗೆ ತಂದಿಡುತ್ತೇನೆ "

—ಎಂದು ಹೇಳಿ ಜಾನಕಮ್ಮ ಸರೋಜೆಯ ಮನೆಕಡೆಗೆ ನಡೆದರು.

ಪೋಲೀಸ್ ಇಲಾಖೆಯಲ್ಲಿ ಪಳಗಿದ್ದ ಜಯರಾಯರ ಮನಸ್ಸು ಮೃದುವಾಗುತ್ತಿದ್ದುದೇ ಅಪರೂಪ. ಅವರಿಗೆ ಕೆಲಸದಿಂದ ನಿವೃತ್ತಿಯಾಗಿದ್ದರೂ, ಅವರ ದರ್ಪ, ಕಟುವರ್ತನೆ, ಒರಟುಭಾಷೆಯ ಪ್ರಯೋಗಗಳು ಮಾತ್ರ ನಿವೃತ್ತಿಯಾಗಿರಲಿಲ್ಲ ! ಜನ್ಮತಃ ಅವರು ಒಳ್ಳೆಯ ಗುಣಶಾಲಿಗಳಾಗಿದ್ದುದರಿಂದ, ಎಷ್ಟೋಬಾರಿ ತಮ್ಮ ದುಷ್ಟಗುಣಗಳಿಗಾಗಿ ತಾವೇ ಮರುಗುತ್ತಿದ್ದರು. ಹುಟ್ಟುವಾಗ ಬಂದ ಒಳ್ಳೆಯ ಗುಣಗಳನ್ನು ಅವರು ಅಭ್ಯಾಸಮಾಡಿದ್ದ ಕೆಟ್ಟ ಗುಣಗಳು ಹೊಡೆದೋಡಿಸಿದ್ದವು.

" ಇಷ್ಟು ದಿನವಂತೂ ಆಗಿದ್ದಾಯಿತು. ಇನ್ನುಮೇಲಾದರೂ ಸರಿಯಾಗಿರುತ್ತೀಯಾ ? "

ಜಯರಾಯರು ತುಂಬಾ ಸಮಾಧಾನ ತಂದುಕೊಂಡು ನಯವಾಗಿ ಕೇಳಲು ಯತ್ನಿಸಿದರೂ ಸಹ ಅವರ ಧ್ವನಿಯಲ್ಲಿ ಮಾತ್ರ ಕಹಿಯ ಸೊಂಕು ಕಾಣದಿರಲಿಲ್ಲ !

" ಇಲ್ಲೇ ಯಾರ ಕೈಕಾಲಾದರೂ ಕಟ್ಟಿ, ರೈಲ್ವೆ ವರ್ಕ್‌ಷಾಪಿನಲ್ಲಿ

ಕೆಲಸಕ್ಕೆ ಏರ್ಪಾಟು ಮಾಡುತ್ತೇನೆ. ಕೈಲಾದಷ್ಟು ಸಂಪಾದಿಸಿಕೊಂಡು ಹತ್ತು ಜನರ ಹಾಗೆ ನೀನೂ ನೆಮ್ಮದಿಯಾಗಿ ಬಾಳಿದರೆ ನಮಗೆಲ್ಲಾ ಸಂತೋಷ ವಾಗುತ್ತದೆ."

" ನಾನು ಕೆಲಸಕ್ಕೆ ಸೇರುವುದಿಲ್ಲ."

" ಇನ್ನೇನು ಮಾಡುತ್ತೀಯೆ ? "

—ಎಂದು ಪ್ರಾರಂಭಿಸಿದ ಜಯರಾಯರು ಕ್ರಮೇಣ ಧ್ವನಿಯನ್ನು ಏರಿಸುತ್ತಾ ಮುಂದುವರಿಸಿದರು :

" ಬೀದಿ ಬೀದಿ ಅಲೆದುಕೊಂಡು ನಿನ್ನ ಪೋಕರಿತನ ಮೆರೆಸುತ್ತೀಯಾ ? "

" ಇಲ್ಲ. ನಾನು ಸ್ಕೂಲಿಗೆ ಸೇರಬೇಕು."

ಕಾವೇರಿದ ರಾಯರ ಮೈಮೇಲೆ ಮಂಜು ಸುರಿದಂತಾಯಿತು – ಜಗದೀಶನ ಮಾತು.

" ಸ್ಕೂಲಿಗೆ....! "

" ಹೌದು. ನನ್ನನ್ನು ಸ್ಕೂಲಿಗೆ ಸೇರಿಸುವಹಾಗಿದ್ದರೆ ಇಲ್ಲಿರುತ್ತೇನೆ. ಇಲ್ಲದಿದ್ದರೆ...."

ಇಲ್ಲದಿದ್ದರೆ........

ಮುಂದೇನೆಂಬುದು ಜಯರಾಯರಿಗೆ ತಿಳಿದೇ ಇತ್ತು. ಆದರೂ ತಮಗಿರುವ ತೊಂದರೆಯನ್ನು ವಿವರಿಸಿ ಹೇಳುವುದು ಒಳ್ಳೆಯದೆಂದುಕೊಂಡರು.

" ಈ ವಯಸ್ಸಿನಲ್ಲಿ ನಾನು ನಿನ್ನನ್ನು ಓದಿಸುವುದು ಹೇಗೆ ? "

" ಹೇಗಾದರೂ ಸರಿಯೆ, ನಾನು ಇನ್ನೂ ನಾಲ್ಕು ವರ್ಷ ಓದಲೇಬೇಕು ; ಡಿಗ್ರಿಪರೀಕ್ಷೆ ಮಾಡಲೇಬೇಕು."

ಇದ್ದಕ್ಕಿದ್ದಂತೆ ತಮ್ಮ ಮಗನಿಗೆ ಹಿಡಿದ ವಿದ್ಯೆಯ ಹುಚ್ಚನ್ನು ಕಂಡು ಜಯರಾಯರಿಗೆ ದಿಕ್ಕೇ ತೋಚದಾಯಿತು.

ಜಗದೀಶ ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾದ ಮೇಲೆ ಶಾಲೆಯನ್ನು ಬಿಟ್ಟಿದ್ದ. ಚಿಕ್ಕಂದಿನಿಂದಲೂ ಅವನಿಗೆ ಓದುವುದರಲ್ಲಿ ಅಷ್ಟೇನೂ ಆಸಕ್ತಿ ಇರಲಿಲ್ಲ. ತುಂಟಹುಡುಗರ ತಂಡಕ್ಕೆ ನಾಯಕನಾಗಿ ಮೆರೆಯುವುದು, ನೆರೆಹೊರೆಯ ಮನೆಗಳ ಕೈತೋಟಕ್ಕೆ ಧಾಳಿಮಾಡುವುದು, ದಾರಿಹೋಕರನ್ನು ಕುಚೇಷ್ಟೆಮಾಡಿ ಗೋಳಾಡಿಸುವುದು – ಇವುಗಳಲ್ಲೇ ಅವನ ಬುದ್ಧಿವಂತಿಕೆ,

ಶಕ್ತಿ, ಪ್ರತಿಭೆಗಳು ವ್ಯಯವಾಗುತ್ತಿದ್ದವು. ಇಂತಹ ಹುಡುಗನಿಗೆ ಇದ್ದಕ್ಕಿದ್ದಂತೆ ವಿದ್ಯೆಯ ಹುಚ್ಚು ಹಿಡಿದು, ಪದವೀಧರನಾಗಬೇಕೆಂಬಾಸೆ ಅಂಕುರಿಸಿರುವುದು ಯಾರಿಗಾದರೂ ಆಶ್ಚರ್ಯವನ್ನುಂಟುಮಾಡುವಂತಹದಾಗಿತ್ತು.

" ಓದಬೇಕಾದ ವಯಸ್ಸಿನಲ್ಲೇ ನೀನು ಓದಲಿಲ್ಲ. ಇನ್ನು ಈಗ ನಿಜವಾಗಿಯೂ ಓದುತ್ತೀಯಾ? ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೋದು ಕಷ್ಟ"

ಜಯರಾಯರು ತನ್ನ ಸಂದೇಹವನ್ನು ಸೂಚಿಸಿದರು.

" ಓದುತ್ತೇನೆ ಎಂದು ಹೇಳಿದ ಮೇಲೆ ಖಂಡಿತವಾಗಿಯೂ ಓದಿಯೇ ಓದುತ್ತೇನೆ. ನಿಮಗೇಕೆ ಅನುಮಾನ? ನಿಮ್ಮಿಂದ ಓದಿಸುವುದಕ್ಕಾಗದೆ ಇದ್ದರೆ, ನಾನು ಬೇರೆಲ್ಲಿಗಾದರೂ ಹೋಗಿ, ಹೇಗಾದರೂ ಮಾಡಿ, ಸ್ಕೂಲಿಗೆ ಸೇರಿಯೇ ಸೇರುತ್ತೇನೆ."

—ತನ್ನ ಗುರಿಯನ್ನು ನಿಶ್ಚಯಿಸಿಕೊಂಡ ಜಗದೀಶ ತುಸು ಕಠಿಣ ಧ್ವನಿಯಲ್ಲಿಯೇ ಹೇಳಿದ. ಅವನ ಇಚ್ಛೆಗೆ ವಿರುದ್ಧವಾಗಿ ಹೋಗುವುದು ಒಳಿತಲ್ಲವೆಂದು ನಿರ್ಧರಿಸಿದರು—ಎರಡು ನಿಮಿಷ ಯೋಚಿಸಿದ ಜಯರಾಯರು

" ಹಾಗಾದರೆ ಈ ವರ್ಷ ಮತ್ತೆ ಹೈಸ್ಕೂಲಿಗೆ ಸೇರುತ್ತೀಯಾ? "

" ಇಲ್ಲ. ಯಾವುದಾದರೂ ಟ್ಯುಟೋರಿಯಲ್ ಇನ್ಸ್‌ಟಿಟ್ಯೂಟಿಗೆ (Tutorial Institute) ಸೇರಿಕೊಂಡು ಸಪ್ಲಿಮೆಂಟರಿ (Supplymentary) ಪರೀಕ್ಷೆಗೆ ಕೂತು, ಎಸ್.ಎಸ್.ಎಲ್.ಸಿ. ಪಾಸು ಮಾಡಿಕೊಳ್ಳುತ್ತೇನೆ. ಮುಂದಿನ ವರ್ಷ ಕಾಲೇಜಿಗೆ ಸೇರುವುದಕ್ಕೆ ಅನುಕೂಲವಾಗುತ್ತದೆ."

" ಸರಿ. ಹಾಗೇ ಮಾಡು. ಈ ವಿಷಯ ನಿಮ್ಮಮ್ಮನಿಗೂ ಒಂದು ಮಾತು ತಿಳಿಸಿಬಿಡು "

—ಎಂದು ಜಯರಾಯರು ಹೇಳಿದೊಡನೆ ಜಗದೀಶ ಅಲ್ಲಿಂದೆದ್ದು ಹೊರ ಅಂಗಳಕ್ಕೆ ನಡೆದ. ಕಲಾಶಾಲೆಯಿಂದ ಸಂಗೀತ ಪಾಟ ಮುಗಿಸಿಕೊಂಡು ಹಿಂತಿರುಗಿದ್ದ ಗಿರಿಜ ಕೋಣೆಯ ಬಾಗಿಲ ಮರೆಯಲ್ಲಿ ನಿಂತು, ತನ್ನ ತಂದೆ ಯಾರೊಡನೆ ಮಾತನಾಡುತ್ತಿದ್ದಾರೆಯೋ ಎಂದು ಕುತೂಹಲದಿಂದ ಇಣಿಕಿ ನೋಡುತ್ತಾ, ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದವಳು, ಜಗದೀಶ ಹೊರಬರುತ್ತಿರುವುದನ್ನು ಕಂಡು, ಮೆಲ್ಲನೆ ಅಡಿಗ ಮನೆಯತ್ತ ಸರಿದು ಮರೆಯಾದಳು.

ಜಗದೀಶ ತನ್ನ ತಂದೆಯ ಕೋಣೆಯ ಎದುರುಗಡೆ ಇದ್ದ ಮತ್ತೊಂದು ಕೋಣೆಗೆ ಹೋಗಿ ಬಾಗಿಲು ಭದ್ರಪಡಿಸಿಕೊಂಡ. ನಾಲ್ಕೈದು ವರ್ಷಗಳ ಹಿಂದೆ ಸಂದುಗೊಂದುಗಳಲ್ಲಿ ಅಡಕಿದ್ದ ತನ್ನ ಪಠ್ಯಪುಸ್ತಕಗಳನ್ನು ಹುಡುಕ ತೊಡಗಿದ. ಹರಿದು, ಹಾಳೆಗಳು ಚೆಲ್ಲಾಪಿಲ್ಲಿಯಾಗಿದ್ದ ಭಾಷಾವಿಭಾಗದ ಇಂಗ್ಲೀಷು–ಕನ್ನಡ ಪಠ್ಯಪುಸ್ತಕಗಳು ಅವನ ಕೈಗೆ ಸಿಕ್ಕಿದಾಗ, ಅವುಗಳನ್ನು ಅಭಿಮಾನದಿಂದ ತಿರುವಿಹಾಕಿದ. ಭಾಷಾಭಾಗದ ಪಠ್ಯಪುಸ್ತಕಗಳು ಪ್ರತಿ ವರ್ಷವೂ ಬದಲಾಗುತ್ತಿದ್ದುದರಿಂದ, ಅವನ ಕೈಯಲ್ಲಿದ್ದ ನಾಲ್ಕು ವರ್ಷ ಹಿಂದಿನ ಪುಸ್ತಕಗಳು ಈಗ ಉಪಯೋಗಕ್ಕೆ ಬರುವಂತಿರಲಿಲ್ಲ. ಆದ್ದರಿಂದ ಅವುಗಳನ್ನು ಇದ್ದ ಸ್ಥಳದಲ್ಲಿಯೇ ಇಟ್ಟು, ಸುರುಳಿ ಸುತ್ತಿದ್ದ ಹಾಸಿಗೆಯ ಮೇಲೆ ಕುಳಿತು ನಿಟ್ಟುಸಿರಿಟ್ಟ. ಇತಿಹಾಸ ಮತ್ತು ವಿಜ್ಞಾನಶಾಸ್ತ್ರಗಳಿಗೆ ಸಂಬಂಧಿಸಿದ ತನ್ನ ಪುಸ್ತಕಗಳೆಲ್ಲಾ ಏನಾದವು ಎಂದು ಯೋಚಿಸುತ್ತಿರು ವಷ್ಟರಲ್ಲಿ ಕೋಣೆಯ ಬಾಗಿಲು ಬಡಿದ ಶಬ್ದವಾಯಿತು. ಹಾಗೆಯೇ ಜಾನಕಮ್ಮನವರ ಧ್ವನಿಯೂ ಕೇಳಿಸಿತು—

“ ಜಗ್ಗೂ, ಊಟಮಾಡು ಬಾಪ್ಪ.”

ಹಸಿದಿದ್ದ ಜಗದೀಶ ಕೂಡಲೇ ಬಾಗಿಲು ತೆರೆದು ಹೊರಬಂದ. ಬಾಗಿಲ ಬಳಿಯಲ್ಲಿಯೇ ನಿಂತಿದ್ದ ಗಿರಿಜೆಯನ್ನು ಕಂಡು ಸಂಕೋಚದಿಂದ ತಲೆತಗ್ಗಿಸಿದ.

ಜಾನಕಮ್ಮ ಬೆಳ್ಳಿಯ ತಟ್ಟೆ ಹಾಕಿ ಅಕರಾಸ್ತೆಯಿಂದ ಬಡಿಸತೊಡ ಗಿದರು. ತಾಯಿಯ ಕೈ ಅಡಿಗೆಯ ರುಚಿಯನ್ನು ಮರೆತಿದ್ದ ಜಗದೀಶ ತಲೆ ತಗ್ಗಿಸಿಕೊಂಡೇ ಊಟದ ಸವಿಯಲ್ಲಿ ಮಗ್ನನಾದ.

“ ಜಗ್ಗೂ, ಇಷ್ಟು ದಿನ ನಮ್ಮನ್ನೆಲ್ಲಾ ಮರೆತು ಹೇಗಿದ್ದೆಯೋ ಮಗು ? ”

—ಮೆಲುನಗೆ ನಗುತ್ತಾ ಜಾನಕಮ್ಮ ಮಾತಿಗೆ ಮೊದಲು ಮಾಡಿದರು.

ಜಗದೀಶ ತಾಯಿಯ ಕಡೆಗೊಮ್ಮೆ ನೋಡಿ, ಮಂದಹಾಸ ಬೀರಿ, ಮತ್ತೆ ಊಟದಲ್ಲಿ ಮಗ್ನನಾದ.

ಸ್ವಲ್ಪ ಹೊತ್ತಿನ ಮೌನದ ಬಳಿಕ ಜಾನಕಮ್ಮ ಹೇಳಿದರು—

“ ಇನ್ನುಮೇಲೆ ಎಲ್ಲೂ ಹೋಗಬೇಡ ಜಗದೀಶ. ಇಲ್ಲೇ ಇದ್ದುಬಿಡು ಕಂದ – ನನ್ನ ಕಣ್ಣೆದುರಿಗೆ.”

ಅವರ ಮಾತಿಗೆ ನಿಧಾನವಾಗಿ ತಲೆ ಎತ್ತಿದ ಜಗದೀಶ ಏನೋ ಹೇಳು ವುದರಲ್ಲಿದ್ದ. ಆದರೆ ಅಷ್ಟರಲ್ಲಿ ಗಿರಿಜ ಮಾತನಾಡಿದಳು—

“ ಅಣ್ಣಯ್ಯ ಇನ್ನುಮೇಲೆ ಇರುತ್ತಾನಮ್ಮ. ಮುಂದೆ ಚೆನ್ನಾಗಿ ಓದಿ ಬಿ.ಎ. ಪಾಸು ಮಾಡುತ್ತಾನಂತೆ. ಅಪ್ಪನೂ ಒಪ್ಪಿಕೊಂಡಿದ್ದಾರೆ ! ”

ಜಾನಕಮ್ಮ ಮಗಳೆಡೆಗೆ ಅರೆಕ್ಷಣ ಕೌತಕದಿಂದ ನಿಟ್ಟಿಸಿ, ಅನಂತರ ಮಗನೆಡೆಗೆ ತಿರುಗಿ ನುಡಿದರು—

“ ನಿಜವೇ ಜಗ್ಗೂ ? ”

‘ ಹೌದು ’ ಎಂಬಂತೆ ತಲೆ ಗಮುಕುಹಾಕಿದ ಜಗದೀಶ.

“ ಸದ್ಯ, ಇಷ್ಟು ದಿನಗಳಮೇಲಾದರೂ ದೇವರು ನಿನಗೆ ಒಳ್ಳೆಯ ಬುದ್ಧಿ ಕೊಟ್ಟು, ನಮ್ಮ ಕಡೆಗೆ ಕಣ್ಣುಬಿಟ್ಟು ನೋಡಿದನಲ್ಲಾ - ಅಷ್ಟೇ ಸಾಕು ”

—ಎನ್ನುತ್ತಾ ಜಾನಕಮ್ಮನವರು ದೇವರ ಮುಂದಾಸನದೆಡೆಗೆ ತಿರುಗಿ ಕೈಮುಗಿದರು.

ಜಗದೀಶ ಊಟಮುಗಿಸಿ ಎದ್ದುಹೋದುದನ್ನು ನೋಡಿ, ಮಗಳೆಡೆಗೆ ತಿರುಗಿದ ಜಾನಕಮ್ಮ—

“ ಗಿರಿಜಾ, ನಿನಗೆ ‘ ಗಂಡ ’ ಸಿಕ್ಕಿದ ಹೊತ್ತು ತುಂಬಾ ಒಳ್ಳೆಯದು ಕಣೆ ! ನಮ್ಮ ಗಂಡಗಳೆಲ್ಲಾ ಕಳೆದು, ದೈವಾನುಗ್ರಹ ಒದಗುವ ಕಾಲ ಬಂದಿತು ”

—ಎಂದು ತೃಪ್ತಿಯಿಂದ ನುಡಿದರು.

ಗಿರಿಜೆಯ ಮುಖ ಕೆಂಪಾಗಿ, ಅವಳ ಕಣ್ ಕೆನ್ನೆಗಳು ನಕ್ಕವು.

ಅಷ್ಟರಲ್ಲಿ ನೆರೆಮನೆಯಿಂದ ಓಡಿಬಂದ ಮಾರಾ—

“ ಅಮ್ಮ, ಎಲೆ ಹಾಕಿದೆ. ಬಡಿಸೋದಕ್ಕೆ ಸರೋಜಕ್ಕ ನಿನ್ನ ಕೂಗ್ತಿದಾರೆ ”

—ಎಂದಳು. ಜಾನಕಮ್ಮ ಗೋವಿಂದಯ್ಯನವರ ಮನೆಯ ಕಡೆಗೆ ನಡೆದರು.

೫

ಗೋವಿಂದಯ್ಯನವರ ಮನೆಯಲ್ಲಿ ಹೋಳಿಗೆ– ಚಿತ್ರಾನ್ನದ ಔತಣ ಸೊಗಸಾಗಿಯೇ ಏರ್ಪಾಡಾಗಿದ್ದಿತು. ಗಿರಿಜ–ವಿಾರೆಯರನ್ನು ಅಕ್ಕಪಕ್ಕದಲ್ಲಿ ಕೂಡಿಸಿಕೊಂಡು ಸರೋಜೆಯೂ ಮೊದಲನೆಯ ಪಂಕ್ತಿಯಲ್ಲಿಯೇ ಕುಳಿತಿದ್ದುದರಿಂದ ಜಾನಕಮ್ಮನವರೊಬ್ಬರೇ ಎಲ್ಲರಿಗೂ ಬಡಿಸುತ್ತಿದ್ದರು. ಊಟದ ನಡುವೆ ಗೋವಿಂದಯ್ಯನವರು ಮತ್ತು ಶಾಮು ಲೋಕಾಭಿರಾಮವಾಗಿ ಮಾತನಾಡುತ್ತಲೇ ಇದ್ದರೂ ಸಹ, ಅವರ ಹತ್ತಿರದಲ್ಲಿಯೇ ಕುಳಿತಿದ್ದ ಜಯರಾಯರು ಮಾತ್ರ ಚಕಾರಶಬ್ದವನ್ನೂ ಎತ್ತದೆ, ಆಗೊಮ್ಮೆ ಈಗೊಮ್ಮೆ ಮಂದಹಾಸ ಸೂಸಿ, ಮತ್ತೆ ಊಟದಲ್ಲಿ ಮಗ್ನರಾಗುತ್ತಿದ್ದರು. ಒಂದೆರಡುಬಾರಿ ಶಾಮು ರಾಯರನ್ನುದ್ದೇಶಿಸಿ ಮಾತನಾಡಿದ್ದರೂ ಸಹ ಅವರು ಬದಲು ನುಡಿದಿರಲಿಲ್ಲ. ಪೋಲೀಸ್ ಇಲಾಖೆಯ ಗತ್ತು – ಗಾಂಭೀರ್ಯ ಇನ್ನೂ ಅವರ ಮೈ ಬಿಟ್ಟಿಲ್ಲವೆಂದುಕೊಂಡು ಆತ ಸುಮ್ಮನಾಗಿದ್ದ.

ಗೋವಿಂದಯ್ಯನವರು ತಮ್ಮ ಮುಖ್ಯ ಅತಿಥಿಯ ಕಡೆಗೆ ತಿರುಗಿ—

“ ನಿಧಾನವಾಗಿ ಆಗಲಿ ಶಾಮು ”

—ಎಂದು ಆಗಾಗ ಹೇಳುತ್ತಲೇ ಇದ್ದರು.

“ ಊಟಮಾಡುವುದರಲ್ಲಿ ನಾನು ಮೊದಲೇ ನಿಧಾನ. ಇನ್ನು ಈ ಔತಣದ ಊಟವೆಂದರೆ ಕೇಳಬೇಕೆ ? ತಾನಾಗಿಯೇ ಇನ್ನಷ್ಟು ನಿಧಾನವಾಗುತ್ತದೆ ”

ಎಂದು ನಗುತ್ತಿದ್ದ ಶಾಮು.

ಜಾನಕಮ್ಮನವರಿಗೆ ಹೇಳಿ ಹೇಳಿ, ಪಲ್ಯ ಪದಾರ್ಥಗಳನ್ನು ಪದೇ ಪದೇ ಶಾಮುವಿನ ಎಲೆಗೆ ಹಾಕಿಸುತ್ತಿದ್ದಳು ಸರೋಜೆ. ಅವಳ ಬಲವಂತದಿಂದ ಅವನ ಎಲೆಗೆ ಎರಡು ಹೋಳಿಗೆ ಹೆಚ್ಚಾಗಿ ಬಡಿಸಿದರು ಜಾನಕಮ್ಮ.

" ನನಗೆ ದಿನಕ್ಕೆ ಎರಡು ವೇಳೆ ಊಟವೇ ಬೇಡ. ಇಂತಹ ಊಟ ಎರಡು ದಿನಕ್ಕೊಂದು ಸಾರಿ ಸಿಕ್ಕಿದರೆ ಸಾಕು ; ಸುಖವಾಗಿ ಬದುಕಿರಬಲ್ಲೆ "

—ಎನ್ನುತ್ತಾ ನಕ್ಕ ಊಟ ಮುಗಿಸಿದ ಶಾಮು.

" ನಿನಗೇನೋ ಎರಡು ದಿನಕ್ಕೆ ಒಂದು ಊಟ ಸಾಕು. ಆದರೆ ನನಗೆ ಒಂದು ದಿನಕ್ಕೆ ಎರಡು ಊಟವಾದರೂ ಸಾಲದು "

—ಎಂದು ಹುಡುಗರಂತೆ ನಕ್ಕರು ಗೋವಿಂದಯ್ಯ.

ಅವರ ಮಾತಿಗೆ ಸರೋಜ, ಗಿರಿಜ, ಮೀರೆಯರೂ ಕಿಲಕಿಲನೆ ನಕ್ಕರು.

ಊಟದ ಬಳಿಕ ತಾಂಬೂಲ ಚರ್ವಣ ಮುಗಿಸಿ, ಎಲ್ಲರೂ ವಿಶ್ರಾಂತಿಗೆ ತೆರಳಿದರು.

ಜಗದೀಶನಿಗೆ ಊಟ ತೆಗೆದುಕೊಂಡುಹೋಗಿ ಕೊಟ್ಟುಬಂದ ಬಳಿಕ, ತಾವು ಊಟಮಾಡಿ, ಮತ್ತೆ ಅಡಿಗೆಮನೆಯ ಕೆಲಸದಲ್ಲಿ ತೊಡಗಿದರು ಜಾನಕಮ್ಮ.

ಸುಮಾರು ನಾಲ್ಕುಗಂಟೆಯ ವೇಳೆಗೆ ಸರೋಜ ಗಿರಿಜ – ಮೀರೆಯರಿಗೆ ಹೆಳಲು ಹಾಕಿ, ತಾನೂ ಅಲಂಕೃತಳಾದಳು.

ಎಲ್ಲರೂ ಒಟ್ಟಿಗೆ ಕುಳಿತು ಸಂಜೆಯ ಉಪಾಹಾರ ಮುಗಿಸಿದರು.

" ಎಲ್ಲಪ್ಪ, ಇಷ್ಟುಹೊತ್ತಾದರೂ ನಮ್ಮ ಕಾರಿನ ಡ್ರೈವರ್ ಕಾಣಲೇ ಇಲ್ಲ "

—ಸರೋಜ ತಂದೆಯನ್ನು ಕೇಳಿದಳು.

" ಅವನಿಗೆ ಸ್ವಸ್ಥವಿರಲಿಲ್ಲವಮ್ಮ. ಬೆಳಗ್ಗೆ ಬಂದಿದ್ದವನು ಹೇಳಿ ಬಿಟ್ಟು ಹೋದ."

" ಹಾಗಾದರೆ ನಮ್ಮ ಅತಿಥಿಗಳಿಗೆ ಬೃಂದಾವನ ತೋರಿಸುವುದು ಹೇಗೆ ? "

" ನೀನೇ ಇದ್ದೀಯಲ್ಲ ! "

—ಗೋವಿಂದಯ್ಯ ನಗುತ್ತಾ ನುಡಿದರು.

" ನೀವು ಬರುವುದಿಲ್ಲವೆ ? "

—ಗೋವಿಂದಯ್ಯನವರನ್ನುದ್ದೇಶಿಸಿ ಕೇಳಿದ ಶಾಮು.

" ಇಲ್ಲ ಶಾಮು. ನಾನು ಹಾಯಾಗಿ ಮನೆಯಲ್ಲಿರುತ್ತೇನೆ.

"ನೀವೂ ಬಂದರೆ ಚೆನ್ನಾಗಿರುತ್ತದೆ. ಮನೆಯಲ್ಲಿ ಕಳೆಯುವ ಕಾಲವನ್ನು ಅಲ್ಲೇ ಕಳೆಯಬಹುದಲ್ಲವೇ ?"

ಗೋವಿಂದಯ್ಯನವರಿಗೆ ಉಭಯಸಂಕಟಕ್ಕಿಟ್ಟುಕೊಂಡಿತು. ಅವರ ಪತ್ನಿ ರಾಧಮ್ಮ ತೀರಿಕೊಂಡಮೇಲೆ, ಎಂದೂ ಅವರು ಬೃಂದಾವನಕ್ಕೆ ಹೋದುದಿಲ್ಲ. 'ಬೃಂದಾವನ'ದ ಮಾತು ಬಂದೊಡನೆಯೇ ಅವರ ಮುಖದಲ್ಲಿ ಚಿಂತೆಯು ತೆರೆ ಕಾಣಿಸಿಕೊಳ್ಳುತ್ತಿತ್ತು.

ಗೋವಿಂದಯ್ಯನವರು ತಮ್ಮ ಮದುವೆಗೆ ಮುನ್ನ ರಾಧಮ್ಮನನ್ನು ಮೊಟ್ಟಮೊದಲ ಬಾರಿಗೆ ಸಂದರ್ಶಿಸಿದ್ದು ಬೃಂದಾವನದಲ್ಲಿ. ಅದೂ ಬೃಂದಾವನದ ನಿರ್ಮಾಣಕಾರ್ಯ ಪ್ರಾರಂಭವಾದಾಗ.

ಸಾಗರದ ಅಣೆಕಟ್ಟು ಆಗತಾನೆ ಮುಕ್ತಾಯವಾಗಿತ್ತು. ಆ ರಮಣೀಯ ಜಲಾಶಯದ ನಯನಮನೋಹರ ದೃಶ್ಯಗಳನ್ನು ನೋಡಲು ನೂರಾರು ಮಂದಿ ಪ್ರೇಕ್ಷಕರು ಶನಿವಾರ ಭಾನುವಾರಗಳಂದು ಅಲ್ಲಿಗೆ ಬರುತ್ತಿದ್ದರು.

ಗೋವಿಂದಯ್ಯನವರ ತಂದೆ ಗೋಪಾಲಯ್ಯನವರು ವಿಶೇಷ ಪರಿಶ್ರಮ ಪಡೆದ ಎಂಜನೀಯರ್ ಆಗಿದ್ದುದರಿಂದ ಹಲವಾರು ಮಂದಿ ತಜ್ಞರ ಜೊತೆಗೆ ಅವರನ್ನೂ ಬೃಂದಾವನ ನಿರ್ಮಾಣಕಾರ್ಯಕ್ಕೆ ನೇಮಿಸಲಾಗಿತ್ತು. ಆಗತಾನೆ ಗೋವಿಂದಯ್ಯ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವ್ಯಾಸಂಗ ಮುಗಿಸಿ ಮೈಸೂರಿಗೆ ಬಂದಿದ್ದರು. ಪ್ರತಿ ಭಾನುವಾರ ತಮ್ಮ ತಂದೆಯೊಡನೆ ಕಾರಿನಲ್ಲಿ ಬೃಂದಾವನಕ್ಕೆ ತೆರಳಿ, ಅಲ್ಲಿನ ಸೌಂದರ್ಯವನ ನಿರ್ಮಾಣಕಾರ್ಯಗಳ ಮುನ್ನಡೆಯನ್ನು ಕುತೂಹಲಾಸಕ್ತಿಯಿಂದ ವೀಕ್ಷಿಸುತ್ತಿದ್ದರು. ಆತ ಮಗನ ಜ್ಞಾನದಾಹವನ್ನೂ ವಿಷಯ ವೈಶಿಷ್ಟ್ಯಗಳನ್ನರಿಯುವ ಬುದ್ಧಿ ಶ್ರದ್ಧೆಗಳನ್ನೂ ಬಲ್ಲವರಾಗಿದ್ದ ಗೋಪಾಲಯ್ಯ ಕ್ಷಣಮಾತ್ರವೂ ಬೇಸರಿಸದೆ, ಆ ಸೌಂದರ್ಯವನ ನಿರ್ಮಾಣದಲ್ಲಿ ತಾವು ತೋರಿಸಿದ ಕಲಾಕೌಶಲ್ಯವನ್ನು ವಿವರಿಸುತ್ತಿದ್ದರು.

ಒಂದು ಭಾನುವಾರ ತಂದೆಯೂ ಮಗನೂ ಹೊಸದಾಗಿ ನಿರ್ಮಿತವಾಗಿದ್ದ ಬಣ್ಣದ ಕಾರಂಜಿಯೊಂದರ ಬಗ್ಗೆ ಮಾತನಾಡುತ್ತಿದ್ದಾಗ, ಆ ಕಾರಂಜಿಯನ್ನು ನೋಡಲು ಬಂದ ಶ್ರೀಕಂಠಯ್ಯ ಮತ್ತು ಆತನ ತಂಗಿ ರಾಧಮ್ಮ ಗೋವಿಂದಯ್ಯನವರಿಗೆ ಪರಿಚಿತವಾದರು.

" ಇದು ಒಂದೇ ಬಣ್ಣದ ಕಾರಂಜಿಯಲ್ಲ ಗೋವಿಂದು. ಕ್ಷಣಕ್ಕೊಮ್ಮೆ ತನ್ನ ಬಣ್ಣವನ್ನು ಬದಲಾಯಿಸುವ ಸಪ್ತವರ್ಣದ ಕಾರಂಜಿ. ಇದೇ ರೀತಿ, ಇದರ ಅಕ್ಕಪಕ್ಕಗಳಲ್ಲಿ ಇನ್ನೆರಡು ಕಾರಂಜಿಗಳನ್ನ ನಿರ್ಮಿಸುತ್ತೇವೆ. ಆಗ ನೋಡುವುದಕ್ಕೆ ತುಂಬಾ ಚೆನ್ನಾಗಿರುತ್ತದೆ. ಒಂದು ಕೆಂಪು ನೀರು ಕಾರುವಾಗ, ಇನ್ನೊಂದು ನೀಲಿಯ ನೀರು, ಮತ್ತೊಂದು ಹಸುರು ನೀರು ಕಾರುತ್ತದೆ. ಒಂದೊಂದು ಸೆಕೆಂಡಿಗೂ ಇವುಗಳ ಬಣ್ಣ ಬದಲಾಗುತ್ತದೆ. ಕೆಂಪು ಕಾರಂಜಿ ಒಂದು ಸೆಕೆಂಡು ಮುಗಿಯುವುದರೊಳಗಾಗಿ ನೀಲಿಯ ಕಾರಂಜಿಯಾಗುತ್ತದೆ; ನೀಲಿ ಹಸುರಾಗುತ್ತದೆ; ಹಸುರು ಕೆಂಪಾಗುತ್ತದೆ. ಕೌಶಲ್ಯಪೂರ್ಣವಾದ ವಿದ್ಯುತ್‌ಸಂಯೋಜನೆಯಿಂದ ನಿರ್ಮಾಣವಾಗುವ ಈ ಬಣ್ಣದ ಕಾರಂಜಿಗಳು ಪ್ರೇಕ್ಷಕರ ಕಣ್ಮನ ಸೆಳೆದು, ಅವರನ್ನು ಭ್ರಮಿತರನ್ನಾಗಿ ಮಾಡುತ್ತದೆ"

—ಗೋಪಾಲಯ್ಯನವರು ಉತ್ಸಾಹದಿಂದ ವಿವರಿಸುತ್ತಿದ್ದಾಗ ಗೋವಿಂದಯ್ಯನವರಷ್ಟೆ ಆಸಕ್ತಿಯಿಂದ ಶ್ರೀಕಂಠಯ್ಯನೂ ರಾಧಮ್ಮನೂ ಅವರ ಮಾತುಗಳನ್ನು ಕೇಳುತ್ತಿದ್ದರು.

" ನಮ್ಮಂತಹ ಸಾಮಾನ್ಯರ ಮನರಂಜಿಸಲು ನಿಮ್ಮ ಬುದ್ಧಿಶಕ್ತಿಯನ್ನೆಲ್ಲ ವಿನಿಯೋಗಿಸುತ್ತಿರುವುದು ನಿಜವಾಗಿಯೂ ಸ್ತುತ್ಯಾರ್ಹ ಸಾರ್ "

—ಎಂದು ಕೃತಜ್ಞತೆಯಿಂದ ನುಡಿದರು ಶ್ರೀಕಂಠಯ್ಯ.

ಹಾಗೆಯೇ ಮಾತು ಬೆಳೆದು ಪರಸ್ಪರ ಪರಿಚಯವಾಯಿತು.

ಶ್ರೀಕಂಠಯ್ಯನವರ ತಂದೆ ಹಿಂದೆ ಸಂಸ್ಥಾನದಲ್ಲಿ ಪ್ರಮುಖ ಎಂಜಿನಿಯರ್ ಆಗಿದ್ದ ಶ್ರೀನಾಥರಾಯರೆಂದು ವಿಷಯ ತಿಳಿದಾಗ ಗೋಪಾಲಯ್ಯನವರಿಗೆ ಅವರ ವಿಚಾರದಲ್ಲಿ ಹೆಚ್ಚು ಆಸಕ್ತಿಯುಂಟಾಯಿತು.

" ಶ್ರೀನಾಥರಾಯರು ನನಗೆ ತುಂಬಾ ಪರಿಚಿತರು. ವಿದೇಶ ಪ್ರವಾಸಕ್ಕೆ ಹೋದಾಗ ನಾನೂ ಅವರೂ ಜೊತೆಯಲ್ಲೇ ಹೋಗಿದ್ದೆವು....ಸುಮಾರು ಎರಡು ವರ್ಷಗಳ ಹಿಂದೆ ಅವರಿಗೆ ರಿಟೈರ್ ಆಯಿತಲ್ಲವೆ ? "

" ಹೌದು ಸಾರ್. ರಿಟೈರ್ ಆದ ಸ್ವಲ್ಪ ದಿನಗಳಲ್ಲಿಯೇ ಕಾಯಿಲೆ ಬಿದ್ದರು. ಹಾಗೆಯೇ ನರಳಿ ನರಳಿ ಈಗ ಆರು ತಿಂಗಳ ಹಿಂದೆ ನಮ್ಮನ್ನು ಅನಾಥರನ್ನಾಗಿ ಮಾಡಿ ಹೊರಟುಹೋದರು."

" ಏನು, ಶ್ರೀನಾಥರಾಯರು ಸ್ವರ್ಗಸ್ಥರಾದರೇ ? "

" ಹೌದು ಸಾರ್."

" ಪಾಪ,....ದೇವರಂತಹ ಗುಣಶಾಲಿ....ರಿಟೈರ್ ಆದ ಮೇಲೆ ಅವರ ವಿಷಯ ನನಗೆ ಹೆಚ್ಚಿಗೆ ತಿಳಿಯಲೇ ಇಲ್ಲ...."

—ಎಂದರು ಗೋಪಾಲಯ್ಯ.

ಸ್ವಲ್ಪಹೊತ್ತು ಎಲ್ಲರೂ ಮೌನವಾಗಿದ್ದರು.

ಅನಂತರ ಗೋವಿಂದಯ್ಯ ಮಾತನಾಡಿದರು—

" ಈಗ ತಾವು ಇರುವುದು ಮೈಸೂರಿನಲ್ಲಿಯೇ ತಾನೆ ? "

" ಹೌದು. ಇದುವರೆಗೂ ಮೈಸೂರಿನಲ್ಲಿಯೇ ಇದ್ದೆವು. ಇನ್ನು ಮುಂದೆ ಆ ಸ್ಥಳವನ್ನು ಬಿಡಲು ನಿಶ್ಚಯಿಸಿದ್ದೇವೆ."

" ಮುಂದೆ ? "

ಗೋಪಾಲಯ್ಯ ಕುತೂಹಲದಿಂದ ಕೇಳಿದರು.

" ನಮ್ಮ ತಾಯಿಯ ಹುಟ್ಟೂರಾದ ಕಾನಕಾನಹಳ್ಳಿಯ ಬಳಿ ಹಾರೋಹಳ್ಳಿಗೆ ಹೋಗುತ್ತೇವೆ. ಅಲ್ಲಿ ನಮ್ಮ ಸೋದರಮಾವಂದಿರಿದ್ದಾರೆ. ನನಗೆ ಮದುವೆಯಾಗಿರುವುದೂ ಅಲ್ಲಿಯೇ."

—ಎಂದರು ಶ್ರೀಕಂಠಯ್ಯ.

" ನಿಮ್ಮ ತಂದೆಯವರಿಗೆ ನೀವೆಷ್ಟು ಮಂದಿ ಮಕ್ಕಳು ? "

" ನಾವಿಬ್ಬರೇ....ನಾನು, ಈ ನನ್ನ ತಂಗಿ...."

—ಎಂದು ಶ್ರೀಕಂಠಯ್ಯ ನುಡಿದಾಗ ಗೋವಿಂದಯ್ಯ ರಾಧಮ್ಮನ ಕಡೆಗೆ ನೋಡಿದರು. ಆಕೆಯೂ ಸಹ ಬಿಟ್ಟ ಕಂಗಳಿಂದ ಗೋವಿಂದಯ್ಯನವರ ಕಡೆಗೇ ನೋಡುತ್ತಿದ್ದರು.

" ನಿಮ್ಮ ತಾಯಿ ಇದ್ದಾರೆಯೆ ? "

—ಗೋಪಾಲಯ್ಯನವರ ಪ್ರಶ್ನೆ ಅದು.

" ಇಲ್ಲ. ಅವರು ತೀರಿಕೊಂಡು ಈಗ್ಗೆ ಐದು ವರ್ಷಗಳ ಮೇಲಾಯಿತು. ಅದಕ್ಕೆ ಮೊದಲೇ ನಾನು ಹಾರೋಹಳ್ಳಿಯನ್ನು ಸೇರಿದ್ದೆ. ಈ ನನ್ನ ತಂಗಿ ಒಬ್ಬಳೇ ಇಲ್ಲಿ ನಮ್ಮ ತಂದೆಯವರೊಡನೆ ಇದ್ದಳು.

" ಇನ್ನುಮುಂದೆ ನೀವಿಬ್ಬರೂ ನಿಮ್ಮ ತಾಯಿಯ ತೌರಿಗೇ ಹೊರಟು ಬಿಡುತ್ತೀರಾ ? "

" ಹೌದು. ಬೇರೆ ವಿಧಿಯಿಲ್ಲ. ನಾನು ಅಲ್ಲಿ ನೆಲಸಿ ಬಹಳ ವರ್ಷಗಳಾಗಿ ಬಿಟ್ಟವೆ. ಮತ್ತೆ ಮೈಸೂರಿಗೆ ಬಂದು ಸಂಸಾರ ಹೂಡಬೇಕೆಂದರೆ ಕಷ್ಟವೇ ಆಗುತ್ತದೆ. ಇಲ್ಲಿರುವ ನಮ್ಮ ಮನೆಯನ್ನೂ ಅಂಗಡಿ ಕಟ್ಟಡಗಳನ್ನೂ ಮಾರಿ ಬಿಟ್ಟು, ನನ್ನ ತಂಗಿಯ ಮದುವೆಮಾಡಿ ಮುಗಿಸಿದರೆ, ನನಗೆ ಎಷ್ಟೋ ಭಾರ ಇಳಿದ ಹಾಗೆ! ಈ ಸಾರಿ ಬಂದಿರುವುದೇ ಈ ಮಾರಾಟದ ಕೆಲಸಕ್ಕಾಗಿ! ಮುಂದೆ ನಾವು ಯಾವ ಕಾಲಕ್ಕೆ ಮೈಸೂರಿಗೆ ಬರುತ್ತೇವೋ ಅಥವಾ ಬರುವುದೇ ಇಲ್ಲವೋ ಎಂದು, ಈಗ ಈ ಆಣೆಕಟ್ಟು, ಬೃಂದಾವನ ನೋಡಿಕೊಂಡು ಹೋಗಲು ಬಂದೆವು."

" ಒಳ್ಳೆಯದು....ಬನ್ನಿ ಹೋಗೋಣ "

—ಎಂದು ಗಂಭೀರವಾಗಿ ನಗುತ್ತಲೇ ಗೋಪಾಲಯ್ಯನವರ ದೃಷ್ಟಿ ರಾಧಮ್ಮನನ್ನು ಆಪಾದಮಸ್ತಕ ಪರಿಕಿಸಿತು.

ನಾಲ್ಕು ಮಂದಿಯೂ ಅಲ್ಲಿಂದ ಹೊರಟು ಗೋಪಾಲಯ್ಯನವರ ಕಾರಿನ ಬಳಿಗೆ ಬಂದರು.

" ನಿಮ್ಮ ಪರಿಚಯವಾಗಿದ್ದು ತುಂಬಾ ಸಂತೋಷವಾಯಿತು. ನಾವಿನ್ನು ಬರುತ್ತೇವೆ. ನಮಸ್ಕಾರ "

—ಎಂದರು ಶ್ರೀಕಂಠಯ್ಯ.

" ಬರುವಿರಂತೆ ನಮ್ಮ ಜೊತೆಯಲ್ಲಯೇ. ಕಾರು ಹತ್ತಿರಿ "

—ಎನ್ನುತ್ತಾ ಗೋಪಾಲಯ್ಯ ಕಾರಿನ ಬಾಗಿಲು ತೆಗೆದರು.

" ಬೇಡಿ, ನಿಮಗೇಕೆ ತೊಂದರೆ? ನಾವು ರೈಲಿನಲ್ಲಿ ಹೋಗುತ್ತೇವೆ."

" ತೊಂದರೆಯೇನೂ ಇಲ್ಲ; ಹತ್ತಿ. ರೈಲಿಗಿಂತ ಮುಂಚೆಯೇ ನಾವು ಮೈಸೂರು ಸೇರೋಣ."

ಗೋಪಾಲಯ್ಯನವರಿಂದ ಇನ್ನು ಹೆಚ್ಚು ಬಲವಂತಮಾಡಿಸಿಕೊಳ್ಳಲಿಚ್ಛಿಸದೆ, ಶ್ರೀಕಂಠಯ್ಯ-ರಾಧಮ್ಮ ಕಾರು ಹತ್ತಿದರು.

ಮುಂಭಾಗದ ಸೀಟಿನಲ್ಲಿ ಗೋವಿಂದಯ್ಯ ಕುಳಿತ ಬಳಿಕ ಗೋಪಾಲಯ್ಯ ಕಾರು ನಡೆಸತೊಡಗಿದರು. ಹಾಗೆಯೇ ಶ್ರೀಕಂಠಯ್ಯನವರನ್ನುದ್ದೇಶಿಸಿ ಮಾತನಾಡತೊಡಗಿದರು.

" ನಿಮ್ಮ ಮನೆ ಎಲ್ಲಿದೆ ? "

" ರಾಮಾನುಜ ರಸ್ತೆಯಲ್ಲಿ "

" ಅಂಗಡಿ ಕಟ್ಟಡಗಳು "

" ಸಯ್ಯಾಜಿರಾವ್ ರಸ್ತೆಯಲ್ಲಿ "

" ಎಲ್ಲಾ ಒಟ್ಟು ಎಷ್ಟು ಬೆಲೆಯಾಗಬಹುದು ? "

" ಮನೆ ತುಂಬಾ ಹಳೆಯಕಾಲದ್ದು. ಅಂಗಡಿ ಕಟ್ಟಡಗಳನ್ನು ಕಟ್ಟಿಸಿ ಸುಮಾರು ಐದು ವರ್ಷಗಳಾಯಿತು."

" ಅಂದರೆ ಮನೆ ಒಂದು ಸಾವಿರ ರೂಪಾಯಿ ಬಾಳಬಹುದೆ ? "

" ಇನ್ನೂ ಹೆಚ್ಚು ಬಾಳಬಹುದು. ಕಟ್ಟಡ ಶಿಥಿಲವಾಗಿದ್ದರೂ ನಿವೇಶ ದೊಡ್ಡದಾಗಿದೆ. ಆದ್ದರಿಂದ ಈಗಿನ ಬೆಲೆಯಲ್ಲಿ ಕೊನೆಯಪಕ್ಷ ಎರಡು ಸಾವಿರ ರೂಪಾಯಿಗಳಾಗಬಹುದೆಂದು ನನ್ನ ಅಂದಾಜು."

" ಅಂಗಡಿ ಕಟ್ಟಡಗಳು ? "

" ಹನ್ನೆರಡು ಸಾವಿರಕ್ಕೆ ಕಡಿಮೆಯಾಗಲಾರದು ? "

" ಹಾಗಾದರೆ, ಹದಿನಾಲ್ಕು ಸಾವಿರ ಬಂದರೆ ಮನೆ ಮತ್ತು ಅಂಗಡಿ ಕಟ್ಟಡಗಳನ್ನು ಮಾರಿಬಿಡುತ್ತೀರಾ ? "

" ಹೌದು ಸಾರ್ " ಅಷ್ಟು ದೊರೆತರೆ ಸಾಕು. ಆ ಮೇಲೆ ಒಂದು ಒಳ್ಳೆಯ ವರನನ್ನು ಹುಡುಕಿ, ಆತ ಕೇಳಿದಷ್ಟು ವರದಕ್ಷಿಣೆ ಕೊಟ್ಟು, ನನ್ನ ತಂಗಿಯ ಮದುವೆ ಮಾಡಿಬಿಟ್ಟು ನಿಶ್ಚಿಂತನಾಗುತ್ತೇನೆ."

ಗೋಪಾಲಯ್ಯ ಏನನ್ನೋ ಯೋಚಿಸಿದರು. ಅವರ ಪಕ್ಕದಲ್ಲಿಯೇ ಕುಳಿತಿದ್ದ ಗೋವಿಂದಯ್ಯ ತಂದೆಯ ಪ್ರಶ್ನಾವಳಿಗೆ ತಮ್ಮದೇ ಆದ ಅರ್ಥವನ್ನು ಕಲ್ಪಿಸಿಕೊಳ್ಳುತ್ತಿದ್ದರು !

ಕಾರು ಗೋಪಾಲಯ್ಯನವರ ಮನೆಯ ಮುಂದುಗಡೆ ನಿಂತಿತು.

" ಬನ್ನಿ ಒಳಗೆ ಹೋಗೋಣ. ನಮ್ಮ ಮನೆ ನೋಡುವಿರಂತೆ "

—ಎಂದರು ಕಾರಿನ ಬಾಗಿಲು ತೆರೆಯುತ್ತಾ ಗೋಪಾಲಯ್ಯ.

ರಾಧಮ್ಮ ಅಣ್ಣನ ಮುಖವನ್ನೊಮ್ಮೆ ನೋಡಿ, ಮುಗುಳನಗೆ ನಗುತ್ತಾ ಕಾರಿನಿಂದ ಇಳಿದರು. ಅನಂತರ ಅಣ್ಣ-ತಂಗಿ ಗೋಪಾಲಯ್ಯನವರನ್ನು ಹಿಂಬಾಲಿಸಿದರು.

ಇಷ್ಟರಲ್ಲಿ ಒಳಗೆ ಹೋಗಿದ್ದ ಗೋವಿಂದಯ್ಯ ತಮ್ಮ ತಾಯಿಗೆ ಅತಿಥಿಗಳ ವಿಷಯವನ್ನು ಹೇಳಿದ್ದುದರಿಂದ, ಆ ವೃದ್ಧ ಮುತ್ತೈದೆ ಹೊರಬಂದು, ರಾಧಮ್ಮನನ್ನು ಒಳಗೆ ಕರೆದೊಯ್ದರು.

ಅಂಗಳದಲ್ಲಿ ಸೋಫಾದ ಮೇಲೆ ಶ್ರೀಕಂಠಯ್ಯ ಕುಳಿತರು.

" ಒಂದು ನಿಮಿಷ ಕುಳಿತುಕೊಂಡಿರಿ. ಈಗಲೇ ಬರುತ್ತೇನೆ "

—ಎನ್ನುತ್ತಾ ಒಳಗೆ ನಡೆದರು ಗೋಪಾಲಯ್ಯ.

ಗೋವಿಂದಯ್ಯ ಉಡುಪು ಬದಲಿಸಿ ತಮ್ಮ ವ್ಯಾಸಂಗದ ಕೋಣೆಯಿಂದ ಹೊರಬರುತ್ತಿದ್ದಂತೆಯೇ, ಗೋಪಾಲಯ್ಯ ಅವರನ್ನು ತಮ್ಮ ಕೋಣೆಗೆ ಕರೆದೊಯ್ದು ಮೆಲುಧ್ವನಿಯಲ್ಲಿ ಕೇಳಿದರು—

" ಗೋವಿಂದು, ಆ ಹುಡುಗಿಯನ್ನು ನೋಡಿದೆಯಾ ? "

" ಹ್ಞಾಂ "

" ಹೇಗಿದ್ದಾಳೆ ? "

ಗೋವಿಂದಯ್ಯ ಮೌನವಾಗಿ ತಲೆತಗ್ಗಿಸಿದರು.

" ಹೇಳು, ಪರವಾಗಿಲ್ಲ "

" ನಾನೇನು ಹೇಳಲಪ್ಪ ? "

" ನಿನಗೆ ಒಪ್ಪಿಗೆಯಾದಳೆ ? "

ಗೋವಿಂದಯ್ಯ ಮಾತನಾಡಲಿಲ್ಲ.

" ನಮಗೂ ವಯಸ್ಸಾಯಿತು. ಈಗ ನಿನ್ನ ಓದೂ ಸಹ ಮುಗಿದಿದೆ. ಇನ್ನು ಮದುವೆಯಾಗಲು ಅಭ್ಯಂತರವೇನು ?....ನಿನಗೆ ಒಪ್ಪಿಗೆಯಾದರೆ ಈಗ ಬಂದಿರುವ ಹುಡುಗಿಯನ್ನೇ ನಿಶ್ಚಯಿಸಿಬಿಡುತ್ತೇನೆ. ನನ್ನ ಸ್ನೇಹಿತರ ಮಗಳು ನಿನ್ನ ಮನೆಗೆ ಸೊಸೆಯಾಗಿ ಬಂದರೆ ನನಗೂ ಸಂತೋಷ."

" ನಿನ್ನ ಇಷ್ಟದಹಾಗೆ ಮಾಡಪ್ಪ "

" ನಿನ್ನ ಇಷ್ಟವೇನು ಹೇಳು ? "

" ನೀನು ಏನು ಮಾಡಿದರೂ ನನಗೆ ಸಂತೋಷವೇ ! "

ಗೋವಿಂದಯ್ಯ ನಸುನಾಚಿಕೆ ಬೆರೆತ ಧ್ವನಿಯಲ್ಲಿ ನುಡಿದರು.

ಮಗನ ಮಾತಿನಿಂದ ಗೋಪಾಲಯ್ಯನವರಿಗೆ ತುಂಬಾ ಸಂತೋಷವಾಯಿತು.

" ಹೋಗಿ, ನಿಮ್ಮ ತಾಯಿಯನ್ನು ಇಲ್ಲಿಗೆ ಕಳುಹಿಸು " ಎಂದರು.

ತಂದೆಯ ಮಾತಿನಂತೆ ಗೋವಿಂದಯ್ಯ ತಾಯಿಯನ್ನು ಕರೆಯಲು ಹೋದಾಗ, ಆಕೆ ರಾಧಮ್ಮನೊಡನೆ ತುಂಬಾ ಆತ್ಮೀಯತೆಯಿಂದ ಮಾತನಾಡುತ್ತಿದ್ದರು.

" ಅಮ್ಮ, ಅಪ್ಪ ಕರೆಯುತ್ತಿದ್ದಾರೆ. ಬೇಗ ಹೋಗು "

—ಎಂದು ತಾಯಿಯನ್ನು ಕಳುಹಿಸಿದ ಬಳಿಕ ಗೋವಿಂದಯ್ಯ ರಾಧಮ್ಮನನ್ನು ಕಣ್ತುಂಬ ನೋಡಿದರು. ಆಕೆಯು ಓರೆನೋಟದಿಂದ ಗೋವಿಂದಯ್ಯನವರನ್ನು ನೋಡಿದರು. ಒಬ್ಬರನ್ನೊಬ್ಬರು ನೋಡುತ್ತಿದ್ದೇವೆಂದು ಇಬ್ಬರಿಗೂ ತಿಳಿದಾಗ, ಇಬ್ಬರೂ ನಾಚಿಕೆಯಿಂದ ಮುಖ ತಿರುಗಿಸಿಕೊಂಡು ಮುಗುಳು ನಕ್ಕರು.

ಸ್ವಲ್ಪ ಹೊತ್ತಿನನಂತರ ಅಂಗಳದಲ್ಲಿ ಅನಿರೀಕ್ಷಿತ ಸಮಾರಂಭ ಏರ್ಪಟ್ಟಿತು.

ತಮ್ಮ ಕೋಣೆಯಿಂದ ಹೊರಬಂದ ಗೋಪಾಲಯ್ಯ ಶ್ರೀಕಂಠಯ್ಯನವರೊಡನೆ ಲೋಕಾಭಿರಾಮವಾಗಿ ಮಾತನಾಡುತ್ತಾ ಕೇಳಿದರು—

" ನಿಮ್ಮ ತಂಗಿಗೆ ವರನನ್ನು ಹುಡುಕಿದ್ದೀರೇನು ? "

" ಇನ್ನೂ ಇಲ್ಲ. ವರ ಸಿಕ್ಕುವುದು ಈಗಿನ ಕಾಲದಲ್ಲಿ ಸ್ವಲ್ಪ ಕಷ್ಟವೇ ಆಗಿದೆ "

—ಶ್ರೀಕಂಠಯ್ಯ ನಕ್ಕು ನುಡಿದರು.

ಅಷ್ಟರಲ್ಲಿ ಒಳಗಡೆಯಿಂದ ಅಡಿಗೆಯವನು ಉಪಾಹಾರ ತಂದಿಟ್ಟ.

ಗೋಪಾಲಯ್ಯ ಮಗನನ್ನೂ ಅಂಗಳಕ್ಕೇ ಕರೆದು ತಮ್ಮ ಪಕ್ಕದಲ್ಲಿ ಕೂಡಿಸಿಕೊಂಡರು.

ಮೂವರೂ ಉಪಾಹಾರ ಮುಗಿಸುವ ವೇಳೆಗೆ, ಗೋಪಾಲಯ್ಯನವರ ಪತ್ನಿ ಫಲ–ತಾಂಬೂಲದ ತಟ್ಟೆಯನ್ನು ಹಿಡಿದುಕೊಂಡು ಅಂಗಳಕ್ಕೆ ಬಂದರು. ತಂದೆಯ ಆದೇಶದಂತೆ ಗೋಪಾಲಯ್ಯ ತಾಯಿಯ ಕೈಯಿಂದ ತಟ್ಟೆಯನ್ನು ತೆಗೆದುಕೊಂಡು ಸೋಫಾದ ಮಧ್ಯೆ ಇದ್ದ ಮೇಜಿನ ಮೇಲಿಟ್ಟರು. ಶ್ರೀಕಂಠಯ್ಯನವರಿಗೆ ತುಂಬಾ ಕುತೂಹಲಕರವಾಗಿ ತೋರಿತು ಆ ದೃಶ್ಯ.

ಗೋಪಾಲಯ್ಯ ತಮ್ಮ ಚೆಕ್ ಪುಸ್ತಕವನ್ನು ತೆಗೆದು, ಶ್ರೀಕಂಠಯ್ಯನವರ ಹೆಸರಿಗೆ ಹದಿನಾಲ್ಕು ಸಾವಿರ ರೂಪಾಯಿಗಳಿಗೆ ಒಂದು ಚೆಕ್ ಬರೆದು—

" ನಿಮ್ಮ ಮನೆ ಮತ್ತು ಅಂಗಡಿ ಕಟ್ಟಡಗಳನ್ನು ನಾನೇ ಕೊಂಡು ಕೊಳ್ಳಲು ನಿಶ್ಚಯಿಸಿದ್ದೇನೆ "

—ಎಂದರು.

ಆಶ್ಚರ್ಯಚಕಿತರಾದರು ಶ್ರೀಕಂಠಯ್ಯ.

" ಇದೋ, ಹಣ ತೆಗೆದುಕೊಳ್ಳಿ."

ಗೋಪಾಲಯ್ಯ ಪುಸ್ತಕದಿಂದ ಚೆಕ್ ಹರಿದು ಶ್ರೀಕಂಠಯ್ಯನವರ ಕೈಗಿತ್ತರು.

" ಹಾಗೆಯೇ ನನ್ನದು ಇನ್ನೊಂದು ಕೋರಿಕೆ ಇದೆ."

' ಅದೇನು ? '—ಎಂದು ಕೇಳುತ್ತಿತ್ತು ಶ್ರೀಕಂಠಯ್ಯನವರ ಮುಖಭಾವ.

ಕ್ಷಣಕಾಲ ತಡೆದು ಮುಂದುವರಿಸಿದರು ಗೋಪಾಲಯ್ಯ—

" ನಿಮ್ಮ ತಂಗಿಯನ್ನು ನಮ್ಮ ಮನೆಗೇ ಸೊಸೆಯಾಗಿ ತಂದುಕೊಳ್ಳ ಬೇಕೆಂದು ನಿರ್ಧರಿಸಿದ್ದೇವೆ. ನನಗಿಂತಲೂ ಹೆಚ್ಚಾಗಿ ನಮ್ಮ ಯಜಮಾನಿಗೆ ಈ ವಿಷಯದಲ್ಲಿ ಆತುರ ಆಸಕ್ತಿ ಹೆಚ್ಚಾಗಿದೆ. ನಿಮ್ಮ ಅಭಿಪ್ರಾಯ ತಿಳಿಸಬೇಕು."

ಶ್ರೀಕಂಠಯ್ಯ ಅವಾಕ್ಕಾಗಿದ್ದರು.

" ಗೋವಿಂದು ನಮಗೆ ಒಬ್ಬನೇ ಮಗ. ಎಂ.ಎಸ್‌ಸಿ. ಪರೀಕ್ಷೆ ಮಾಡಿದ್ದಾನೆ. ಹೊಟ್ಟೆ-ಬಟ್ಟೆಗೆ ಬೇಕಾದಷ್ಟನ್ನು ಭಗವಂತ ನಮ್ಮ ಪಾಲಿಗೆ ಅನುಗ್ರಹಿಸಿದ್ದಾನೆ. ವರದಕ್ಷಿಣೆ ಎಂದು ನೀವು ಕಾಲಾಣೆ ಕೂಡ ನಮಗೆ ಕೊಡಬೇಕಾಗಿಲ್ಲ."

ಗೋಪಾಲಯ್ಯನವರ ಮಾತು ಕೇಳುತ್ತಿದ್ದಂತೆ, ಶ್ರೀಕಂಠಯ್ಯನವರಿಗೆ ತಾವು ಸ್ವಪ್ನಲೋಕದಲ್ಲಿ ವಿಹರಿಸುತ್ತಿರುವಂತೆ ಭಾಸವಾಯಿತು.

ಅಷ್ಟರಲ್ಲಿ ರಾಧಮ್ಮನನ್ನು ಹೊರಗೆ ಕರೆತಂದರು ಗೋಪಾಲಯ್ಯ ನವರ ಪತ್ನಿ.

" ವಧುವಿನ ಅಭಿಪ್ರಾಯವೇನು ? "

—ಆಸೆಯ ಧ್ವನಿಯಲ್ಲಿ ಪತ್ನಿಯನ್ನು ಕೇಳಿದರು ಗೋಪಾಲಯ್ಯ.

" ತನ್ನ ಅಣ್ಣನವರು ಹೇಳಿದ ಹಾಗೆ—ಎನ್ನುತ್ತಾಳೆ "

" ಏನು ಹೇಳುತ್ತೀರಿ ಶ್ರೀಕಂಠಯ್ಯ ? "

"ನಾನು ಹೇಳುವುದಕ್ಕಾದರೂ ಏನಿದೆ ಸ್ವಾಮಿ. ಕಷ್ಟದಲ್ಲಿರುವ ಮನುಷ್ಯನ ಬಳಿಗೆ ಭಗವಂತನು ಅಪ್ರಾರ್ಥಿತವಾಗಿ ಆಗಮಿಸಿ ಅನಂತ ವರಗಳನ್ನು ನೀಡಿದರೆ, ಆ ಮನುಷ್ಯ ತನಗಾದ ಸಂತೋಷ ಸೌಭಾಗ್ಯಗಳನ್ನು ಹೇಗೆ ತಾನೆ ಹೇಳಿಕೊಳ್ಳಬಲ್ಲ? ಕೃತಜ್ಞತೆಯಿಂದ ತುಂಬಿತುಳುಕುವ ತನ್ನ ಹೃದಯವನ್ನು ಹೇಗೆ ತಾನೆ ನಿವೇದಿಸಬಲ್ಲ?"

—ಸಂತೋಷದಿಂದ ಗದ್ಗದಿತರಾಗಿ ನುಡಿದರು ಶ್ರೀಕಂಠಯ್ಯ. ಅವರ ಕಣ್ಣಾಲಿಗಳಲ್ಲಿ ಸಂಚಿತವಾಗಿದ್ದ ಆನಂದದ ಹನಿ ಕೆಳಗುರುಳಿದುದನ್ನು ಗೋಪಾಲಯ್ಯ ಗಮನಿಸಿದರು.

"ತುಂಬಾ ದೊಡ್ಡ ಮಾತನಾಡಿಬಿಟ್ಟಿರಿ!....ನಿಜವಾಗಿಯೂ ನಿಮ್ಮೊಡನೆ ಸಂಬಂಧ ಬೆಳೆಸುವ ನಾವು ತುಂಬಾ ಭಾಗ್ಯಶಾಲಿಗಳು."

"ಭಾಗ್ಯಶಾಲಿಗಳು ನಾವು! ವಿಶಾಲಹೃದಯವುಳ್ಳ ತಮ್ಮಂತಹ ದೊಡ್ಡವರಿಗೆ ನನ್ನಂತಹ ಸಣ್ಣವನ ಮಾತೂ ಸಹ ದೊಡ್ಡದಾಗಿಯೇ ತೋರುವುದು ಸಹಜ"

—ಎಂದರು ಶ್ರೀಕಂಠಯ್ಯ.

ಗೋವಿಂದಯ್ಯನವರಿಗಂತೂ, ತಾವು ಮನಸೋತ ಕನ್ಯೆಯೇ ತಮ್ಮ ಪತ್ನಿಯಾಗುತ್ತಾಳೆಂದು ಮಹದಾನಂದವಾಯಿತು.

ಅನಂತರ ಗೋಪಾಲಯ್ಯನವರ ಕೋರಿಕೆಯಂತೆ, ಆ ರಾತ್ರಿ ಶ್ರೀಕಂಠಯ್ಯನವರೂ ರಾಧಮ್ಮನೂ ಅಲ್ಲಿಯೇ ಊಟಮಾಡಿದರು.

ಅಂದಿಗೆ ಹದಿನೈದು ದಿನಗಳಿಗೆ ಸರಿಯಾಗಿ ರಾಧಮ್ಮ–ಗೋವಿಂದಯ್ಯನವರ ವಿವಾಹಸಮಾರಂಭ ನೆರವೇರಿತು.

ಗೋಪಾಲಯ್ಯನವರು ಕೊಟ್ಟಿದ್ದ ಹದಿನಾಲ್ಕು ಸಾವಿರ ರೂಪಾಯಿಗಳ ಚೆಕ್ಕನ್ನ ಶ್ರೀಕಂಠಯ್ಯ ಮದುವೆಯ ದಿನ ಗೋವಿಂದಯ್ಯನವರಿಗೆ ಓದಿಸಿದರು.

ಶುಭಸಮಾರಂಭಕ್ಕೆ ಬಂದಿದ್ದವರೆಲ್ಲಾ ರಾಧಾಮಾಧವರಂತೆ ಕಂಗೊಳಿಸುತ್ತಿದ್ದ ವಧೂವರರನ್ನು ಕಂಡು ಆನಂದಿಸಿ, ಗೋಪಾಲಯ್ಯನವರ ಔದಾರ್ಯವನ್ನೂ ಶ್ರೀಕಂಠಯ್ಯನವರ ಭಾಗ್ಯವನ್ನೂ ಕೊಂಡಾಡುತ್ತಾ ಹಿಂತಿರುಗಿದರು.

ಕಾಲಕ್ರಮದಲ್ಲಿ 'ಬೃಂದಾವನ'ದ ನಿರ್ಮಾಣ ಪೂರ್ತಿಯಾಯಿತು.

ಪ್ರವೇಶೋತ್ಸವದಂದು ಗೋಪಾಲಯ್ಯನವರೊಡನೆ ಹೋಗಿದ್ದ

ಗೋವಿಂದಯ್ಯ – ರಾಧಮ್ಮ ಮನದಣಿಯೆ ವನವಿಹಾರದಲ್ಲಿ ಮಗ್ನರಾಗಿ 'ರಾಧಾ–ಕೃಷ್ಣ'ರಂತೆ ನಲಿದಾಡಿದರು.

ಅಂದಿನಿಂದ ಪ್ರತಿ ಭಾನುವಾರವೂ ಅವರು ಬೃಂದಾವನಕ್ಕೆ ಹೋಗಿಬರುತ್ತಿದ್ದರು.

ಆ ವರ್ಷ ಗೋಪಾಲಯ್ಯನವರಿಗೆ ರಾಜಮನ್ನಣೆ ದೊರೆಯಿತು.

ಮರುವರ್ಷ ಆತ ಸ್ವರ್ಗಸ್ಥರಾದರು.

ಅನಂತರ ಗೋವಿಂದಯ್ಯ ಸಯ್ಯಾಜಿರಾವ್ ರಸ್ತೆಯಲ್ಲಿ ಭಾರಿ ಔಷಧಿ ಅಂಗಡಿಯೊಂದನ್ನು ತೆರೆದು ವ್ಯಾಪಾರ ಆರಂಭಿಸಿದರು.

ಎಷ್ಟೇ ಕೆಲಸಗಳಿದ್ದರೂ ಅವರು ಭಾನುವಾರದಂದು ರಾಧಮ್ಮನವರೊಡನೆ ಬೃಂದಾವನಕ್ಕೆ ಹೋಗಿಬರದೆ ಇರುತ್ತಿರಲಿಲ್ಲ.

ಮದುವೆಯಾದ ಮೂರು ವರ್ಷಗಳ ನಂತರ ಸರೋಜ ಹುಟ್ಟಿದಳು.

ಅದೇ ವರ್ಷವೇ ಗೋವಿಂದಯ್ಯನವರ ತಾಯಿ ತೀರಿಕೊಂಡರು.

ಎರಡು ವರ್ಷಗಳ ಬಳಿಕ ರಾಧಮ್ಮ ಒಂದು ಗಂಡುಮಗುವನ್ನು ಹೆತ್ತರು. ಆ ಮಗುವಿಗೆ ವರ್ಷ ತುಂಬಿ, ಅದರ ಹುಟ್ಟುಹಬ್ಬವನ್ನು ಆಚರಿಸಿದ ಮರುದಿನ–ಭಾನುವಾರವೇ – ಗೋವಿಂದಯ್ಯನವರೂ ರಾಧಮ್ಮನೂ ಬೃಂದಾವನಕ್ಕೆ ಹೋದರು. ವನವಿಹಾರ ಮುಗಿಸಿ ಹಿಂದಿರುಗುತ್ತಿದ್ದಂತೆಯೇ, ಸಾಗರದ ಕಟ್ಟೆಯ ಮೇಲೆ, ರಾಧಮ್ಮ ಇದ್ದಕ್ಕಿದ್ದಂತೆ ಕುಸಿದುಬಿದ್ದರು. ವಿಚಿತ್ರವಾದ ಧ್ವನಿಯಲ್ಲಿ ನರಳುತ್ತಾ ಏಳಲಾರದೆ ಬಿದ್ದಿದ್ದ ಆಕೆಯನ್ನು ಗೋವಿಂದಯ್ಯ ಎತ್ತಿಕೊಂಡು ಕಾರಿನಲ್ಲಿ ಮಲಗಿಸಿ, ಭರದಿಂದ ಮೈಸೂರಿಗೆ ಬಂದರು. ರಾಧಮ್ಮ ಚೇತರಿಸಿಕೊಳ್ಳಲಿಲ್ಲ.

ಗೋವಿಂದಯ್ಯ ತಜ್ಞರಾದ ಡಾಕ್ಟರುಗಳನ್ನು ಕರೆತಂದರು. ರಾಧಮ್ಮ ಪಾರ್ಶ್ವವಾಯುವಿನಿಂದ ನರಳುತ್ತಿದ್ದಾರೆಂಬುದು ಸ್ಪಷ್ಟವಾಯಿತು. ಸಾಧ್ಯವಾದಷ್ಟು ಔಷಧೋಪಚಾರಗಳನ್ನು ಆಕೆಗೆ ಸಲ್ಲಿಸಿದ್ದಾಯಿತು. ಆದರೆ ಮರುದಿನದ ಸೂರ್ಯೋದಯವನ್ನು ನೋಡುವ ಭಾಗ್ಯ ಆಕೆಗಿರಲಿಲ್ಲ. ಬೆಳಗಿನ ಝಾವ ನಾಲ್ಕು ಗಂಟೆಗೇ ಆಕೆ ಭವಬಂಧನದಿಂದ ಮುಕ್ತರಾದರು.

ಸಂಗಾತಿಯನ್ನು ಕಳೆದುಕೊಂಡ ಗೋವಿಂದಯ್ಯ ಜಗತ್ತಿನಲ್ಲಿ ಏಕಾಂಗಿಯಾದರು.

ಮಿತ್ರರು ಎರಡನೆಯ ಮದುವೆಗೆ ಅವರನ್ನು ಒಪ್ಪಿಸಲು ಪಟ್ಟ ಪ್ರಯತ್ನ ವಿಫಲವಾಯಿತು.

ಮೂರು ವರ್ಷದ ಸರೋಜ ಒಂದು ವರ್ಷ ವಯಸ್ಸಿನ ರಾಮಚಂದ್ರ ಅವರ ಕಣ್ಣಿನ ಮಣಿಗಳಾದರು. ಅವರಿಬ್ಬರ ಲಾಲನೆ ಪೋಷಣೆಗಳಲ್ಲಿಯೇ ಗೋವಿಂದಯ್ಯ ತಮ್ಮ ಆಯುಷ್ಯವನ್ನು ಕಳೆಯಲು ನಿಶ್ಚಯಿಸಿದರು. ಅಂದಿನಿಂದ ಅವರು ಬೃಂದಾವನಕ್ಕೆ ಹೋದುದೇ ಇಲ್ಲ. ರಾಧಮ್ಮನೊಡನೆ ಹೋಗಿ ಬಂದುದೇ ಬೃಂದಾವನಕ್ಕೆ ಅವರ ಕೊನೆಯ ಸಂದರ್ಶನ !

ಬೃಂಧಾವನದ ಮಾತು ಬಂದಾಗಲೆಲ್ಲ ಗೋವಿಂದಯ್ಯನವರಿಗೆ ರಾಧಮ್ಮನ ನೆನಪಾಗುತ್ತಿತ್ತು. ಆಕೆಯನ್ನು ಮೊದಲಬಾರಿಗೆ ಅಲ್ಲಿ ಕಂಡುದು, ಅನಂತರ ಆಕೆಯೊಡನೆ ಮದುವೆಯಾಗಿ ಇಬ್ಬರೂ ಪ್ರತಿ ಭಾನುವಾರ ಮನ ದಣಿಯೆ ಅಲ್ಲಿ ವಿಹರಿಸಿದುದು, ರಾಧಮ್ಮನ ಬಾಳಿನ ಕೊನೆಯ ಭಾನುವಾರ ಆಕೆ ಕುಸಿದುಬಿದ್ದುದು, ಅನಂತರ ಆಕೆಯ ಅಂತ್ಯ – ಗೋವಿಂದಯ್ಯನವರ ಕಣ್ಮುಂದೆ ನಿಚ್ಚಳವಾಗಿ ಸುಳಿಯುತ್ತಿತ್ತು. ಬೃಂದಾವನಕ್ಕೆ ಹೋಗೋಣವೆಂದು ಯಾರಾದರೂ ಬಲವಂತಮಾಡಿದಾಗ, 'ರಾಧೆಯಿಲ್ಲದ ಬೃಂದಾವನ ಕೃಷ್ಣನ ಪಾಲಿಗೆ ಶೂನ್ಯ' ಎಂಬ ಕವಿಯ ವಾಣಿ ಗೋವಿಂದಯ್ಯನವರಿಗೆ ಸತ್ಯವಾಗಿ ಕಾಣುತ್ತಿತ್ತು. ಎಂತಲೇ ಏನಾದರೊಂದು ನೆಪ ಹೇಳಿ ಬೃಂದಾವನ ಸಂದರ್ಶನಕ್ಕೆ ಅವರು ತಪ್ಪಿಸಿಕೊಳ್ಳುತ್ತಿದ್ದರು.

ಆದರೆ, ಈಗ ಶಾಮು ಆಹ್ವಾನಿಸುತ್ತಿದ್ದಾನೆ. ಹೋಗುವುದೇ–ಬೇಡವೆ ?

ಗೋವಿಂದಯ್ಯ ಎರಡುಕ್ಷಣ ಯೋಚಿಸಿದರು. ಅಷ್ಟರಲ್ಲಾಗಲೇ ಅವರ ಹೃದಯ ಭಾರವಾಗಿತ್ತು. ಯೋಚನಾಲಹರಿಯನ್ನು ಹಾಗೆಯೇ ಹರಿಯಬಿಟ್ಟರೆ ಕಣ್ಣೀರು ತಾನಾಗಿಯೇ ಹರಿಯುವುದೆಂದು ಅವರು ಬಲ್ಲರು. ಎಂತಲೇ ಶಾಮುವಿನ ಕಡೆಗೆ ತಿರುಗಿ ದೈನ್ಯದ ದನಿಯಲ್ಲಿ ಹೇಳಿದರು—

"ಇಲ್ಲ ಶಾಮು. ಇವತ್ತು ನೀವೆಲ್ಲಾ ಹೋಗಿಬನ್ನಿ. ಕಾಶಿಯಿಂದ ನನ್ನ ಸ್ನೇಹಿತರು ಬಂದಿದ್ದಾರೆ. ನನ್ನನ್ನು ಹುಡುಕಿಕೊಂಡು ಅವರು ಇಲ್ಲಿಗೆ ಬಂದರೂ ಬರಬಹುದು. ನಾನು ಮನೆಯಲ್ಲಿಯೇ ಇರುತ್ತೇನೆ."

ಶಾಮುವಿಗೆ ಅವರ ಮಾತು ತುಸು ಅಸಮಾಧಾನವನ್ನೇ ಉಂಟುಮಾಡಿತು.

ಹಿಂದೊಮ್ಮೆ ತಂದೆಯ ಬಾಯಿಂದಲೇ ಬೃಂದಾವನದ ವಿಷಾದ ಘಟನೆಯನ್ನು ಅರಿತಿದ್ದ ಸರೋಜ—

" ಅಪ್ಪ ಮನೆಯಲ್ಲಿರುವುದೇ ಒಳ್ಳೆಯದು. ಅವರ ಕಾಶಿಯ ಸ್ನೇಹಿತರು ಇಲ್ಲಿಗೆ ಬಂದು ನಿರಾಶರಾಗುವುದು ಬೇಡ. ಬನ್ನಿ ನಾವು ಹೋಗೋಣ " ಎಂದಳು.

ಶಾಮು ಮುಂದೇನೂ ಮಾತನಾಡಲಾಗದೆ ಸರೋಜೆಯೊಡನೆ ಹೊರಟ.

ಕಾರಿನ ಬಳಿಗೆ ಬಂದಾಗ ವಿಸಾರಾ—

" ಅಕ್ಕಾ, ನಾನು ಮುಂದುಗಡೆ ಕೂತುಕೊಳ್ಳುತ್ತೇನೆ. ನೀನು ಕಾರು ಬಿಡುವುದನ್ನು ನಾನೂ ಕಲಿತುಕೊಳ್ಳಬೇಕು "

—ಎನ್ನುತ್ತಾ ಮುಂಭಾಗದ ಸೀಟಿನಲ್ಲಿ ಚಿಮ್ಮಿ ಕುಳಿತಳು.

ಅವಳ ಉತ್ಸಾಹವನ್ನು ಕಂಡು, ' ರೋಗಿ ಬಯಸಿದ್ದು ಹಾಲು-ಅನ್ನ; ವೈದ್ಯ ಹೇಳಿದ್ದೂ ಅದೇ ' ಎನ್ನುವಂತಾಯಿತು ಶಾಮುವಿಗೆ. ಆದರೂ ಸಂಕೋಚದಿಂದ ಆತ—

" ನೀನು ನಿಮ್ಮಕ್ಕನ ಜೊತೆಯಲ್ಲಿ ಹಿಂದುಗಡೆ ಕುಳಿತುಕೋಮ್ಮ. ನಾನು ಇಲ್ಲಿ ಕೂತುಕೊಳ್ಳುತ್ತೇನೆ "

—ಎಂದ ವಿಸಾರೆಯ ಕಡೆಗೆ ನೋಡುತ್ತಾ.

" ವುಹ್ಞುಂ. ನೀವೇ ಬೇಕಾದರೆ ನಮ್ಮಕ್ಕನ ಜೊತೆಯಲ್ಲಿ ಕೂತುಕೊಳ್ಳಿ. ನಾನು ಇಲ್ಲೇ ಕೂತುಕೊಳ್ಳುತ್ತೇನೆ "

—ಎಂದಳು ವಿಸಾರಾ ಹಸಿದ ಧ್ವನಿಯಲ್ಲಿ.

ಅವಳ ಮಾತು ಕೇಳಿ—

—ಸರೋಜ ಘೊಳ್ಳನೆ ನಕ್ಕಳು.

—ಗಿರಿಜೆಯ ಮುಖ ನಾಚಿಕೆಯಿಂದ ಕೆಂಪೇರಿತು.

—ಶಾಮು ತಬ್ಬಿಬ್ಬಾಗಿದ್ದ.

—ಜಾನಕಮ್ಮ ಮತ್ತು ಜಯರಾಯರು ತುಂಬಿದ ಹೃದಯದಿಂದ ತುಳುಕುತ್ತಿದ್ದ ಆನಂದವನ್ನು ತೃಪ್ತದೃಷ್ಟಿಯಲ್ಲಿ ಹೊರಸೂಸಿದರು.

—ಗೋವಿಂದಯ್ಯ ವೇದಾಂತಿಯಂತೆ ನಕ್ಕರು.

" ಹ್ಞುಂ, ಹೊತ್ತಾಯಿತು. ಬೇಗ ಹತ್ತಿರಿ. ಹೊರಡೋಣ "

—ಎಂದು ಕಾರಿನ ಹಿಂಭಾಗದ ಬಾಗಿಲು ತೆರೆದಳು ಸರೋಜ.

ಮೊದಲು ಗಿರಿಜ ಹತ್ತಿದಳು. ಅನಂತರ ಶಾಮು ಹತ್ತಿ ಕುಳಿತು ಬಾಗಿಲು ಹಾಕಿದ.

ಸರೋಜ ಮುಂದುಗಡೆ ಹತ್ತಿ ಕುಳಿತು ಕಾರು ನಡಿಸತೊಡಗಿದಳು.

ಸಂಧ್ಯಾರಾಣಿಯ ಸೌಂದರ್ಯಗಂಗೆಯಲ್ಲಿ ಮಿಂದು ಚೆಂದದಿಂದ ಸಿಂಗರಿಸಿಕೊಂಡು ನಿಂತಿದ್ದ ಬೃಂದಾವನ ನಾಲ್ವರನ್ನೂ ಸ್ವಾಗತಿಸಿತು.

ಕಾರು ನಿಲ್ಲಿಸಿ ಸರೋಜ ತನ್ನ ಪರಿವಾರದೊಡನೆ ಕಣ್ಮನ ತಣಿಸುವ ಬಣ್ಣದ ಬೆಳಕಿನ ವನರಮಣಿಯ ರಾಜ್ಯವನ್ನು ಪ್ರವೇಶಿಸಿದಳು.

ಶಾಮು ಪುಟ್ಟ ಜಲಪಾತದ ಬಳಿ ನಿಂತು ರಾಧಾಕೃಷ್ಣರ ಪ್ರತಿಮೆಯನ್ನು ನೋಡುವುದರಲ್ಲಿಯೇ ಮೈಮರೆತ.

"ಕವಿಗಳು ಭಾವನಾಪ್ರಪಂಚದಲ್ಲಿ ತನ್ಮಯರಾದ ಹಾಗೆ ಇರುವುದಲ್ಲಾ"

—ಎಂದು ಸರೋಜ ಹೇಳಿದಾಗಲೇ ಶಾಮುವಿಗೆ ಎಚ್ಚರಿಕೆ.

ಬಣ್ಣದ ಕಾರಂಜಿಗಳನ್ನು ಕಣ್ದಣಿಯ ನೋಡುತ್ತಾ, ಝುಳಝುಳ ಹರಿಯುವ ಕಿರುದೊರೆಗಳನ್ನು ಕಂಡು ಆನಂದಿಸುತ್ತಾ ನಾಲ್ವರೂ ಹುಲ್ಲು ಹಸುರಿನ ನಡುವೆ ನಡೆದರು.

ಚಿಲುಮೆಗಳ ನಡುನಡುವೆ ಚಿಗುರೆಯಂತೆ ಚಿಮ್ಮುತ್ತಾ ಮೀರಾ ಮಹಾರಾಜರ ವಿಗ್ರಹವಿರುವ ಮಂಟಪದ ಕಡೆಗೆ ಓಡಿದಳು.

"ನೀವಿಬ್ಬರೂ ನಿಧಾನವಾಗಿ ಸುತ್ತಾಡಿಕೊಂಡು ಬನ್ನಿ. ನಾನೂ ಮೀರಾ ಮಂಟಪದ ಹತ್ತಿರ ಸ್ವಲ್ಪ ಹೊತ್ತು ಕುಳಿತುಕೊಳ್ಳುತ್ತೇವೆ"

—ಎಂದು ಉದ್ದೇಶಪೂರ್ವಕವಾಗಿಯೇ ನುಡಿಯುತ್ತಾ ಶಾಮು-ಗಿರಿಜೆಯರನ್ನು ಬಿಟ್ಟು ಮೀರಾಳನ್ನು ಹಿಂಬಾಲಿಸಿದಳು ಸರೋಜ.

ಆ ಸನ್ನಿವೇಶವನ್ನು ಕಂಡು ನಾಚಿಕೆ-ಸಂಕೋಚಗಳಿಂದ ನಲುಗಿ ಹೋದಳು ಗಿರಿಜ!

ಕಾರಂಜಿಗಳ ನಡುವಿನ ಇಕ್ಕಟ್ಟಾದ ಹಾದಿಯಲ್ಲಿ ಅವರಿಬ್ಬರೂ ನಡೆಯುವಾಗ, ಪರಸ್ಪರ ಮೈಸೋಕಿ, ಇಬ್ಬರಿಗೂ ರೋಮಾಂಚನವಾದಂತಾಯಿತು.

ಮೌನವಾಗಿ ನಾಲ್ಕು ಹೆಜ್ಜೆ ನಡೆದ ಬಳಿಕ—

" ರಾಧ-ಕೃಷ್ಣರು ನಲಿದಾಡಿದ ಬೃಂದಾವನ ಇದಕ್ಕಿಂತಲೂ ಸುಂದರ ವಾಗಿರಲಾರದು ಅಲ್ಲವೇ ಗಿರಿಜಾ ? "

—ಎಂದ ಅವಳ ಮುಖವನ್ನು ನೋಡುತ್ತಾ ಶಾಮು.

ಆದರೆ ಗಿರಿಜ ಮರುನುಡಿಯದೆ, ದೃಷ್ಟಿಯನ್ನು ತನ್ನ ಹೆಜ್ಜೆಯ ಮೇಲೆ ಕೀಲಿಸಿ ಮುಂದೆ ನಡೆಯುತ್ತಿದ್ದಳು.

ಅವಳು ಅರಸಿಕಳಲ್ಲವೆಂಬುದನ್ನು ಪ್ರಥಮ ಸಂದರ್ಶನದಲ್ಲಿಯೇ ಶಾಮು ಅರಿತಿದ್ದ. ಆದರೆ, ಈಗ ತನ್ನ ಮಾತಿಗೆ ಆಕೆ ಯಾವ ಪ್ರತಿಕ್ರಿಯೆಯನ್ನೂ ತೋರದೆ, ನಿರಾಸಕ್ತಿಯನ್ನು ತಳೆದಿದ್ದಾಳೇಕೆ ?—ಎಂಬ ಪ್ರಶ್ನೆ ಅವನ ಮನವನದಲ್ಲಿ ಮೊಳೆಯಿತು.

" ಏಕೆ ಗಿರಿಜಾ, ನನ್ನೊಡನೆ ಮಾತನಾಡಲು ಬೇಸರವೇ ? "

' ಇಲ್ಲ 'ವೆಂಬಂತೆ ಆಕೆ ತಲೆಯಾಡಿಸಿದಾಗಲೇ ಶಾಮುವಿಗೆ ಸ್ವಲ್ಪ ನೆಮ್ಮದಿಯಾಯಿತು.

ಮತ್ತೆ ಎರಡು ಕ್ಷಣಗಳ ಮೌನವಾದ ನಡಿಗೆಯ ನಂತರ—

" ಹೀಗೆ ಬಾ ಗಿರಿಜಾ, ಆ ನದಿಯ ದಂಡೆಗೆ ಹೋಗಿಬರೋಣ "

—ಎಂದ ಶಾಮು.

ಇಬ್ಬರೂ ತುರಾಯಿ ಹೂವಿನ ಮರಗಳ ಸಾಲುದಾರಿಯಲ್ಲಿ ಇಳಿದು ನದಿಯ ದಂಡೆಯತ್ತ ನಡೆದರು. ಅನಾಯಾಸವಾಗಿ ಹಾಗೂ ಅನಿರೀಕ್ಷಿತವಾಗಿ ದೊರೆತ ರಸಮಯ ಸಮಯವನ್ನು ಸರಸಸಲ್ಲಾಪಗಳಲ್ಲಿ ಕಳೆಯದೆ ಮೂಕ ಯಂತ್ರಗಳಂತೆ ಸುಮ್ಮನೆ ಮುನ್ನಡೆಯುವುದು ಶಾಮುವಿಗೆ ಸಹಿಸಲಿಲ್ಲ. ಗಿರಿಜೆಯ ಬಾಯಿ ಬಿಡಿಸಲು ನಾಲ್ಕಾರು ಬಾರಿ ಪ್ರಯತ್ನಿಸಿದರೂ ಸಾಧ್ಯ ವಾಗದಿದ್ದಾಗ ಅವನಿಗೆ ತುಸು ಬೇಸರವೇ ಆಯಿತು.

ನದಿ-ಕಾರಂಜಿಗಳ ನಡುವಿನ ದಿಬ್ಬದಲ್ಲಿದ್ದ ಮರದ ಕೆಳಗೆ ಹುಲ್ಲು ಹಸುರಿನ ಮೇಲೆ ಇಬ್ಬರೂ ಕುಳಿತರು.

" ಇಲ್ಲಿಗೆ ನಾವಿಬ್ಬರು ಮಾತ್ರವೇ ಏಕೆ ಬಂದೆವೋ ಕಾಣೆ. ಸರೋಜ-ಮಾರಿಯರೂ ಜೊತೆಯಲ್ಲಿದ್ದಿದ್ದರೆ ಚೆನ್ನಾಗಿತ್ತು. ಹೊತ್ತು ಹೋಗುವುದೇ ಗೊತ್ತಾಗುತ್ತಿರಲಿಲ್ಲ "

—ಎಂದ ಶಾಮು.

ಇದೇ ರೀತಿ, ಗಿರಿಜೆಯು ತನ್ನ ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿರ ಬಹುದೇನೋ ಎಂದು ಊಹಿಸಿ ಅವನು ಆ ಮಾತನ್ನಾಡಿದ್ದ.

ಆ ನುಡಿ, ಹೂಬಾಣ ಸರಿಯಾಗಿಯೇ ಗುರಿತಾಗಿತ್ತು.

ಮುಖದಲ್ಲಿ ಮುನಿಸು ತುಂಬಿ, ಅದು ಹುಸಿಯೆಂದು ಮುಸಿನಕ್ಕು ಶಾಮುವಿನ ಕಡೆಗೊಮ್ಮೆ ನೋಡಿದಳು ಗಿರಿಜ.

ಕೂಡಲೇ ಶಾಮು ಜಯದೇವನ 'ಗೀತಗೋವಿಂದ'ದ ಕೆಲ ಅಷ್ಟಪದಿ ಗಳನ್ನು ಕಿರುದನಿಯಲ್ಲಿ ಹಾಡತೊಡಗಿದ—

ವದಸಿ ಯದಿ ಕಿಂಚಿದಪಿ ದಂತರುಚಿಕೌಮುದೀ
ಹರತಿ ದರತಿಮಿರಮತಿಘೋರಂ
ಸ್ಫುರದಧರಸೀಧವೇ ತವ ವದನಚಂದ್ರಮಾ
ರೋಚಯತು ಲೋಚನ ಚಕೋರಂ
ಪ್ರಿಯೇ! ಚಾರುಶೀಲೇ! ಪ್ರಿಯೇ! ಚಾರುಶೀಲೇ
ಮುಂಚ ಮಯಿ ಮಾನಮನಿಧಾನಂ
ಸಪದಿ ಮದನಾನಲೋ ದಹತಿ ಮಮ ಮಾನಸಂ
ದೇಹಿ ಮುಖಕಮಲ ಮಧುಪಾನಂ ॥ ೧ ॥

ತ್ವಮಸಿ ಮಮ ಭೂಷಣಂ ತ್ವಮಸಿ ಮಮ ಜೀವನಂ
ತ್ವಮಸಿ ಮಮ ಭವಜಲಧಿರತ್ನಂ
ಭವತು ಭವತೀಹ ಮಯಿ ಸತತ ಮನುರೋಧಿನೀ
ತತ್ರ ಮಮ ಹೃದಯಮತಿ ಯತ್ನಂ
ಪ್ರಿಯೇ !....ದೇಹಿ ಮುಖಕಮಲಮಧುಪಾನಂ ॥ ೨ ॥

ಕಿಸಲಯಶಯನತಲೇ ಕುರು ಕಾಮಿನಿ ! ಚರಣನಳಿನ ವಿನಿವೇಶಂ
ತವ ಪದಪಲ್ಲವ ವೈರಿ ಪರಾಭವಮಿದಮನುಭವತು ಸುವೇಶಂ
ಕ್ಷಣಮಧುನಾ ನಾರಾಯಣಂ
ಅನುಗತಮನುಸರ ರಾಧೇ ॥ ॥ ೩ ॥

ಕರಕಮಲೇನ ಕರೋಮಿ ಚರಣಮಹಮಾಗಮಿತಾಸಿ ವಿದೂರಂ
ಕ್ಷಣಮುಪಕುರುಶಯನೋಪರಿಮಾಮಿವ ನೂಪುರಮನುಗತಿಶೂರಂ

ಕ್ಷಣಮಧುನಾ ನಾರಾಯಣಂ
ಅನುಗತ ಮನುಸರ ರಾಧೇ || || ೪ ||

ವದನಸುಧಾನಿಧಿಗಳಿತಮಮೃತಮಿವ ರಚಯ ವಚನಮನುಕೂಲಂ
ವಿರಹಮಿವಾಪನಯಾಮಿ ಪಯೋಧರರೋಧಕ ಮುರಸಿದುಕೂಲಂ
ಕ್ಷಣಮಧುನಾ ನಾರಾಯಣಂ
ಅನುಗತ ಮನುಸರ ರಾಧೇ || || ೫ ||

ಅಧರ ಸುಧಾರಸ ಮುಪನಯ ಭಾಮಿನಿ! ಜೀವಯ ಮೃತಮಿವದಾಸಂ
ತ್ವಯಿ ವಿನಿಹಿತಮನಸಂ ವಿರಹಾನಲದಗ್ಧವಪುಷಮವಿಲಾಸಂ
ಕ್ಷಣಮಧುನಾ ನಾರಾಯಣಂ
ಅನುಗತ ಮನುಸರ ರಾಧೇ || || ೬ ||

ಶಶಿಮುಖಿ ! ಮುಖರಯ ಮಣಿರಶನಾಗುಣಮನುಗುಣ
ಕಂಠನಿನಾದಂ
ಶ್ರುತಿಯುಗಳೇ ಪಿಕರುತವಿಕಲೇ ಮಮಶಮಯ ಚಿರಾದವಸಾದಂ
ಕ್ಷಣಮಧುನಾ ನಾರಾಯಣಂ
ಅನುಗತ ಮನುಸರ ರಾಧೇ || || ೭ ||

ಗಿರಿಜ ತಲೆತಗ್ಗಿಸಿ ಕುಳಿತಿದ್ದರೂ, ಓರೆಗಣ್ಣಿನಿಂದ ಶಾಮುವಿನ ಕಡೆಗೆ ನೋಡುತ್ತಾ ಅವನು ಹೇಳುತ್ತಿರುವುದನ್ನು ಮೈಯೆಲ್ಲಾ ಕಿವಿಯಾಗಿ ಮಾಡಿ ಆಲಿಸುತ್ತಾ, ತನ್ನ - ತುಟಿತೋಟದಲ್ಲಿ ಮಂದಹಾಸದ ಮಂದಾರಕುಸುಮವನ್ನರಳಿಸಿದ್ದಳು.

ಶಾಮು ಮತ್ತೊಮ್ಮೆ—

" ಕ್ಷಣಮಧುನಾ ನಾರಾಯಣಂ
ಅನುಗತ ಮನುಸರ ರಾಧೇ....ರಾಧೇ....ರಾಧೇ...."

—ಎಂದಾಗ, ಪ್ರಸನ್ನಳಾದ ದೇವಿ ವರವೀಯಲು ಪ್ರತ್ಯಕ್ಷಳಾಗಿ ಬಂದಂತೆ ಸ್ಫೂರ್ತಿಗೊಂಡ ಗಿರಿಜ ತನ್ನ ಮಧುರವಾದ ಕಂಠದಲ್ಲಿ, ಕೇಳಿಸಿತೋ- ಕೇಳಿಸಲಿಲ್ಲವೋ ಎನ್ನುವಷ್ಟು ಮೆಲ್ಲನೆ ಹಾಡತೊಡಗಿದಳು—

ಕುರು ಯದುನಂದನ! ಚಂದನ ಶಶಿಕ ತರೇಣ ಕರೇಣ ಪಯೋಧರೇ
ಮೃಗಮದ ಪತ್ರಕಮತ್ರ ಮನೋಭವ ಮಂಗಳ ಕಲಶಸಹೋದರೇ
ನಿಜಗಾದ ಸಾ ಯದುನಂದನೇ
ಕ್ರೀಡತಿ ಹೃದಯಾ ನಂದನೇ ||

ಅಳಿಕುಲಗಂಜನ ಮಂಜನಕಂ ರತಿನಾಯಕ ಸಾಯಕ ಮೋಚನೆ
ತ್ವದಧರ ಚುಂಬನಲಂಬಿತ ಕಜ್ಜಲಮುಜ್ವಲಪ್ರಿಯ ಲೋಚನೆ
ನಿಜಗಾದ...........ಹೃದಯಾನಂದನೇ ||

ನಯನ ಕುರಂಗ ತರಂಗ ವಿಕಾಸ ನಿರಾಸಕರೇ ಶ್ರುತಿಮಂಡಲೇ
ಮನಸಿಜ ಪಾಶ ವಿಲಾಸಧರೆ ಶುಭವೇಶ ನಿವೇಶಯ ಕುಂಡಲೇ
ನಿಜಗಾದ...........ಹೃದಯಾನಂದನೇ ||

ಭ್ರಮರ ಚಯಂ ರಚಯಂತಮುಪರಿರುಚಿರಂ ಸುಚಿರಂ ಮಮ
ಸಮ್ಮುಖೇ
ಜಿತಕಮಲೇ ವಿಮಲೇ ಪರಿಕರ್ಮಯ ನರ್ಮಜನಕಮಲಕಂ ಮುಖೇ
ನಿಜಗಾದ...........ಹೃದಯಾನಂದನೇ ||

ಮೃಗಮದರಸವಲಿತಂ ಲಲಿತಂ ಕುರು ತಿಲಕ ಮಳಿಕರಜನೀಕರೇ
ವಿಹಿತ ಕಳಂಕಕಳಂ ಕಮಲಾನನ ವಿಶ್ರಮಿತ ಶ್ರಮಶೀಕರೇ
ನಿಜಗಾದ ಸಾ ಯದುನಂದನೇ
ಕ್ರೀಡತಿ ಹೃದಯಾನಂದನೇ....||

—ಎಂದು ಗಿರಿಜ 'ಗೀತಗೋವಿಂದ'ದ ಮುಕ್ತಾಯಭಾಗದ ಶ್ಲೋಕಗಳನ್ನು ಹೇಳಿದಾಗ ಶಾಮು ವಿಸ್ಮಿತನಾದ.

" ಭಲೆ, ಜಯದೇವ ಕವಿ ಧನ್ಯನಾದ ಗಿರಿಜಾ "

" ಏಕೆ ? "

—ಮೆಲ್ಲನೆ ಕೇಳಿದಳು ಗಿರಿಜ.

" ಅವನ ಕಾವ್ಯವೆಲ್ಲಾ ನಿನ್ನ ಬಾಯಲ್ಲೇ ಇರುವಹಾಗಿದೆಯಲ್ಲಾ ! "

" ಆದರೆ ನೀವು ಮಾತ್ರ ಅದನ್ನು ನಿಮ್ಮ ಹೃದಯದಲ್ಲೇ ತುಂಬಿಟ್ಟುಕೊಂಡಿದ್ದೀರಿ ! "

" ನಾನು ಅವನ ಕಾವ್ಯದ 'ಸಾಹಿತ್ಯಭಾಗ'ವನ್ನು ಮಾತ್ರ ತಿಳಿದವನು."

" ನನಗೆ ಅದೂ ಸರಿಯಾಗಿ ತಿಳಿಯದು."

" ಹಾಗೆ ಹೇಳುವುದು ನಿನ್ನ ವಿನಯದ ಕುರುಹು. ಜಯದೇವನ ಕಾವ್ಯವನ್ನೂ ಅದರೊಡನೆ ಮಿಲನವಾದ ಸಂಗೀತವನ್ನೂ ನೀನು ಸೊಗಸಾಗಿ ಹೃದ್ಗತಮಾಡಿಕೊಂಡಿದ್ದೀಯೆ."

" ಚಿಕ್ಕವಳನ್ನು ಸುಮ್ಮನೆ ಹೊಗಳಬೇಡಿ "

" ಇನ್ನೇನು ಮಾಡಬೇಕೆನ್ನುವೆ ? "

—ಎನ್ನುತ್ತಾ ಶಾಮು ಅವಳ ಭುಜದ ಮೇಲೆ ಕೈಯಿಟ್ಟ.

ಗಿರಿಜ ನಾಚಿಕೆಯ ಕಣ್ಣಲ್ಲಿ ಶಾಮುವಿನ ಕಡೆಗೆ ನೋಡಿದಳು.

" ಎಂದೆಂದಿಗೂ ಕೃಷ್ಣನು ರಾಧೆಯನ್ನು ಅಗಲದೆ, ಆಕೆಯನ್ನು ವಿರಹಿಯನ್ನಾಗಿ ಮಾಡದೆ ಇದ್ದರೆ ಅಷ್ಟೇ ಸಾಕು. ಅದೇ ನನಗೆ ಪರಮಾನಂದ ! "

" ವಿರಹ ರಾಧೆಗೆ ಮಾತ್ರವಲ್ಲ, ಕೃಷ್ಣನಿಗೂ ಇದೆ. ಪರಸ್ಪರ ಅಗಲಿರಬೇಕಾದುದು ಇಬ್ಬರಿಗೂ ಅನಿವಾರ್ಯ."

" ಈಗ ಅಗಲಿದರೂ ಮತ್ತೆ ಕೂಡುವುದು ಸಾಧ್ಯವಿಲ್ಲವೆ ? "

" ಸಾಧ್ಯಾಸಾಧ್ಯತೆಯ ಪ್ರಶ್ನೆ ಭವಿಷ್ಯದ ಪರಿಸ್ಥಿತಿಯನ್ನವಲಂಬಿಸಿದೆ."

" ಭವಿಷ್ಯದ ಪರಿಸ್ಥಿತಿ ಆಶಾದಾಯಕವಾಗಿಲ್ಲವೇ ? "

" ಇಲ್ಲವೆಂದವರಾರು ? "

" ಹಾಗಾದರೆ ರಾಧೆಗೆ ಭರವಸೆ ಏನು ? "

" ಇದೋ........ಇದೇ........"

—ಎನ್ನುತ್ತಾ ಶಾಮು ಗಿರಿಜೆಯ ಕೆನ್ನೆಗೆ ತುಟಿಯ ಮುದ್ರೆಯಿಟ್ಟ.

ಆ ದೃಶ್ಯವನ್ನು ಯಾರಾದರೂ ನೋಡಿಬಿಟ್ಟರೇನೋ ಎಂದು ಗಾಬರಿಗೊಂಡ ಗಿರಿಜ ಸುತ್ತಲೂ ನೋಡಿದಳು. ಯಾರ ದೃಷ್ಟಿಯೂ ಬೀಳದಂತಹ ಮರದ ಮರೆಯಲ್ಲಿ ತಾವಿಬ್ಬರೂ ಕುಳಿತಿದ್ದೇವೆಂದು ತಿಳಿದಾಗ ಆಕೆಗೆ ನೆಮ್ಮದಿಯಾಯಿತು.

" ಈಗ ನಿನ್ನ ಭಯದ ಬಲೆ ಹರಿದುಹೋಯಿತೆ ಗಿರಿಜಾ ? "

" ಹ್ಞಾಂ. ಭರವಸೆಯ ಬೆಲೆತೆತ್ತು ಭಯದ ಬಲೆಯನ್ನು ಕೊಂಡು ತುಂಡುಮಾಡಿದಿರಲ್ಲಾ – ಇನ್ನೇನಿದೆ ? "

—ಉಕ್ಕಿದ ಆನಂದವನ್ನು ನಕ್ಕು ಸೂಸಿದಳು ಗಿರಿಜ.

ಎರಡು ಕ್ಷಣಗಳ ಮೌನದ ಬಳಿಕ ಶಾಮು ಭಾವುಕನಂತೆ ನುಡಿದ—

" ಗಿರಿಜ, ಈ ಬೃಂದಾವನ ನನಗೆ ಸ್ವರ್ಗಸಮಾನವಾಗಿದೆ."

" ನನಗಂತೂ ಇದು ದೈವಿಕವಾದ ಪ್ರದೇಶವಾಗಿ ಕಾಣುತ್ತಿದೆ. ನಾನು ರಾಧೆಯಾಗಿ, ನನ್ನ ಚಿನ್ನಕೃಷ್ಣನೊಡನೆ ನಿಷ್ಕಾಮ ಪ್ರೇಮದಿಂದ ಸರಸನರ್ತನ ಮಾಡೋಣವೆನ್ನಿಸುತ್ತಿದೆ "

—ಎಂದಳು ಗಿರಿಜ.

ಅವಳ ಕಲ್ಪನೆಯ ಕಣ್ಮುಂದೆ—

—ಶಾಮು ಯದುನಂದನನಂತೆ ಪೀತಾಂಬರವನ್ನುಟ್ಟು, ತಲೆಗೆ ಮಾಣಿಕ್ಯದ ಕಿರೀಟವನ್ನೂ, ಹಣೆಗೆ ಕಸ್ತೂರಿ ತಿಲಕವನ್ನೂ, ಕಿವಿಗಳಿಗೆ ಕಿರಣಾರುಣ ಕುಂಡಲಗಳನ್ನೂ, ಕೊರಳಿಗೆ ವೈಜಯಂತಿಹಾರವನ್ನೂ, ಭುಜಗಳಿಗೆ ನವರತ್ನ ಖಚಿತ ಕೇಯೂರಗಳನ್ನೂ, ಮುಂಗೈಗಳಿಗೆ ಮರಕತ ಕಂಕಣಗಳನ್ನೂ, ಕೈ ಬೆರಳುಗಳಿಗೆ ಸ್ವರ್ಣಮುದ್ರಿಕೆಗಳನ್ನೂ ಧರಿಸಿ, ಪೀತಾಂಬರದ ಮೇಲೆ ಕಟ್ಟಿರುವ ನಡುವಸ್ತ್ರಕ್ಕೆ ಕೊಳಲನ್ನು ಸಿಕ್ಕಿಸಿ, ಹಾಲಿನ ಹೊಳೆಯೇ ಹರಿಯುತ್ತಿರುವಂತೆ ನಗುತ್ತಾ ನಿಂತಿದ್ದ.

—ಗಿರಿಜ ಬಾಲಕೃಷ್ಣನ ಲೀಲಾಜಾಲಗಳನ್ನೂ, ಮುದ್ದು ಮೋಹನನ ಪ್ರಣಯ ವಿಲಾಸಗಳನ್ನೂ ಆಕರ್ಷಕವಾಗಿ ಚಿತ್ರಿಸಿದ ಸಪ್ತವರ್ಣದ ಹಗುರ ವಾದ ಸೀರೆಯನ್ನು ತನ್ನ ಸೊಂಟದವರೆಗೆ ಉಟ್ಟು, ಉಬ್ಬಿದ ಎದೆಯ ಭಾಗಕ್ಕೆ ಮಾತ್ರ ತೆಳುವಾದ ಶ್ವೇತವಸ್ತ್ರವನ್ನು ಬಂಧಿಸಿ, ನೀಲಿಗೆಂಪಿನ ಕಿರಿಯ ವಸ್ತ್ರ ವೊಂದನ್ನು ಉಡಿಗೆ ಸಿಕ್ಕಿಸಿ, ಅದನ್ನೇ ವಕ್ಷಭಾಗವನ್ನು ಮುಚ್ಚುವಂತೆ ಭುಜದ ವರೆಗೆ ಎಳೆದು, ಬಲಭುಜದ ಕಡೆಯಿಂದ ಬೆನ್ನು ಬಳಸಿ, ಅರದಲೆಯನ್ನು ಮುಚ್ಚಿ, ಸ್ವರ್ಣರೇಖೆಗಳಿಂದ ಯಮುನಾತೀರದ ಸಾಲು ವನಗಳಲ್ಲಿನ ಭೃಂಗ ಕುಸುಮ ವಿಲಾಸವನ್ನು ಮನೋಹರವಾಗಿ ಚಿತ್ರಿಸಿದ್ದ ವಸ್ತ್ರದ ತುದಿಯ ಭಾಗ ವನ್ನು ಎದೆಯ ಮೇಲೆ ಇಳಿಯಬಿಟ್ಟು, ಕೃಷ್ಣನಂತೆ ಕಂಗೊಳಿಸುತ್ತಿದ್ದ ಶಾಮು ವಿನ ಕೈಗಳೆರಡನ್ನೂ ಹಿಡಿದು, ಕಣ್ಣಲ್ಲಿ ಕಮನೀಯವಾದ ನೋಟವನ್ನು ಬೀರುತ್ತಾ ನರ್ತನದ ಭಂಗಿಯಲ್ಲಿ ನಿಂತು ರಾಧೆಯಾಗಿದ್ದಳು.

—ಸನಿಯದಲ್ಲೇ ಯಮುನೆಯು ಹರಿದೋಡಡುತ್ತಾ, ಪ್ರಣಯಿಗಳ ಸರಸನಾಟ್ಯಕ್ಕೆ ತನ್ನ ಮಂಜುಳಸ್ವರದಲ್ಲಿಯೇ ಮಂಗಳಮಯ ಸಂಗೀತವ ನ್ನೊದಗಿಸಿದ್ದಳು.

—ಪೂರ್ಣಕಲಾಚಂದ್ರನೂ, ನಕ್ಷತ್ರನಾರಿಯರೂ ನಕ್ಕು ನಲಿಯುತ್ತಾ ನಭೋನೀಲಮಂದಿರದಲ್ಲಿ ನಿಂತು ನಿಷ್ಕಾಮಪ್ರೇಮಿಗಳ ನರ್ತನ ಪ್ರಾರಂಭ ವಾಗುವುದನ್ನೇ ನಿರೀಕ್ಷಿಸುತ್ತಿದ್ದರು.

ಅಷ್ಟರಲ್ಲಿ—

" ಆ ಮರದ ಮರೆಯಲ್ಲಿ ಯಾರೋ ಇಬ್ಬರು ಕೂತುಕೊಂಡಿರುವ ಹಾಗಿದೆ ಅಕ್ಕ "

—ಎಂಬ ಧ್ವನಿ ಕೇಳಿಸಿ ಗಿರಿಜೆಯ ಕಾಲ್ಪನಿಕ ರಾಧೆ ಕರಗಿಹೋದಳು!

ಶಾಮು ತಟ್ಟನೆ ಹಿಂತಿರುಗಿನೋಡಿ—

" ವಿಾರಾ – ಸರೋಜ ಬರುತ್ತಿರುವ ಹಾಗಿದೆ ಗಿರಿಜಾ "

—ಎಂದು ಗಾಬರಿಯ ಧ್ವನಿಯಲ್ಲಿ ನುಡಿದ.

" ನಾವಿನ್ನು ಹೊರಡೋಣ "

—ಎನ್ನುತ್ತಾ ಗಿರಿಜಾ ಎದ್ದುನಿಂತಳು.

ಅಷ್ಟರಲ್ಲಿ ವಿಾರಾ–ಸರೋಜೆಯರು ಅವರ ಬಳಿಗೇ ಬಂದು ನಿಂತಿದ್ದರು.

" ಬೃಂದಾವನದಲ್ಲಿ ಒಂದು ಚಂದನದ ಮರ. ಆ ಮರದಡಿಯಲ್ಲಿ ರಾಧೆ – ಕೃಷ್ಣ ಇಬ್ಬರೇ ಇಬ್ಬರು ಕೂತುಕೊಂಡಿದ್ದರು. ಸುತ್ತಲೂ ಜಾಜಿ, ಪಾರಿಜಾತ, ಮಲ್ಲಿಗೆ ಗಿಡಗಳು ಇದ್ದುದರಿಂದ ಅವರು ಕುಳಿತಿದ್ದುದು ಯಾರಿಗೂ ಕಾಣುತ್ತಿರಲಿಲ್ಲ. ಚಂದ್ರೋದಯವಾಗಿ ಎಷ್ಟೋ ಹೊತ್ತಾಗಿ ದ್ದರೂ ಸಹ ಅವರು ಮನೆಗಳಿಗೆ ಹಿಂತಿರುಗಿರಲಿಲ್ಲ. ಗಾಬರಿಗೊಂಡ ಗೋಪಿ ಯರು ಇಬ್ಬರನ್ನೂ ಹುಡುಕುತ್ತಾ ಹೊರಟರು. ಸುಮಾರು ಅರ್ಧರಾತ್ರಿಯ ವೇಳೆಗೆ, ಯಮುನೆಯ ಕಿನಾರೆಯಲ್ಲಿ, ತುರಾಯಿ ಹೂ ಮರದ ನೆರಳಿನಲ್ಲಿ, ಯಾರೋ ಕುಳಿತಿದ್ದ ಹಾಗೆ ಕಾಣಿಸಿತು .... "

—ವಿಾರೆಯ ಕಡೆಗೆ ನೋಡುತ್ತಾ ನುಡಿಯುತ್ತಿದ್ದ ಸರೋಜೆಯ ಕಣ್ಣು ಗಳಲ್ಲಿ ತುಂಟನಗು ತುಳುಕಿತು. ಆಕೆ ಮಾತು ಮುಂದುವರಿಸುವಷ್ಟರಲ್ಲಿ ವಿಾರ ಬಾಯಿ ತೆರೆದಳು—

" ಮುಂದೆ ನಾನು ಹೇಳುತ್ತೀನಿ ಸರೋಜಕ್ಕ."

" ಹೇಳಮ್ಮ."

" ಆಗ ವಿಾರಾ ಅನ್ನೋ ಹೆಸರಿನ ಒಬ್ಬ ಚಿಕ್ಕ ಗೋಪಿ ಸದ್ದು ಮಾಡದೆ ಹೆಜ್ಜೆ ಇಡುತ್ತಾ ಆ ಮರದ ಹತ್ತಿರ ಬಂದು ಸ್ವಲ್ಪ ಹೊತ್ತು ನಿಂತುಕೊಂಡು ನೋಡಿದಳು."

" ಆ ಮೇಲೆ ? "

" ಆ ಮೇಲೆ ಅವಳಿಗೆ ಯಾಕೋ ಅನುಮಾನವಾಯಿತು...."

" ಯಾಕೆ ? "

" ಅದೇ ಆ ಮರದ ಕೆಳಗೆ ಕೂತಿದ್ದವರು ಒಂದು ಮಾತನ್ನು ಕೂಡ ಆಡದೆ ಸುಮ್ಮನೆ ಒಬ್ಬರ ಮುಖವನ್ನು ಒಬ್ಬರು ನೋಡುತ್ತಾ ಇದ್ದುದನ್ನು ಕಂಡು, ಅವರಿಬ್ಬರೂ ಮೂಕರೇನೋ ಎಂದು ಅವಳಿಗೆ ಅನುಮಾನ........"

—ವಿಾರಾ ಇನ್ನೂ ಮುಂದುವರಿಸುವುದರಲ್ಲಿದ್ದಳು. ಆದರೆ ಅಷ್ಟರಲ್ಲಿ ಗಿರಿಜ—

" ಸಾಕುಮಾಡೆ ನಿನ್ನ ಕಥೆಯನ್ನು...."

—ಎನ್ನುತ್ತಾ ತುಂಟತಂಗಿಯ ಕೆನ್ನೆಗೆ ಮುದ್ದಿನಿಂದ ಮೃದುವಾಗಿ ಹೊಡೆದಳು.

" ಈಗ ಅನುಮಾನ ಪರಿಹಾರವಾಯಿತು. ಅಲ್ಲವೇನೇ ವಿಾರಾ ? "

—ಎಂದು ನಕ್ಕಳು ಸರೋಜಾ.

ಉಳಿದವರೂ ಆಕೆಯೊಡನೆ ನಕ್ಕರು.

" ಇನ್ನಾದರೂ ಬೃಂದಾವನದಿಂದ ಹೊರಡಲು ರಾಧಾ – ಕೃಷ್ಣರಿಗೆ ಸಾಧ್ಯವಾಗುತ್ತದೆಯೋ ಇಲ್ಲವೋ ? "

ಸರೋಜೆಯ ಮಾತಿಗೆ ಉತ್ತರವೆಂಬಂತೆ, ಮೌನವಾಗಿ ಮುಗುಳು ನಗುತ್ತಾ, ಗಿರಿಜೆ ಮುಂದೆ ಹೆಜ್ಜೆ ಇಟ್ಟಳು. ಅವಳ ಹಿಂದೆಯೇ ಸರೋಜ, ವಿಾರಾ, ಶಾಮು ನಡೆದರು.

ಎಲ್ಲರೂ ಕೆಫೆಟೇರಿಯಾದಲ್ಲಿ ಕಾಫಿ ಮುಗಿಸಿ, ಕಾರುಹತ್ತಿ ಮೈಸೂರು ಸೇರುವ ವೇಳೆಗೆ ರಾತ್ರಿ ಹತ್ತು ಗಂಟೆಯಾಯಿತು.

೬

ಮರುದಿನ ಬೆಳಿಗ್ಗೆ, ರೈಲು ನಿಲ್ದಾಣದಲ್ಲಿ ಗಿರಿಜೆಯ ಕಣ್ಣೀರನ್ನು ತಡೆಗಟ್ಟಲು ಸರೋಜ ವಿಶ್ವಪ್ರಯತ್ನಮಾಡಿದರೂ ಸಾಧ್ಯವಾಗಲಿಲ್ಲ. ಅವಳು ಅಳುತ್ತಿರುವುದನ್ನು ಗಮನಿಸಿಯೂ ಗಮನಿಸದವನಂತೆ ಶಾಮು ಜಯರಾಯರೊಡನೆಯೂ ಗೋವಿಂದಯ್ಯನವರೊಡನೆಯೂ ಮಾತನಾಡುತ್ತಾ ನಿಂತಿದ್ದ. ರೈಲು ನಿಲ್ದಾಣವನ್ನು ಬಿಟ್ಟು ಹೊರಟಾಗಲಂತೂ ಗಿರಿಜೆಗೆ ತನ್ನ ಜೀವವೇ ದೇಹದಿಂದ ದೂರದೂರಕ್ಕೆ ಹೋಗುತ್ತಿರುವಂತೆ ಭಾಸವಾಯಿತು.

ಇನ್ನೂ ಎರಡು ದಿನವಿದ್ದು ಹೋಗಬೇಕೆಂದು ಗೋವಿಂದಯ್ಯ—ಸರೋಜೆಯರು ಶಾಮುವನ್ನು ಬಲವಂತಮಾಡಿದ್ದರು. ಆದರೆ ಅವನು ನಿಶ್ಚಿಂತೆಯಿಂದ ಕಾಲಹರಣ ಮಾಡುತ್ತಾ ಮೈಸೂರಿನಲ್ಲಿ ನಿಲ್ಲುವಂತಿರಲಿಲ್ಲ. 'ನವಕರ್ನಾಟಕ' ಕಚೇರಿ ಅವನನ್ನು ಬೆಂಗಳೂರಿಗೆ ಕರೆಯುತ್ತಿತ್ತು.

ಉಲ್ಲಾಸಕರವಾದ ಮೈಸೂರು ಪ್ರವಾಸದಿಂದ ಹಿಂದಿರುಗಿದ ಶಾಮು ಎಂದಿನಂತೆ ತನ್ನ ಕೆಲಸದಮೇಲೆ ಹಾಜರಾದ. ಈಗ ಅವನ ಮನಸ್ಸಿನ ತುಂಬ ಹೊಸ ಕನಸು ಸೃಷ್ಟಿಯಾಗಿತ್ತು. ಕಣ್ಣು ಹಾಯ್ದ ಕಡೆಯೆಲ್ಲಾ ಗಿರಿಜೆಯ ಮುಖವೇ ಕಾಣುತ್ತಿತ್ತು! ಅವನು ಅವಳೊಡನೆ ಸರಸ–ಸಲ್ಲಾಪವಾಡುವ ಸವಿಗನಸಿನಲ್ಲಿಯೇ ರಾತ್ರಿಗಳು ಕಳೆದುಹೋಗುತ್ತಿದ್ದವು.

ಅದು ಮೇ ತಿಂಗಳು. ಮದುವೆಯ ಕಾಲ. 'ನವಕರ್ನಾಟಕ' ದಿನ ಪತ್ರಿಕೆಗೆ ಸುದ್ದಿ ಪ್ರಕಟಣೆಗಾಗಿ ಬರುತ್ತಿದ್ದ ಅಸಂಖ್ಯಾತ ಲಗ್ನಪತ್ರಿಕೆಗಳನ್ನು ನೋಡುತ್ತಿದ್ದಾಗ, ಶಾಮುವಿಗೆ, ಆಗಲೇ ತನ್ನ-ಗಿರಿಜೆಯ ಮದುವೆಯಾಗಬಾರದೇ ಎಂದನ್ನಿಸುತ್ತಿತ್ತು. ಆ ಸಮಯದಲ್ಲೆಲ್ಲಾ ಅವನ ಸಹೋದ್ಯೋಗಿಗಳು ಮದುವೆಯ ಮಾತು ಪ್ರಾರಂಭಿಸುತ್ತಿದ್ದರು. ಗೆಳೆಯ ಲಕ್ಷ್ಮಣ ಸುದ್ದಿ ಪ್ರಕಟಣೆಗೆಂದು ಬಂದ ಒಂದೊಂದು ಲಗ್ನಪತ್ರಿಕೆಯನ್ನೇ

ತೆಗೆದು, ತನಗೆ ತಿಳಿದ ವಧೂ–ವರರ ಕುಲಗೋತ್ರಗಳನ್ನೆಲ್ಲಾ ಜಾಲಾಡುವ ವರೆಗೂ ಮುಂದೆ ಹೋಗುತ್ತಿದ್ದ.

ಒಂದು ದಿನ—

" ನೋಡು ಶಾಮು, ಈ ಡಿನ್ನರ್ ಕಾರ್ಡ್ ಯಾರದ್ದು ಗೊತ್ತೆ ? "

—ಎಂದು ಮಾತು ಆರಂಭಿಸಿದ ಲಕ್ಷ್ಮಣ.

" ಯಾರದ್ದು ? "

" ನಮ್ಮ ಮನೆಯ ಹಿಂದಿನ ಬೀದಿಯಲ್ಲಿ ಹೊಸದಾಗಿ ಮನೆ ಕಟ್ಟಿದ್ದಾರಲ್ಲಾ ಐಂಗಾರ್‍ಯರು—ಅವರದ್ದು."

" ನಾನು ಅವರನ್ನು ನೋಡಿಲ್ಲ ಲಕ್ಷ್ಮಣ."

" ಅವರು ಬ್ಯಾಂಕಿನಲ್ಲಿ ಕೆಲಸದಲ್ಲಿದ್ದಾರೆ. ಈ ಡಿನ್ನರ್ ಅವರ ಮೊದಲನೆಯ ಮಗಳ ಮದುವೆಯ ಸಂತೋಷಾರ್ಥವಾಗಿ ಇಟ್ಟಿದ್ದಾರೆ. ಈ ಹುಡುಗಿಯ ಕೊರಳಿಗೆ ತಾಳಿ ಕಟ್ಟಿದವನು ಯಾವುದೋ ಕಾಲೇಜಿನಲ್ಲಿ ಲೆಕ್ಚರರ್ ; ಡಬ್ಬಲ್ ಗ್ರಾಜುಯೇಟ್. ಐಂಗಾರ್‍ಯರು ಈ ವರನಿಗೆ ಎರಡು ಸಾವಿರ ವರದಕ್ಷಿಣೆ ಮತ್ತು ಅವನ ತಾಯಿಯ ಕೈಗೆ ಒಂದು ಸಾವಿರ ನಗದು ಕೊಟ್ಟಿದ್ದಾರೆ."

" ವಿದ್ಯಾವಂತರಾದ ಆಧುನಿಕ ಯುವಕರೂ ವರದಕ್ಷಿಣೆಗೆ ಆಸೆಪಡಬಹುದೇ ಲಕ್ಷ್ಮಣ ? "

" ವರದಕ್ಷಿಣೆ ತೆಗೆದುಕೊಳ್ಳದಿದ್ದರೆ ತಮ್ಮ ಗೌರವಕ್ಕೆ ಕಡಿಮೆಯಂತೆ ? "

—ಎಂದು ನಕ್ಕ ಲಕ್ಷ್ಮಣ.

ಗೆಳೆಯರೂ ಅವನೊಡನೆ ನಕ್ಕರು.

ಮತ್ತೆ ಲಕ್ಷ್ಮಣನೇ ಆರಂಭಿಸಿದ—

" ಮೊನ್ನೆ ಒಂದು ವಿಚಿತ್ರ ಸಂಗತಿ ನಡೆಯಿತು ಶಾಮು. ನಮ್ಮ ಮನೆ ಎದುರುಗಡೆ ಒಂದು ಸಂಸಾರವಿದೆ—ಗಂಡ, ಹೆಂಡತಿ, ಒಬ್ಬನೇ ಮಗ. ಹುಡುಗ ಕಿರ್ಲೋಸ್ಕರ್ ಕಂಪೆನಿಯಲ್ಲಿ ಕೆಲಸದಲ್ಲಿದ್ದಾನೆ. ಅವನಿಗೆ ಮದುವೆಯಾಗಬೇಕೆಂದು ಬಹಳ ಆಸೆ. ಆದರೆ ಹೆಣ್ಣು ಕೊಡುವವರೇ ಇಲ್ಲ ! ಅದಕ್ಕೆ ಮುಖ್ಯ ಕಾರಣ : ಹುಡುಗನ ಗುಣ ಅಷ್ಟೇನೂ ಮೆಚ್ಚುವಹಾಗಿರಲಿಲ್ಲ. ಅಂತೂ ಕೊನೆಗೆ, ಮೊನ್ನೆ ಕೋಲಾರದ ಕಡೆಯ ಒಂದು ಹಳ್ಳಿಯಿಂದ ಹೆಣ್ಣು

ಬಂದಿತು. 'ವರದಕ್ಷಿಣೆ ಕೊಡುವುದಿಲ್ಲ. ಎರಡು ಖರ್ಚೂ ನಾವೇ ಹಾಕಿ ಧಾರೆಯೆರೆದುಕೊಡುತ್ತೇವೆ' ಎಂದರು ಹೆಣ್ಣಿನ ಕಡೆಯವರು. ಹುಡುಗನ ತಂದೆ ಅದಕ್ಕೆ ಒಪ್ಪಲಿಲ್ಲ. 'ವರದಕ್ಷಿಣೆ ಕೊಡದಿದ್ದರೆ ನಮ್ಮ ಮಾನಕ್ಕೇ ಕಡಿಮೆ'—ಎಂದು ಪ್ರತಿಭಟಿಸಿದರು. ಕೊನೆಗೆ, ಮಧ್ಯಸ್ಥಿಕೆಗಾರರ ಮಾತಿನಂತೆ ವರದಕ್ಷಿಣೆ ಕೊಡಲು ಕನ್ಯಾಪಿತೃ 'ಒಪ್ಪಿಕೊಂಡರು. ಎಷ್ಟು ಗೊತ್ತೆ ವರದಕ್ಷಿಣೆ—ಕೇವಲ ನೂರು ರೂಪಾಯಿ! 'ಅಷ್ಟೇ ಸಾಕು' ಎಂದು ಸಂತೋಷಪಟ್ಟರು ಹುಡುಗನ ತಂದೆ! ಅವರ ಹಟ ಕಂಡು, ನೆರೆದಿದ್ದವರೆಲ್ಲಾ ನಕ್ಕು ನಕ್ಕು ಹೊಟ್ಟೆ ಹುಣ್ಣು ಮಾಡಿಕೊಂಡರು!"

"ನೂರು ರೂಪಾಯಿ ತೆಗೆದುಕೊಳ್ಳದಿದ್ದರೆ ಆಗುತ್ತಿರಲಿಲ್ಲವೆ?"

"ಮಾನಕ್ಕೆ ಕಡಿಮೆ ಅಂತಾರಲ್ಲ!"

—ಎನ್ನುತ್ತಾ ಲಕ್ಷ್ಮಣ,

"ಈ ಹುಡುಗನ ಹಣೆಬರಹ ಕೇಳಯ್ಯ"

—ಎಂದು ಮತ್ತೊಂದು ಲಗ್ನಪತ್ರಿಕೆಯನ್ನು ಕೈಗೆ ತೆಗೆದುಕೊಂಡ.

"ಲಕ್ಷ್ಮಣ ಹೇಳುವ ಒಂದೊಂದು ಮಾತೂ ಒಂದೊಂದು ಕತೆಯಾಗುತ್ತದೆ—ಬರೆದರೆ"

—ಎನ್ನುತ್ತಾ ಗೆಳೆಯ ಅನಂತುವೂ ಅವರ ಬಳಿಗೆ ಬಂದು ಕುಳಿತ.

ನಿಜವಾಗಿಯೂ ಅನಂತನದೇ ಒಂದು ದೊಡ್ಡ ಕಥೆಯಾಗಿತ್ತು. ಅದನ್ನೇ ಒಂದುಬಾರಿ ಶಾಮು - ಲಕ್ಷ್ಮಣರಿಗೆ ಹೇಳಬೇಕೆಂಬುದು ಅವನ ಆಸೆ. ಆದರೆ ಅವಕಾಶವಿನ್ನೂ ದೊರಕಿರಲಿಲ್ಲ.

ಲಗ್ನಪತ್ರಿಕೆಯೊಂದನ್ನು ಕೈಯಲ್ಲಿ ಹಿಡಿದಿದ್ದ ಲಕ್ಷ್ಮಣ, ಅವರ ಬಗ್ಗೆ ಮಾತು ಮುಂದುವರಿಸಿದ—

"ಈ ಹುಡುಗ ನನ್ನ ಜೊತೆಯಲ್ಲಿಯೇ ಓದುತ್ತಿದ್ದ. ಹೆಸರು ಶ್ರೀಧರ ಅಂತ. ಈಗ ಎಂ.ಎ. ಪಾಸು ಮಾಡಿದ್ದಾನೆ. ವರದಕ್ಷಿಣೆ ಕೇಳುವಾಗ, ಇವನೇನು ಹೇಳಿದ ಗೊತ್ತೆ? - 'ನಾನು ಇಷ್ಟು ಓದಿ, ಡಿಗ್ರಿ ತೆಗೆದುಕೊಳ್ಳುವುದಕ್ಕೆ ಪಟ್ಟಿರುವ ಕಷ್ಟ ಆ ಪರಮಾತ್ಮನಿಗೇ ಗೊತ್ತು. ನಮ್ಮ ತಂದೆ ಹಳ್ಳಿಯಲ್ಲಿರುವ ಹೊಲಗದ್ದೆಗಳನ್ನೆಲ್ಲಾ ಮಾರಿ, ಹಣ ಹೊಂದಿಸಿ, ನನ್ನನ್ನು ಓದಿಸಿದರು. ನನ್ನ ವಿದ್ಯೆಗೆ ಐದು ಸಾವಿರಕ್ಕಿಂತಲೂ ಹೆಚ್ಚು ಖರ್ಚಾಗಿದೆ.

ಈಗ ಅಷ್ಟು ಹಣವನ್ನು ಕೊಟ್ಟರೆ ಮದುವೆಯಾಗುತ್ತೇನೆ ' – ಎಂದು ನಿರ್ದಾಕ್ಷಿಣ್ಯವಾಗಿ ಕೇಳಿಯೇಬಿಟ್ಟ ಮಾವನಾಗುವವನನ್ನು ! "

" ಅವನ ವಿದ್ಯಾಭ್ಯಾಸದ ವೆಚ್ಚವನ್ನು ಹೆಣ್ಣಿನ ತಂದೆ ಕೊಡುವುದು ಯಾವ ನ್ಯಾಯ ? "

" ಕೊಡದಿದ್ದರೆ, ಮದುವೆಯಾಗದೆ ನಿಂತಿರುವ ಹುಡುಗಿಗೆ ಅನ್ಯಾಯ! "

" ಓದಿದ ಹುಡುಗರು ವರದಕ್ಷಿಣೆಗೆ ಬಾಯಿಬಿಡುವುದು – ಹಟ ಮಾಡು ವುದು ಶುದ್ಧ ನಾಚಿಕೆಗೇಡು ! "

" ಓದಿದಾಕ್ಷಣ ಬಂತೆ ಭಾಗ್ಯ ? ಓದಿಗೆ ತಕ್ಕ ಗುಣ, ಗುಣಕ್ಕೆ ತಕ್ಕ ಆಚರಣೆ ಇಲ್ಲದ ಮೇಲೆ "

" ವಿವೇಚನಾಶಕ್ತಿ, ವಿಶುದ್ಧಾಂತಃಕರಣ, ವಿಶಾಲ ಮನೋಭಾವ, ಪರಸ್ಪರ ಪರಿಸ್ಥಿತಿ ಚಿಂತನೆ ಇಲ್ಲದೆಹೋದರೆ ಎಷ್ಟು ಓದಿ ಏನು ಪ್ರಯೋಜನ? "

—ಎಂದ ಅನಂತು.

" ಓದು, ನಾಗರಿಕತೆ ಹೆಚ್ಚಿದ ಮಾತ್ರಕ್ಕೆ ಮಾನವತೆ ಬೆಳೆಯುವುದಿಲ್ಲ ಲಕ್ಷ್ಮಣ. ಸಂಸ್ಕೃತಿ ಬೆಳೆಯಬೇಕು."

" ನಿಜ ಶಾಮು. ಬುದ್ಧಿ–ಮನಸ್ಸುಗಳಿಗೆ ಒಳ್ಳೆಯ ಸಂಸ್ಕಾರ ದೊರಕಿದರೆ ನರ ಸುರನಾಗುತ್ತಾನೆ. ಇಲ್ಲದಿದ್ದರೆ ವಾನರನೇ ಆಗುತ್ತಾನೆ ! "

—ಎಂದು ಅನಂತು ನುಡಿದಾಗ, ಲಕ್ಷ್ಮಣನಿಗೆ ನವಸ್ಫೂರ್ತಿ ಬಂದಂತಾಯಿತು.

" ಸಂಸ್ಕೃತಿ ಸಾಲದೆ ಸಮಾಜ ಸತ್ವಹೀನವಾಗುತ್ತಿದೆ. ನಾಗರಿಕತೆಯೇ ನಮ್ಮ ಸಂಸ್ಕೃತಿಯೆಂದು ನಂಬಿ, ನೆಚ್ಚಿ, ಅದರ ಬೆನ್ನುಹತ್ತಿ, ನೀತಿಭ್ರಷ್ಟವಾಗಿ, ನೀಚವೃತ್ತಿಯನ್ನು ನಿರ್ಮೂಲಮಾಡಲು ನಿಶ್ಶಕ್ತವಾಗಿದೆ ಸಮಾಜ. ಅದು ಶಕ್ತಿ ಪೂರ್ಣವಾಗಲು, ಪ್ರಾಚೀನ ಋಷಿ ಮುನಿಪುಂಗವರಿಂದ ಉತ್ಪಾದಿಸ ಲ್ಪಟ್ಟು, ಅಂದಿನಿಂದ ಅವ್ಯಾಹತವಾಗಿ ಬೆಳೆದುಬಂದು, ಇಂದು ಬಹುಮಂದಿ ಆಧುನಿಕರ ಅಜ್ಞಾನಬಲದಿಂದ ತಡೆದುನಿಂತು ಅಗೋಚರವಾಗಿರುವ ಸಂಸ್ಕೃ ತಿಯ ಪುನರೋದ್ಧಾರವೇ ಸಂಜೀವಿನಿ ! "

—ಎಂದು ಲಕ್ಷ್ಮಣ ಪುಟ್ಟ ಉಪನ್ಯಾಸವನ್ನೇ ಕೊಟ್ಟಾಗ, ಅನಂತು – ಶಾಮು ಆಶ್ಚರ್ಯಚಕಿತರಾದರು.

" ಪ್ರತಿಯೊಬ್ಬನಲ್ಲಿಯೂ ಸಂಸ್ಕೃತಿಯ ಬೆಳಸು ಹುಲುಸಾದಾಗಲೇ, ಅದರ ಸೌಮ್ಯ ಬೆಳಕಿನಲ್ಲಿ ಹೊಸ ಸಮಾಜ ಉದಯವಾಗುವುದು – ಅಲ್ಲವೆ ಲಕ್ಷ್ಮಣ ? "

—ಎಂದ ಶಾಮು.

" ಅದರಲ್ಲಿ ಸಂದೇಹವೇನು ? ಜನತೆಯ ಅಂತರಂಗದಲ್ಲಿ ಹೆಪ್ಪುಗಟ್ಟಿ ನಿಂತಿರುವ ಮೂಢನಂಬಿಕೆ, ಡಾಂಭಿಕ ಮನೋಭಾವ, ಸುಲಿಗೆಗಳ ಸಲುವಾಗಿ ಸೋಗುತಳೆದಿರುವ ಸಂಪ್ರದಾಯದ ಹೆಸರಿನ ಕಂದಾಚಾರ, ಧರ್ಮದ ಹೆಸರಿನ ಮರ್ಮಭೇದಕ ಕರ್ಮಾಧಿಕಾರ – ಇತ್ಯಾದಿಗಳೆಲ್ಲವೂ ಖಂಡಿತವಾಗಿ ಆಗಲೇ ನಿಲ್ಲುತ್ತವೆ "

—ಎಂದ ಅನಂತು.

" ಹೌದು. ಈ ವರದಕ್ಷಿಣೆಯ ನೀಚಪದ್ಧತಿಯೂ ಸಹ ಆಗಲೇ ತೊಲಗುತ್ತದೆ. ಈ ಹೇರು ಹಣದ ಹೊರೆಯ ಹೊಣೆ ತಪ್ಪಿದರೆ, ಹೆಣ್ಣು ಹೆತ್ತವರು ಹಾಲಾಹಲವನ್ನು ಬೇಕಾದರೂ ಅಮೃತವೆಂದುಕೊಂಡು ಕುಡಿದು ಬಿಡುತ್ತಾರೆ ! "

—ಎಂದು ಲಕ್ಷ್ಮಣ ಮಾತು ಮುಗಿಸಿದ.

ಅಷ್ಟರಲ್ಲಿ, ರಾತ್ರಿ ಪಾಳಿಯ ಉಪಸಂಪಾದಕರು ಒಬ್ಬೊಬ್ಬರಾಗಿ ಬಂದುದರಿಂದ, ಹಗಲು ಪೂರ್ತಿ ಕೆಲಸಮಾಡಿದ ಮೂವರು ಗೆಳೆಯರೂ ಹೊರಹೊರಟರು.

ಹಾದಿಯ ಹೋಟೆಲೊಂದರಲ್ಲಿ ಸಂಜೆಯ ಉಪಾಹಾರ ಮುಗಿಸಿ, ಅನಂತು-ಲಕ್ಷ್ಮಣರು ಸಿಗರೇಟು ಹಚ್ಚಿದರು. ಶಾಮು ಬೀಡ ತೆಗೆದುಕೊಂಡ. ಮೂವರೂ ಮಾತನಾಡುತ್ತಾ ಶಾಮುವಿನ ಕೊಠಡಿಯಿದ್ದ ಶ್ರೀರಾಮಪುರದ ಕಡೆಗೆ ಹೊರಟರು.

ಸಿಗರೇಟಿನ ಹೊಗೆಯನ್ನು ಸುರಳಿ ಸುರುಳಿಯಾಗಿ ಬಿಡುತ್ತಾ—

" ಮದುವೆಯಾಗದವರು ಎಲೆ ಅಡಿಕೆ, ಬೀಡ ಮೊದಲಾದುವನ್ನು ಹಾಕಬಾರದು ಶಾಮು "

—ಎಂದು ನಕ್ಕ ಅನಂತ.

ಅವನೊಡನೆ ತಾನೂ ನಕ್ಕು, ಶಾಮುವಿನ ಕಡೆಗೆ ನೋಡುತ್ತಾ—

" ಇಷ್ಟರಲ್ಲೇ ಅವನಿಗೂ ಆಗುತ್ತದೆ ಕಂಕಣಪ್ರಾಪ್ತಿ ! "

—ಎಂದ ಲಕ್ಷ್ಮಣ.

ಶಾಮುವಿನ ಮುಖ ಚಿಂತಾಕ್ರಾಂತವಾಯಿತು.

" ಏಕೆ ಶಾಮು ಸುಮ್ಮನಾದೆ?....ನನ್ನ ಮಾತು ಸುಳ್ಳೆ? "

" ಇಲ್ಲ ಲಕ್ಷ್ಮಣ. ಕಂಕಣಪ್ರಾಪ್ತಿಗೇನೋ ಯೋಗವಿದೆ. ಆದರೆ, 'ಕಾಂಚಾಣ ಪ್ರಾಪ್ತಿ'ಯ ತೊಡಕು ಬಂದರೆ 'ಚಿಂತಾದುರಂತ'ವೇ ಪ್ರಾಪ್ತಿ ! "

—ಎಂದು ನಿಟ್ಟುಸಿರಿಟ್ಟ ಶಾಮು.

" ನಿನ್ನ ಪ್ರಾಸಬದ್ಧವಾದ ಮಾತೇನೋ ಚೆನ್ನಾಗಿದೆ. ಆದರೆ, ಅದರ ಅಂತರಾರ್ಥ ನನಗೆ ತಿಳಿಯಲಿಲ್ಲ ! "

—ಎಂದ ಲಕ್ಷ್ಮಣ.

ತನಗೂ ಸಹ ಅರ್ಥವಾಗಲಿಲ್ಲವೆಂಬಂತೆ, ಶಾಮುವಿನ ಕಡೆಗೆ ನೋಡಿದ ಅನಂತ.

" ನಮ್ಮ ತಂದೆ ವರದಕ್ಷಿಣೆ ತೆಗೆದುಕೊಳ್ಳದೆ ನನ್ನ ಮದುವೆಗೆ ಒಪ್ಪುವುದಿಲ್ಲ. ಹುಡುಗಿ ನನಗೆ ಒಪ್ಪಿಗೆಯಾದರೆ, ಆಕೆಯ ತಂದೆ ನಮ್ಮ ತಂದೆ ಕೇಳುವಷ್ಟು ಹಣವನ್ನು ಸುರಿಯಬೇಕಲ್ಲ ! "

— ಎಂದ ಶಾಮು.

" ಇದೊಂದು ಪ್ರಾರಬ್ಧ. ಮದುವೆಯಾಗುವ ಹುಡುಗರಿಗೆ ವರದಕ್ಷಿಣೆ ಬೇಡವಾದರೂ, ತಂದೆತಾಯಿಯರ ನಿರ್ಬಂಧಕ್ಕೆ ಬಲಿಯಾಗಿ ದುಃಖಿಸಬೇಕಾದ ಪ್ರಸಂಗ. ಗಂಡು ಹೆತ್ತವರ ಧನದಾಹ ಹೆಣ್ಣು ಹೆತ್ತವರನ್ನು ಹಾಳು ಮಾಡುವ ಹಂಚಿಕೆ. ಒಂದಾಗಲಿರುವ ಒಲಿದ ಜೀವಗಳೆರಡನ್ನು ಒಲೆಗೆ ಒಯ್ಯುವ ಬಲೆ "

—ಎಂದು ಕಟುಧ್ವನಿಯಲ್ಲಿ ನುಡಿದ ಅನಂತ.

" ವರದಕ್ಷಿಣೆ ಕೊಡುವವರಿಗೆ ಆ ಶಕ್ತಿ ಇಲ್ಲದಿದ್ದರೆ ಎಷ್ಟೊಂದು ಕಷ್ಟವಾಗುತ್ತದೆ ! "

—ಎಂದು ಮರುಗಿದ ಲಕ್ಷ್ಮಣ.

ಅಷ್ಟರಲ್ಲಿ ಅನಂತು—

" ಅದಕ್ಕೆ ನಮ್ಮ ಸಂಸಾರವೇ ಉದಾಹರಣೆ "

—ಎಂದು ನುಡಿದಾಗ, ಶಾಮು-ಲಕ್ಷ್ಮಣರು ಅವನ ಕಡೆಗೆ ವಿಸ್ಮಯದಿಂದ ನೋಡಿದರು.

ಅನಂತು ಮುಂದುವರಿಸಿದ—

" ನಮ್ಮ ತಂದೆಗೆ, ನಾನು ಮತ್ತು ನನ್ನ ಅಕ್ಕ ಇಬ್ಬರೇ ಮಕ್ಕಳು. ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ನನ್ನ ಅಕ್ಕನ ಮದುವೆಯಾಯಿತು. ಡೆಪ್ಯುಟಿ ಕಮಿಷನರ್ ಕಚೇರಿಯಲ್ಲಿ ಕೆಲಸದಲ್ಲಿದ್ದ ನಮ್ಮ ಭಾವನಿಗೆ ಬಿ.ಎ. ಪರೀಕ್ಷೆಯಾಗಿತ್ತು. ಅವರು, ನಾಲ್ಕು ಸಾವಿರ ವರದಕ್ಷಿಣೆ ಕೊಟ್ಟರೆ ನಮ್ಮ ಅಕ್ಕನನ್ನು ಮದುವೆಯಾಗುತ್ತೇನೆಂದರು. ಅವಳೇನೂ ಕುರೂಪಿಯಾಗಿರಲಿಲ್ಲ; ತುಂಬಾ ಲಕ್ಷಣವಾಗಿದ್ದಳು. ಒಬ್ಬಳೇ ಮಗಳೆಂದು ಆಕೆಯನ್ನು ಬಹು ಪ್ರೀತಿಯಿಂದಲೇ ಬೆಳೆಸಿದ್ದರು ನಮ್ಮ ತಾಯಿ-ತಂದೆ. ಯೋಗ್ಯನಾದ ವರ ಕೈಬಿಟ್ಟುಹೋದರೆ, ಬೇರೊಂದು ಒಳ್ಳೆಯ ಸಂಬಂಧ ಸಿಕ್ಕುವುದು ಕಷ್ಟವೆಂದುಕೊಂಡು, ನಾಲ್ಕು ಸಾವಿರ ವರದಕ್ಷಿಣೆ ಕೊಡಲು ನಮ್ಮ ತಂದೆ ಒಪ್ಪಿದರು. ಇದ್ದ ಅಲ್ಪಸ್ವಲ್ಪ ಹೊಲಗದ್ದೆಯ ಆಸ್ತಿಯನ್ನೆಲ್ಲಾ ಮಾರಿದರು. ಅದರಿಂದ ಬಂದ ಹಣ ಸಾಲದೆ, ನಾವು ವಾಸವಾಗಿದ್ದ ಮನೆಯನ್ನೂ ಅಡವಿಟ್ಟು ಸಾಲ ತರಬೇಕಾಯಿತು. ಅಂತೂ ನನ್ನ ತಂದೆ ನಾಲ್ಕು ಸಾವಿರ ವರದಕ್ಷಿಣೆ ಕೊಟ್ಟು ನನ್ನ ಅಕ್ಕನ ಮದುವೆಮಾಡಿದರು. ಅಂದಿನಿಂದ, ನಮ್ಮ ಪಾಲಿಗೆ ಭೂಮಿತಾಯಿ ನೀಡುತ್ತಿದ್ದ ದವಸಧಾನ್ಯಗಳು ಇಲ್ಲವಾಯಿತು. ಸಂಸಾರ ಸಾಗುವುದು ಕಷ್ಟವಾಯಿತು. ಬೆಂಗಳೂರಿನಲ್ಲಿ ಓದುತ್ತಿದ್ದ ನನಗೆ ತಿಂಗಳಿಗೆ ಐದು ರೂಪಾಯಿ ಫೀಸು ಒದಗಿಸುವುದಕ್ಕೂ ಸಹ ನಮ್ಮ ತಂದೆಗೆ ದುಸ್ಸಾಧ್ಯವಾಯಿತು. ಬಡತನದ ಬಡಬಾಗ್ನಿಯಲ್ಲಿ ಬೇಯತೊಡಗಿದ ನನ್ನ ತಾಯಿ ರೋಗಗ್ರಸ್ಥರಾದರು. ಜೀವನ ನಿರ್ವಹಣೆಗಾಗಿ ಎಲ್ಲ ಕಡೆಯೂ ಸಾಲ ಮಾಡಿದ್ದುದರಿಂದ, ಅವರ ಔಷಧೋಪಚಾರಕ್ಕೆ ಹಣ ಒದಗಲಿಲ್ಲ. ಹಾಗೆಯೇ ನರಳಿ ನರಳಿ ಸತ್ತರು ತಾಯಿ. ಎಸ್.ಎಸ್.ಎಲ್.ಸಿ. ಮುಗಿದನಂತರ, ನನ್ನನ್ನು ಕಾಲೇಜಿನಲ್ಲಿ ಓದಿಸಲು ಅಕ್ಕನ ಸಹಾಯ ಕೇಳಬೇಕೆಂದು ಯೋಚಿಸಿದ್ದರು ತಂದೆ. ಆದರೆ ಕೆಲವೇ ದಿನಗಳಲ್ಲಿ ಬಂದ ಕೆಟ್ಟಸುದ್ದಿ -ಅದಕ್ಕೂ ಕಲ್ಲು ಹಾಕಿತು! ಗರ್ಭಿಣಿಯಾಗಿದ್ದ ಅಕ್ಕ ಹೆರಿಗೆಯ ತೊಂದರೆಯಿಂದ ತೀರಿ

ಕೊಂಡಳು. ಈ ದುರಂತ ಚಕ್ರಗತಿಯನ್ನು ಕಂಡು ತಂದೆಗೆ ಹುಚ್ಚು ಹಿಡಿದಂತಾಗಿತ್ತು. ಕೊರಗಿ ಕೊರಗಿ ಅವರೂ ಸತ್ತರು. ನನ್ನವರೆನ್ನುವವರನ್ನೆಲ್ಲಾ ಕಳೆದುಕೊಂಡು ಅನಾಥನಾಗಿದ್ದ ನಾನು ಆಶ್ರಯಕ್ಕಾಗಿ ಭಾವನ ಬಳಿಗೆ ಹೋದೆ. ಆದರೆ ಅಲ್ಲಿ ನನಗೆ ದೊರೆತದ್ದು—'ಹೊರಟುಹೋಗೆಂದು ಛೇಡಿಸಿ ಹೇಳುವ ನುಂಗುನೋಟದ ಸ್ವಾಗತ; ಜೊತೆಗೆ ನೂರು ಬೈಗಳ. ಉಡುಗೊರೆ!' 'ನಿಮ್ಮಕ್ಕ ಸತ್ತ ದಿನವೇ, ನನಗೂ ನಿಮಗೂ ಸಂಬಂಧ ಕಡಿದುಹೋಯಿತು'—ಎನ್ನುತ್ತಾ ದಢಾರನೆ ಬಾಗಿಲು ಮುಚ್ಚಿಕೊಂಡರು ಭಾವ. ನಮ್ಮ ತಂದೆ ಕೊಟ್ಟದ್ದ ನಾಲ್ಕು ಸಾವಿರ ವರದಕ್ಷಿಣೆಯ ಋಣದ ಕೃತಜ್ಞತೆಯೂ ಅವರಲ್ಲಿ ಉಳಿದಿರಲಿಲ್ಲ! ಅಂತೂ ನಾನು ಬೀದಿಯ ಪಾಲಾದೆ; ನೌಕರಿಗಾಗಿ ಅಲೆದಾಡಿದೆ; ಕೊನೆಗೆ 'ನವಕರ್ನಾಟಕ' ಪತ್ರಿಕೆಗೆ ಸೇರಿಕೊಂಡೆ"

—ಎಂದು ಅನಂತ ತನ್ನ ಕತೆ ಹೇಳಿ ಮುಗಿಸಿದ.

ಅಷ್ಟರಲ್ಲಿ ಮೂವರೂ ಶ್ರೀರಾಮಪುರದ ಕಡೆಗೆ ತಿರುಗುವ ಮಿಲ್ ಕಾರ್ನರ್ ಬಳಿಗೆ ಬಂದಿದ್ದರು.

ಲಕ್ಷ್ಮಣ ನಿಟ್ಟುಸಿರಿಡುತ್ತಾ—

"ಅಬ್ಬಾ! ಎಂಥ ದಾರುಣ ಕಥೆ!!" ಎಂದ.

"ಈ ನೀಚಪದ್ಧತಿಗೆ ಹೀಗೆಯೇ ಎಷ್ಟು ಸಂಸಾರಗಳು ಬಲಿಯಾಗಿವೆಯೋ!"

—ಎಂದು ಶಾಮು ಮಮ್ಮಲ ಮರುಗಿದ.

ಈಗಾಗಲೇ ನಾಲ್ಕು ವರವಿಕ್ರಯದಿಂದ ತಮ್ಮ ಸಂಸಾರವೇ ಹಾಳಾಗಿದೆಯೆಂಬುದು ಅವನಿಗೆ ತಿಳಿಯದೆ?

ತುಸು ದೂರ ಮೂವರು ಗೆಳೆಯರೂ ಮೌನವಾಗಿ ಹೆಜ್ಜೆ ಹಾಕಿದರು.

ಅನಂತರ ಲಕ್ಷ್ಮಣ ತನ್ನ ಕೈಗಡಿಯಾರ ನೋಡಿ—

"ಗಂಟೆ ಆರೂವರೆಯಾಯಿತು" ಎಂದ.

"ಆಗಲಿ. ಇಷ್ಟುಬೇಗ ನೀನು ಮನೆಗೆ ಹೋಗಿ ಏನು ಮಾಡುತ್ತೀಯೆ?"

"ಏನೂ ಇಲ್ಲಪ್ಪ."

"ಮನೆಗಲ್ಲದಿದ್ದರೆ ಯಾವುದಾದರೂ ಪಾರ್ಕಿಗೆ ಹೋಗಬೇಕಾಗಿದ್ದಿತೋ

ಏನೋ !....ಬಹುಶಃ ಅಲ್ಲಿ ಯಾರಾದರೂ ಅವನಿಗಾಗಿ ಕಾದಿರುತ್ತಾರೆಂದು ಕಾಣುತ್ತದೆ."

—ಅನಂತು ಲಕ್ಷ್ಮಣನನ್ನೇ ನೋಡುತ್ತಾ ಕುಹಕದ ಧ್ವನಿಯಲ್ಲಿ ನುಡಿದು ನಕ್ಕ.

" ಹಾಗೇನೂ ಇಲ್ಲ ಅನಂತು. ಅಂತಹ 'ಪಾರ್ಕ್‌ಫೇರ್ ಜೂಲಿಯಟ್' ಗಳ ಜತೆ ಪ್ರಣಯಪ್ರಸಂಗಗಳು ನನ್ನ ಜೀವನದಲ್ಲಿ ಒಂದು ದಿನವೂ ಸಂಭವಿಸುವುದಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆ."

" ಇದೇನು ನಿನ್ನ ಭೀಷ್ಮವಾಣಿಯೋ ? "

" ಹೌದು. ಈ ವಿಷಯದ ಮಟ್ಟಿಗೆ ಇದು ಭೀಷ್ಮವಾಣಿಯೇ ನಿಜ. ಈ ಬಗ್ಗೆ ಎಂದೂ ಯಾರಿಗೂ ಸಂದೇಹವೇ ಬೇಡ "

—ಎಂದ ಲಕ್ಷ್ಮಣ.

" ಹಾಗಾದರೆ, ನೀನು ಮದುವೆ ಮಾಡಿಕೊಳ್ಳುವುದಿಲ್ಲವೆ ? "

—ಶಾಮು ಕೇಳಿದ.

" ಮದುವೆ ಮಾಡಿಕೊಳ್ಳುವುದಿಲ್ಲವೆಂದು ನಾನು ಹೇಳಲಿಲ್ಲ ಶಾಮು. ಆದರೆ ಮದುವೆಗೆ ಮೊದಲೇ ಹಲವಾರು ಹೆಣ್ಣುಗಳ ಬಳಿ ಪ್ರೇಮದ ಸೋಗು ಹಾಕಿಕೊಂಡು ಪತಂಗಜೀವನ ಮಾಡುವುದಿಲ್ಲ."

" ಭೇಷ್ ಲಕ್ಷ್ಮಣ, ಒಪ್ಪಿದೆ ನಿನ್ನ ಮನೋಭಾವ "

—ಎಂದು ಅನಂತು ಬೆನ್ನು ತಟ್ಟಿದ.

ಮೂವರು ಮಿತ್ರರೂ ಶ್ರೀರಾಮಪುರದ ' ಅಂಡರ್‌ಬ್ರಿಡ್ಜ್' ಸಮೀಪಿಸುತ್ತಿದ್ದರು.

" ಅನಂತು, ನೀನು ನನ್ನ ರೂಮು ನೋಡಿದ್ದೀಯಾ ? "

—ಶಾಮು ಕೇಳಿದ.

" ಇಲ್ಲ "

" ಲಕ್ಷ್ಮಣನೂ ನೋಡಿಲ್ಲ."

" ಹೌದು ಶಾಮು. ನಾನು ಮಲ್ಲೇಶ್ವರದಲ್ಲೇ ಇದ್ದರೂ ಶ್ರೀರಾಮಪುರವನ್ನು ನೋಡಿಲ್ಲ. ಇನ್ನೂ ನನ್ನ ಮಲ್ಲೇಶ್ವರದ ಯಾವ ಮೂಲೆಯಲ್ಲಿ ಏನಿದೆಯೆಂದು ಕೇಳು - ಹೇಳುತ್ತೇನೆ. ಅಷ್ಟೇ ಅಲ್ಲ, ಚಾಮರಾಜಪೇಟೆ,

ಬಸವನಗುಡಿ ಮೊದಲಾದ ಪ್ರದೇಶಗಳೂ ನನಗೆ ತುಂಬಾ ಪರಿಚಿತವಾಗಿದೆ."

" ಇಷ್ಟೆಲ್ಲಾ ನೋಡಿದವನು ಶ್ರೀರಾಮಪುರವನ್ನು ಏಕೆ ನೋಡಲಿಲ್ಲ ? "

" ಅಲ್ಲೇನಿದೆ–ಬರೀ ಲೇಬರ್ ಕಾಲೋನಿ ಅಂತ ಸುಮ್ಮನಾಗಿದ್ದೆ ಅಷ್ಟೆ! "

" ಅದೇನೋ ನಿಜವೆ. ಆದರೆ ಕಾರ್ಮಿಕರ ಜೊತೆಗೆ ಮಧ್ಯಮ ದರ್ಜೆಯವರೂ ಬಹುಮಂದಿ ಇದ್ದಾರೆ. ಅರ್ಧಭಾಗ ಲೇಬರ್ ಕಾಲೋನಿಯಾದರೆ, ಉಳಿದರ್ಧ ಮಧ್ಯಮ ದರ್ಜೆಯವರದ್ದು "

—ಎಂದ ಶಾಮು.

ಮೂವರು ಗೆಳೆಯರೂ ಸೇತುವೆ ಆಂಜನೇಯದೇವರ ಗುಡಿಯ ಬಳಿ ಬಲಕ್ಕೆ ತಿರುಗಿ, ಚೌಡೇಶ್ವರಿ ದೇವಾಲಯದ ಬಳಿಗೆ ಬಂದು, ಮತ್ತೆ ಬಲಕ್ಕೇ ಸ್ವಲ್ಪ ದೂರ ನಡೆದು, ಅನಂತರ ಎಡರಸ್ತೆಗೆ ತಿರುಗಿದರು.

" ಇನ್ನೂ ಎಷ್ಟುದೂರವಿದೆ ಶಾಮು – ನಿನ್ನ ರೂಮು ? "

" ಇಲ್ಲೇ ನಾಗಪ್ಪಾ ಬ್ಲಾಕಿನಲ್ಲಿ "

" ಇದು ಯಾವ ಬ್ಲಾಕು ? "

" ಎ. ಡಿ. ಬ್ಲಾಕು. ಅಂದರೆ ಆದಿದ್ರಾವಿಡರು ಇರುವ ಸ್ಥಳ. ಆದರೆ ಇಲ್ಲಿರುವವರೆಲ್ಲ ಹೆಚ್ಚುಮಂದಿ ಬ್ರಾಹ್ಮಣರೇ ! "

—ಎಂದ ಶಾಮು.

" ಸದ್ಯ ' ಲೇಡಿ ಬ್ಲಾಕ್ ' ಅಲ್ಲವಲ್ಲ ! "

—ಎಂದು ನಕ್ಕ ಲಕ್ಷ್ಮಣ.

ಅವನ ದೃಷ್ಟಿ ಹಾದಿಯ ಇಕ್ಕೆಲಗಳ ಮನೆಗಳತ್ತ ಹರಿದಾಗ, ಬಾಗಿಲುಗಳ ಮುಂದೆ ಕುಳಿತು ಹರಟೆಹೊಡೆಯುತ್ತಾ ದಾರಿಗರನ್ನು ವೀಕ್ಷಿಸುತ್ತಿದ್ದ ಹೆಣ್ಣುಮಕ್ಕಳು ಕಾಣಿಸಿದರು.

" ಮಧ್ಯಮ ದರ್ಜೆಯವರಲ್ಲಿ ಹೆಣ್ಣುಮಕ್ಕಳೇ ಹೆಚ್ಚಾಗುತ್ತಿದ್ದಾರೆ. ನಮ್ಮಮಲ್ಲೇಶ್ವರದಲ್ಲಂತೂ ಅವರ ರಾಜ್ಯವೇ ಆಗಿದೆ ! "

—ಎಂದು ಮತ್ತೊಮ್ಮೆ ನಕ್ಕ ಲಕ್ಷ್ಮಣ.

" ಬೆಂಗಳೂರಿನ ತೊಂದರೆಯೆಲ್ಲಾ ಹೆಚ್ಚುಪಾಲು ಮಧ್ಯಮ ದರ್ಜೆಯವರಿಗೇ. ಅವರಿಗೆ ಬರುವ ಸಂಪಾದನೆ ಮನೆಯ ಖರ್ಚಿಗೆ ಸರಿಹೋಗುತ್ತದೆ. ಇನ್ನು ಬೆಳೆದ ಹೆಣ್ಣುಮಕ್ಕಳಿಗೆ ಮದುವೆ ಮಾಡಬೇಕೆಂದರೆ ಹಣ ಎಲ್ಲಿಂದ

ತರುವುದು ? ವರದಕ್ಷಿಣೆ ಕೊಡಲು ಯಾವ ಖಜಾನೆ ದೋಚುವುದು ? ”

—ಅದು ಶಾಮುವಿನ ಮಾತು.

“ ಮದುವೆಯಿಲ್ಲದ ಹೆಣ್ಣುಮಕ್ಕಳು ವಯಸ್ಸಿಗೆ ತಕ್ಕ ಸುಖವಿಲ್ಲದೆ ಮನಸ್ಸಿನಲ್ಲಿಯೇ ಆಸೆಯ ಕನಸು ಕಟ್ಟಿ ದಿನಮಾಡುತ್ತಾರೆ. ಇನ್ನು ಕೆಲ ಹುಡುಗಿಯರು ಕೊರಗಿ ಕೊರಗಿ ಸಣ್ಣಗಾಗುತ್ತಾರೆ. ಓದುವ ಹುಡುಗಿಯರಲ್ಲಿ ಕೆಲವರು ಶೀಲವನ್ನು ನಿರ್ಲಕ್ಷಿಸಿ, ಹುಡುಗರೊಡನೆ ಸ್ನೇಹ ಬೆಳೆಸಿ ಸಂತೃಪ್ತರಾಗುತ್ತಾರೆ. ಇಂಥವರ ತಂದೆ – ತಾಯಿಯರು ಅನ್ಯರ ಬಾಯಿಂದ ತಮ್ಮ ಮಕ್ಕಳ ನಡತೆಯ ವಿಷಯವನ್ನು ಕೇಳಿ ಪ್ರತ್ಯಕ್ಷ ನರಕ ಅನುಭವಿಸುತ್ತಾರೆ – ಅಲ್ಲವೆ ಲಕ್ಷ್ಮಣ ? ”

—ಎಂದ ಅನಂತು.

“ ನಿಜ ನಿಜ........”

—ಎಂದು ಒಕ್ಕೊರಲಿನಿಂದ ಶಾಮು – ಲಕ್ಷ್ಮಣರು ನುಡಿದರು.

ಮೂವರೂ ಶಾಮುವಿನ ಕೊಠಡಿ ಸೇರುವ ವೇಳೆಗೆ ಏಳುಗಂಟೆಯಾಗಿತ್ತು.

“ ಇದೇನು ಶಾಮು, ಎಲ್ಲಾ ಬಿಟ್ಟು, ಈ ಸ್ಮಶಾನದ ಹತ್ತಿರ – ಕೊಂಕಣಾರದ ಮೂಲೆಯಲ್ಲಿ ವಾಸಮಾಡುತ್ತಿದ್ದೀಯೆ. ಬೇರೆಲ್ಲಿಯೂ ನಿನಗೆ ರೂಮು ಸಿಕ್ಕಲಿಲ್ಲವೇ ? ”

—ನಿಟ್ಟುಸಿರಿಡುತ್ತಾ ಕೇಳಿದ ಅನಂತು.

“ ನಾನು ಓದುತ್ತಿದ್ದಾಗ, ನನ್ನ ಬಡತನಕ್ಕೆ ತಕ್ಕಹಾಗೆ ಇರಲಿ ಎಂದು ಇಲ್ಲಿ ರೂಮುಮಾಡಿದೆ. ಕೆಲಸಕ್ಕೆ ಸೇರಿದ ಮೇಲೆ ಬೇರೆಕಡೆಗೆ ಬದಲಾಯಿಸಲಿಲ್ಲ – ಅಷ್ಟೆ. ”

—ಎನ್ನುತ್ತಾ ಶಾಮು ತನ್ನ ಕೋಣೆಯ ಬಾಗಿಲು ತೆರೆದ. ತೆರೆದೊಡನೆಯೇ ಬಾಗಿಲು ಸಂದಿಯಿಂದ ಒಳಕ್ಕೆ ಬಿದ್ದಿದ್ದ – ಆ ದಿನದ ಅಂಚೆಯಲ್ಲಿ ಬಂದಿದ್ದ ಕಾಗದ ಅವನ ಗಮನವನ್ನು ಸೆಳೆಯಿತು. ಶಾಮು ಅದನ್ನು ಕೈಗೆತ್ತಿಕೊಂಡು, ಗೆಳೆಯರನ್ನು ಒಳಕ್ಕೆ ಸ್ವಾಗತಿಸಿದ. ವಿದ್ಯುದ್ದೀಪ ಹೊತ್ತಿಸಿ, ಕಾಗದವನ್ನು ಓದಿದಾಗ, ಅವನ ಮುಖ ಅರಳಿತು.

“ ಗಿರಿಜೆಯನ್ನು ಕರೆದುಕೊಂಡು ಜಯರಾಯರೂ ಅವರ ಪತ್ನಿಯೂ ಅಗ್ರಹಾರಕ್ಕೆ ಹೊರಟಿದ್ದಾರೆ. ನೀವೂ ಸಹ ಊರಿಗೆ ಹೋಗಿ, ನಿಮ್ಮ

ತಂದೆ - ತಾಯಿಯರನ್ನು ಒಪ್ಪಿಸಿ, ನಮ್ಮೆಲ್ಲರ ಬಾಯಿ ಸಿಹಿಮಾಡಿಸಬೇಕೆಂದು ಕೋರುತ್ತೇನೆ "

—ಎಂದು ಕಾಗದ ಬರೆದಿದ್ದಳು ಸರೋಜ.

ಆನಂದತುಂದಿಲನಾದ ಶಾಮು ಆ ಕಾಗದವನ್ನು ಗೆಳೆಯರ ಕೈಗಿತ್ತ.

ಕಾಗದವನ್ನು ಓದಿಕೊಂಡ ಅನಂತ—

" ಇದೆಲ್ಲಾ ನಾವು ನಿನ್ನ ರೂಮಿಗೆ ಕಾಲಿಟ್ಟ ಗಳಿಗೆಯ ಮಹಿಮೆ "

—ಎಂದು ನಕ್ಕ.

" ನಾಳೆಯೇ ಹೊರಡು. ಬರುವಾಗ ಮಾತ್ರ ಕಾರ್ಯ ಸಾಧಿಸಿಕೊಂಡೇ ಬರಬೇಕು. ಸಪ್ಪೆಮುಖ ಹಾಕಿಕೊಂಡು ಬಂದರೆ ನಿನ್ನನ್ನು ಮಾತನಾಡಿಸುವುದೇ ಇಲ್ಲ "

—ಎಂದು ನಗುತ್ತಾ ಶುಭವನ್ನು ಹಾರೈಸಿದ ಲಕ್ಷ್ಮಣ.

೭

ಮೇ ತಿಂಗಳ ಸಂಜೆ. ಸೂರ್ಯನಿನ್ನೂ ಮುಳುಗಿರದಿದ್ದರೂ, ಕಪ್ಪು-ಮೋಡಗಳ ಲೀಲಾವಿಲಾಸ ಕತ್ತಲೆ–ಬೆಳಕಿನ ಕಣ್ಣುಮುಚ್ಚಾಲೆಯಾಟದಲ್ಲಿ ಪರ್ಯವಸಾನವಾಗಿತ್ತು. ಹೊರ ಜಗುಲಿಯ ಮೇಲೆ ಕುಳಿತಿದ್ದ ನಾಗಪ್ಪನವರ ಮನಸ್ಸಿನಲ್ಲಿ ಕತ್ತಲೆ–ಬೆಳಕಿನ ವಿಚಾರಸರಣಿ ಬಂದು ಹೋಗುತ್ತಿದ್ದುದು ಅವರ ಮುಖದಲ್ಲಿ ಮೂಡುತ್ತಿದ್ದ ಸಂಕಟ–ಸಂತೋಷಭಾವಗಳಿಂದಲೇ ಅರಿವಾಗುತ್ತಿತ್ತು.

ಕ್ರಿಮಿನಲ್ ಕೇಸಿನ ವಿಚಾರಣೆ ಇನ್ನೂ ನಡೆಯುತ್ತಲೇ ಇತ್ತು. ಅದರ ಲೆಕ್ಕದಲ್ಲಿ ಇನ್ನೂ ಖರ್ಚು ಏರುತ್ತಿತ್ತು. ಇದ್ದ ಹಣವೆಲ್ಲಾ ಮುಗಿಯುತ್ತ ಬಂದಿತ್ತು. ಕ್ರಮಕ್ರಮೇಣ ಲಾಯರ್ ಚಂದೂರಾಯರು ಮೊಕದ್ದಮೆಯ ವಿಚಾರದಲ್ಲಿ ಉದಾಸೀನ ತೋರಿಸುತ್ತಲಿರುವುದನ್ನು ನಾಗಪ್ಪನವರು ಗಮನಿಸಿದ್ದರು. ಅವರ ಕಡೆಯ ಸಾಕ್ಷಿಗಳೂ ಸಹ ಒಬ್ಬೊಬ್ಬರಾಗಿ ಕೈಬಿಡುತ್ತಿರುವುದನ್ನು ನೆನಸಿಕೊಂಡಾಗಲಂತೂ ನಾಗಪ್ಪನವರಿಗೆ ತುಂಬಾ ಸಂಕಟವಾಗುತ್ತಿತ್ತು. ಸಾವಿರಗಟ್ಟಲೆ ಹಣ ಖರ್ಚುಮಾಡಿ, ಕೊನೆಗೆ, ತಮಗೆ ಜಯವಾಗದಿದ್ದರೆ ಬಹಳ ನಷ್ಟವಾಗುತ್ತದೆಂದು ಎಣಿಕೆ ಹಾಕಿದ್ದರು.

ಹಾಗೆಯೇ ಸುಮಿತ್ರೆಯ ಮದುವೆಯ ನೆನಪು ಸುಳಿದಾಗಲಂತೂ ಅದರ ಖರ್ಚಿನ ಲೆಕ್ಕ ನಾಗಪ್ಪನವರನ್ನು ಬೆದರಿಸುತ್ತಿತ್ತು. ಆದರೆ ಶಾಮುವಿನ ಮದುವೆಯ ಪ್ರಸಂಗವನ್ನು ಕಲ್ಪಿಸಿಕೊಂಡಾಗ ಅವರ ಮುಖ ಅರಳುತ್ತಿತ್ತು. ಹಣದ 'ಠಣಠಣ' ಶಬ್ದ ಕಿವಿಯಲ್ಲಿ ಕೇಳಿಸಿದಂತಾಗುತ್ತಿತ್ತು.

ಸ್ವಲ್ಪ ಹೊತ್ತಿನನಂತರ ಆಗಸದಲ್ಲಿ ಭೀಕರ ಸರಸಾಟ ಆರಂಭವಾಯಿತು. ಗುಡುಗಿನ ಆರ್ಭಟಕ್ಕೆ ನಾಗಪ್ಪನವರ ಗುಂಡಿಗೆ ನಡುಗಿದಂತಾಯಿತು. ಮನೆ–ಮಠಗಳನ್ನು ಉರುಳಿಸುವಂತೆ ಪಡುವಲಕಡೆಯಿಂದ ಬೀಸಿದ ಬಿರುಗಾಳಿ

ನಾಗಪ್ಪನವರ ಮನೆಯ ದಿಂಡುಕಟ್ಟದ ಚಾವಣಿಯ ಅಂಚಿನ ಹೆಂಚು ಗಳಿರಡನ್ನು ಕೆಳಗುರುಳಿಸಿತು. ಉತ್ತರದಿಗಂತದಲ್ಲಿ ಮಿಂಚು ಮಿಂಚಿತು. ನಾಗಪ್ಪನವರು 'ನಾಂದಿ ಮಿಂಚು ಮಿಂಚುತ್ತಿದೆ. ಮಳೆ ಬಂದೇಬರುತ್ತದೆ' ಎಂದುಕೊಂಡರು.

ಕತ್ತಲೆ ಮೆಲ್ಲಮೆಲ್ಲನೆ ಅಡಿಯಿಡುತ್ತಿತ್ತು. ಗುಡುಗಿನ ವಾಲಗದೊಡನೆ, ಮಿಂಚಿನ ದೀವಟಿಗೆಯ ಹೊಂಚುಬೆಳಕಿನಲ್ಲಿ ಮೆರೆಯುತ್ತಾ, ಗಾಳಿಯ ಚಾಮರ ಸೇವೆಯಲ್ಲಿ ಉಲ್ಲಾಸದಿಂದ ಓಲಾಡುತ್ತಾ ಮಳೆರಾಯ, ಬೆತ್ತಲೆ ಯಾಗಿ ಬರುತ್ತಿದ್ದ ಕತ್ತಲೆಯನ್ನು ಎದುರುಗೊಂಡ.

ಹನಿಯಿಟ್ಟ ಮಳೆ ಘನವಾಗಿ ಸುರಿಯಿತು. ನಾಗಪ್ಪನವರು ಎದ್ದು ಒಳಗೆ ಹೋಗಿ, ಕಂಬಳಿ ಹೊದ್ದುಕೊಂಡು ಅಂಗಳದ ಮೂಲೆಯಲ್ಲಿ ಕುಳಿತರು. ಶ್ರೀನಿವಾಸನೂ ತಲೆತುಂಬಾ ಮುಸುಕು ಹಾಕಿಕೊಂಡು, ಇನ್ನೊಂದು ಮೂಲೆ ಕುಳಿತಿದ್ದ. ವೆಂಕಮ್ಮ ಸುಮಿತ್ರೆಯರೂ ಅಲ್ಲಿಯೇ ಕುಳಿತಿದ್ದರು.

"ಮೈಸೂರಿಗೆ ಹೋಗಿದ್ದ ಶಾಮು ವಾಪಸ್ಸು ಬಂದನೋ ಇಲ್ಲವೋ? ಕ್ಷೇಮಸಮಾಚಾರಕ್ಕೂ ಅವನಿಂದ ಕಾಗದ ಬರಲಿಲ್ಲ"

—ಎಂದರು ವೆಂಕಮ್ಮ.

ಮಧ್ಯಾಹ್ನದಿಂದ ಒಂದೇ ಸಮನೆ ಅದೇ ಯೋಚನೆಯಲ್ಲಿ ಕಳೆದಿದ್ದರು ಆಕೆ.

"ಇಷ್ಟು ದಿನವಾದರೂ ಬರದೆ ಇರುತ್ತಾನೆಯೇ? ಆಫೀಸಿನಲ್ಲಿ ಬಿಡುವು ಸಿಕ್ಕಲಿಲ್ಲವೇನೋ—ಅದಕ್ಕೇ ಕಾಗದ ಬರೆಯಲಿಲ್ಲ"

—ಎಂದರು ನಾಗಪ್ಪ.

ಗಂಡನ ಉತ್ತರ ವೆಂಕಮ್ಮನವರಿಗೆ ಸಮಾಧಾನ ಉಂಟುಮಾಡಲಿಲ್ಲ. ಅವರ ಮನಸ್ಸು ಮತ್ತೆ ಯೋಚನೆಯಲ್ಲಿಯೇ ಮಗ್ನವಾಯಿತು. ಸುಮಿತ್ರೆಗೆ ಮದುವೆಯಾಗಲಿಲ್ಲವೆಂಬ ಕೊರಗು ಅವರನ್ನು ಪರಿಪರಿಯಾಗಿ ಬಾಧಿಸುತ್ತಿತ್ತು. ಅಂಗವಿಹೀನ ಶ್ರೀನಿವಾಸನನ್ನು ನೋಡಿದಾಗಲೆಲ್ಲ ಕರುಳೇ ಉರಿಯುತ್ತಿತ್ತು. ಸುಂದರುವಿನ ಸುಖವಿಲ್ಲದ ಸಂಸಾರ - ಬರಡುಬಾಳು ಅವರನ್ನು ದುಃಖಾಂಬುಧಿಯಲ್ಲಿ ಮುಳುಗಿಸುತ್ತಿತ್ತು. ಅಂತೆಯೇ ಲಲಿತೆ - ನಾಣಿಯರ ಬಲವಂತದ ದಾಂಪತ್ಯ ಸದಾ ಅವರ ಹೃದಯವನ್ನು ಇರಿಯುತ್ತಿತ್ತು.

ಒಂದು ದಿನ ವೆಂಕಮ್ಮನವರು ಲಲಿತೆಯನ್ನೇ ಕೇಳಿ ತಮ್ಮ ಸಂಶಯವನ್ನು ಪರಿಹರಿಸಿಕೊಂಡಿದ್ದರು.

" ಲಲಿತೆ, ನಾಣಿ ನಿನ್ನ ಹತ್ತಿರ ಮಾತೇ ಆಡುವುದಿಲ್ಲವೆ ? "

" ಇಲ್ಲ ಅತ್ತೆ. ನೀವೇ ನೋಡುತ್ತಿದ್ದೀರಲ್ಲಾ – ಅವರೆಂದಾದರೂ ಒಂದೇ ಒಂದು ಸಲ ನನ್ನನ್ನು ಕಣ್ಣೆತ್ತಿ ನೋಡಿದ್ದಾರೆಯೆ ? "

" ರಾತ್ರಿಯ ಹೊತ್ತೂ ನಿನ್ನೊಡನೆ ಮಾತನಾಡುವುದಿಲ್ಲವೇ ? "

" ಇಲ್ಲ ಅತ್ತೆ. ಹಾಸಿಗೆ ಕೂಡ ದೂರ ಹಾಸಿಕೊಳ್ಳುತ್ತಾರೆ "

—ಎಂದಳು ಲಲಿತೆ.

ವೆಂಕಮ್ಮ ಸೊಸೆಯ ಬಳಿಗೆ ಸರಿದು, ಅವಳ ಕಿವಿಯಲ್ಲಿ—

" ಪ್ರಸ್ತದ ರಾತ್ರಿಯೂ ಹಾಗೆಯೇ ಮಾಡಿದನೇನೇ ? "

—ಎಂದು ಪಿಸುದನಿಯಲ್ಲಿ ಕೇಳಿದರು.

" ಹೌದು ಅತ್ತೆ. ನಾನು ಮಂಚದ ಹತ್ತಿರ ಹೋದಾಗ, ಮುಖ ಮುಚ್ಚಿಕೊಂಡು, ತಮ್ಮ ಹಾಸಿಗೆಯನ್ನೆತ್ತಿಕೊಂಡು ನೆಲದ ಮೇಲೆ ಹಾಸಿಕೊಂಡರು.

—ಈ ಮಾತು ಹೇಳುವಾಗ ಲಲಿತೆ ಅಳುತ್ತಿದ್ದಳು.

" ನಾನು ಯಾವ ತಪ್ಪು ಮಾಡಿದ್ದೇನೆ ಅತ್ತೇ ? "

" ಪುಟ್ಟಾ, ಇದರಲ್ಲಿ ನಿನ್ನ ತಪ್ಪೇನಿದೆಯಮ್ಮಾ ? "

" ಮತ್ತೆ ನನ್ನನ್ನು ಕಂಡರೆ ಅವರೇಕೆ ಹಾಗೆ ಮಾಡುತ್ತಾರೆ ಅತ್ತೆ ? "

—ಈ ಪ್ರಶ್ನೆಗೆ ಉತ್ತರ ಲಲಿತೆಗೆ ತಿಳಿದೇ ಇತ್ತು. ಆದರೂ ಆಕೆ ಮನಸ್ಸು ತಡೆಯದೆ ಕೇಳಿದ್ದಳು. ಪಾಪ, ವೆಂಕಮ್ಮ ಏನೆಂದು ಉತ್ತರಿಸಬೇಕು ? ಅವರ ಕಣ್ಣೀರೇ ಲಲಿತೆಗೆ ಉತ್ತರವಾಗಿತ್ತು.

ಕೆಲವೊಮ್ಮೆ ಅಕ್ಕಪಕ್ಕದ ಮನೆಯ ಮಕ್ಕಳನ್ನೆತ್ತಿಕೊಂಡು, ಮುದ್ದಿಟ್ಟು ಆನಂದಿಸುವ ಲಲಿತೆಯನ್ನು ನೋಡಿ—

" ಮದುವೆಯಾಗಿ ಒಂದೂವರೆ ವರ್ಷವಾದರೂ ನಿನಗಿಂತಹ ಭಾಗ್ಯ ದೊರೆಯದೆ ಹೋಯಿತಲ್ಲಮ್ಮ "

—ಎಂದು ವೆಂಕಮ್ಮ ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿದ್ದರು.

ತಮ್ಮ ಸೊಸೆಯ ವಿಷಯವಾಗಿ ನಾಣಿಯೊಡನೆಯೇ ಒಂದೆರಡು ಬಾರಿ ಮಾತನಾಡಿದ್ದರು ಆ ತಾಯಿ—

" ಆ ಹುಡುಗಿಯನ್ನು ಉದಾಸೀನವಾಗಿ ಕಾಣಬಾರದು ನಾಣಿ."

" ಬೇಡವಾದ ಹುಡುಗಿಯನ್ನು ಪ್ರೀತಿಯಿಂದ ಕಾಣುವುದು ನನಗೆ ಸಾಧ್ಯವಿಲ್ಲಮ್ಮ."

" ಮದುವೆಯಾಗಿ ಆ ಹುಡುಗಿಗೆ ಯಾವ ಸುಖ ಕೊಟ್ಟೆಯೋ ಮಗು ? "

" ನನ್ನ ಸುಖವೇ ಹಾಳಾಗಿರುವಾಗ, ಅವಳಿಗೆ ಯಾವ ಸುಖ ತಂದು ಕೊಡಲಿ ? "

—ಎಂದು ನಾಣಿ ಮುಖ ತಿರುಗಿಸಿಕೊಂಡು ಹೊರಟುಹೋಗಿದ್ದ.

ನಿಟ್ಟುಸಿರಿಡುತ್ತಾ ವೆಂಕಮ್ಮ ದಿಕ್ಕುತೋಚದವರಂತೆ ತಲೆಯ ಮೇಲೆ ಕೈಹೊತ್ತು ತೆಪ್ಪಗೆ ಕುಳಿತುಬಿಡುತ್ತಿದ್ದರು. ತಾವು ನೋಡಿದಾಗಿನಿಂದಲೂ ತಮ್ಮ ಗಂಡ ಧನದೇವತೆಯ ಭಕ್ತನಾಗಿರುವುದೇ ಇಷ್ಟೆಲ್ಲ ಅನರ್ಥಕ್ಕೆ ಕಾರಣ ವೆಂದು ಆಕೆಗೆ ಸ್ಪಷ್ಟವಾಗಿ ತಿಳಿದಿತ್ತು. ಆದರೆ ನಾಗಪ್ಪನವರ ಯೋಜನೆ ಗಳನ್ನೂ ಅಭಿಪ್ರಾಯಗಳನ್ನೂ ವಿರೋಧಿಸಿ, ಅವರೆದುರಿಗೆ, ಸೆರಗು ಬಿಗಿದು ವಾದ-ವಿವಾದಕ್ಕೆ ನಿಲ್ಲುವುದು ಆ ಸಾತ್ವಿಕ ಗುಣಸಂಪನ್ನೆಗೆ ಎಂದೂ ಸಾಧ್ಯ ವಾಗಿರಲಿಲ್ಲ.

ಕಾಯಿಲೆಯಿಂದ ಗುಣ ಹೊಂದಿದನಂತರ, ಒಂದು ದಿನ ಲಲಿತೆ—

" ಅತ್ತೆ, ಈ ನಡುವೆ ಶಾಂತು ನಮ್ಮ ಮನೆಯ ಕಡೆಯೇ ಬರುವು ದಿಲ್ಲವಲ್ಲ ! "

—ಎಂದು ಕೇಳಿದ್ದಳು.

ಆಗ ವೆಂಕಮ್ಮ—

" ಇಲ್ಲಮ್ಮ. ಅವಳು ಇನ್ನುಮೇಲೆ ನಮ್ಮ ಮನೆಗೆ ಬರದಿರುವ ಹಾಗೆ ಮಾಡಿಬಿಟ್ಟಿದ್ದಾಳೆ – ನಿನ್ನ ಓರಗಿತ್ತಿ ಸರಸು "

—ಎಂದು ಕ್ಷೀಣವಾದ ಧ್ವನಿಯಲ್ಲಿ ನುಡಿಯುತ್ತಾ ತಲೆತಗ್ಗಿಸಿದ್ದರು.

ಅತ್ತೆಯ ಮಾತಿನ ಧಾಟಿಯಲ್ಲಿ ಮಾರ್ಮಿಕವಾಗಿ ಅಡಗಿದ್ದ ಮನೋ ವ್ಯಥೆಯನ್ನು ಗುರುತಿಸಿದ ಲಲಿತೆ ಮತ್ತೆ ಆ ವಿಷಯವನ್ನು ಕೆದಕಿ ಕೇಳ ಲಿಚ್ಛಿಸದೆ, ಪ್ರಶ್ನಾರ್ಥಕ ಭಾವದಿಂದ ಸುಮಿತ್ರೆಯ ಕಡೆಗೆ ನೋಡಿದ್ದಳು.

" ಹೌದು ಅತ್ತಿಗೆ. ನೀವು ಖಾಯಿಲೆಯಾಗಿದ್ದಾಗ ನಿಮ್ಮನ್ನು ನೋಡಲು ಶಾಂತು ಬಂದಿದ್ದಳಂತೆ. ಅವಳು ಬಂದಾಗ ನೀವು ನಿದ್ರಿಸುತ್ತಿದ್ದುದರಿಂದ, ಅಲ್ಲಿಯೇ ಇದ್ದ ನಾಣಿ ಅಣ್ಣಯ್ಯ ಶಾಂತುವನ್ನು ಹತ್ತಿರ ಕೂಡಿಸಿಕೊಂಡು ಮಾತನಾಡುತ್ತಿದ್ದನಂತೆ. ಅಷ್ಟರಲ್ಲಿ ಬಂದ ಸರಸತ್ತಿಗೆ ಅವರಿಬ್ಬರೂ ಜೊತೆಯಲ್ಲಿರುವುದನ್ನು ಕಂಡು ಸೀತಕ್ಕನಿಗೆ ದೂರುಕೊಟ್ಟು ಇಲ್ಲದ ಚಾಡಿ ಚುಚ್ಚಿದ್ದಾರೆ. ಅವತ್ತಿನಿಂದ ಶಾಂತು ನಮ್ಮ ಮನೆಗೆ ಹೋಗಕೂಡದೆಂದು ಸೀತಕ್ಕ ಕಟ್ಟುಮಾಡಿದ್ದಾರೆ."

—ಸುಮಿತ್ರೆಯ ಬಾಯಿಂದ, ತಮ್ಮ ಮನೆಗೆ ಶಾಂತು ಬರದೆ ಇರುವ ಕಾರಣವನ್ನು ಅರಿತಾಗ ಲಲಿತೆ ಪಾತಾಳಕ್ಕೇ ಇಳಿದುಹೋಗಿದ್ದಳು. ' ಈ ಸುಖಕ್ಕೂ ಕಲ್ಲುಹಾಕಿತೇ ದೈವ ' ಎಂದು ಮಮ್ಮಲಿ ಮರುಗಿದ್ದಳು.

ಶಾಂತುವಿನ ಸಂದರ್ಶನದಿಂದ ಗೆಲುವಾಗುತ್ತಿದ್ದ ನಾಣಿ, ಅವಳು ಬರುವುದನ್ನೇ ನಿಲ್ಲಿಸಿದ ಮೇಲೆ ಕುಗ್ಗತೊಡಗಿದ. ಮತ್ತೆ ಚಿಂತೆಯ ಹುಳು ಮನಸ್ಸಿನ ಹೂವನ್ನು ಕೊರೆಯತೊಡಗಿತು. ದಿನದಿನಕ್ಕೆ ಕ್ಷೀಣಿಸಿಹೋಗುತ್ತಿದ್ದ ತನ್ನ ಗಂಡನನ್ನು ನೋಡಿ ಲಲಿತೆಯ ದುಃಖವೂ ಹೆಚ್ಚಾಯಿತು. ಮಗ - ಸೊಸೆಯರ ಇಜ್ಜೋಡಿನ ಸಂಸಾರವನ್ನು ಕಂಡು ಕಂಡು ಸಂಕಟಪಡುತ್ತಿದ್ದಳು ವೆಂಕಮ್ಮ. ಅವಳ ಮನಸ್ಸು ಕುಳಿತಲ್ಲಿ ನಿಂತಲ್ಲಿ ಎಡೆಬಿಡದೆ ಚಿಂತಿಸುತ್ತಿತ್ತು. ಈಗ ಅಂಗಳದಲ್ಲಿ ಕುಳಿತಿರುವಾಗಲೂ ಅದೇ ಚಿಂತೆಯೇ.

ಕತ್ತಲೆ ಹೆಚ್ಚಾದುದನ್ನು ಕಂಡು—

" ದೀಪ ಹಚ್ಚಿಡು ಹೋಗೇ ಹುಡುಗಿ "

—ಎಂದು ವೆಂಕಮ್ಮನವರು ನುಡಿದಾಗ, ಸುಮಿತ್ರೆ ಎದ್ದು ಹೋದಳು.

ಹೊರಗಡೆ ಮಳೆಯ ರಭಸ ಶಾಂತವಾಗಿತ್ತು. ತುಂತುರುಹನಿಯೂ ಮೆಲ್ಲನೆ ನಿಲ್ಲತೊಡಗಿತ್ತು. ಬೀದಿಗಳೆಲ್ಲಾ ಮಳೆನೀರಿನ ಹೊಳೆಯಾಗಿದ್ದುವು.

ಸುಮಿತ್ರೆ ದೀಪ ಹೊತ್ತಿಸಿ ಅಂಗಳದಲ್ಲಿಟ್ಟಳು. ತನ್ನ ಕೋಣೆಯಿಂದ ಹೊರಬಂದ ಲಲಿತೆಯೂ ಕೈಕಾಲು ತೊಳೆದುಕೊಂಡು ದೇವರ ಮುಂದೆ ದೀಪ ಹೊತ್ತಿಸಿದಳು. ವೆಂಕಮ್ಮನವರೂ ಸಹ ತಮ್ಮ ಅಡಿಗೆಮನೆಯ ರಾಜ್ಯಕ್ಕೆ ಹೊರಡಲು ಎದ್ದು ನಿಂತು—

" ನಾಳೆ ನೀವಾದರೂ ಶಾಮೂಗೆ ಒಂದು ಕಾರ್ಡು ಬರೆಯಿರಿ. ಕ್ಷೇಮ ಸಮಾಚಾರವಾದರೂ ತಿಳಿಯುತ್ತದೆ"

—ಎಂದರು ತಮ್ಮ ಪತಿಯ ಕಡೆಗೆ ನೋಡಿ.

ಆದರೆ ನಾಗಪ್ಪನವರು—

" ಕಾಗದ ಯಾಕೆ—ಸುಮ್ಮನೆ ಒಂಬತ್ತು ಕಾಸು ದಂಡ....ಅವನೇ ಬರ್ತಾನೆ ಶನಿವಾರವೊ, ಭಾನುವಾರವೋ"

—ಎಂದರು ಉದಾಸೀನದ ಧ್ವನಿಯಲ್ಲಿ.

ಅವರು ಮಾತು ಮುಗಿಸಿದ ಎರಡು ಕ್ಷಣಕ್ಕೇ ಶಾಮು ಹಾಜರಾದ! ಅವನ ನೆನೆದ ಬಟ್ಟೆಗಳಿಂದ ನೀರು ತೊಟ್ಟಿಡುತ್ತಿತ್ತು.

" ಇಷ್ಟು ಹೊತ್ತೂ ನಿಮ್ಮಮ್ಮ ನಿನ್ನನ್ನು ನೆನಸಿಕೊಂಡಳಪ್ಪ!"

—ಎಂದರು ನಾಗಪ್ಪ.

ಸುಮಿತ್ರೆ ಅವನ ಕೈಚೀಲವನ್ನು ಕಿತ್ತುಕೊಂಡು, ಅದರಿಂದ ತೊಟ್ಟಿಡುತ್ತಿದ್ದ ನೀರನ್ನು ನೋಡಿ—

" ಚಿಕ್ಕಣ್ಣಯ್ಯ, ಈ ಸಾರಿ ಚೆನ್ನಾಗಿ 'ಗಂಗಾಪೂಜೆ' ಮಾಡಿಸಿಕೊಂಡು ಬಂದಿದ್ದಾನೆ"

—ಎಂದು ನಕ್ಕಳು.

ಶಾಮುವೂ ನಗುತ್ತಾ, ಬಟ್ಟೆ ಬದಲಿಸಲು ಒಳಗೆ ನಡೆದ.

ಅವನ ಕೈಚೀಲವನ್ನು ತನಿಖೆಮಾಡಿದ ಸುಮಿತ್ರೆ, ಬಟ್ಟೆಗಳ ಜೊತೆಯಲ್ಲಿದ್ದ ಒಂದೆರಡು ಪುಸ್ತಕಗಳನ್ನೂ ಮಾವಿನ ಹಣ್ಣನ್ನೂ ನೋಡಿ—

" ಚಿಕ್ಕಣ್ಣಯ್ಯ ಈ ಸಾರಿಯೂ ಮಾವಿನ ಹಣ್ಣನ್ನೇ ತಂದಿದ್ದಾನೆ!"

—ಎಂದಳು ತಂದೆಯ ಕಡೆಗೆ ನೋಡುತ್ತಾ.

" ಮಾವನ ಹೆಣ್ಣನ್ನು ತರಲಿಲ್ಲವೇನೋ ಕೇಳೆ."

—ನಾಗಪ್ಪ ಸುಮಿತ್ರೆಯನ್ನು ಪುಸಲಾಯಿಸಿದರು.

ತಂದೆ ಹೇಳಿದಂತೆಯೇ ಶಾಮುವಿನ ಬಳಿಗೆ ಬಂದು ಅಣಕುಧ್ವನಿಯಲ್ಲಿ ಕೇಳಿದಳು ಸುಮಿತ್ರೆ.

" ಹ್ಞಂ. ಮಾವನ ಹೆಣ್ಣಿನ ಜೊತೆಗೆ ನಿನಗೊಬ್ಬ ಅತ್ತೆಯ ಮಗನನ್ನೂ ತಂದಿದ್ದೇನೆ"

—ಎಂದು ಶಾಮು ನುಡಿದಾಗ ನಾಚಿದ ಸುಮಿತ್ರೆ ಓಡಿಹೋದಳು.

ತಾನೊಬ್ಬನೇ ಊಟಕ್ಕೆ ಕುಳಿತಾಗ, ಮೈಸೂರಿಗೆ ಹೋಗಿ ಬಂದ ಸಂಗತಿಯನ್ನೆಲ್ಲಾ ತಾಯಿಗೆ ವಿವರಿಸಿದ ಶಾಮು. ಸರೋಜೆಯ ಆತಿಥ್ಯ, ಗಿರಿಜೆಯ ಸಂದರ್ಶನ, ಅವಳನ್ನೇ ಮದುವೆಯಾಗಬೇಕೆನ್ನುವ ತನ್ನ ಆಸೆ—ಎಲ್ಲವನ್ನೂ ಮುಚ್ಚುಮರೆಯಿಲ್ಲದೆ ಹೇಳಿ—

" ಅಮ್ಮ, ಇದೆಲ್ಲ ಅಪ್ಪನಿಗೆ ತಿಳಿಯಕೂಡದಮ್ಮ. ನಾಳೆ ಮೈಸೂರಿನಿಂದ ಅವರೆಲ್ಲ ಬರುತ್ತಾರೆ. ಅವರ ಮಾತಿಗೆ ನೀನು ಒಪ್ಪಬೇಕಮ್ಮ "

—ಎಂದು ಅಂಗಲಾಚಿದ.

" ನಿನ್ನ ಇಷ್ಟವೇ ನನ್ನ ಇಷ್ಟ ಮಗು. ಮದುವೆಯಾಗಿ ನೀವಿಬ್ಬರೂ ಸುಖವಾಗಿದ್ದರೆ ಅದಕ್ಕಿಂತ ಬೇರೆ ಸಂತೋಷವಿದೆಯೆ ನನಗೆ ? ನಿನ್ನ ಬಾಳು ನಿನ್ನ ಅಣ್ಣಂದಿರ ಬಾಳಿನ ಹಾಗೆ ಆಗದಿದ್ದರೆ ಸರಿ. ದೇವರು ನನ್ನ ಮಕ್ಕಳನ್ನು ಸುಖವಾಗಿಟ್ಟರೆ, ನಾನು ಎಷ್ಟು ಕಷ್ಟವನ್ನು ಬೇಕಾದರೂ ಪಡುತ್ತೇನೆ "

—ತಾಯಿಯ ಅಂತಃಕರಣದಿಂದ ಬಂದ ಆಶಾಪೂರ್ಣ ಅಮೃತವಾಣಿ ಶಾಮುವಿನ ಕಣ್ಣಲ್ಲಿ ನೀರು ತರಿಸಿತು. ' ಮಕ್ಕಳಿಗೋಸ್ಕರ ತಮ್ಮ ಕಷ್ಟವನ್ನು ಲೆಕ್ಕಿಸದೆ ಎಷ್ಟೊಂದು ಶ್ರದ್ಧೆ ವಹಿಸುತ್ತಾರೆ ತಾಯಂದಿರು ! ' ಎಂದುಕೊಂಡ ಮನಸ್ಸಿನಲ್ಲಿಯೇ.

ಮರುದಿನ ಬೆಳಗಿನ ರೈಲಿನಲ್ಲಿಯೇ ಪತ್ನಿ - ಪುತ್ರಿಯರೊಡನೆ ಜಯರಾಯರು ಅಗ್ರಹಾರಕ್ಕೆ ಆಗಮಿಸಿದರು. ಗೋವಿಂದಯ್ಯನವರ ಮೂಲಕ ನಾಗಪ್ಪನವರ ವಿಷಯ ಪರಿಚಯವಾಯಿತೆಂದು ಹೇಳುತ್ತಾ ಅಂಗಳದಲ್ಲಿದ್ದ ಚಾಪೆಯ ಮೇಲೆ ಕುಳಿತರು. ವೆಂಕಮ್ಮ ಜಯರಾಯರ ಪತ್ನಿ ಜಾನಕಮ್ಮನನ್ನೂ ಗಿರಿಜ - ಮಾರೆಯರನ್ನೂ ಒಳಕ್ಕೆ ಕರೆದುಕೊಂಡು ಹೋದರು. ದೂರದಿಂದಲೇ ಶಾಮು ಗಿರಿಜೆಯನ್ನು ನೋಡಿ ನಕ್ಕ. ಕಂಡೂ ಕಾಣದಂತೆ ಅವಳೂ ನಾಚಿಕೆಯಿಂದ ನಕ್ಕು ದೃಷ್ಟಿ ಬದಲಿಸಿದಳು.

ಅಂಗಳದಲ್ಲಿ ಮಾತುಕತೆ ಪ್ರಾರಂಭವಾಯಿತು. ನಾಗಪ್ಪನವರಿಗೆ ವರದಕ್ಷಿಣೆಯ ಮಾತು ತಾನೆ ಮುಖ್ಯ ? ಅವರು ಕೇಳಿಯೇ ಕೇಳಿದರು ಎರಡು ಸಾವಿರ ! ಅಷ್ಟು ಹಣವನ್ನು ಕೊಡಲು ಪ್ರಕೃತಸ್ಥಿತಿಯಲ್ಲಿ ತಮ್ಮಿಂದ ಸಾಧ್ಯವಿಲ್ಲವೆಂದರು ಜಯರಾಯರು.

ಮಾತಿನ ಬಿರುಸು ಏರಿತು.

ಆ ಸಮಯದಲ್ಲಿ ವೆಂಕಮ್ಮ ನಾಗಪ್ಪನವರನ್ನು ಕರೆದು, ಅವರ ಕಿವಿಯಲ್ಲಿ ಪಿಸುಗುಟ್ಟಿದರು—

ಈ ಹುಡುಗಿ ತುಂಬಾ ಚೆನ್ನಾಗಿದ್ದಾಳೆ. ಶಾಮುವಿಗೂ ಒಪ್ಪಿಗೆಯಾಗಿದೆ. ಅವಳನ್ನಲ್ಲದೆ ಬೇರೆಯಾರನ್ನೂ ಅವನು ಮದುವೆಯಾಗುವುದಿಲ್ಲವೆನ್ನುತ್ತಾನೆ. ಹೇಗಾದರೂ ಒಪ್ಪಿಕೊಂಡು ಬಿಡಿ.”

—ಈ ಮಾತನ್ನು ಕೇಳಿ, ಹೆಡೆತುಳಿದ ಹಾವಿನಂತಾದರು ನಾಗಪ್ಪ ಆದರೆ ಆ ಸಮಯದಲ್ಲಿ ಹೆಡೆ ಎತ್ತಿ ಬುಸುಗುಟ್ಟಿದರೆ ತಮ್ಮ ಇಚ್ಛೆ ಕೈಗೂಡುವುದಿಲ್ಲವೆಂದುಕೊಂಡು, ಅಂಗಳಕ್ಕೆ ಬಂದು ಮತ್ತೆ ಮಾತಿಗೆ ತೊಡಗಿದರು.

ಸಾವಿರ ಕೊಡುತ್ತೇನೆಂದು ಹೇಳುತ್ತಿದ್ದ ಜಯರಾಯರು ನಾಗಪ್ಪನವರ ಬಲವಂತದಿಂದ ಸಾವಿರದಿನ್ನೂರಕ್ಕೆ ಬಂದುನಿಂತರು. ಮದುವೆಯಲ್ಲಿ ಎಂಟುನೂರು ಕೊಡುವುದಾಗಿಯೇ, ಉಳಿದ ನಾಲ್ಕುನೂರನ್ನು ಒಂದೆರಡು ತಿಂಗಳ ನಂತರ ಕೊಡುವುದಾಗಿಯೂ ಹೇಳಿದಮಾತಿಗೆ ನಾಗಪ್ಪನವರು ಒಪ್ಪಿಕೊಂಡರು ಮದುವೆ ಮೈಸೂರಿನಲ್ಲಿಯೇ ನಡೆಯುವುದೆಂದು ನಿಶ್ಚಯವಾಯಿತು.

ಜಯರಾಯರಂತೂ ತಾವು ಬಂದ ಕೆಲಸ ಅಷ್ಟುಬೇಗ ಸುಮುಖವಾಗಿ ಮುಗಿಯುವುದೆಂದು ನಂಬಿರಲಿಲ್ಲ.

ತನ್ನ ಮದುವೆ ಗಿರಿಜೆಯೊಡನೆ ನಿಶ್ಚಯವಾದ ಸುದ್ದಿಯನ್ನು ಅರಿತಾಗಲಂತೂ ಶಾಮು ಕುಣಿದಾಡಿದ.

“ನನ್ನ ಮಗಳಿಗೂ ಗಂಡು ಗೊತ್ತುಮಾಡಿದ್ದೇನೆ. ಇವನ ಮದುವೆಯ ಜೊತೆಯಲ್ಲಿಯೇ ಅವಳ ಮದುವೆಯೂ ಆಗಬೇಕು. ಎರಡು ಶುಭಕೆಲಸಗಳೂ ಮೈಸೂರಿನಲ್ಲಿಯೇ—ಒಂದೇ ದಿನವೇ—ಆಗುವುದಿಲ್ಲವೇ ?”

—‘ಆಗುತ್ತದೆ’ ಎಂಬ ನಿಶ್ಚಿತ ಮುಖಮುದ್ರೆಯನ್ನು ತಳೆದು, ಭಾವಿ ಬೀಗರ ಮುಖವನ್ನು ನೋಡಿದರು ನಾಗಪ್ಪ.

“ಅದಕ್ಕೇನು ಆಗಬಹುದು. ಮನೆ ವಿಶಾಲವಾಗಿದೆ. ಸಾಲದಿದ್ದರೆ ಗೋವಿಂದಯ್ಯನವರ ಮನೆಯನ್ನೂ ಉಪಯೋಗಿಸಿಕೊಳ್ಳಬಹುದು”

—ಎಂದರು ಜಯರಾಯರು.

ನಾಗಪ್ಪನವರ ಮುಖ ಇನ್ನಷ್ಟು ಗೆಲುವಾಯಿತು.

ಆ ಮಧ್ಯಾಹ್ನ ವಧುಪರೀಕ್ಷೆಯ ನೆಪಹೂಡಿದರು ವೆಂಕಮ್ಮ.

ಅಲಂಕೃತಳಾದ ಗಿರಿಜ ಎಲ್ಲರ ಮುಂದೆಯೂ ಅಂಗಳದಲ್ಲಿ ಕುಳಿತಳು.

" ಹುಡುಗಿ ತುಂಬಾ ಚೆನ್ನಾಗಿದ್ದಾಳೆ ಕಣೆ. ನಿಮ್ಮ ಚಿಕ್ಕಣ್ಣಯ್ಯನಿಗೆ ಜೊತೆ ಸರಿಯಾಗಿದೆ "

—ಎಂದಳು ಪಕ್ಕದಲ್ಲಿ ಕುಳಿತಿದ್ದ ಸುಮಿತ್ರೆಯ ಕಡೆಗೆ ನೋಡುತ್ತಾ ಲಲಿತ.

ಬೀಗಿತ್ತಿಯಾಗಲಿದ್ದ ಜಾನಕಮ್ಮನವರ ಬಳಿ ಕುಳಿತಿದ್ದ ವೆಂಕಮ್ಮನವರಿಗೆ ಭಾವೀ ಸೊಸೆಯ ಬಾಯಿಬಿಡಿಸಬೇಕೆಂದು ಆಸೆ.

" ನಮ್ಮ ಶಾಮೂಗೆ ಹಾಡು ಕೇಳುವುದೆಂದರೆ ತುಂಬಾ ಆಸೆ ಜಾನಕಮ್ಮನವರೆ. ಗಿರಿಜ ತುಂಬಾ ಹಾಡು ಕಲಿತಿದ್ದಾಳೆಂದು ಕಾಣುತ್ತದೆ. ಒಂದು ನುಡಿ ಹಾಡಿಸಬಾರದೆ ? "

—ವೆಂಕಮ್ಮ ಮಂದಹಾಸ ಬೀರುತ್ತಾ ಮೃದುವಾದ ಧ್ವನಿಯಲ್ಲಿ ಹೇಳಿದರು.

" 'ಹಾಡು' ಎಂದು ಆಜ್ಞೆ ಮಾಡುವ ಅಧಿಕಾರ ನಿಮಗಿರುವಾಗ, ಏಕೆ ಇಷ್ಟು ಸಂಕೋಚಪಟ್ಟುಕೊಂಡು ಮಾತನಾಡುತ್ತಿದ್ದೀರಿ ತಾಯಿ ? "

" ಸಂಕೋಚವಲ್ಲಮ್ಮ. ಹುಡುಗಿಯರ ಮನಸ್ಸು ಹೂವಿನ ಹಾಗೆ. ಆಜ್ಞೆ–ಅಧಿಕಾರ ಅಂತ ಗಟ್ಟಿಯಾಗಿ ಮಾತನಾಡಿದರೆ ಮುದುಡಿ ಹೋಗುತ್ತದೆ...."

—ಎಂದರು ವೆಂಕಮ್ಮ.

ತಮ್ಮ ಮಗಳಿಗೆ ಅತ್ತೆಯಾಗಲಿರುವ ಆ ಸಾಧ್ವಿಯ ಸಾತ್ವಿಕ ಚಿತ್ತವೃತ್ತಿಯನ್ನು ಕಂಡು ಜಾನಕಮ್ಮನವರ ಹೃದಯ ತುಂಬಿಬಂದಿತು.

" ನಿಜವಾಗಿಯೂ ನನ್ನ ಗಿರಿಜ ಮಹಾ ಭಾಗ್ಯಶಾಲಿ. ನಿಮ್ಮ ಸೊಸೆಯಾಗುವುದಕ್ಕೆ ಜನ್ಮಜನ್ಮಾಂತರಗಳಲ್ಲಿ ಪುಣ್ಯಮಾಡಿದ್ದಾಳೆ "

—ಎಂದರು ಜಾನಕಮ್ಮ.

ಎರಡು ಕ್ಷಣಗಳ ಮೌನಸಾಮ್ರಾಜ್ಯದ ಬಳಿಕ, ಅವರೇ ನುಡಿದರು ಮಗಳ ಕಡೆಗೆ ನೋಡುತ್ತಾ—

" ಯಾಕಮ್ಮ ಇನ್ನೂ ಸುಮ್ಮನೆ ಕೂತಿದ್ದೀ.... ? ನಿನ್ನ ಅತ್ತೆಮ್ಮನವರು ಹೇಳಿದ್ದು ಕೇಳಿಸಲಿಲ್ಲವೆ ? "

—ಕೇಳಿಸಿತೆಂಬುದನ್ನು ಅರಳಿದ ತುಟಿಯ ತೀರಕ್ಕೆ ಅತಿ ಮೃದುವಾಗಿ ಅಪ್ಪಳಿಸಿದ ಅಲೆಯ ನಗುವಿನಲ್ಲೇ ಸೂಚಿಸಿ; ಕಣ್ಣಮಣಿಗಳನ್ನೊಮ್ಮೆ ನಾಚಿಕೆಯ ನೋಟದಲ್ಲಿ ನಲಿದಾಡಿಸಿ, ಆರಂಭಿಸಿದಳು ಹಾಡನ್ನು ಗಿರಿಜ—

" ಶ್ಯಾಮಸುಂದರನ ಕಂಡು ಮಾರುಹೋದಳು ರಾಧೆ.

ಧಾರೆಧಾರೆಯಾಗಿ ಹರಿಯಿತು ಆನಂದದ ಪನ್ನೀರು "

— ಶಂಕರಾಭರಣದಲ್ಲಿ ಪ್ರಾರಂಭವಾದ ಗೀತೆ 'ಕಲ್ಯಾಣಿ'ಗೆ ತಿರುಗಿ, 'ದರ್ಬಾರಿ'ಗೆ ಬಂದು ಎಲ್ಲರನ್ನೂ ಆನಂದಗೊಳಿಸಿತು. ಗಿರಿಜೆಯ ಕಂಠ ಅಮೃತದಲ್ಲಿ ನೆನೆದಷ್ಟು ಸವಿಯಾಗಿತ್ತು ಆ ದಿನ.

ಸುಮಿತ್ರೆ - ಲಲಿತೆಯರಂತೂ ಗಿರಿಜೆಯನ್ನು ಬಹುವಾಗಿ ಮೆಚ್ಚಿ ಕೊಂಡಾಡಿದರು.

" ನಮ್ಮ ಮನೆಗೆ ಬಂದ ಸೊಸೆಯರೆಲ್ಲಾ ಸಂಗೀತ ಹಾಡಿಕೊಂಡೇ ಬಂದರು. ಗಿರಿಜಾನೂ ಹಾಗೆಯೇ........"

— ಎಂದು ಜಾನಕಮ್ಮನವರೊಡನೆ ಹೇಳುತ್ತಾ ನಕ್ಕರು ವೆಂಕಮ್ಮ.

ಅದೇ ಸಂಜೆ ನಾಗಪ್ಪನವರು ಪುಟ್ಟಾಶಾಸ್ತ್ರಿಗಳನ್ನು ಕರೆಸಿ ಲಗ್ನಪತ್ರಿಕೆ ಬರೆಸಿದಾಗ, ಶಾಮುವಿಗೆ ನವನಿಧಿ ದೊರಕಿದಷ್ಟು ಆನಂದವಾಯಿತು.

ಮರುದಿನ ಜಯರಾಯರ ಕುಟುಂಬ ಮೈಸೂರಿಗೆ ಮರ ತು. ಅವ ರೊಡನೆ ಬೆಂಗಳೂರಿನವರೆಗೂ ತೆರಳಿದ ನಾಗಪ್ಪನವರು, ಸೀತಾ ಾಮಯ್ಯ ನವರ ಮನೆಗೆ ಹೋಗಿ, ಸುಮಿತ್ರೆಯ ಮದುವೆಯ ಲಗ್ನಪತ್ರಿಕೆಯನ್ನು ಬರೆಸಿ ಕೊಂಡು ಬಂದರು.

ಶಾಮು ಅಗ್ರಹಾರದಿಂದಲೇ ಸರೋಜೆಗೊಂದು ಕಾಗದ ಬರೆಯುತ್ತಾ —

" ನೀವು ಯಾವ ಗಳಿಗೆಯಲ್ಲಿ ನನಗೆ ಗಿರಿಜೆಯನ್ನು ತೋರಿಸಿದಿರೋ ಅದು ನಿಜವಾಗಿಯೂ ರಸಗಳಿಗೆ. ಸದಾ ಅವಳು ನನ್ನ ಸಂಗಾತಿಯಾಗುವಂತಹ ಸೌಭಾಗ್ಯವನ್ನು ಕಲ್ಪಿಸಿಕೊಟ್ಟ ನಿಮಗೆ ನಾನು ಚಿರಋಣಿ. ಹಾಗೆಯೇ ನಿಮಗೊಬ್ಬ ಸಂಗಾತಿಯನ್ನು ದೊರಕಿಸಿಕೊಡಬೇಕೆಂಬುದು ನನ್ನ ಆಸೆ. ಅದನ್ನು ಪೂರೈಸುವ ನನ್ನ ಪ್ರಯತ್ನ ಫಲಿಸಲಿ ಎಂದು ನೀವು ಕೋರುವಿರಾದರೆ

ನಿಮ್ಮ ಅರ್ಥಋಣದಿಂದ ನಾನು ಮುಕ್ತನಾದೆನೆಂದು ಭಾವಿಸುತ್ತೇನೆ. ಬೇಸರಿಸದೆ, ನನ್ನ ಬೆಂಗಳೂರಿನ ವಿಳಾಸಕ್ಕೆ ಕಾಗದ ಬರೆಯಿರಿ ”

—ಎಂದು ತಿಳಿಸಿದ್ದ.

ತನ್ನ ಮದುವೆ ಮತ್ತು ತನ್ನ ತಂಗಿಯ ಮದುವೆ ಮೈಸೂರಿನಲ್ಲಿಯೇ ನಡೆಯುವುದೆಂಬ ಸಂಗತಿಯನ್ನು ಆ ಕಾಗದದಲ್ಲಿ ಬರೆಯಲು ಮರೆತೆನಲ್ಲಾ ಎಂದುಕೊಂಡ. ಆದರೆ ಇಲ್ಲಿ ನಡೆದ ಸಂಗತಿಯನ್ನೆಲ್ಲಾ ಗಿರಿಜ ಅವಳಿಗೆ ಹೇಳದೆ ಇರುತ್ತಾಳೆಯೇ ? – ಎಂದು ಸಮಾಧಾನಗೊಂಡು ಬೆಂಗಳೂರಿಗೆ ಮರಳಿದ ಶಾಮು.

ಕಚೇರಿಗೆ ಬಂದಾಗ ಅವನ ಗೆಲುಮುಖವನ್ನು ಕಂಡು—

“ ಹೋದ ಕೆಲಸ ಜಯವಾದ ಹಾಗಿದೆ ! ”

—ಎಂದ ಗೆಳೆಯ ಅನಂತ ನಗುತ್ತಾ.

“ ಜಯವಾಗದೆ ಇದ್ದರೆ ಅವನ ಮುಖ ಹೀಗೆ ಅರಳಿರುತ್ತಿರಲಿಲ್ಲ ಅನಂತು ; ಅಳುತ್ತಿತ್ತು ! ”

—ಎಂದ ಲಕ್ಷ್ಮಣ.

ಯಾವ ಮಾತನ್ನೂ ಆಡದೆ ಶಾಮು ಮಿತ್ರರ ಕಡೆಗೆ ನೋಡುತ್ತಾ ನಗುತ್ತಿದ್ದ.

“ ಹ್ಞುಂ. ಹೆಣ್ಣುಮಕ್ಕಳ ಹಾಗೆ ನಾಚಿಕೊಂಡು ನೀನೇನೂ ನಮಗೆ ಹೇಳಬೇಕಾಗಿಲ್ಲ. ಮದುವೆ ಎಷ್ಟನೇ ತಾರೀಕು ಎಂಬುದನ್ನು ಹೇಳಿಬಿಡು— ಅಷ್ಟೇ ಸಾಕು ”

—ಎಂದರು ಜೋಡುದನಿಯಲ್ಲಿ ಅನಂತು ಮತ್ತು ಲಕ್ಷ್ಮಣ.

“ ಜೂನ್ ಒಂಭತ್ತನೆಯ ತಾರೀಕು ”

—ಎಂದು ಶಾಮು ನುಡಿದಾಗ, ಲಕ್ಷ್ಮಣ ತನ್ನ ದೃಷ್ಟಿಯನ್ನು ಕ್ಯಾಲೆಂಡರಿನ ಕಡೆಗೆ ಹೊರಳಿಸಿ ಲೆಕ್ಕಮಾಡತೊಡಗಿದ.

ಅಷ್ಟರಲ್ಲಿ ಅನಂತ—

“ ಇವತ್ತಾಗಲೇ ತಾರೀಕು ಮೂವತ್ತು. ಇನ್ನು ಮದುವೆಗೆ ಉಳಿದಿರುವುದು ಹತ್ತೇ ದಿನ ! ”

—ಎಂದ ಕಣ್ಣರಳಿಸುತ್ತಾ.

" ಹಾಗಾದರೆ ನಮಗೆ ಸಿಹಿಯೂಟ ಸಿಕ್ಕುವ ಶುಭದಿನ ಹತ್ತಿರದಲ್ಲಿಯೇ ಇದೆಯೆನ್ನು! ಆದರೂ ಮದುವೆಗೆ ಮೊದಲೇ ನಮಗೆ ಸಿಹಿತಿಂಡಿ ಕೊಡಿಸ ಬೇಕಮ್ಮ!! "

—ಎಂದ ಲಕ್ಷ್ಮಣ.

ಮೂವರೂ ನಗುತ್ತಾ ಉಡುಪಿ ಹೋಟೆಲಿನ ಕಡೆಗೆ ಹೊರಟರು.

ಮೈಸೂರು ಪಾಕು, ದೋಸೆ, ಬಾದಾಮಿಯ ಹಾಲು—ಒಂದೊಂದಾಗಿ ಮೇಜಿನ ಮೇಲಕ್ಕೆ ಬಂದು ಮಾಯವಾದವು. ಶಾಮು ಹಣಕೊಟ್ಟು ಹೊರಗೆ ಬಂದಾಗ, ಅನಂತ–ಲಕ್ಷ್ಮಣರು ಸಿಗರೇಟು ಹಚ್ಚಿದರು.

" ಚಿರೋಟಿ–ಹಾಲು ತೆಗೆದುಕೊಂಡಿದ್ದರೆ ಚೆನ್ನಾಗಿತ್ತು ಶಾಮು "

—ಎಂದ ಅನಂತ.

" ಅವನ ಮದುವೆಯಲ್ಲಿ ಅದನ್ನೇ ಮಾಡಿಸುತ್ತಾನೆ ಬಾ "

—ಎನ್ನುತ್ತಾ ಶಾಮುವಿನ ಮುಖ ನೋಡಿ ನಕ್ಕ ಲಕ್ಷ್ಮಣ.

ಅಂದಿನಿಂದ ನಗುತ್ತ ನಗುತ್ತ, ಶಾಮುವನ್ನು ಹಾಸ್ಯಮಾಡುವುದೇ ಆಯಿತು— ಗೆಳೆಯರಿಗೆ ಕೆಲಸ.

ಬಹು ಬೇಗನೆ ಬಂದಿತು ಜೂನ್ ಒಂಭತ್ತನೆಯ ತಾರೀಕು.

ಗೆಳೆಯರೊಡನೆ ಎರಡು ದಿನ ಮುಂಚಿತವಾಗಿಯೇ ರೈಲು ಹತ್ತಿದ ಶಾಮು ಮೈಸೂರಿನಲ್ಲಿ ಲಕ್ಷ್ಮಣನ ಮನೆಯಲ್ಲಿ ಇಳಿದುಕೊಂಡ. ಬೀಗರಂತೆ ನಾಗಪ್ಪನವರು ತಮ್ಮ ಕುಟುಂಬದೊಡನೆ ಬಂದ ಬಳಿಕ, ಅವರ ಪರಿವಾರದಲ್ಲಿ ಸೇರಿಕೊಂಡ—ವರ.

ವರಪೂಜೆಯಾಯಿತು. ಗೆಳೆಯರು ಎಡಬಿಡದೆ ಶಾಮುವಿನ ಬಳಿಯೇ ಸುಳಿದಾಡುತ್ತಿದ್ದರು. ಮರುದಿನ ಮದುವೆಯ ವೇಳೆಗೆ ಶಾಮುವಿನ ಸಾಹಿತ್ಯಕ ಮಿತ್ರರಿಂದ ಶುಭಸಂದೇಶಗಳು ಬಂದವು. ಬೆಂಗಳೂರಿನಿಂದ ವೆಂಕಮ್ಮನವರ ತಮ್ಮನ ಹೆಂಡತಿ ಪದ್ಮಮ್ಮ ಮತ್ತು ಆಕೆಯ ಮಗಳು ರತ್ನ ಮುಹೂರ್ತದ ಸಮಯಕ್ಕೆ ಬಂದು ಶಾಮು–ಗಿರಿಜೆಯರನ್ನೂ ರಾಜು–ಸುಮಿತ್ರೆಯರನ್ನೂ ನೋಡಿ ಸಂತೋಷಿಸಿದರು. ಸ್ವರ್ಣಳೊಡನೆ ಅಮೆರಿಕಾ ಪ್ರವಾಸವನ್ನು ಕೈಗೊಂಡಿದ್ದ ಸುಂದರು ನ್ಯೂಯಾರ್ಕಿನಿಂದ ತಂತಿಯೊಂದನ್ನು ಕಳುಹಿಸಿ, ವಧೂವರರಿಗೆ ಶುಭಾಶಯವನ್ನು ಕೋರಿದ್ದ. ಎರಡು ಜೊತೆ ನವದಂಪತಿ

ಗಳನ್ನು ಕಂಡು ಮದುವೆಗೆ ಬಂದಿದ್ದವರೆಲ್ಲ ಸಂತೋಷಪಟ್ಟರು. ಜಯರಾಯರು ಕೊಟ್ಟ ಎಂಟು ನೂರು ರೂಪಾಯಿಗಳನ್ನು ನಾಗಪ್ಪನವರು ಸೀತಾರಾಮಯ್ಯನವರಿಗೆ ಕೊಟ್ಟು, ಉಳಿದ ಇನ್ನೂರು ರೂಪಾಯಿಗಳನ್ನು ಒಂದೆರಡು ತಿಂಗಳನಂತರ ಕೊಡುವುದಾಗಿ ಹೇಳಿ ಒಪ್ಪಿಸಿದರು. ನಾಗಪ್ಪನವರಿಗೆ ಒಂದು ಕಾಸೂ ಖರ್ಚಿಲ್ಲದೆ, ಪರಸ್ಪರ ಮನಸ್ತಾಪವಿಲ್ಲದೆ ಮುಕ್ತಾಯವಾಯಿತು ಮದುವೆಯ ಸಂಭ್ರಮ.

೮

ಸಂಭ್ರಮದಿಂದ ಕಾಗದ ಬರೆಯುತ್ತಿದ್ದ ಗಿರಿಜೆಗೆ ಶಾಮು—

" ಮುದ್ದು ಗಿರಿಜೆಗೆ—

ಪ್ರೀತಿಯ ಮುತ್ತುಗಳು........"

—ಒಕ್ಕಣೆ ಬರೆದಮೇಲೆ, ಕಾಗದ ಮುಂದುವರಿಸುವುದು ಹೇಗೆಂಬುದು ತೋಚಲಿಲ್ಲ ಶಾಮುವಿಗೆ. ಕತೆ–ಕಾದಂಬರಿಗಳನ್ನು ಬರೆಯಲು ಕುಳಿತಾಗ ಇರುತ್ತಿದ್ದ ಪುಟಗಟ್ಟಲೆ ಬರೆಯುವ ಶಕ್ತಿ ಈಗೆಲ್ಲಿ ಹೋಯಿತು ಎಂದುಕೊಂಡ. ಪುಟ್ಟದೊಂದು ಪ್ರೇಮಪತ್ರ ಬರೆಯಲು ತನ್ನಿಂದ ಸಾಧ್ಯವಾಗಲಿಲ್ಲವಲ್ಲಾ – ಎಂದು ಪೇಚಾಡುತ್ತಿರುವಾಗಲೇ, ಅವನ ಕೋಣೆಗೆ ನಾಗಪ್ಪನವರ ಆಗಮನವಾಯಿತು.

ಬರೆಯುತ್ತಿದ್ದ ಕಾಗದವನ್ನು ಮುಚ್ಚಿಟ್ಟು, ಶಾಮು—

" ಈಗ ಬಂದೆಯೇನಣ್ಣ ? "

—ಎಂದು ಕೇಳಿದ ತಂದೆಯ ಕಡೆಗೆ ನೋಡುತ್ತಾ.

" ಬೆಳಿಗ್ಗೆಯೇ ಬಂದೆನಪ್ಪ. ಇವತ್ತು ವಿಚಾರಣೆ ಇತ್ತು. ಕೋರ್ಟಿಗೆ ಹೋಗಿದ್ದೆ."

" ಏನಾಯಿತಣ್ಣ ? "

" ಸೆಪ್ಟಂಬರ್ ಇಪ್ಪತ್ತೇಳಕ್ಕೆ ಜಡ್ಜ್‌ಮೆಂಟ್ ಅಂತ ಹೇಳಿದರು "

" ಮುಂದಿನ ತಿಂಗಳೇ ಸೆಪ್ಟಂಬರ್ "

" ಹೌದು "

—ಎಂದು ನುಡಿದ ನಾಗಪ್ಪನವರು ಎರಡು ಕ್ಷಣ ಏನನ್ನೋ ಯೋಚಿಸಿದರು.

ಅನಂತರ—

“ ಮದುವೆಯಾಗಿ ಎರಡು ತಿಂಗಳಾಯಿತಲ್ಲಾ ಶಾಮು. ಮೈಸೂರಿನಿಂದ ಜಯರಾಯರು ಹಣವನ್ನೇ ಕಳಿಸಲಿಲ್ಲವಲ್ಲ ! ”

“ ಯಾವ ಹಣ ? ”

“ ಚೆನ್ನಾಗಿ ಕೇಳ್ತೀಯಾ ಕಣೋ. ಅವರಿನ್ನೂ ನಾನ್ನೂರು ರೂಪಾಯಿ ಬಾಕಿ ಕೊಡಬೇಡವೆ ? ”

“ ಅವರಿಂದ ನಮಗೆ ಬಾಕಿ ಬರಬೇಕಾದುದು ಯಾವುದಿದೆಯೋ ನನಗೆ ಅರ್ಥವಾಗಲಿಲ್ಲ.”

“ ಅದೇ ಕಣೋ – ವರದಕ್ಷಿಣೇದು ! ಸಾವಿರದ ಇನ್ನೂರರಲ್ಲಿ ಎಂಟು ನೂರು ಕೊಟ್ಟರು. ಇನ್ನೂ ನಾನ್ನೂರು ಬಾಕಿ ಇದೆ.”

“ ಓ, ಆ ಹಣವೋ ? ”

“ ಹ್ಞಾಂ, ಯಾವ ಹಣವಾದರೇನು – ಬಾಕಿ ಬಾಕಿಯೇ ಅಲ್ಲವೇ ? ”

“ ಕೊಡುತ್ತಾರೆ. ಅದಕ್ಕೇನೀಗ ಅವಸರ ? ”

“ ಅವಸರ ಮಾಡದೆ ಬಿಟ್ಟರೆ, ಅದು ಹೋದಹಾಗೆಯೇ ”

“ ಎಲ್ಲಿಗೂ ಹೋಗುವುದಿಲ್ಲಣ್ಣಾ. ಯಾವುದಾದರೂ ಹಣ ಬಂದರೆ, ಅವರೇ ಕಳುಹಿಸಿಕೊಡುತ್ತಾರೆ. ಅದಕ್ಕೇಕೆ ತಗಾದೆ ಮಾಡಬೇಕು ? ”

“ ಹಣ ಬರಬೇಕಾದರೆ ತಗಾದೆ ಮಾಡಲೇಬೇಕು. ಅದೇ ವ್ಯವಹಾರ. ನಾಳೆಯೇ ನಾನು ಜಯರಾಯರಿಗೆ ಕಾಗದ ಬರೆದು ಹಾಕುತ್ತೇನೆ ”

—ಎಂದರು ನಾಗಪ್ಪ.

ಶಾಮುವಿಗೆ ಚಿಂತೆಗಿಟ್ಟುಕೊಂಡಿತು. ಬರೆಯುತ್ತಿದ್ದ ಪ್ರೇಮಪತ್ರವನ್ನು ಮುಂದುವರಿಸಲು ಉತ್ಸಾಹವಿಲ್ಲದೆ ಆತ ಸುಮ್ಮನಾದ.

ಮರುದಿನ, ಬೆಳಗಿನ ರೈಲಿಗೇ ಅಗ್ರಹಾರಕ್ಕೆ ಮರಳಿದರು ನಾಗಪ್ಪ.

ಎಂದಿನಂತೆ ಶಾಮುವೂ ತನ್ನ ಕಚೇರಿಗೆ ಹೋಗಿ ಕುಳಿತ.

ಸುಮಾರು ಹತ್ತು ಗಂಟೆಯ ವೇಳೆಗೆ ಅವನ ವಿಳಾಸವಿದ್ದ ಲಕೋಟೆಯೊಂದನ್ನು ಅಂಚೆಯವನು ತಂದಿತ್ತ.

ಶಾಮು ಕುತೂಹಲದಿಂದ ಲಕೋಟೆಯನ್ನು ತೆರೆದು, ಕಾಗದವನ್ನು ಓದತೊಡಗಿದ—

" ಆಶೀರ್ವಾದಗಳು.

ಬರೆಯಲೋ ಬೇಡವೋ ಎಂದು ಬಹಳ ದಿನಗಳಿಂದ ಹಿಂದು ಮುಂದು ತುಳಿಯುತ್ತಿದ್ದೆ. ಆದರೆ, ಇಂದು ನನ್ನ ಸಹನೆ ಮೀರಿ, ಬರೆಯುವಂತೆ ಪ್ರಚೋದಿಸಿತು. ಈ ಕಾಗದವನ್ನು ಬರೆಯಲು, ನಿಮ್ಮ ತಾಯಿಯವರಾದ ನನ್ನ ಅತ್ತೆಯವರೂ ಸಹ ಅಪ್ಪಣೆಕೊಟ್ಟಿದ್ದಾರೆ. ಎಂತಲೇ ಧೈರ್ಯವಹಿಸಿದ್ದೇನೆ. ಆದರೆ ಈ ಕಾಗದದ ವಿಷಯವನ್ನು ನಮ್ಮ ಮಾವನವರಿಗಾಗಲಿ ಅಥವಾ ನಿಮ್ಮ ಅಣ್ಣನವರಿಗಾಗಲಿ ದಯವಿಟ್ಟು ತಿಳಿಸಬಾರದು. ನಿಮಗೆ ತಿಳಿದಂತೆ, ನಿಮ್ಮ ಅಣ್ಣನವರ ಬಾಳು ದಿನದಿನಕ್ಕೆ ನಿರಸನವಾಗುತ್ತಿದೆ. ಅವರ ಮನೋವ್ಯಥೆ ಹೀಗೆಯೇ ಬಲಿತು ಹೆಚ್ಚಾದರೆ, ಅದು ನನ್ನ ಮಾಂಗಲ್ಯ ಭಾಗವನ್ನೇ ಕಸಿದುಕೊಳ್ಳುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಇದಕ್ಕೆ ಶಾಂತು ಒಬ್ಬಳೇ ಈಗ ಸಂಜೀವಿನಿಯನ್ನು ಕೊಡಬಲ್ಲವಳು. ಅವಳು ನಿಮ್ಮ ಅಣ್ಣನವರ ಪಾಲಿಗೆ ದೊರೆತರೆ, ಅವರ ಮನೋವ್ಯಥೆ ಪರಿಹಾರವಾಗಿ, ನನ್ನ ಮುತ್ತೈದೆತನ ಖಂಡಿತವಾಗಿಯೂ ಉಳಿಯುತ್ತದೆ. ಆದರೆ ಅದು ಹೇಗೆ ಸಾಧ್ಯ ಎಂದು ನೀವು ಕೇಳಬಹುದು. ನಾನೂ ತುಂಬಾ ಯೋಚಿಸಿದ್ದೇನೆ. ಗಂಡಸು ಬಯಸಿದರೆ, ಒಂದಲ್ಲ – ಎರಡು ಮದುವೆಯಾಗ ಬಹುದಲ್ಲವೆ? ಹಾಗೆ ಮೂರು – ನಾಲ್ಕು ಮದುವೆಗಳನ್ನು ಮಾಡಿಕೊಂಡು ಸುಖವಾಗಿರುವವರು ಇಲ್ಲವೆ? ಅದೇ ರೀತಿ ನಿಮ್ಮಣ್ಣನವರೂ ಎರಡನೆಯ ಮದುವೆ ಮಾಡಿಕೊಳ್ಳಬಹುದು. ಶಾಂತುವನ್ನೂ, ಅವಳ ತಾಯಿಯನ್ನೂ ಒಪ್ಪಿಸುವ ಭಾರ ನನ್ನದು. ಇದಕ್ಕೆಲ್ಲಾ ಮಾವನವರು ಒಪ್ಪಲಾರರೆಂಬುದು ನನಗೆ ತಿಳಿದಿದೆ. ಆದರೆ ಈ ವಿಷಯದಲ್ಲಿ ಮಾತ್ರ ನಾನು ಅವರನ್ನು ವಂಚಿಸಬೇಕೆಂದು ಇಚ್ಛಿಸಿದ್ದೇನೆ. ನಿಮ್ಮಣ್ಣನವರಿಗೆ ಬೇರೆಯ ಊರಿಗೆ ವರ್ಗವಾದರೆ, ಅದೇ ಊರಿನಲ್ಲಿಯೇ ಗುಟ್ಟಾಗಿ ಶಾಂತುವಿನೊಡನೆ ಅವರ ಮದುವೆಯ ಏರ್ಪಾಡುಮಾಡಬೇಕು. ಹಿರಿಯರನ್ನೇ ನಂಬಿಕೊಂಡಿದ್ದರೆ ಅನ್ಯಾಯವಾಗಿ ಪ್ರಾಣಗಳು ಬಲಿಯಾಗುತ್ತವೆ. ಅದುವರೆಗೂ ಅವಕಾಶಕೊಡುವುದು ಯುಕ್ತವಲ್ಲ. ಆದ್ದರಿಂದ ನೀವು ನನಗೆ ಮಾಡಬೇಕಾಗಿರುವ ಮಹೋಪಕಾರವೊಂದಿದೆ. ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರನ್ನು ಕಂಡು, ನಿಮ್ಮಣ್ಣನವರಿಗೆ ದೂರದಲ್ಲಿರುವ ಬೇರೊಂದು ಊರಿಗೆ ವರ್ಗಮಾಡಿಸಲು ಪ್ರಯತ್ನಿಸ

ಬೇಕು. ಹಾಗೆ ಮಾಡಿದಲ್ಲಿ, ಒಂದು ಪ್ರಾಣವನ್ನೇ ಉಳಿಸಿದಂತಾಗುವುದು. ಈ ವಿಷಯದಲ್ಲಿ ಉದಾಸೀನ ಮಾಡದೆ, ಖಂಡಿತ ಪ್ರಯತ್ನಿಸುವಿರೆಂದು ನಂಬುವೆ.

ಶ್ರೀ ಭಗವಂತನು ಸದಾ ನಿಮಗೆ ಒಳ್ಳೆಯದನ್ನು ಮಾಡಲೆಂದು ಪ್ರಾರ್ಥಿಸುವ,

ನಿಮ್ಮ ಅತ್ತಿಗೆ—
ಲಲಿತ"

—ಕಾಗದ ಓದುತ್ತಿದ್ದಂತೆ ಶಾಮುವಿನ ಕಣ್ಣಾಲಿಗಳು ತುಂಬಿಕೊಂಡವು. ಲಲಿತೆಯ ಸಾಹಸಪೂರ್ಣವಾದ ಯೋಜನೆಗೆ ಅವನು ಬೆರಗಾಗಿದ್ದ. ಕೈಹಿಡಿದ ಗಂಡನ ಸುಖಕ್ಕಾಗಿ, ಏನು ಮಾಡಲೂ ಸಿದ್ಧಳಾಗಿರುವ ತ್ಯಾಗಮಯ ಹೃದಯಿಯಾದ ಲಲಿತೆಯ ವಿಷಯದಲ್ಲಿ ಅವನ ಗೌರವ ಇಮ್ಮಡಿಸಿತು. ಅದೇ ದಿನವೇ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರನ್ನು ಕಾಣಲು ನಿರ್ಧರಿಸಿ, ಕಾಗದವನ್ನು ಕಿಸೆಯಲ್ಲಿಟ್ಟುಕೊಂಡ.

ಅವನ ಮನಸ್ಸಿನ ತುಂಬಾ ಹಲವಾರು ಯೋಚನೆಗಳು ತುಂಬಿಕೊಂಡಿದ್ದವು. 'ನಾಣಿಯ ಬಾಳಿಗೆ ಹೊಸದಾಗಿ ಬರುವ ಶಾಂತು ಸವತಿ ಮಾತ್ಸರ್ಯದ ಉರಿಯಿಂದ ಲಲಿತೆಯ ಬಾಳನ್ನೇ ಬಣ್ಣಗೆಡಿಸಿದರೆ ಏನು ಗತಿ?' —ಎಂದುಕೊಂಡ. ಮರುಕ್ಷಣದಲ್ಲಿಯೇ—'ಹಾಗಾಗಲಾರದು' ಎಂಬ ಯಾವುದೋ ನಂಬಿಕೆಯೊಂದು ಅವನಲ್ಲಿ ಆಶಾಭಾವನೆಯನ್ನು ಮೂಡಿಸಿತು. ಹಾಗೆಯೇ ಯೋಚನಾಂತ್ಯದಲ್ಲಿ, ಅವನ ಮನೋರಂಗದಲ್ಲಿ ನಿಂತವಳು ಗಿರಿಜ. ಥಳಥಳನೆ ಓಲಾಡುವ ಲೋಲಾಕು ಧರಿಸಿ, ಕನಕಾಂಬರದ ಸೀರೆಯುಟ್ಟು, ಮಿಂಚುನಗೆ ನಗುತ್ತಾ ಅವಳು ಬಳಿಯಲ್ಲಿಯೇ ನಿಂತಿದ್ದಂತೆ ಭಾಸವಾಯಿತು ಶಾಮುವಿಗೆ. ಕೂಡಲೇ ಪ್ರೇಮಪತ್ರದ ನೆನಪಾಗಿ, ಹಿಂದಿನ ರಾತ್ರಿ ಆರಂಭಿಸಿದುದನ್ನು ಮತ್ತೆ ಈಗ ಮುಂದುವರಿಸುವ ಆಸೆಯಿಂದ ತೆಗೆದುಕೊಂಡು, ಬರೆಯತೊಡಗಿದ.

"ಮುದ್ದು ಗಿರಿಜೆಗೆ—

ಪ್ರೀತಿಯ ಮುತ್ತುಗಳು.

ನಿನ್ನನ್ನು ನೋಡಬೇಕೆಂದು ಮನಸ್ಸು ತವಕಿಸುತ್ತಿವೆ. ನಿನ್ನ ಹಾಡು

ಕೇಳಬೇಕೆಂದು ಕಿವಿಗಳು ಕೇಳುತ್ತಿವೆ. ಬಾಯ್ತುಂಬ ಮಾತನಾಡಬೇಕೆಂದು ನಾಲಿಗೆ ಬಯಸುತ್ತಿದೆ. ನಿನಗೇನೂ ಇಷ್ಟವಿಲ್ಲವೆ ಗಿರಿಜ?

ನೀನು ಹೆಣ್ಣು. ಇಷ್ಟಗಳನ್ನೆಲ್ಲ ಕಷ್ಟವಿಲ್ಲದೆ ಅಡಗಿಸಿಕೊಳ್ಳುವ ಶಕ್ತಿ ನಿನಗಿದೆ. ವಿರಹವನ್ನು ತಾಳುವ ಸಹನೆಯಿದೆ. ನಾಚಿಕೆಯ ತೆರೆಯ ಹಿಂದೆ, ಸಂಕೋಚದ ಸೆರೆಯಲ್ಲಿ ಯಾವುದನ್ನೂ ನೀನು ಹೊರಜಗತ್ತಿಗೆ ತೋರ್ಪಡಿಸುವುದಿಲ್ಲ. ಆದರೆ, ಆಸೆ–ಆತುರಗಳ ಪ್ರತೀಕವಾದ ನಾನು ಯಾವುದೇ ವಿಷಯಕ್ಕೂ ತಡವಾಗುವುದನ್ನು ಸಹಿಸಲಾರೆ. ಸಾಹಸಪ್ರಿಯನಾದ ಗಂಡಸಿನಲ್ಲಿ ತಾಳ್ಮೆಯ ನೆಲೆಗಟ್ಟು ಭದ್ರ ತಳಹದಿಯಿಲ್ಲದೆ ಕಟ್ಟಲ್ಪಟ್ಟಿದೆ. ಆ ಸಹನಾ ಮಂದಿರ, ವೇಗವಾಗಿ ಗಾಳಿ ಬೀಸಿದಾಗ—ಮನಸ್ಸಿನ ಉದ್ವೇಗಗಳು ಗರಿಗೆದರಿ ನಿಂತಾಗ—ಉರುಳಿಹೋಗುತ್ತದೆ. ನಾನೀಗ ಅಂತಹದೇ ಸ್ಥಿತಿಯಲ್ಲಿದ್ದೇನೆ. ನನ್ನ ಮನಸ್ಸೆಲ್ಲಾ ಮೈಸೂರಿನಲ್ಲಿಯೇ ಇದೆ. ಅದನ್ನು ನೀನು ಅಪಹರಿಸಿದ್ದೀಯೆ. ಕಳ್ಳತನ ಮಾಡಿ, ಮಳ್ಳಿಯ ಹಾಗೆ ಇದ್ದುಕೊಂಡು, ನನ್ನನ್ನು ಸೆಳೆಯುತ್ತಿದ್ದೀಯೆ. ಆದರೆ, ನಾನು ಹೇಗೆ ಬರಲಿ? ಕಳೆದ ಮೂರು–ನಾಲ್ಕು ತಿಂಗಳುಗಳಿಂದ ರಜದ ಮೇಲೆ ರಜ ತೆಗೆದುಕೊಂಡು, ಪತ್ರಿಕೆಯ ಮಾಲೀಕರ ತಾಳ್ಮೆಯನ್ನು ಕೆಡಿಸಿದ್ದೇನೆ. ಈಗ ರಜ ಸಿಕ್ಕುವ ಹಾಗಿಲ್ಲ. ಇನ್ನೇನು ದೀಪಾವಳಿ ಬಂದಿತು; ಬಹುಶಃ ಒಂದೂವರೆ ತಿಂಗಳಿದೆಯೆಂದು ಕಾಣುತ್ತದೆ. ಆಗ ಬಂದೇ ಬರುತ್ತೇನೆ. ಆದರೆ, ಅಷ್ಟು ದಿನವನ್ನು ಹೇಗೆ ಕಳೆಯಲಿ? ನನ್ನ ಪಾಲಿಗೆ ದಿನವೊಂದು ಯುಗವಾಗಿದೆ. ನಿನಗೂ ಹಾಗೆಯೇ ಆಗುತ್ತದೆಯೆ ಗಿರಿಜಾ?

ನನ್ನ ಮುದ್ದುಗಿಣಿಯೆ, ಬೇಗನೆ ಕಾಗದ ಬರೆಯುವೆಯಾ?
ಇನ್ನೊಂದು ಸಾರಿ ನಿನಗೆ ನನ್ನ ಸವಿಮುತ್ತುಗಳು.
ಎಂದೆಂದಿಗೂ ನಿನ್ನವನೇ ಆದ – ಶಾಮು."

—ಬರೆದು ಮುಗಿಸಿದ ಕಾಗದವನ್ನು ಶಾಮು ಒಮ್ಮೆ ತಾನೇ ಓದಿಕೊಂಡ. 'ಈ ಒಲವಿನೋಲೆಯನ್ನು ಓದಿ ಗಿರಿಜ ಏನೆಂದುಕೊಳ್ಳುತ್ತಾಳೆಯೋ' ಎಂದು ತನ್ನಷ್ಟಕ್ಕೇ ಹೇಳಿಕೊಳ್ಳುತ್ತಾ, ಅದನ್ನು ತಾನೇ ಅಂಚೆಗೆ ಹಾಕಿ, ವಿದ್ಯಾಭ್ಯಾಸದ ಡೈರೆಕ್ಟರವರನ್ನು ಕಾಣಲು ಹೋದ. ಆದರೆ ಅವರು ಊರಿನಲ್ಲಿರಲಿಲ್ಲವಾದ್ದರಿಂದ, ಅವನು ನಿರಾಶನಾಗಿ ಹಿಂತಿರುಗಬೇಕಾಯಿತು.

ಮತ್ತೆ ಎರಡು ದಿನಗಳನಂತರ ಹೋಗಿ, ನಾಣಿಯ ವರ್ಗಕ್ಕೆ ಪ್ರಯತ್ನಿಸಿದಾಗ, ದಸರಾ ರಜ ಮುಗಿದ ಮೇಲೆ ಬೇರೆ ಊರಿಗೆ ವರ್ಗಾಯಿಸುವುದಾಗಿ ಆಶ್ವಾಸನೆ ದೊರೆಯಿತು. ಅತ್ತಿಗೆಯ ಮಾತು ನಡೆಸಿದೆನೆಂಬ ಸಂತೋಷದಿಂದ ಶಾಮು ಉಬ್ಬಿಹೋದ.

ಒಂದು ಭಾನುವಾರ, ಅನಿರೀಕ್ಷಿತವಾಗಿ ಅಗ್ರಹಾರಕ್ಕೆ ಬಂದ ಶಾಮು, ಲಲಿತೆಗೂ ವೆಂಕಮ್ಮನವರಿಗೂ ಆ ಸಂತೋಷದ ಸುದ್ದಿಯನ್ನು ತಿಳಿಸಿದ. ತನ್ನ ಹಂಚಿಕೆ ಕೈಗೂಡುವ ಶುಭ ಸೂಚನೆಯನ್ನು ಕಂಡು ಆನಂದಿಸಿದ ಲಲಿತೆ ಮನಸ್ಸಿನಲ್ಲಿಯೇ ಶಾಮುವಿಗೆ ಕೃತಜ್ಞತೆಯನ್ನು ಸಲ್ಲಿಸಿದಳು.

"ಅತ್ತಿಗೆ, ನಿನ್ನ ಯೋಚನೆಗೆ ಶಾಂತು ಒಪ್ಪಿದ್ದಾಳೆಯೇ ?"

—ಶಾಮು ತನ್ನ ಸಂದೇಹವನ್ನು ಪರಿಹರಿಸಿಕೊಳ್ಳಲು ಪ್ರಶ್ನಿಸಿದ.

"ಅವಳಿಗೆ ಈ ವಿಷಯವೆಲ್ಲಾ ತಿಳಿಯದು"

"ತಿಳಿಸುವುದು ಒಳ್ಳೆಯದಲ್ಲವೆ ?"

"ಈಗ ತಿಳಿಸಿದರೆ, ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಮೊದಲು ಪೂರ್ವ ಸಿದ್ಧತೆಗಳೆಲ್ಲಾ ಮುಗಿಯಬೇಡವೇ ?"

"ನಮ್ಮ ಪೂರ್ವ ಸಿದ್ಧತೆಗಳು ಮುಗಿಯುವ ವೇಳೆಗೆ, ಅವಳಿಗೆ ಬೇರೆ ಯುವರೊಡನೆ ಮದುವೆಯಾಗಿ ಬಿಟ್ಟರೆ ಏನುಮಾಡುತ್ತೀ ?"

"ಹೇಗಾಗುತ್ತದೆ ? ಮೊನ್ನೆ ಹೆಣ್ಣು ನೋಡಲು ಬಂದಿದ್ದವರು ಸಾವಿರ ವರದಕ್ಷಿಣೆ ಕೇಳಿದರು. ಸೀತಕ್ಕನ ಕೈಯಲ್ಲಿ ಅಷ್ಟುಕೊಡುವುದು ಸಾಧ್ಯವೆ ?"

"ಹಾಗಾದರೆ ಆ ಸಂಬಂಧ ತಪ್ಪಿಹೋಯಿತೇನು ?"

"ಹ್ಞಾಂ. ಅದೇಕಾರಣದಿಂದಲೇ ಸೀತಕ್ಕನ ಮನೆಗೆ ಹೆಣ್ಣು ನೋಡಲು ಬಂದ ಎಷ್ಟೋ ಗಂಡಗಳು ಬಾಯಿಮುಚ್ಚಿಕೊಂಡು ಹೋದವು"

—ಎಂದಳು ಲಲಿತೆ.

ಬೇರೆಯುವರನೊಡನೆ ಶಾಂತುವಿನ ಮದುವೆಯಾಗುವುದು ಸೀತಕ್ಕನ ಆರ್ಥಿಕ ಪರಿಸ್ಥಿತಿಯಿಂದಾಗೆ ಸಾಧ್ಯವೇ ಇಲ್ಲವೆಂಬ ಅಂಶ ಲಲಿತೆಗೆ ದೃಢವಾಗಿತ್ತು.

ಶಾಮು ತನ್ನ ಅತ್ತಿಗೆಯೊಡನೆ ಮಾತನಾಡುತ್ತಿದ್ದಂತೆಯೇ ನಾಗಪ್ಪನವರು ಮನೆಗೆ ಬಂದರು. ಅನಿರೀಕ್ಷಿತವಾಗಿ ಮಗನನ್ನು ಕಂಡು ಅವರಿಗೆ ಆಶ್ಚರ್ಯವಾಗಿತ್ತು

" ಯಾವಾಗ ಬಂದೆಯೋ ? "

" ಸ್ವಲ್ಪ ಹೊತ್ತಾಯಿತಣ್ಣ "

" ನಿಮ್ಮ ಮಾವ ನಿನಗೇನಾದರೂ ಕಾಗದ ಬರೆದಿದ್ದರೆ ? "

" ಇಲ್ಲ "

" ಹ್ಞಾ, ಏಕೆ ಬರೆಯುತ್ತಾರೆ ?.... ಅವರ ಕೆಲಸವಾಯಿತಲ್ಲ – ಸುಮ್ಮನಾದರು. ಇನ್ನು ನಮ್ಮ ಪಾಡುಕಟ್ಟಿಕೊಂಡು ಅವರಿಗೇನಾಗಬೇಕು ?

" ನೀನು ಬರೆಯುತ್ತೇನೆ ಎಂದೆಯಲ್ಲಣ್ಣ "

" ಬರೆದು ಎರಡು ವಾರವಾಯಿತು "

" ಉತ್ತರ ಬರಲಿಲ್ಲವೆ ? "

" ಆಡಿದ ಮಾತಿನಮೇಲೆ ಜ್ಞಾನವಿದ್ದರೆ ತಾನೆ ಉತ್ತರ ಬರೆಯುತ್ತಾರೆ. ಬರಬೇಕಾದ ಬಾಕಿ ಕೇಳಿದರೆ ಅವರ ಉಸಿರೇ ನಿಂತುಹೋಗುತ್ತದೆ "

—ಎಂದರು ನಾಗಪ್ಪ.

ತಂದೆಯ ಧನದಾಹ, ನಿರ್ದಯ ಮನೋಭಾವ, ಶಾಮುವಿಗೆ ತುಂಬಾ ಬೇಸರವುಂಟುಮಾಡಿತು.

ಅದೇ ಸಂಜೆ ಅವನು ಬೆಂಗಳೂರಿಗೆ ಮರಳಿದ.

ಮರುದಿನ ಸೋಮವಾರ. ಶಾಮು ಆಫೀಸಿನಲ್ಲಿ ಕುಳಿತಿದ್ದಂತೆಯೇ ಅವನ ಹೆಸರಿಗೊಂದು ಟೆಲಿಗ್ರಾಂ ಬಂದಿತು.

" ಜಾನಕಮ್ಮ ಸ್ವರ್ಗಸ್ಥರಾದರು. ಹೊರಟುಬನ್ನಿ "

—ಎಂದು ಸುದ್ದಿ ಕಳುಹಿಸಿದ್ದರು ಜಯರಾಯರು.

ಶಾಮುವಿನ ಹೃದಯ ಕಂಪಿಸಿತು. ಇಂತಹ ಕೆಟ್ಟ ಸುದ್ದಿಯನ್ನು ತಾನು ನಿರೀಕ್ಷಿಸಿಯೇ ಇರಲಿಲ್ಲವೆಂದುಕೊಂಡ. ತಂತಿಯನ್ನು ತನ್ನ ಪತ್ರಿಕೆಯ ಮಾಲೀಕರಿಗೆ ತೋರಿಸಿ, ಎರಡು ದಿನಗಳ ರಜ ಪಡೆದು, ಮೈಸೂರಿಗೆ ಬಂದ.

ಅಳಿಯನನ್ನು ಕಂಡು ಜಯರಾಯರಿಗೆ ದುಃಖ ಉಮ್ಮಳಿಸಿತು.

ತನ್ನ ತಾಯಿ ಎರಡು ವಾರಗಳಿಂದಲೂ ನ್ಯೂಮೋನಿಯಾ ಜ್ವರದಿಂದ ನರಳುತ್ತಿದ್ದರೆಂದೂ, ಔಷಧೋಪಚಾರಗಳೆಲ್ಲ ನಿಷ್ಪ್ರಯೋಜನವಾಯಿತೆಂದೂ ಜಗದೀಶ ತಿಳಿಸಿದ.

ಶಾಮು ತನ್ನ ಅತ್ತೆಗೆ ಶೋಕಭಾಷ್ಪಾಂಜಲಿಯನ್ನರ್ಪಿಸಿ, ಗಿರಿಜೆಗೂ,

ಜಯರಾಯರು, ಜಗದೀಶ ಮತ್ತು ವಿಾರೆಯರಿಗೂ ಸಮಾಧಾನ ಹೇಳಿದ.

ಆದುವರೆಗೂ ಶಾಮುವಿನೊಡನೆ ಒಂದು ಮಾತನ್ನೂ ಆಡದಿದ್ದ ಗಿರಿಜ—

" ನಾನು ತಬ್ಬಲಿಯಾದೆ "

—ಎಂದು ಬಿಕ್ಕಿಬಿಕ್ಕಿ ಅಳುತ್ತಾ ನುಡಿದಳು.

" ಅಳಬೇಡ ಗಿರಿಜ. ನಾನಿದ್ದೇನೆ "

—ಶಾಮು ಕಣ್ಣೀರು ತೊಡೆಯುತ್ತಾ, ಅವಳ ಕೆನ್ನೆಯನ್ನು ಮೃದುವಾಗಿ ತೀಡಿದ.

" ಹೀಗಾಗುತ್ತದೆಂದು ಯಾರು ನೆನಸಿದ್ದರು ಗಿರಿಜ ? ಎಲ್ಲಾ ತುಂಬ ಅನಿರೀಕ್ಷಿತ "

" ಅಮ್ಮ ನಿಮ್ಮನ್ನು ನೋಡಬೇಕೆಂದು ಹಂಬಲಿಸುತ್ತಿದ್ದರು. ಕೊನೆಯ ಗಳಿಗೆಯಲ್ಲಿಯೂ ನಿಮ್ಮನ್ನು ನೆನಸಿಕೊಂಡರು "

" ಅವರಿಗೆ ಮುಖ ತೋರಿಸಲು ಸಾಧ್ಯವಾಗದಿದ್ದುದು ನನ್ನ ದೌರ್ಭಾಗ್ಯ"

" ಅಮ್ಮನಿಗೆ ನಿಮ್ಮನ್ನು ಕಂಡರೆ ತುಂಬಾ ಪ್ರೀತಿ. ಅವರು ಸದಾ ನಿಮ್ಮ ಗುಣಗಾನ ಮಾಡುತ್ತಿದ್ದರು "

" ನನಗೂ ಅವರನ್ನು ಕಂಡರೆ ತುಂಬಾ ಗೌರವ ಗಿರಿಜ."

" ಇನ್ನು ನನಗಾರು ದಿಕ್ಕು ರಾಜಾ ? "

" ನಾನಿಲ್ಲವೇ ಚಿನ್ನಾ........"

ಶಾಮು ಗಿರಿಜೆಯ ಮುಖವನ್ನು ಪ್ರೀತಿಯಿಂದ ರಮಿಸಿದ.

ಗಿರಿಜ ತನ್ನ ಇನಿಯನ ಸಾನ್ನಿಧ್ಯದಲ್ಲಿ ಅರೆಕ್ಷಣ ತಾಯಿಯ ವಿಯೋಗ ದುಃಖವನ್ನು ಮರೆತಳು.

ಶವಸಂಸ್ಕಾರಗಳು ಮುಗಿದ ಮರುದಿನ ಸಂಜೆ, ದುಃಖಮೌನಾವೃತವಾದ ಮನೆಯಲ್ಲಿರಲು ಬೇಸರಿಸಿದ ಶಾಮು ಕುಕ್ಕನಹಳ್ಳಿಯ ಕೆರೆಯ ಕಡೆ ತಿರುಗಾಡಲು ಹೊರಟ. ಜಗದೀಶನೂ ತನ್ನ ಭಾವನನ್ನು ಹಿಂಬಾಲಿಸಿದ. ಇಬ್ಬರೂ ತುಸುದೂರ ಮೌನವಾಗಿಯೇ ನಡೆದರು. ಸ್ವಲ್ಪ ಹೊತ್ತಿನ ಬಳಿಕ ಜಗದೀಶನೇ ಮಾತು ಆರಂಭಿಸಿದ.

" ಬೆಂಗಳೂರಿನಲ್ಲಿ ಯಾವುದಾದರೂ ಪಾರ್ಟ್ ಟೈಂ ಕೆಲಸ ಕೊಡಿಸುತ್ತೀರಾ ಭಾವ? "

" ಯಾರಿಗೆ ಜಗ್ಗೂ ? "

" ನನಗೇ."

" ನೀನು ಕೆಲಸಕ್ಕೆ ಸೇರುತ್ತೀಯಾ ? "

" ಸೇರದಿದ್ದರೆ ಮುಂದೆ ನನ್ನ ಓದಿಗೆ ತೊಂದರೆಯಾಗುತ್ತದೆ ಭಾವ."

" ಹಾಗಾದರೆ, ಈ ವರ್ಷ ಪಾಸಾದರೆ ಕಾಲೇಜಿಗೆ ಸೇರುತ್ತೀಯೆನ್ನು! "

" ಹೌದು ಭಾವ. ಕಾಲೇಜಿಗೆ ಸೇರಿ, ಎಷ್ಟೇ ಕಷ್ಟವಾದರೂ ಇನ್ನು ನಾಲ್ಕು ವರ್ಷ ಓದಬೇಕೆಂದಿದ್ದೇನೆ."

" ಆ ಮೇಲೆ "

" ಡಿಗ್ರಿ ತೆಗೆದುಕೊಂಡು ಸಮಾಜಸೇವೆ ಮಾಡಬೇಕೆಂದಿದ್ದೇನೆ."

" ಡಿಗ್ರಿ ಇಲ್ಲದಿದ್ದರೆ ಸಮಾಜಸೇವೆ ಮಾಡುವುದು ಸಾಧ್ಯವಿಲ್ಲವೇನು? "

" ಸಾಧ್ಯವಿದೆ ಭಾವ. ಆದರೆ ಡಿಗ್ರಿ ತೆಗೆದುಕೊಳ್ಳದಿದ್ದರೆ ನನ್ನ ಮನಸ್ಸಿಗೆ ನೆಮ್ಮದಿಯಿಲ್ಲ."

—ತಡೆತಡೆದು ನುಡಿದ ಜಗದೀಶ.

ಅವನು ಯಾವುದೋ ವಿಷಯವನ್ನು ಮುಚ್ಚಿಡಲು ಪ್ರಯತ್ನಿಸುತ್ತಿದ್ದಾನೆಂಬುದು ಅವನ ಚರ್ಯೆಯಿಂದಲೇ ಶಾಮುವಿಗೆ ಸ್ಪಷ್ಟವಾಯಿತು.

" ಜಗ್ಗೂ, ನಿನಗೇಕೆ ಈ ಡಿಗ್ರಿಯ ಹುಚ್ಚು ಹಿಡಿಯಿತು ? "

ಅಸಂಖ್ಯ ಜೀವರಾಶಿಗಳನ್ನೂ ಮುತ್ತು ಹವಳಗಳನ್ನೂ ತನ್ನ ಒಡಲಲ್ಲಿ ಅಡಗಿಸಿಕೊಂಡು ಪ್ರಶಾಂತವಾಗಿದ್ದ ಸಮುದ್ರವನ್ನು ಅಲ್ಲಕಲ್ಲೋಲಗೊಳಿಸಿದ ಬಿರುಗಾಳಿಯಂತೆ ಬಂದ ಶಾಮುವಿನ ಪ್ರಶ್ನೆ ಜಗದೀಶನ ಮನಮಂದಿರದ ಗೋಡೆಗಳ ಮೇಲೆ ರಚಿತವಾಗಿದ್ದ ನೂರು ಘಟನಾಚಿತ್ರಗಳನ್ನು ಮುಚ್ಚಿದ್ದ ತೆರೆಯನ್ನು ಛಿದ್ರಛಿದ್ರಮಾಡಿತು. ಒಂದೊಂದು ಚಿತ್ರವೂ ಜೀವಂತವಾಗಿ, ಬೃಹದಾಕಾರ ತಳೆದು, ಅವನ ಕಣ್ಮುಂದೆ ಕುಣಿಯಿತು.

ನಾಲ್ಕು ವರ್ಷಗಳ ಹಿಂದೆ, ಅವನು ಮನೆಬಿಟ್ಟು ಓಡಿಹೋಗಿ, ಹತ್ತಾರು ಕಡೆ ಅಲೆದು, ಕೊನೆಗೆ ಬೆಂಗಳೂರಿನ ಲಾಲ್‌ಬಾಗ್ ಬಳಿಯ ವಿಸ್ತರಣದಲ್ಲಿನ ಹೋಟೆಲೊಂದರಲ್ಲಿ ಕೆಲಸಕ್ಕೆ ಸೇರಿಕೊಂಡ. ಅಲ್ಲಿ ಅವನಿಗೂ, ಅವನ ಸಹೋದ್ಯೋಗಿ ನಾಗರಾಜನಿಗೂ ಗಾಢಸ್ನೇಹ ಬೆಳೆಯಿತು. ನಾಗರಾಜ ತಮಿಳು ಭಾಷೆಯನ್ನು ಚೆನ್ನಾಗಿ ಕಲಿತು, ಆ ಭಾಷೆಯ ಪತ್ರಿಕೆಗಳಲ್ಲಿ ಪ್ರಕಟ

ವಾಗುತ್ತಿದ್ದ ಕಿರುಗತೆಗಳನ್ನೂ ಹರಟೆಗಳನ್ನೂ ಕನ್ನಡಕ್ಕೆ ಅನುವಾದಮಾಡಿ, ಬೆಂಗಳೂರಿನ ಹಲವಾರು ಪತ್ರಿಕೆಗಳಿಗೆ ಕಳುಹಿಸಿ, 'ಸಾಹಿತಿ' ಎನ್ನಿಸಿ ಕೊಂಡಿದ್ದ. ಅವನ ತಂಗಿ ರಮಾಮಣಿ ಚಿಕ್ಕಂದಿನಲ್ಲಿಯೇ ತಾಯಿ–ತಂದೆಯ ರನ್ನು ಕಳೆದುಕೊಂಡಿದ್ದರಿಂದ, ಅದೇ ವಿಸ್ತರಣದಲ್ಲಿನ 'ಶರಣಾಲಯ'ವೊಂದ ರಲ್ಲಿ ಬೆಳೆಯುತ್ತಿದ್ದಳು. ಅವಳನ್ನು ನೋಡಲು ನಾಗರಾಜ ಆಗಾಗ ಅಲ್ಲಿಗೆ ಹೋಗುತ್ತಿದ್ದ. ಅವನೊಡನೆ ಜಗದೀಶನೂ 'ಶರಣಾಲಯ'ಕ್ಕೆ ಹೋಗಿ ಬರುತ್ತಿದ್ದ.

ರಮಾಮಣಿಗೆ ತನ್ನಣ್ಣನ ಜೊತೆಯಲ್ಲಿ ಬರುತ್ತಿದ್ದ ಜಗದೀಶನ ಪರಿಚಯ ವಾಗಲು ಹೆಚ್ಚು ತಡವಾಗಲಿಲ್ಲ. ಆ ಪರಿಚಯದಿಂದ ಕ್ರಮೇಣ ಅವರಿಬ್ಬರಿಗೂ ಗಾಢಸ್ನೇಹ ಬೆಳೆಯಿತು. ಆ ಸ್ನೇಹ ಜಗದೀಶನ ಹೃದಯದಲ್ಲಿ ಪ್ರೇಮದ ಬೀಜವನ್ನು ಬಿತ್ತಿತು. ಆಗ ರಮಾಮಣಿ ಮಿಡ್ಲ್‌ಸ್ಕೂಲ್ ಪರೀಕ್ಷೆಗೆ ಕಟ್ಟಿದ್ದಳು.

ಹೋಟಲಿನಲ್ಲಿ ಕೆಲಸಕ್ಕೆ ಸೇರಿದ ಹೊಸದರಲ್ಲಿ ಜಗದೀಶನಿಗೆ ತುಂಬಾ ಬೇಸರವಾಗಿತ್ತು. ಗಿರಾಕಿಗಳು ಬಯಸಿದ ತಿಂಡಿಯನ್ನು ತಂದುಕೊಡಲು ತಡಮಾಡಿದರೆ ಅವನಿಗೆ ಚೆನ್ನಾಗಿ ಛೀಮಾರಿಯಾಗುತ್ತಿತ್ತು. ಅಪರಿಚಿತರಿಂದ ಬೈಯಿಸಿಕೊಂಡಾಗ ಅವನ ಕೋಪ ಉಕ್ಕುತ್ತಿತ್ತು. ಸಿಟ್ಟಿನ ಭರದಲ್ಲಿ ಅವನೂ ಒಂದೆರಡು ಮಾತನಾಡುತ್ತಿದ್ದುದರಿಂದ ಗಿರಾಕಿಗಳು ಜಗಳಕ್ಕೇ ನಿಲ್ಲುತ್ತಿದ್ದರು. ಆ ಸಮಯದಲ್ಲಿ ನಾಗರಾಜ ಪ್ರವೇಶಿಸಿ, ವಾದವಿವಾದಗಳಿಗೆ ತಡೆಹಾಕಿ, ಸಮಾಧಾನಪಡಿಸುತ್ತಿದ್ದ.

ಗಿರಾಕಿಗಳೊಡನೆ ಮಾತ್ರವಲ್ಲದೆ ಹೋಟಲು ಮಾಲೀಕರೊಡನೆಯೂ ಸಹ ವಾಗ್ವಾದಕ್ಕೆ ನಿಲ್ಲುತ್ತಿದ್ದ ಜಗದೀಶ. ಅವನ ವರ್ತನೆಯಿಂದ ಅಸಮಾ ಧಾನಗೊಂಡಿದ್ದ ಮಾಲೀಕರು ಅವನನ್ನು ಕೆಲಸದಿಂದ ತೆಗೆದುಹಾಕಲು ನಿಶ್ಚಯಿಸಿದ್ದರು. ಆದರೆ ನಾಗರಾಜ ತನ್ನ ಗೆಳೆಯನ ನಡತೆಯನ್ನು ತಿದ್ದುವ ಭರವಸೆಯಿತ್ತು ಮಾಲೀಕರ ಮನಸ್ಸನ್ನು ಬದಲಿಸಿದ್ದ.

ದಿನಕಳೆದಂತೆ ನಾಗರಾಜನ ಗುಣಸ್ವಭಾವಗಳ ಪ್ರಭಾವ ಜಗದೀಶನ ಮೇಲೆ ಪರಿಣಾಮವುಂಟುಮಾಡತೊಡಗಿತು. ಚಿಕ್ಕಂದಿನಲ್ಲಿಯೇ ತಂದೆ– ತಾಯಿಯರನ್ನು ಕಳೆದುಕೊಂಡು, ಯಾವ ಬಗೆಯ ಕಷ್ಟಕಾರ್ಪಣ್ಯಗಳಿಗೂ

ಅಂಜದೆ ಹಗಲಿರುಳೂ ದುಡಿಯುತ್ತಿದ್ದ ನಾಗರಾಜ ಜಗದೀಶನಿಗೆ ಆರಾಧ್ಯ ಮೂರ್ತಿಯಾದ ಗೆಳೆಯನ ಗುಣಶೀಲಗಳಲ್ಲಿ ಉತ್ತಮ ಪರಿವರ್ತನೆಯಾದುದನ್ನು ಕಂಡು ನಾಗರಾಜನಿಗೆ ಆನಂದವಾಯಿತು. ಪದೇಪದೇ ಭೇಟಿಯಾಗುತ್ತಿದ್ದ ರಮಾಮಣಿಗೂ ಸಹ ಜಗದೀಶನಲ್ಲಿ ಅಭಿಮಾನ ಬೆಳೆಯತೊಡಗಿತು. ಆಗ ಆಕೆ ಹೈಸ್ಕೂಲಿನ ಎರಡನೆಯ ತರಗತಿಯಲ್ಲಿ ಓದುತ್ತಿದ್ದಳು.

ಜಗದೀಶ ನಾಗರಾಜನೊಡನೆ ಆಗಾಗ ಶರಣಾಲಯಕ್ಕೆ ಹೋಗಿಬರುತ್ತಿದ್ದರೂ ಸಹ, ತನ್ನ ಪ್ರಣಯಾಭಿಲಾಷೆಯನ್ನು ರಮಾಮಣಿಗೆ ತಿಳಿಸಿರಲಿಲ್ಲ. ನಾಗರಾಜನಿಗೂ ಸಹ ತನ್ನ ಗೆಳೆಯನ ಮನದಾಸೆಯ ಅರಿವಾಗಿರಲಿಲ್ಲ. ಆದರೆ ಹೆಚ್ಚುಕಾಲ ತನ್ನ ಬಯಕೆಯನ್ನು ಅಡಗಿಸಿಟ್ಟುಕೊಳ್ಳುವುದು ಜಗದೀಶನಿಗೆ ಸಾಧ್ಯವಾಗಲಿಲ್ಲ.

ಒಂದು ದಿನ ನಾಗರಾಜನಿಗೆ ತಿಳಿಯದಂತೆಯೇ ಶರಣಾಲಯದ ಬಳಿಗೆ ನಡೆದ ಜಗದೀಶ. ಆದರೆ ಆಲಯದ ಒಳಗೆ ಹೋಗಲು ಅವನ ಕಾಲುಗಳು ಹಿಂಜರಿದವು. ಜೊತೆಗೆ ನಾಗರಾಜನಿಲ್ಲದೆ, ಅವನೊಬ್ಬನೇ ಎಂದೂ ಒಳಗೆ ಹೋದವನಲ್ಲ. ಎಂತಲೇ ಸಂಕೋಚದಿಂದ ಆತ ಆಲಯದ ಹೊರವಲಯದಲ್ಲಿ ನಿಂತಿದ್ದಾಗ, ಶನಿವಾರದ ಬೆಳಗಿನ ಶಾಲೆಯನ್ನು ಮುಗಿಸಿಕೊಂಡು ಆಗ ತಾನೆ ಆಲಯಕ್ಕೆ ಬರುತ್ತಿದ್ದ ರಮಾಮಣಿಯೇ ಅವನನ್ನು ಮಾತನಾಡಿಸಿದಳು.

" ಏಕೆ ಇಲ್ಲಿ ನಿಂತಿದ್ದೀರಿ ? ಅಣ್ಣ ಬರಲಿಲ್ಲವೆ ? "

" ಇಲ್ಲ. ಅವರೇನೋ ಕೆಲಸದಲ್ಲಿದ್ದರು. ನಾನೊಬ್ಬನೇ ಬಂದೆ "

" ಒಳಗೆ ಬನ್ನಿ "

" ಮೇಟ್ರನ್ ನೋಡಿದರೆ ಏನೂ ಅನ್ನುವುದಿಲ್ಲವೆ ? "

" ನೀವು ಯಾರೆಂಬುದು ಅವರಿಗೂ ಗೊತ್ತಿದೆ. ಪರವಾಗಿಲ್ಲ ಬನ್ನಿ."

ಜಗದೀಶ ರಮಾಮಣಿಯನ್ನು ಹಿಂಬಾಲಿಸಿ ಅವಳ ಕೋಣೆಗೆ ಹೋದ.

" ಇದೇನು, ಯಾರೋ ಮಲಗಿರುವ ಹಾಗಿದೆಯಲ್ಲಾ ? "

—ಗೋಡೆಯಂಚಿನಲ್ಲಿ, ಮುಸುಕು ಹಾಕಿಕೊಂಡು ಮಲಗಿದ್ದವರತ್ತ ನೋಡುತ್ತಾ ಕೇಳಿದ ಜಗದೀಶ. ಅವನು ರಮಾಮಣಿಯೊಡನೆ ಏಕಾಂತದಲ್ಲಿ ಮಾತನಾಡಲು ಬಂದಿದ್ದನಾದ್ದರಿಂದ, ಈ ಮಲಗಿರುವ ವ್ಯಕ್ತಿ ತನಗೆ ಅಡ್ಡಿಯಾಗಬಹುದೇನೋ ಎನ್ನುವ ಅನುಮಾನ ಅವನನ್ನು ಆರೆಕ್ಷಣ ಬಾಧಿಸಿತು.

" ಅವರು ಹೊಸದಾಗಿ ಬಂದಿರುವ ನಮ್ಮ ರೂಂಮೇಟ್. ಗೆಳತಿಗಿಂತಲೂ ಹೆಚ್ಚಾಗಿ ನನ್ನ ಹಿತಚಿಂತಕರಾಗಿದ್ದಾರೆ ! "

" ಹೊಸದಾಗಿ ಬಂದವರು ಇಷ್ಟುಬೇಗ ಹಿತಚಿಂತಕರಾದುದು ಹೇಗೆ ? "

" ಅವರು ನನ್ನ ರೂಮಿಗೆ ಹೊಸಬರೇ ಹೊರತು ಶರಣಾಲಯಕ್ಕಾಗಲಿ, ನನಗಾಗಲಿ ಹೊಸಬರಲ್ಲ. ಸುಮಾರು ಒಂದು ವರ್ಷದಿಂದ ಅವರು ಇಲ್ಲಿದ್ದಾರೆ. ಶರಣಾಲಯದ ಹುಡುಗಿಯರು ಮೇಟ್ರನ್ನಿಗಿಂತಲೂ ಹೆಚ್ಚಾಗಿ ಅವರಿಗೇ ಹೆದರುತ್ತಾರೆ ! "

—ಮುಗುಳ್ನಗೆ ಸೂಸುತ್ತಾ ಗಂಭೀರವಾಗಿ ನುಡಿದಳು ರಮಾಮಣಿ.

" ಓಹೋ! ಹಾಗಾದರೆ ದೊಡ್ಡಬಾಯಿನ ದೇವಿ ಎಂದು ಕಾಣುತ್ತದೆ"

—ಎಂದ ಜಗದೀಶ.

ಅವನ ಮಾತು ರಮಾಮಣಿಗೆ ಅಸಮಾಧಾನಕರವಾಗಿತ್ತು. ಆದರೂ ಅವನೊಡನೆ ಆ ವಿಷಯವಾಗಿ ಹೆಚ್ಚು ಮಾತು ಬೆಳಸಲಿಚ್ಛಿಸದೆ ಮೌನ ವಹಿಸಿದಳು.

ಎರಡು ಕ್ಷಣಗಳ ಸಂದಿಗ್ಧ ಮೌನದ ಬಳಿಕ, ಜಗದೀಶನೇ ಮೆಲುದನಿಯಲ್ಲಿ ನುಡಿದ—

" ರಮಾ,........"

—ಮುಂದುವರಿಯಲು ಹಿಂಜರಿದ ಆ ಮೆಲುದನಿಯಲ್ಲಿ ನಡುಕದ ಛಾಯೆ ಸ್ಪಷ್ಟವಾಗಿತ್ತು.

ರಮಾಮಣಿ ಮೇಜಿನ ಬಳಿ ನಿಂತು ಪುಸ್ತಕಗಳನ್ನು ಜೋಡಿಸುತ್ತಿದ್ದವಳು ಮೆಲ್ಲನೆ ತಲೆಯೆತ್ತಿ ನಿರ್ವಿಕಾರಭಾವದಿಂದ ಅವನ ಕಡೆಗೆ ನೋಡಿದಳು.

" ನಿನ್ನ ಹತ್ತಿರ ಒಂದು ಮಾತು ಕೇಳಬೇಕಾಗಿತ್ತು "

" ಏನು ? "

" ಹೇಳಲೇ ? "

" ಹೇಳಿ."

" ಅಲ್ಲಿ ಮಲಗಿರುವ ನಿನ್ನ ಹಿತಚಿಂತಕರು ಕೇಳಿಸಿಕೊಂಡರೆ ? "

" ನಿದ್ರೆ ಮಾಡುತ್ತಿರುವವರಿಗೂ ಕೇಳಿಸುತ್ತದೆಯೇನು ? "

—ಎಂದು ಗೋಡೆಯಂಚಿನ ಕಡೆಗೆ ನೋಡಿ ನಗುತ್ತಾ ರಮಾಮಣಿ ಮತ್ತೆ ಜಗದೀಶನತ್ತ ತಿರುಗಿ ನುಡಿದಳು :

" ಹಾಗೊಮ್ಮೆ ಕೇಳಿಸಿದರೂ ಸಹ ಅದರಿಂದ ತೊಂದರೆಯೇನು? ಎಷ್ಟಾದರೂ ಅವರು ನನ್ನ ಹಿತಚಿಂತಕರೇ ಅಲ್ಲವೆ? "

" ಹಾಗಲ್ಲಾ ರಮಾ.... ನಾನು ಹೇಳಬೇಕೆಂದಿರುವ ಮಾತು ಬೇರೆ ಯವರಿಗೆ ತಿಳಿಯಬಾರದು "

" ಅಂತಹ ವಿಷಯವೇನು? ಅಣ್ಣ ಏನಾದರೂ ಹೇಳಿಕಳಿಸಿರುವರೇ? "

" ಇಲ್ಲ. ಅವರಿಗೆ ತಿಳಿಯದಂತೆಯೇ ನಾನಿಲ್ಲಿಗೆ ಬಂದಿದ್ದೇನೆ."

" ಅವರಿಗೂ ಗೊತ್ತಾಗಬಾರದಂತಹ ಗುಟ್ಟಿನ ವಿಷಯವೇ? "

" ಹೌದು "

" ಏನದು? "

" ಹೇಳಿದರೆ ನೀನು ಕೋಪಿಸಿಕೊಳ್ಳುವುದಿಲ್ಲ ತಾನೆ? "

" ಕೋಪವೇಕೆ?.... ಬೇಗ ಹೇಳಿ.... ನಾನು ಊಟಕ್ಕೆ ಹೋಗಬೇಕು "

" ಏನೂ ಇಲ್ಲ ರಮಾ...."

" ಸಂಕೋಚವೇಕೆ? ಬೇಗನೆ ಹೇಳಬಾರದೆ? "

" ರಮಾ, ನೀನು ನನ್ನನ್ನು ಪ್ರೀತಿಸುವುದಿಲ್ಲವೇ? "

" ಪ್ರೀತಿ? "

" ಹೌದು ರಮಾ........ ನಾನು ನಿನ್ನನ್ನು ಎಷ್ಟು ಪ್ರೀತಿಸುತ್ತೇನೆ ಗೊತ್ತೆ? "

—ಜಗದೀಶನ ಪ್ರಶ್ನೆಗೆ ಏನೊಂದೂ ಉತ್ತರಿಸದೆ, ಅವನನ್ನೇ ಕಳಮಳನೆ ನೋಡುತ್ತಾ ನಿಂತಳು ರಮಾಮಣಿ.

ಮತ್ತೆ ಜಗದೀಶನೇ ಮುಂದುವರಿಸಿದ—

" ನನ್ನ ಹೃದಯದರಮನೆಯಲ್ಲಿ ನಿನ್ನ ಪ್ರೇಮಮೂರ್ತಿಯನ್ನು ಸ್ಥಾಪಿಸಿ ಹಗಲಿರುಳೂ ಪೂಜಿಸುತ್ತಿದ್ದೇನೆ ರಮಾ. ನೀನು ಪ್ರಸನ್ನಳಾಗಿ ಒಲಿದರೆ, ನಾವಿಬ್ಬರೂ ಈ ಊರನ್ನೇ ಬಿಟ್ಟು, ಬೇರೆಲ್ಲಿಯಾದರೂ ಒಂದು ಪ್ರೇಮದ ಗೂಡಿನಲ್ಲಿ ಹಕ್ಕಿಗಳಂತೆ ಬಾಳಬಹುದು ರಮಾ.... ನಮ್ಮ ಪ್ರೇಮಸಾಗರದಲ್ಲಿ ಬೇರೆ ಯಾರಾದರೂ ಬಿರುಗಾಳಿಯಂತೆ ಬರುವ ಮೊದಲೇ...."

—ಎನ್ನುತ್ತಾ ಜಗದೀಶ ರಮಾಮಣಿಯ ಹತ್ತಿರ ಹತ್ತಿರಕ್ಕೆ ಬಂದು, ಅವಳ ಭುಜಗಳ ಮೇಲೆ ಕೈಯಿಡುವಷ್ಟರಲ್ಲಿ,

"ಮೊದಲೇ ಬರಬೇಕಾಗಿದ್ದ ಬಿರುಗಾಳಿ ಇದೇ ಈಗ ಬರುತ್ತಿದೆ"

—ಎನ್ನುತ್ತಾ ಗೋಡೆಯಂಚಿನಲ್ಲಿ ಮಲಗಿದ್ದ ವ್ಯಕ್ತಿ ಮುಸುಕು ಕಿತ್ತೆಸೆದು, ಎದ್ದುಬಂದಳು. ಅವಳ ಧ್ವನಿ ಕೇಳಿದೊಡನೆ ಬೆಚ್ಚಿದ ರಮಾಮಣಿ ಎರಡು ಹೆಜ್ಜೆ ಹಿಂದೆ ಸರಿದು ನಿಂತಳು. ಜಗದೀಶನ ಕಾಲುಗಳು ಗಡಗಡನೆ ನಡುಗುತ್ತಿದ್ದವು.

"ಮಾತಾಡಿ ಮಾಣಿ ಮಹಾಶಯರೇ! ಪ್ರೇಮೋನ್ಮಾದದಿಂದ ಕವಿ ಸಾರ್ವಭೌಮರಾಗುತ್ತಿದ್ದವರು ನೀವೇ ತಾನೆ?"

ಜಗದೀಶನ ಹಣೆಯ ಮೇಲೆ ಬೆವರು ಹನಿಗಳು ಮೂಡಿದವು; ಗಂಟಲು ಒಣಗುತ್ತಾ ಬಂದಿತ್ತು.

"ಏಕೆ ಮೂಕರಾಗಿ ನಿಂತಿರಿ? ನಿಮ್ಮ ನಾಲಿಗೆ ಒಳಕ್ಕೆ ಸೇದಿ ಹೋಯಿತೆ?....ಹ್ಞಂ....ಬಾಯಿಬಿಡಿ"

—ಜಗದೀಶನ ಕಣ್ಣು ಚುಚ್ಚುವಂತೆ ಅವನನ್ನೇ ಕೆಂಡಗಣ್ಣಿನಿಂದ ದೃಷ್ಟಿಸುತ್ತಾ ನಿಂತಳು ರಮಾಮಣಿಯ ಹಿತ್ತೈಷಿಣಿ.

ಅರೆಕ್ಷಣ ಭೀಕರ ಮೌನ ಆವರಿಸಿತು.

"ಏನೇ ರಮಾ, ಈ ಮಹಾಶಯರು ನಿನ್ನ ರಮಣನಾಗಬೇಕೆಂದು ನಿನ್ನ ಆಸೆಯೋ? ಎಂದಿನಿಂದ ಪ್ರಾರಂಭವಾಯಿತೋ ಈ ಪ್ರಣಯಪ್ರಸಂಗ?"

"ಇಲ್ಲ ಅಕ್ಕ ನನಗೇನೂ ತಿಳಿಯದು...."

—ರಮಾಮಣಿ ನಡುಗುತ್ತಲೇ ನುಡಿದಳು.

"ನಿನಗೇನೂ ತಿಳಿಯದೆಯೋ ಅವರ ನಾಲಿಗೆ ಉದ್ದವಾಯಿತೋ?"

"ಇವತ್ತೇ ಅಕ್ಕ. ಅವರು ಹೀಗೆ ಮಾತನಾಡಿದ್ದು...."

"ನನಗೆ ತಿಳಿದ ಹಾಗೆ ಇವತ್ತು!....ಯಾರಿಗೂ ತಿಳಿಯದ ಹಾಗೆಯೇ ಎಷ್ಟು ದಿನಗಳಿಂದ ನಡೆದುಬರುತ್ತಿದೆಯೋ?"

"ನಿಮ್ಮಾಣೆ ಇದೇ ಮೊದಲ ದಿನ ಅಕ್ಕ. ಇಷ್ಟು ದಿನವೂ ಅವರು ನಮ್ಮಣ್ಣನ ಜೊತೆಯಲ್ಲಿ ಬರುತ್ತಿದ್ದರು. ಇವತ್ತು ಮಾತ್ರ...."

"ಒಬ್ಬರೇ ಬಂದಿದ್ದಾರೆ ಅಲ್ಲವೇ?"

" ಹೌದು!—ಎಂಬಂತೆ ತಲೆ ಗಮುಕು ಹಾಕಿದಳು ರಮಾಮಣಿ."

ಜಗದೀಶ ಮೆಲ್ಲಮೆಲ್ಲನೆ ಹಿಂದಕ್ಕೆ ಸರಿಯುತ್ತ, ಆ ಕೋಣೆಯಿಂದ ಹೊರಗೆ ಹೋಗಲು ಯತ್ನಿಸುತ್ತಿದ್ದ. ಆದರೆ ರಮಾಮಣಿಯ ಹಿತೈಷಿಣಿ ಅವನನ್ನು ಸುಮ್ಮನೆ ಬಿಡುವಳೆ?

" ಏಕೆ ಪ್ರೇಮಪುಂಗವರೇ, ಹಿಂದುಹಿಂದಕ್ಕೆ ಹೋಗುತ್ತಿದ್ದೀರಿ? ರಮಾಮಣಿಯನ್ನು ಕರೆದುಕೊಂಡು ಹೋಗುವುದಿಲ್ಲವೆ? ಬೇರೆ ಊರಿನ ರೈಲು ಹತ್ತುವುದಿಲ್ಲವೆ? ಪ್ರೇಮದ ಗೂಡಿನಲ್ಲಿ ಪಕ್ಷಿಗಳಂತೆ ಬಾಳುವುದಿಲ್ಲವೆ?

—ಅವಳ ಮಾತು ಜಗದೀಶನ ಹೃದಯಕ್ಕೆ ಶೂಲದಂತೆ ನೆಟ್ಟು, ಅವನನ್ನು ತಡೆದು ನಿಲ್ಲಿಸಿತು. ಆ ಸ್ಥಳದಿಂದ ಒಮ್ಮೆ ಪಾರಾದರೆ ಸಾಕೆಂದು ಪರಿತಪಿಸುತ್ತಿದ್ದ ಆತ ಮೆಲ್ಲನೆ ಹೇಳಿದ—

" ದಯವಿಟ್ಟು ನನ್ನನ್ನು ಕ್ಷಮಿಸಿಬಿಡಿ...."

" ಕ್ಷಮೆ! ಅರಿಯದ ಹೆಣ್ಣುಮಕ್ಕಳ ಮನಸ್ಸಿನಲ್ಲಿ ಹುಸಿಯಾಸೆಗಳನ್ನು ಹುಟ್ಟಿಸಿ, ಅವರ ಬಾಳನ್ನು ತಮ್ಮ ಸ್ವಾರ್ಥಕ್ಕೆ ಬಲಿಕೊಡುವವರಿಗೆ ಕ್ಷಮೆ!...."

—ನಾಟಕದಲ್ಲಿನ ಉದ್ರಿಕ್ತಪಾತ್ರದಂತೆ ಮಾತನಾಡುತ್ತಿದ್ದಳು ರಮಾಮಣಿಯ ಹಿತೈಷಿಣಿ.

" ರಮಾ, ಈಗಲೇ ನಿನ್ನ ಓದಿಗೆ ಸಮಾಧಿ ಕಟ್ಟಬೇಕೆಂದು ಯೋಚಿಸಿದ್ದೀಯೇನೇ?"

" ಇಲ್ಲ ಅಕ್ಕ"

" ಹಾಗಾದರೆ ನಿನ್ನ ಮನಸ್ಸಿನಲ್ಲಿ ಏನಿದೆಯೋ ಅದನ್ನು ಸರಿಯಾಗಿ ಹೇಳು."

" ಅಣ್ಣ ನನ್ನನ್ನು ಡಾಕ್ಟರ್ ಪರೀಕ್ಷೆಗೆ ಓದಿಸಬೇಕೆಂದಿದ್ದಾರೆ ಅಕ್ಕ."

" ಅವರ ಯೋಚನೆ ನಿನಗೆ ಇಷ್ಟವಿಲ್ಲವೋ?"

" ನನಗೂ ಡಾಕ್ಟರಾಗಬೇಕೆಂದು ತುಂಬ ಇಷ್ಟವಿದೆ ಅಕ್ಕ."

ಅರೆಕ್ಷಣ ಮೌನವಾವರಿಸಿತು.

ಜಗದೀಶ ತಲೆತಗ್ಗಿಸಿ ನಿಂತಿದ್ದ.

ಅವನ ಕಡೆಗೆ ನೋಡುತ್ತಾ ರಮಾಮಣಿಯ ಹಿತೈಷಿಣಿ ನಿಶ್ಚಿತವಾದ ಧೋರಣೆಯಿಂದ ನುಡಿದಳು—

" ಕೇಳಿದಿರಾ, ರಮಾಮಣಿಯ ಮನಸ್ಸಿನಲ್ಲಿ ಏನಿದೆಯೆಂದು ? ಅವಳಿಗೆ ಡಾಕ್ಟರಾಗಬೇಕೆಂದು ಆಸೆ. ಆ ಆಸೆಯನ್ನು ಈಡೇರಿಸಲು ಅವಳ ಅಣ್ಣ ಆಸಕ್ತಿ ವಹಿಸುತ್ತಿದ್ದಾರೆ. ಅವಳನ್ನು ಮದುವೆಯಾಗುವವರು ವಿದ್ಯಾವಂತರಾಗಿರಬೇಕು ; ಒಳ್ಳೆಯ ನಡೆನುಡಿಯುಳ್ಳವರಾಗಬೇಕು, ಸುಸಂಸ್ಕೃತರಾಗಿರಬೇಕು. ಅವಳು ಡಾಕ್ಟರಾಗಿ ಸಮಾಜಸೇವೆ ಮಾಡುವುದರಿಂದ, ಅವಳ ಗಂಡನಾಗುವವನೂ ಸಮಾಜಸೇವೆಯಲ್ಲಿ ಆಸಕ್ತಿಯುಳ್ಳವನಾಗಿರಬೇಕು. ಹಾಗಾದರೆ ಮಾತ್ರ ಅವಳ ಬಾಳು ಸಂತೋಷಸಾಗರ. ಇಲ್ಲದಿದ್ದರೆ ಕಣ್ಣೀರಿನ ಕಡಲು. ಅವಳು ಯಾವುದನ್ನು ಆರಿಸಿಕೊಳ್ಳಬೇಕೆಂದು ನಿಮ್ಮ ಆಸೆ ಇದೆಯೋ ಹಾಗೆ ನಡೆದುಕೊಳ್ಳಿ."

" ಅವಳು ಸುಖವಾಗಿದ್ದರೆ ಅಷ್ಟೇ ಸಾಕು "

—ಎಂದ ಜಗದೀಶ.

" ಹಾಗಾದರೆ, ನೀವೂ ವಿದ್ಯಾವಂತರಾಗಿ, ಸುಸಂಸ್ಕೃತರಾಗಿ, ಸೇವಾ ಮನೋಭಾವವುಳ್ಳವರಾಗಿ ಬನ್ನಿ. ನಾನೇ ಅವಳ ಅಣ್ಣನ ಅನುಮತಿ ಪಡೆದು ರಮಾಮಣಿಯನ್ನು ನಿಮಗೆ ಒಪ್ಪಿಸುತ್ತೇನೆ. ನೀವಿಬ್ಬರೂ ಸುಖವಾಗಿರುವುದನ್ನು ನೋಡಿ ನಾನೂ ಸಂತೋಷಪಡುತ್ತೇನೆ.

" ಹಾಗೇ ಆಗಲಿ ಅಕ್ಕ....ದಯವಿಟ್ಟು ನನ್ನ ತಪ್ಪನ್ನು ಮನ್ನಿಸಿ.... ಒಂದಲ್ಲ ಒಂದು ದಿನ, ನಿಮ್ಮ ಮಾತಿನಂತೆ ಈ ಜಗದೀಶ ಪದವೀಧರನಾಗಿ ಇಲ್ಲಿಗೆ ಬಂದೇಬರುತ್ತಾನೆ....ಅದು ಮಾತ್ರ ಖಂಡಿತ !............"

— ಎಂದು ಸ್ಫೂರ್ತಿಯಿಂದ ಹೇಳುತ್ತಾ, ಜಗದೀಶ ಶರಣಾಲಯದಿಂದ ಹೊರಕ್ಕೆ ಧಾವಿಸಿದ. ತಾನು ಕೆಲಸಮಾಡುತ್ತಿದ್ದ ಹೋಟಲಿಗೂ ಸಹ ಹೋಗದೆ, ನೇರವಾಗಿ, ಮೈಸೂರು ರೈಲು ಹತ್ತಿ, ಮನೆ ಸೇರಿದ. ನಾಲ್ಕಾರು ವರ್ಷಗಳ ಹಿಂದೆ ಬಿಟ್ಟು ಓಡಿಹೋಗಿದ್ದ ತನ್ನ ಮನೆಗೆ ಅವನು ಹಿಂತಿರುಗಿದ ದಿನವೇ, ಅವನ ತಂಗಿ ಗಿರಿಜೆಯ ವಿವಾಹದ ಸನ್ನಾಹ ನಡೆಯುತ್ತಿತ್ತು.

—ಜಗದೀಶ ತನ್ನ ಈ ಪೂರ್ವೋತ್ತರಗಳನ್ನೆಲ್ಲಾ ಶಾಮುವಿಗೆ ಚಾಚೂ ಬಿಡದಂತೆ ನಿವರಿಸಿದ. ಅವನ ನಿಸ್ಸಂಕೋಚಭಾವ ಹಾಗೂ ಪ್ರಾಮಾಣಿಕತೆ ಶಾಮುವಿಗೆ ತುಂಬಾ ಮೆಚ್ಚಿಕೆಯಾಯಿತು.

" ಹಾಗಾದರೆ, ರಮಾಮಣಿಯನ್ನು ಮದುವೆಯಾಗುವುದಕ್ಕಾಗಿ ನೀನು ಡಿಗ್ರಿ ತೆಗೆದುಕೊಳ್ಳಬೇಕೆಂದು ನಿಶ್ಚಯಿಸಿದ್ದೀಯೆ – ಅಲ್ಲವೆ ? "

" ಮದುವೆಯಾಗುವುದೊಂದೇ ಉದ್ದೇಶವಲ್ಲ ಭಾವ. ಅದರಿಂದ ನನ್ನ ಭವಿಷ್ಯವೂ ಸಹ ಭವ್ಯವಾಗುವುದೆಂದು ಭಾವಿಸಿದ್ದೇನೆ "

" ನಿಜ ಜಗ್ಗೂ.... ನಿಜ "

—ಎನ್ನುತ್ತಾ ಶಾಮು ಜಗದೀಶನ ಮನೋಭಾವನೆಯನ್ನು ಮೆಚ್ಚಿಕೊಂಡ.

ಎರಡು ಕ್ಷಣಗಳ ಮೌನದ ಬಳಿಕ ಜಗ್ಗು ಕೇಳಿದ—

" ನನಗೆ ಕೆಲಸ ಕೊಡಿಸುತ್ತೀರಾ ಭಾವ "

" ಆಗಲಿ. ಮೊದಲು ಪರೀಕ್ಷೆಯ ಫಲಿತಾಂಶ ಬರಲಿ "

" ನಾನು ಪಾಸಾಗುವುದಂತೂ ಖಂಡಿತ "

" ಅಷ್ಟು ನಂಬಿಕೆಯೇ ? "

—ನಸುನಗುತ್ತಾ ಶಾಮು ಕೇಳಿದ ಪ್ರಶ್ನೆಗೆ " ಹೌದು " ಎಂದು ಉತ್ತರಿಸಿದ ಜಗ್ಗು.

ಮತ್ತೆ ಮೌನವಾವರಿಸಿತು.

ಈ ಅವಧಿಯಲ್ಲಿ ಶಾಮು ರಮಾಮಣಿಯ ಹಿತೈಷಿಣಿಯ ಬಗ್ಗೆಯೇ ಯೋಚಿಸುತ್ತಿದ್ದ. ಅವನಿಗೆ ಆ ಹುಡುಗಿ ಸಾಮಾನ್ಯಳಂತೆ ತೋರಲಿಲ್ಲ. ಆಕೆ ತನ್ನ ಜೀವನದಲ್ಲಿ ಗಂಡಸಿನ ಬಗ್ಗೆ ಕಹಿಯಾದ ಅನುಭವಗಳನ್ನು ಪಡೆದಿರಬೇಕೆಂದು ಭಾವಜೀವಿಯಾದ ಶಾಮುವಿನ ಮನಸ್ಸು ಊಹಿಸಿತು. ಆದರೆ ಜಗ್ಗು ಅವಳ ಬಗ್ಗೆ ಯಾವುದನ್ನೂ ವಿವರವಾಗಿ ಹೇಳಿರಲಿಲ್ಲ. ತಾನೇ ಅವನನ್ನು ಪ್ರಶ್ನಿಸಿದರೆ, ' ನಮ್ಮ ಭಾವನಿಗೇಕೆ ಆ ಹುಡುಗಿಯ ಬಗ್ಗೆ ಇಷ್ಟು ಆಸಕ್ತಿ ' ಎಂದು ಜಗ್ಗು ತಿಳಿದುಕೊಳ್ಳುತ್ತಾನೇನೋ ಎಂದು ಶಾಮುವಿಗೆ ಆತಂಕ !

" ಏನು ಭಾವ, ಯೋಚಿಸುತ್ತಿದ್ದೀರಿ ? "

—ಜಗ್ಗುವೇ ಮೌನವನ್ನು ಮುರಿದ.

" ಏನೂ ಇಲ್ಲ ಜಗ್ಗು. ಅಂದಹಾಗೆ ಆ ಹುಡುಗಿಯ ಹೆಸರೇನು ? "

" ಯಾವ ಹುಡುಗಿ ? ರಮಾಮಣಿಯೇ ? "

" ಅಲ್ಲ. ಅವಳ ಹಿತೈಷಿಣಿ? "

" ಅವಳ ಹೆಸರು ರತ್ನ."

" ಏನು ಓದುತ್ತಿದ್ದಾಳೆ? "

" ನರ್ಸ್ ಟ್ರೈನಿಂಗ್ ಪಾಸಾಯಿತು. ಬೆಂಗಳೂರಿನಲ್ಲೇ ಯಾವುದೋ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿದ್ದಾಳೆ."

" ಹಾಗಾದರೆ, ಸ್ವತಂತ್ರವಾಗಿ ಸಂಪಾದಿಸಬಲ್ಲ ಹೆಣ್ಣುಮಕ್ಕಳೂ 'ಶರಣಾಲಯ'ದಲ್ಲಿದ್ದಾರೆಯೆ? "

" ಇಲ್ಲ. ರತ್ನಳಿಗೆ ನರ್ಸ್ ಟ್ರೈನಿಂಗ್ ಇತ್ತೀಚೆಗೆ ಆಯಿತು. ಅವಳಿಗೆ ಈಗ ದೊರೆತಿರುವ ಕೆಲಸವೂ ಹಂಗಾಮಿಯಂತೆ. ಅನಾಥಳಾಗಿ ಬಂದ ಈ ಹುಡುಗಿಗೆ ಖಾಯಂ ಕೆಲಸ ದೊರೆಯುವವರೆಗೂ 'ಶರಣಾಲಯ'ದವರು ಹೊರಗೆ ಕಳುಹಿಸುವುದಿಲ್ಲವಂತೆ "

—ಎಂದು ತನಗೆ ತಿಳಿದಷ್ಟು ಸಂಗತಿಯನ್ನು ಹೇಳಿದ ಜಗ್ಗು.

ಇಬ್ಬರೂ ವಾಕಿಂಗ್ ಮುಗಿಸಿ ಮನೆ ಸೇರುವಷ್ಟರಲ್ಲಿ ಗಂಟೆ ಎಂಟಾಗಿತ್ತು.

ಜಾನಕಮ್ಮನವರು ಶೀರಿಕೊಂಡ ದಿನದಿಂದ ಜಯರಾಯರ ಮನೆಯವರಿಗೆಲ್ಲಾ ಗೋವಿಂದಯ್ಯನವರ ಮನೆಯಲ್ಲಿಯೇ ಊಟದ ಏರ್ಪಾಟಾಗಿದ್ದಿತು. ಸರೋಜ ಸ್ವಲ್ಪವೂ ಬೇಸರಿಸದೆ ಎಲ್ಲರನ್ನೂ ಸಮಾಧಾನದಿಂದ ಉಪಚರಿಸುತ್ತಿದ್ದಳು.

ಆ ರಾತ್ರಿ ಎಷ್ಟು ಹೊತ್ತಾದರೂ ಶಾಮುವಿಗೆ ನಿದ್ರೆ ಬರಲಿಲ್ಲ. ಅವನ ಮನಸ್ಸು ಜಗದೀಶ ಹೇಳಿದ 'ಶರಣಾಲಯ'ದ ನರ್ಸ್ ರತ್ನಳ ವಿಷಯವನ್ನೇ ಯೋಚಿಸುತ್ತಿತ್ತು. ಆಕೆ ಯಾರಾಗಿರಬಹುದೆಂದು ಊಹಿಸುವಷ್ಟರಲ್ಲಿಯೇ ಅರ್ಧರಾತ್ರಿ ಕಳೆದಿತ್ತು. ವಿಚಾರಮಂಥನದ ಅಂತ್ಯದಲ್ಲಿ ಅವನ ನೆನಪಿನ ನಯನಗಳೆದುರಿಗೆ ಇಬ್ಬರು 'ರತ್ನ'ರು ನಿಂತಿದ್ದರು: ಒಬ್ಬಳು—ತನ್ನಣ್ಣ ಸುಂದರುವನ್ನು ಮದುವೆಯಾಗಬೇಕೆಂದಿದ್ದ ತನ್ನ ಅತ್ತೆಯ ಮಗಳು ರತ್ನ; ಇನ್ನೊಬ್ಬಳು—ತನ್ನ ದೊಡ್ಡಣ್ಣ ಶ್ರೀನಿವಾಸನನ್ನು ಮದುವೆಯಾಗಿ, ಗಂಡನನ್ನು ಬಿಟ್ಟುಹೋಗಿದ್ದ ಕಪ್ಪುಹಳ್ಳಿಯ ನಾಗರತ್ನ. ಬೆಂಗಳೂರು ಸೇರಿ ದೊಷನೆ 'ಶರಣಾಲಯ'ಕ್ಕೆ ಹೋಗಿ ತನ್ನ ಊಹೆಯ ಸತ್ಯಾಸತ್ಯತೆ

ಗಳನ್ನು ತಿಳಿದುಕೊಳ್ಳಬೇಕೆಂದು ನಿಶ್ಚಯಿಸಿ ನಿದ್ರೆಯ ಮಡಿಲಲ್ಲಿ ವೈಮರೆತ ಶಾಮು.

ಮರುದಿನ ಬೆಳಗಾಗುತ್ತಿದ್ದಂತೆಯೇ ಪ್ರಯಾಣದ ಸಿದ್ಧತೆಯಲ್ಲಿದ್ದ ತಮ್ಮ ಅಳಿಯನನ್ನು ಕಂಡು ಜಯರಾಯರು ಕೇಳಿದರು—

" ಇವತ್ತೇ ಹೊರಡಬೇಕೇನು ? "

" ಹೌದು. ಆಫೀಸಿಗೆ ರಜ ಇಲ್ಲ. ಈಗ ಎರಡು ದಿನ ಸಿಕ್ಕಿದ್ದೇ ಹೆಚ್ಚು."

" ಹತ್ತು-ಹನ್ನೆರಡನೆಯ ದಿನಗಳನ್ನು ಮುಗಿಸಿಕೊಂಡು ಹೋಗಿದ್ದರೇ ಚೆನ್ನಾಗಿತ್ತು."

" ಸಾಧ್ಯವಾದರೆ ಆ ವೇಳೆಗೆ ಬರುತ್ತೇನೆ "

—ಎನ್ನುತ್ತಾ ಹೊರಡಲನುವಾದ ಶಾಮು.

ಹೆಚ್ಚು ಬಲವಂತಮಾಡಿ ಪ್ರಯೋಜನವಿಲ್ಲವೆಂದು ಸುಮ್ಮನಾದರು ಜಯರಾಯರು.

ಗಿರಿಜ ಗಂಡನೆಡೆಗೆ ಆರ್ತದೃಷ್ಟಿಯನ್ನು ಬೀರುತ್ತಾ ನಿಂತಿದ್ದಳು.

ರೈಲಿಗೆ ಹೋತ್ತಾಯಿತು ಗಿರಿಜ. ನಾನು ಹೋಗಿ ಬರುತ್ತೇನೆ. ಕಾಗದ ಬರೆಯುತ್ತೀ ತಾನೆ ? "

' ಆಗಲಿ ' ಎಂಬಂತೆ ನಿಧಾನವಾಗಿ ತಲೆಯಾಡಿಸಿದಳು ಗಿರಿಜ.

ಅವಳನ್ನೇ ಆರೆಕ್ಷಣ ನೆಟ್ಟನೋಟದಿಂದ ನಿಟ್ಟಿಸಿ, ಜಗದೀಶನೊಡನೆ ಶಾಮು ರೈಲು ಸ್ಟೇಷನ್ನಿಗೆ ನಡೆದ.

೯

" ಲಕ್ಷ್ಮಣ, ನಿನಗೆ ನಾಳೆ ಬಿಡುವಿದೆಯಲ್ಲವೆ ? "

—ಮೈಸೂರಿನಿಂದ ಹಿಂದಿರುಗಿ, ತನ್ನ ಕಚೇರಿಗೆ ಹಾಜರಾಗಿದ್ದ ಶಾಮು ತನ್ನ ಗೆಳೆಯನನ್ನು ಕುತೂಹಲದಿಂದ ವಿಚಾರಿಸಿದ.

" ಇಲ್ಲ. ನಾನೂ ನಿನ್ನೆ 'ಆಫ್' ತೆಗೆದುಕೊಂಡಿದ್ದೆ. ನಾಳೆ ಕೆಲಸಕ್ಕೆ ಬರಬೇಕು."

" ಅನಂತುವಿಗೆ ಬಿಡುವಿದೆಯೆ ? "

" ಹೌದು. ಇವತ್ತಿನಿಂದ ಅವನಿಗೆ ' ನೈಟ್ ಷಿಫ್ಟ್ ' ಅದಕ್ಕೇ ಅವನು ಇನ್ನೂ ಬಂದಿಲ್ಲ."

" ಹಾಗಾದರೆ ಅವನಿಂದ ಒಂದು ಕೆಲಸವಾಗಬೇಕು "

" ಏನು ? "

—ಎಂದು ಲಕ್ಷ್ಮಣ ಪ್ರಶ್ನಿಸುತ್ತಿದ್ದಂತೆಯೇ ಅನಂತ ಆಫೀಸಿಗೆ ಬಂದ.

" ಏನಯ್ಯ, ನಿನಗೆ ' ನೈಟ್ ಷಿಫ್ಟ್ ' ಎಂದು ಲಕ್ಷ್ಮಣ ಹೇಳಿದ. ನೀನು ' ಡೇ ಷಿಫ್ಟ್ ' ಗೇ ಹಾಜರಾಗಿಬಿಟ್ಟೆಯಲ್ಲಾ "

ಅನಂತನ ಕಡೆಗೆ ನೋಡುತ್ತಾ ನಕ್ಕು ನುಡಿದ ಶಾಮು.

" ನಿಮ್ಮಿಬ್ಬರನ್ನೂ ನೋಡಿ ಎರಡು ದಿನವಾಯಿತಲ್ಲ ! ಅದಕ್ಕೋಸ್ಕರ ಬಂದೆ "

—ಎಂದ ಅನಂತ.

" ಸುಮ್ಮನೆ ನೋಡುವುದಕ್ಕೆ ನಾವೇನು ಬೀದಿಯ ಬದಿಯಲ್ಲಿಟ್ಟ ಬಿಟ್ಟ ಪ್ರದರ್ಶನ ವಸ್ತುಗಳೆ ? ನಡಿ, ಮೊದಲು ನಮ್ಮಿಬ್ಬರಿಗೂ ಕಾಫಿಕೊಡಿಸಿ, ಆ ಮೇಲೆ ಬೇಕಾದಷ್ಟು ಹೊತ್ತು ನಮ್ಮನ್ನು ನೋಡಿ ಮಾತನಾಡು "

—ಎನ್ನುತ್ತಾ ಎದ್ದ ಲಕ್ಷ್ಮಣ.

“ ಹೌದು ಹೌದು. ಮೊದಲು ‘ ಜ್ಞಾನಪಾನ ’ ಆಗಬೇಕು. ಆ ಮೇಲೆ ಮಿಕ್ಕ ಮಾತು ”

—ಎನ್ನುತ್ತಾ ಶಾಮುವೂ ಹೊರಡಲನುವಾದ.

ಅಷ್ಟರಲ್ಲಿ ‘ಕರೆಗಂಟೆ’ಯ ಸದ್ದು ಕೇಳಿಸಿದುದರಿಂದ ಲಕ್ಷ್ಮಣ ಸಂಪಾದಕರ ಕೋಣೆಯೊಳಕ್ಕೆ ಹೋಗಬೇಕಾಯಿತು.

ಶಾಮು ಮತ್ತು ಅನಂತ ಕಚೇರಿಯ ಹೊರ ಆವರಣವನ್ನು ಸೇರುವಷ್ಟರಲ್ಲಿ ಹಿಂದಿರುಗಿದ ಲಕ್ಷ್ಮಣನನ್ನು ಕಂಡು ಗೆಳೆಯರಿಬ್ಬರಿಗೂ ಆಶ್ಚರ್ಯವೇ ಆಯಿತು. ಅವರು ಪ್ರಶ್ನಿಸುವ ಮುನ್ನವೇ—

“ ಕರೆಗಂಟೆ ನನಗಲ್ಲ – ನಿನಗೆ ! ”

—ಎಂದು ಶಾಮುವಿನ ಕಡೆಗೆ ನೋಡುತ್ತಾ ನುಡಿದ ಲಕ್ಷ್ಮಣ.

ಕೂಡಲೇ ಶಾಮು ಸಂಪಾದಕರ ಕೋಣೆಗೆ ಧಾವಿಸಿದ.

“ ಬನ್ನಿ ಮಿಸ್ಟರ್ ಶಾಮಸುಂದರ್. ಕೂತುಕೊಳ್ಳಿ ”

—ಎನ್ನುತ್ತಾ ಸ್ವಾಗತಿಸಿದರು ಸಂಪಾದಕರು.

ಶಾಮು ಬಳಿಯಲ್ಲಿದ್ದ ಕುರ್ಚಿಯೊಂದರಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ ಸಂಪಾದಕರು ಪ್ರಶ್ನಿಸಿದರು—

“ ನಿಮ್ಮ ಊರು ಇರುವುದು ಕೋಟೆ ತಾಲ್ಲೂಕಿನಲ್ಲೇ ? ”

“ ಹೌದು ಸರ್ ”

“ ಆ ತಾಲ್ಲೂಕಿನಲ್ಲಿ ಅಗ್ರಹಾರ ಎಂಬ ಹಳ್ಳಿ ಇದೆಯಂತೆ – ನಿಮಗೆ ಗೊತ್ತೆ ? ”

“ ನಮ್ಮ ಹಳ್ಳಿಯ ಹೆಸರೇ ಅಗ್ರಹಾರ ! ”

—ಎಂದು ಶಾಮು ಕಣ್ಣರಳಿಸಿ ನುಡಿದಾಗ ಸಂಪಾದಕರು ಆಶ್ಚರ್ಯವನ್ನು ಪ್ರಕಟಿಸಿದರು.

“ ನಾಳೆ ನಮ್ಮ ಪತ್ರಿಕೆಯ ಮಾಲೀಕರು ಮತ್ತು ನಮ್ಮ ಆರೋಗ್ಯ ಮಂತ್ರಿಗಳು ನಿಮ್ಮ ಹಳ್ಳಿಗೆ ಹೋಗುತ್ತಾರೆ. ನೀವೂ ಅವರೊಡನೆ ಹೊರಡಬೇಕು ! ”

—ಎಂದು ಸಂಪಾದಕರು ನುಡಿದಾಗ ಶಾಮು ಇನ್ನಷ್ಟು ಆಶ್ಚರ್ಯಭರಿತನಾದ.

" ಏಕೆ ಎನ್ನುವುದು ನಿಮಗೀಗಾಗಲೇ ತಿಳಿದಿರಬಹುದಲ್ಲವೇ ? "

" ಇಲ್ಲ ಸರ್."

" ನಾಳೆ ನಿಮ್ಮ ಹಳ್ಳಿಯಲ್ಲಿ ಒಂದು ಹೊಸ ಆಸ್ಪತ್ರೆಯನ್ನು ತೆರೆಯುತ್ತಾರಂತೆ. ಆದರ ಪ್ರಾರಂಭೋತ್ಸವ ಸಮಾರಂಭಕ್ಕೆ ಆರೋಗ್ಯ ಮಂತ್ರಿಗಳೂ, ನಮ್ಮ ಪತ್ರಿಕೆಯ ಮಾಲೀಕರೂ ಹೋಗುತ್ತಾರೆ. ಅವರ ಭಾಷಣಗಳನ್ನೂ, ಅಲ್ಲಿ ನಡೆಯುವ ಕಾರ್ಯಕ್ರಮಗಳನ್ನೂ ವರದಿಮಾಡಲು ನಮ್ಮ ಪತ್ರಿಕೆಯ ಪ್ರತಿನಿಧಿಯನ್ನು ಕಳುಹಿಸಬೇಕಾಗಿದೆ. ಈ ಕೆಲಸಕ್ಕೆ ನೀವೇ ತಕ್ಕವರು ಎಂದು ನನ್ನ ಅಭಿಪ್ರಾಯ."

" ಆಗಲಿ ಸರ್, ಹೋಗುತ್ತೇನೆ "

" ನಾಳೆ ಬೆಳಿಗ್ಗೆ ಮಾಲೀಕರ ಕಾರಿನಲ್ಲಿಯೇ ನೀವು ಹೊರಡಬಹುದು "

—ಎಂದರು ಸಂಪಾದಕರು.

ಸಮ್ಮತಿಯನ್ನು ಸೂಚಿಸಿ ಹೊರಬಂದ ಶಾಮು.

ಅನಂತ-ಲಕ್ಷ್ಮಣರಿಗೆ ಸಂಪಾದಕರು ಹೇಳಿದ ಸಂಗತಿಯನ್ನು ತಿಳಿಸಿ, ಶಾಮು ಅವರೊಡನೆ ಕಾಫಿ ಕುಡಿಯಲು ಹೊರಟ.

" ನಿನ್ನ ಅದೃಷ್ಟ ಚೆನ್ನಾಗಿದೆ ಶಾಮು! ಪ್ರಯಾಣದ ಮೇಲೆ ಪ್ರಯಾಣ ಬರುತ್ತಿದೆ. ನಿನ್ನೆ ಮೈಸೂರು, ಇವತ್ತು ಬೆಂಗಳೂರು, ನಾಳೆ ನಿಮ್ಮ ಹಳ್ಳಿ........"

—ಎಂದು ಅನಂತ ಮಾತು ಮುಂದುವರಿಸುವಷ್ಟರಲ್ಲಿ,

" ಅವನ ಕಾಲಿನಲ್ಲಿ ಚಕ್ರವಿದೆ! "

—ಎಂದ ಲಕ್ಷ್ಮಣ.

" ಚಕ್ರ ಇರುವುದು ನನ್ನ ಕಾಲಿನಲ್ಲಿಯೋ ಅಥವಾ ಹಣೆಯಲ್ಲಿಯೋ—ತಿಳಿಯದು ! "

—ಎಂದು ನಕ್ಕ ಶಾಮು.

ಗೆಳೆಯರೂ ಅವನೊಡನೆ ನಗುತ್ತಾ ಹೋಟಲು ಸೇರಿದರು.

ಕಾಫಿ ಕುಡಿಯುತ್ತಿದ್ದಂತೆಯೇ ಲಕ್ಷ್ಮಣ ಮಾತು ಆರಂಭಿಸಿದ—

" ಅನಂತನಿಂದ ಏನೋ ಕೆಲಸವಾಗಬೇಕು ಎಂದೆಯಲ್ಲ—ಏನದು ಶಾಮು ? "

" ನನ್ನಿಂದಲೂ ಆಗುವಂತಹ ಕೆಲಸವಿದೆಯೇನು ? "

—ಬೆರಗಿನ ಧ್ವನಿಯಲ್ಲಿ ಕೇಳಿದ ಅನಂತ.

" ನಿನ್ನಿಂದ ಆಗದಂತಹ ಕೆಲಸವೇ ಇಲ್ಲ ! ಅದಕ್ಕೇ ಈ ಕೆಲಸವನ್ನು ನಿನಗೆ ಒಪ್ಪಿಸುತ್ತಿದ್ದೇನೆ "

—ಎಂದ ಶಾಮು.

" ಏನದು ? "

" ನೀನು 'ಭಾರತಿ ಶರಣಾಲಯ'ಕ್ಕೆ ಹೋಗಿ ಬರಬೇಕು.

" ಆ 'ಸ್ತ್ರೀ ಮಲೆಯಾಳ'ಕ್ಕೆ ಹೋಗಿ ಬರಲು ನನ್ನನ್ನೇ ಆರಿಸಿರುವುದರ ಮರ್ಮವೇನೋ ? "

" ಅದು ನೀನು ತಿಳಿದಿರುವಂತಹ 'ಸ್ತ್ರೀ ಮಲೆಯಾಳ'ವಲ್ಲ ಮಹರಾಯಾ ! ಅಲ್ಲಿರುವ ಹೆಣ್ಣುಮಕ್ಕಳ ವಿಷಯವಾಗಿ ಯಾರೂ ಚಕಾರಶಬ್ದವೆತ್ತುವಂತಿಲ್ಲ."

" ಇರಲಿ. ಅಲ್ಲಿಗೆ ಹೋಗಿ ನಾನೇನು ಮಾಡಬೇಕು ? "

" ರತ್ನ ಎಂಬ ಹೆಸರಿನ ನರ್ಸ್ ಅಲ್ಲಿದ್ದಾಳೆಯೆ – ವಿಚಾರಿಸು. ಅವಳು ಅಲ್ಲಿಗೆ ಯಾವಾಗ ಬಂದಳು, ಎಲ್ಲಿಂದ ಬಂದಳು, ಅವಳ ಪೂರ್ವಚರಿತ್ರೆ ಏನು – ಎಂಬುದನ್ನೆಲ್ಲಾ ವಿವರವಾಗಿ ತಿಳಿದುಕೊ. ಸಾಧ್ಯವಾದರೆ, ಅವಳು ಹೇಗಿದ್ದಾಳೆ ಎಂಬುದನ್ನೂ ನೋಡಿಕೊಂಡು ಬಾ "

—ಎಂದ ಶಾಮು.

" ಕಷ್ಟವಾದ ಕೆಲಸವನ್ನೇ ಒಪ್ಪಿಸಿದೆಯಲ್ಲಾ ನನಗೆ ! "

—ಎಂದ ಅನಂತ.

" ಕಷ್ಟವಾದರೂ ನಿನಗೆ ಇಷ್ಟವಾದ ಕೆಲಸವೇ ತಾನೆ – 'ಸ್ತ್ರೀ ಮಲೆಯಾಳ'ಕ್ಕೆ ಹೋಗಿಬರುವುದು ! "

—ಎಂದು ಲಕ್ಷ್ಮಣ ನಕ್ಕ.

ಮೂವರೂ ಕಾಫಿ ಕುಡಿದು ಮುಗಿಸಿದರು.

ಹೋಟಲಿನವನಿಗೆ ಹಣ ಕೊಟ್ಟು ಹೊರಬರುತ್ತಾ ಅನಂತ ಕೇಳಿದ—

" ಹಾಗಾದರೆ ನಾನು 'ಶರಣಾಲಯ'ಕ್ಕೆ ಯಾವಾಗ ಹೋಗಿ ಬರಬೇಕು ? "

" ಇವತ್ತು ಮಧ್ಯಾಹ್ನ ನಿನಗೆ ಬಿಡುವಿದೆಯಲ್ಲ – ಹೋಗಿಬಾ "

—ಎಂದ ಲಕ್ಷ್ಮಣ.

" ಹೌದು, ಇವತ್ತೇ ನೀನು ಹೋಗಿಬರುವುದು ಒಳ್ಳೆಯದು. ಈ 'ರತ್ನ'ಳ ವಿಷಯ ನನಗೆ ಸರಿಯಾಗಿ ತಿಳಿದರೆ, ನಾಳೆ ಹಳ್ಳಿಗೆ ಹೋದ ಮೇಲೆ ಮುಂದಿನ ವಿಷಯ ಯೋಚನೆ ಮಾಡಬಹುದು "

—ಎಂದ ಶಾಮು.

" ಹಾಗಾದರೆ ನಾನು ಈಗಲೇ ಅಲ್ಲಿಗೆ ಹೋಗಿ ಬರುತ್ತೇನೆ "

—ಎಂದು ಕಚೇರಿಯ ಕಡೆಗೆ ಹೋಗುವ ರಸ್ತೆಯ ತಿರುವಿನಲ್ಲಿಯೇ ನಿಂತು ನುಡಿದ ಅನಂತ.

" ಮತ್ತೆ ನಿನ್ನನ್ನು ನೋಡುವುದು ? "

" ಸಂಜೆಗೆ "

" ಎಲ್ಲಿ ? "

" ಆಫೀಸಿನಲ್ಲಿ "

" ನೀನು ಕೆಲಸಕ್ಕೆ ಬರುವುದು ರಾತ್ರಿ ಎಂಟೂವರೆಗೆ ಅಲ್ಲವೆ ? "

" ಹೌದು "

" ನಾನು ಐದು ಗಂಟೆಗೇ ಮನೆಗೆ ಹೋಗುತ್ತೇನೆ."

" ನಾಳೆ ನೀನಿರುವುದಿಲ್ಲವೇ ? "

" ಇಲ್ಲ. ಬೆಳಗಾಗುತ್ತಿದ್ದಂತೆಯೇ ನನಗೆ ಪ್ರಯಾಣ ಕಾದಿದೆಯಲ್ಲ."

" ಆದರೂ ನೀನು ಬೆಳಿಗ್ಗೆ ಆಫೀಸಿಗೆ ಬಂದೇ ಹೋಗಬೇಕು ಅಲ್ಲವೆ ? "

" ಹೌದು. ಮಾಲೀಕರ ಕಾರು ಆಫೀಸಿನ ಬಳಿಗೆ ಬಂದೇ ಹೋಗುತ್ತದೆಂದು ಕಾಣುತ್ತದೆ "

" ಹಾಗಾದರೆ ನಾನು 'ಶರಣಾಲಯ'ಕ್ಕೆ ಹೋಗಿ ಬಂದ ವಿಷಯವನ್ನು ವಿವರವಾಗಿ ಬರೆದು ನನ್ನ ಟೇಬಲ್ಲಿನ ಮೇಲೆ ಇಟ್ಟುಹೋಗುತ್ತೇನೆ. ಬೆಳಿಗ್ಗೆ ನೀನು ಬಂದಾಗ ತೆಗೆದುಕೋ "

" ಹಾಗೆಯೇ ಮಾಡು. ಇಬ್ಬರಿಗೂ ಅನುಕೂಲ "

—ಎಂದ ಶಾಮು.

ಅನಂತನನ್ನು ಬೀಳ್ಕೊಟ್ಟ ಗೆಳೆಯರಿಬ್ಬರೂ ಕಚೇರಿಯನ್ನು ಸೇರಿದರು.

" ಮಿಸ್ಟರ್ ಶಾಮಸುಂದರ್, ನಿಮಗೆ ಸ್ವಲ್ಪ ಹೊತ್ತಿಗೆ ಮುಂಚೆ ಒಂದು ಫೋನ್ ಕಾಲ್ ಬಂದಿತ್ತು "

—ಎಂದ ಶಾಮುವಿನ ಸಹೋದ್ಯೋಗಿ.

" ಎಲ್ಲಿಂದ ? "

" ತಿಳಿಯದು. ನೀವು ಆಫೀಸಿನಲ್ಲಿ ಇಲ್ಲವೆಂದೊಡನೆ ಅವರು ಫೋನ್ ಡಿಸ್‌ಕನೆಕ್ಟ್ (Disconnect) ಮಾಡಿಬಿಟ್ಟರು "

—ಎಂದ ಸಹೋದ್ಯೋಗಿ.

" ಅವಶ್ಯವಿದ್ದರೆ ಮತ್ತೊಮ್ಮೆ ಮಾಡುತ್ತಾರೆ "

—ಎಂದು ತನ್ನಷ್ಟಕ್ಕೇ ಹೇಳಿಕೊಂಡು ಕೆಲಸದಲ್ಲಿ ತೊಡಗಿದ ಶಾಮು.

ಸಂಜೆ ಐದು ಗಂಟೆಯ ವೇಳೆಗೆ ಮತ್ತೊಮ್ಮೆ ಟೆಲಿಫೋನ್ ಗಂಟೆ ಅವನನ್ನು ಕರೆಯಿತು. ಕಚೇರಿಯಿಂದ ಹೊರಡಲು ಸಿದ್ಧವಾಗುತ್ತಿದ್ದವನು ಬೇಸರದಿಂದ ' ರಿಸೀವರ್ ' (Receiver) ಎತ್ತಿಕೊಂಡು " ಹಲೋ " ಎಂದ.

" ಅದು ' ನವಕರ್ನಾಟಕ ' ಕಚೇರಿಯೇ ? "

" ಹೌದು."

" ಮಿ|| ಶಾಮಸುಂದರ್ ಇದ್ದಾರೆಯೇ ? "

" ನಾನೇ ಮಾತನಾಡುತ್ತಿದ್ದೇನೆ."

" ಓಹೋ ! ನಿನ್ನ ಧ್ವನಿಯೇ ಗುರುತು ಸಿಕ್ಕಲಿಲ್ಲವಲ್ಲೋ ಶಾಮು."

—ಈ ಸಲಿಗೆಯ ಮಾತು ಕೇಳಿ ಶಾಮು ಆಶ್ಚರ್ಯಚಕಿತನಾದ.

" ನಿನ್ನೆ ನಿನಗೆ ನಾಲ್ಕೈದು ಸಾರಿ ಫೋನ್ ಮಾಡಿದ್ದೆ. ಇವತ್ತು ಬೆಳಿಗ್ಗೆಯೂ ಮಾಡಿದ್ದೆ. ನೀನು ಆಫೀಸಿನಲ್ಲಿಯೇ ಇರಲಿಲ್ಲ ! "

" ಹೌದು. ನಿನ್ನೆ ನಾನು ಮೈಸೂರಿಗೆ ಹೋಗಿದ್ದೆ. ಇವತ್ತು ಬೆಳಗ್ಗೆ ಫೋನ್ ಬಂದಾಗ, ನಾನು ಕಾಫಿ ಕುಡಿಯಲು ಹೋಗಿದ್ದೆ."

ತನ್ನೊಡನೆ ಮಾತನಾಡುತ್ತಿರುವವರು ಯಾರೆಂಬುದು ತಿಳಿಯದಿದ್ದರೂ ಸಹ ಶಾಮು ಉತ್ತರಿಸಿದ.

" ಮೈಸೂರಿನಲ್ಲಿ ಎಲ್ಲರೂ ಆರೋಗ್ಯವೇ ? "

" ಹ್ಞಂ."

" ನಿನ್ನ ಹೆಂಡತಿಯನ್ನು ಕರೆದುಕೊಂಡು ಬಂದಿರುವೆಯಾ ? "

" ಇಲ್ಲ."

" ಹಾಗಾದರೆ ತಾಯಿಯ ಮನೆಯಲ್ಲಿಯೇ ಇದ್ದಾಳೆಯೇನು ? "

" ಹ್ಞಂ. ಮೊನ್ನೆ ಅವಳ ತಾಯಿ ತೀರಿಕೊಂಡರು."

" ಅಯ್ಯೋ ಪಾಪ, ಏನಾಗಿತ್ತು ಅವರಿಗೆ ? "

" ಏನೋ ಕಾಯಿಲೆ."

" ನಿನ್ನ ಅತ್ತಿಗೆ ಸ್ವರ್ಣ ಕೂಡ ಸ್ವರ್ಗಸ್ಥಳಾದಳು ಶಾಮು."

" ಯಾರು ಮಾತನಾಡುತ್ತಿರುವುದು—ಸುಂದರಣ್ಣನೇ ? "

" ಹೌದು ಶಾಮು. ಯಾಕೆ ಇಷ್ಟು ಹೊತ್ತಾದರೂ ನನ್ನ ಧ್ವನಿ ಗೊತ್ತಾಗಲಿಲ್ಲವೆ? "

" ಇಲ್ಲ ಅಣ್ಣ."

" ಹೌದು. ಹೇಗೆ ಗೊತ್ತಾಗಬೇಕು—ಒಬ್ಬರನ್ನೊಬ್ಬರು ನೋಡಿ ವರ್ಷಗಳಾಗಿ ಹೋಗಿವೆ. ಈ ನಡುವೆ ನಮ್ಮ ಧ್ವನಿಗಳೂ ಬದಲಾಯಿಸಿವೆ ! "

" ನೀನು ಅಮೆರಿಕಾದಿಂದ ಯಾವಾಗ ಬಂದೆಯಣ್ಣ ? "

" ಎರಡು ತಿಂಗಳ ಮೇಲಾಯಿತು."

" ಅತ್ತಿಗೆ ಯಾವಾಗ ಕಾಲವಾದರು ? "

" ಆಕೆ ನ್ಯೂಯಾರ್ಕಿನಲ್ಲಿಯೇ ಹೋಗಿಬಿಟ್ಟಳು."

" ಯಾರಿಗೂ ಈ ಸುದ್ದಿಯೇ ತಿಳಿಯಲಿಲ್ಲವಲ್ಲಾ."

" ನಾನೇ ತಿಳಿಸಲಿಲ್ಲ. ತಿಳಿಸಬೇಕಾದ ಪ್ರಮೇಯವೂ ಇರಲಿಲ್ಲ."

" ಅವರಿಗೇನಾಗಿತ್ತು ? "

" ಆಪರೇಷನ್. ನಾನು ಬೇಡವೆಂದರೂ ಆಕೆ ತನ್ನ ಲೈಂಗಿಕ ಅವ್ಯವಸ್ಥೆಯನ್ನು ಸರಿಪಡಿಸಿಕೊಳ್ಳಲು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಳು. ಆ ಚಿಕಿತ್ಸೆ ಯಶಸ್ವಿಯಾಗಿ, ಆಕೆಗೆ ಸಂಪೂರ್ಣ ' ಹೆಣ್ಣುತನ 'ವೇನೋ ದೊರೆಯಿತು. ಆದರೆ ಚಿಕಿತ್ಸೆಯನಂತರ ಅವಳ ಮೈ ಅನೇಕ ಬಗೆಯ, ಹೆಸರಿಸಲಾಗದ ರೋಗಗಳ ಬೀಡಾಯಿತು."

" ಆಪರೇಷನ್ ಆದ ಮೇಲೆ ಅವರನ್ನು ಮನೆಗೆ ಕರೆತರಲೇ ಇಲ್ಲವೆ ? "

“ ಇಲ್ಲ. ಆಪರೇಷನ್ ಆಗಿ ಸುಮಾರು ಒಂದು ತಿಂಗಳು ಕಳೆಯು ವಷ್ಟರಲ್ಲಿ ಆಸ್ಪತ್ರೆಯಲ್ಲಿಯೇ ತೀರಿಕೊಂಡುಬಿಟ್ಟಳು.”

“ ತುಂಬಾ ವಿಷಾದಕರವಾದ ಸಂಗತಿ ಸುಂದರಣ್ಣ.”

“ ಹೌದು ಶಾಮು. ವಿಷಾದವಾಗಲಿ ವಿನೋದವಾಗಲಿ ಪಾಲಿಗೆ ಬಂದಾಗ ಅನುಭವಿಸಲೇಬೇಕಾದುದು ಅನಿವಾರ್ಯ ! ”

“ ಅದು ನಿಜ.”

“ ಈ ವಿಷಾದದ ವಾರ್ತೆ ತಿಳಿಸಿದ ಮೇಲೆ, ಒಂದು ವಿನೋದದ ವಾರ್ತೆಯನ್ನೂ ನಿನಗೆ ತಿಳಿಸಬೇಕಾಗಿದೆ ”

“ ಏನದು ? ”

“ ಸ್ವರ್ಣ ಸ್ವರ್ಗಸ್ಥಳಾಗುವ ಮುನ್ನ ಅವಳ ಇಚ್ಛೆಯಂತೆ ನನ್ನ ಅತ್ತೆ ಮಾವ ನ್ಯೂಯಾರ್ಕಿಗೆ ಬಂದಿದ್ದರು. ತನ್ನ ಕೆಲವು ಕೊನೆಯಾಸೆಗಳನ್ನು ಅವರೊಡನೆ ಹೇಳಿ, ಅವುಗಳನ್ನು ನೆರವೇರಿಸಲೇಬೇಕೆಂದು ಅವರಿಂದ ಪ್ರಮಾಣ ವಚನವನ್ನು ತೆಗೆದುಕೊಂಡು ಆಕೆ ಕಣ್ಣುಮುಚ್ಚಿದಳು. ಅವಳ ಆಸೆಯಂತೆ ಅತಿ ಮುಖ್ಯವಾದ ಒಂದು ಕಾರ್ಯ ನಿನ್ನೆ ನಿರಾಡಂಬರವಾಗಿ ನೆರವೇರಿತು. ಅದಕ್ಕಾಗಿಯೇ ನಿನ್ನೆ ನಿನಗೆ ಟೆಲಿಫೋನ್ ಮಾಡಿದ್ದೆ ”

—ಎಂದ ಟೇಲಿಫೋನಿನಲ್ಲಿ ಸುಂದರು.

“ ಇನ್ನೂ ಮುಗಿಯಲಿಲ್ಲವೆ ಶಾಮು ನಿನ್ನ ಮಾತು ? ಗಂಟೆಗಟ್ಟಲೆ ನೀನೊಬ್ಬನೇ ಫೋನ್ ಎಂಗೇಜ್ ಮಾಡಿಕೊಂಡರೆ ಮಿಕ್ಕವರ ಪಾಡೇನು ? ”

—ಎಂದ ಲಕ್ಷ್ಮಣ.

ಅವನು ನಗರದಲ್ಲಿ ನಡೆಯುತ್ತಿದ್ದ ಕ್ರೀಡಾಪಂದ್ಯದ ವರದಿಯನ್ನು ಟೆಲಿಫೋನಿನ ಮೂಲಕ ತಿಳಿದುಕೊಳ್ಳಲು ಆತುರಪಡುತ್ತಿದ್ದ.

‘ ಇನ್ನು ಸ್ವಲ್ಪ ಹೊತ್ತು ತಡೆ ’ ಎಂಬಂತೆ ಸಂಜ್ಞೆಮಾಡಿ, ಮತ್ತೆ ಸುಂದರುವಿನೊಡನೆ ಮಾತನಾಡತೊಡಗಿದ ಶಾಮು.

“ ನಿನ್ನೆ ಏನು ವಿಶೇಷ ? ”

“ ನನ್ನ ಮದುವೆ.”

“ ಮದುವೆ ! ”

“ ಹೌದು. ಏಕೆ, ನಿನಗೆ ಆಶ್ಚರ್ಯವಾಗುತ್ತಿದೆಯೇ ? ”

" ಇಷ್ಟು ಬೇಗ ಎರಡನೆ ಮದುವೆ ಮಾಡಿಕೊಂಡೆಯಾ ಸುಂದರಣ್ಣ."

" ಹೌದು ಶಾಮು. ನನ್ನ ಮಾವನವರ ಒತ್ತಾಯದಿಂದ ಮಾಡಿಕೊಳ್ಳಲೇ ಬೇಕಾಯಿತು."

" ನಿನಗೆ ಇಷ್ಟವಿರಲಿಲ್ಲವೇ ? "

" ಇಷ್ಟವಿದ್ದರೂ ಇಷ್ಟು ಬೇಗ ಮದುವೆಯಾಗುವ ಯೋಚನೆ ಇರಲಿಲ್ಲ. ಆದರೆ ವಿಶಾಲಹೃದಯರಾದ ಸ್ವರ್ಣಳ ತಂದೆ-ತಾಯಿಯರ ನೊಂದಮನಸ್ಸಿಗೆ ಇನ್ನಷ್ಟು ನೋವು ಕೊಡಲು ನನ್ನ ಮನಸ್ಸು ಒಪ್ಪಲಿಲ್ಲ. ಎಂತಲೇ ಅವರ ಮಾತಿನಂತೆ ಮದುವೆಯಾದೆ. ಅದೂ ಸ್ವರ್ಣ ಹೇಳಿಹೋದ ಹಾಗೂ ನಾನು ಮೆಚ್ಚಿದ ಹುಡುಗಿಯನ್ನೇ ಮದುವೆಯಾದೆ! ಈಗ ನಿನ್ನ ಅತ್ತಿಗೆಯಾಗಿರುವವಳು ಯಾರು ಗೊತ್ತೆ? ಊಹಿಸು, ನೋಡೋಣ?"

" ನಮ್ಮ ಸೋದರತ್ತೆ ಪದ್ಮಮ್ಮನವರ ಮಗಳು ರತ್ನಕ್ಕನೇ ?"

" ಹೌದು ಶಾಮು ಹೌದು! ಅವಳೇ, ಅವಳೇ! "

" ಈ ಸುದ್ದಿ ತಿಳಿದರೆ ನಿಜವಾಗಿಯೂ ಅಮ್ಮ ತುಂಬಾ ಸಂತೋಷ ಪಡುತ್ತಾರೆ ಸುಂದರಣ್ಣ."

" ಆದರೆ ರತ್ನಳನ್ನು ಮದುವೆಯಾಗುವಾಗ ಅಮ್ಮನಿಗೂ ಸಹ ತಿಳಿಸದಿದ್ದುದು ನನ್ನ ತಪ್ಪಲ್ಲವೆ ಶಾಮು."

" ಪರವಾಗಿಲ್ಲ. ಅದನ್ನೇನೂ ಅಮ್ಮ ಆಕ್ಷೇಪಿಸುವುದಿಲ್ಲ. ಎಲ್ಲಾದರೂ ಸರಿಯೇ, ಹೇಗಾದರೂ ಸರಿಯೆ, ತಮ್ಮ ಮಕ್ಕಳು ಸುಖವಾಗಿದ್ದರೆ ಸಾಕು ಎಂದು ಬಯಸುವ ಆ ತಾಯಿದೇವಿಗೆ ತಪ್ಪು ಹುಡುಕುವುದೇ ತಿಳಿಯದು."

" ನಿಜ."

" ಅಂತೂ ಅಪ್ಪನಿಗೂ ಸಹ ತಿಳಿಯದೆಯೇ ಈ ಮದುವೆಯಾದುದು ನನಗೆ ಬಹಳ ಸಂತೋಷವನ್ನುಂಟುಮಾಡಿದೆ ಸುಂದರಣ್ಣ ! "

" ಆ ಧನಪಿಶಾಚಿಯನ್ನು ನಮ್ಮ ತಂದೆ ಎಂದು ಹೇಳಿಕೊಳ್ಳುವುದಕ್ಕೇ ನನಗೆ ನಾಚಿಕೆಯಾಗುತ್ತದೆ ಶಾಮು "

—ಎಂದ ತಿರಸ್ಕಾರದ ಧ್ವನಿಯಲ್ಲಿ ಸುಂದರು.

ಶಾಮು ಮೆಲ್ಲನೆ ವಿಷಾದದ ನಗೆ ನಕ್ಕು, ಮಾತಿನ ಧಾಟಿಯನ್ನು ಬದಲಿಸಿದ—

" ನಾಳೆ ಬೆಳಿಗ್ಗೆ ನಾನು ಊರಿಗೆ ಹೋಗುತ್ತೇನೆ ಸುಂದರಣ್ಣ. ನಿನ್ನ ಎಲ್ಲ ವಿಷಯುಗಳನ್ನೂ ಅಮ್ಮನಿಗೆ ತಿಳಿಸಬಹುದು ತಾನೆ ? "

" ನೀನು ತಿಳಿಸುವುದಕ್ಕೆ ಮೊದಲೇ ಅಮ್ಮನಿಗೆ ತಿಳಿಯುವ ಸಂಭವವಿದೆ!"

" ಹೇಗೆ ? "

" ನಾಳೆ ಬೆಳಿಗ್ಗೆ ನಾವೆಲ್ಲರೂ ಊರಿಗೆ ಬರುತ್ತೇವೆ "

" ನಿಜವೇ ? "

" ನಿಜ ಶಾಮು. ನಾಳೆ ಊರಿನಲ್ಲಿ ಸ್ವರ್ಣಳ ಹೆಸರಿನಲ್ಲಿ ಒಂದು ಆಸ್ಪತ್ರೆಯನ್ನು ಪ್ರಾರಂಭಿಸಲು ಏರ್ಪಾಟಾಗಿದೆ. ಸದ್ಯಕ್ಕೆ ಊರಿನ ಪಂಚಾಯ್ತಿ ಹಾಲ್ ಕಟ್ಟಡದಲ್ಲಿ ಆಸ್ಪತ್ರೆಯನ್ನು ನಡೆಸಲಾಗುತ್ತದೆ. ಈಗಾಗಲೇ ಬೇರೆ ಯವರ ಮುಖೇನ ಪೂರ್ವಸಿದ್ಧತೆಗಳೆಲ್ಲಾ ಮುಗಿದಿವೆ. ಯಾರೋ ಬೆಂಗಳೂರಿ ನವರು ಆಸ್ಪತ್ರೆ ಕಟ್ಟಿಸುತ್ತಾರಂತೆ ಎಂದು ಊರಿನವರಿಗೆ ತಿಳಿದಿದೆಯೇ ಹೊರತು, ' ನಾವೇ ಆ ಬೆಂಗಳೂರಿನವರು ' ಎಂಬುದು ಅವರಿಗೆ ತಿಳಿ ಯದು ! "

" ನಿಜವಾಗಲೂ ತುಂಬಾ ಸ್ತುತ್ಯಾರ್ಹವಾದ ಕಾರ್ಯ. ಇದಕ್ಕಾಗಿ ನಿನ್ನನ್ನು ಎಷ್ಟು ಕೊಂಡಾಡಿದರೂ ಸಾಲದು."

" ಕೊಂಡಾಡಬೇಕಾದುದು ನನ್ನನ್ನಲ್ಲ, ನಿನ್ನ ಅತ್ತಿಗೆಯನ್ನು. ಅಗ್ರ ಹಾರದ ಸೊಸೆಯಾಗಿ, ಅಮೆರಿಕಾದ ಆಸ್ಪತ್ರೆಯೊಂದರಲ್ಲಿ ಅಸುವನ್ನು ತೊರೆದ ಸ್ವರ್ಣ, ತನ್ನಂತಹ ಸಹಸ್ರಾರು ಬಗೆಯ ರೋಗಿಗಳ ಉಪಯೋಗಾರ್ಥವಾಗಿ ಈ ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ಹೇಳಿದ್ದಾಳೆ. ಸಹಸ್ರಾರು ರೂಪಾಯಿ ಗಳು ವೆಚ್ಚವಾಗುವುದನ್ನು ಲಕ್ಷಿಸದೆ ಅವಳ ತಂದೆ ಮಗಳ ಮಾತನ್ನು ಯಶಸ್ವಿಯಾಗಿ ನೆರವೇರಿಸಲು ದೊಡ್ಡ ಮನಸ್ಸಿನಿಂದ ಮುಂದೆ ಬಂದಿದ್ದಾರೆ. ಈ ಪ್ರಸಂಗದಲ್ಲಿ ಸಮಸ್ತ ಕೀರ್ತಿಯೂ ಅವರಿಗೆ ಸಲ್ಲಬೇಕು. ನಾನು ಕೇವಲ ನೆಪಮಾತ್ರ."

" ಹೇಗಾದರೂ ಸರಿಯೆ, ಅಂತೂ ನಿನ್ನ ಮೂಲಕವೇ ನಮ್ಮ ಊರಿನಲ್ಲಿ ಆಸ್ಪತ್ರೆಯಾಗುತ್ತಿರುವುದಕ್ಕೆ ಸಂತೋಷವಾಗುತ್ತಿದೆ."

" ಆ ಮಾತಿರಲಿ ; ಊರಿಗೆ ಹೊರಡುವ ಮೊದಲು ನನ್ನನ್ನು ನೋಡು ವುದು ಸಾಧ್ಯವೆ ? "

"ನನ್ನನ್ನು ನೋಡುವುದಕ್ಕೇನೂ ಪ್ರಯಾಸಪಡಬೇಕಾಗಿಲ್ಲ ಸುಂದರಣ್ಣ. ನಿನಗೆ ಯಾವಾಗ ಬಿಡುವಾಗುತ್ತದೆಂದು ತಿಳಿಸಿದರೆ, ನಾನು ಬಂದು ನೋಡುತ್ತೇನೆ"

"ನಾನೀಗ ನಿಮ್ಮ ವಕೀಲರನ್ನು ಕಾಣಲು ಹೊರಟಿದ್ದೇನೆ. ನಮ್ಮ ಮಾವನವರ ಇನಾಮ್ತಿ ಗ್ರಾಮಗಳ ವ್ಯವಹಾರದ ಬಗ್ಗೆ ಅವರೊಡನೆ ಮಾತ ನಾಡಬೇಕಾಗಿದೆ. ಅಲ್ಲಿ ಎಷ್ಟು ಹೊತ್ತಾಗುತ್ತದೆಯೋ ತಿಳಿಯದು. ಅಂತೂ ಅಲ್ಲಿಂದ ಹಿಂತಿರುಗುವಾಗ ನಿನ್ನನ್ನು ನೋಡಲು ಬರುತ್ತೇನೆ. ರೂಮಿನಲ್ಲಿಯೇ ಇರುತ್ತೀಯೋ ಅಥವಾ ಎಲ್ಲಿಗಾದರೂ ಹೋಗುತ್ತೀಯೋ ?"

"ರೂಮಿನಲ್ಲಿಯೇ ಇರುತ್ತೇನೆ"

"ಹಾಗಾದರೆ ಖಂಡಿತವಾಗಿಯೂ ನಾನು ಬರುತ್ತೇನೆ"

"ಹಾಗೆಯೇ ಮಾಡು"

—ಎನ್ನುತ್ತಾ ಶಾಮು ರಿಸೀವರ್ ಕೆಳಗಡೆ ಇಟ್ಟ.

"ಮುಗಿಯಿತೇನಯ್ಯ ನಿನ್ನ ಮಾತುಕತೆ? ಇನ್ನೂ ಏನಾದರೂ ಉಳಿದಿದ್ದರೆ ಅದನ್ನೂ ಈಗಲೇ ಮುಗಿಸಿಬಿಡಬಾರದೇ ?"

—ತನ್ನ ಸಹನೆ ಮೀರಿಹೋಗಿದೆಯೆಂದು ಸೂಚಿಸುವ ಧ್ವನಿಯಲ್ಲಿ ನುಡಿದ ಲಕ್ಷ್ಮಣ.

"ದಯವಿಟ್ಟು ಕ್ಷಮಿಸು ಲಕ್ಷ್ಮಣ. ನೀನು ಕ್ರಿಕೆಟ್ ಮ್ಯಾಚಿನ ವಿವರ ಗಳನ್ನು ತಿಳಿದುಕೊಳ್ಳಬೇಕಾಗಿತ್ತೆಂದು ಕಾಣುತ್ತದೆ. ನನ್ನಿಂದ ತೊಂದರೆ ಯಾಯಿತು"

"ಹ್ಞಂ. ಆದ ತೊಂದರೆಯನ್ನು ಮರೆಯುವುದಕ್ಕೆ ಏನಾದರೂ ದಂಡ ತೆರುತ್ತೀಯೋ ಇಲ್ಲವೋ ?"

"ತೆರದಿದ್ದರೆ ನೀನು ಸುಮ್ಮನೆ ಬಿಡುತ್ತೀಯಾ? ಏಳು, ಯಜ್ಞಪ್ಪನ ಹೋಟಲಿನಲ್ಲಿ 'ಜ್ಞಾನಪಾನ' ಹೀರಿ ಬರುವೆಯಂತೆ"

"ಮತ್ತೆ ಇಲ್ಲಿಗೆ ಬರುವ ಮಾತು ಸುಳ್ಳು. ನಾನೂ ಮನೆಗೆ ಹೊರಟು ಬಿಡುತ್ತೇನೆ."

"ಹಾಗಾದರೆ 'ಸ್ಪೋರ್ಟ್ಸ್ ಕಾಲಂ' (Sports Coloum) ಖಾಲಿ ಬಿಡುತ್ತೀಯಾ ?"

"ಅನಂತನಿಗೆ ಒಂದು ಚೀಟಿ ಬರೆದಿಟ್ಟು ಹೋಗುತ್ತೇನೆ. ಅವನು ಬಂದು ಏನಾದರೂ ಗೀಚುತ್ತಾನೆ!"

"ಯಾಕೆ ಲಕ್ಷ್ಮಣ, ನಿನಗೆ ಇವತ್ತು ತುಂಬಾ ಬೇಸರವಾದ ಹಾಗಿದೆ?"

"ಬೇಸರವೇನೂ ಇಲ್ಲ. 'ಜ್ಞಾನಪಾನ' ಬಿದ್ದರೆ ಎಲ್ಲಾ ಸರಿ ಹೋಗುತ್ತದೆ, ನಡಿ"

—ಎಂದ ಲಕ್ಷ್ಮಣ.

ಗೆಳೆಯರಿಬ್ಬರೂ ಕಚೇರಿಯನ್ನು ಬಿಟ್ಟು ಹೊರಟರು. ಶಾಮು ತನ್ನ ಅಣ್ಣನೊಡನೆ ಅನಿರೀಕ್ಷಿತವಾಗಿ ಟೆಲಿಫೋನಿನಲ್ಲಿ ಮಾತನಾಡಿದ ಸಂಗತಿಗಳನ್ನು ತಿಳಿಸಿದಾಗ ಲಕ್ಷ್ಮಣನಿಗೆ ಆಶ್ಚರ್ಯವೇ ಆಯಿತು. ಕಾಫಿ ಕುಡಿಯುತ್ತಾ ಆತ ನುಡಿದ—

"ಅಂತೂ ನಿಮ್ಮ ಅಣ್ಣ ತುಂಬಾ ಅದೃಷ್ಟಶಾಲಿ!"

"ಈಗೇನೋ ಆವನನ್ನು ಅದೃಷ್ಟಶಾಲಿಯೆಂದು ಹೇಳುತ್ತೇವೆ. ಆದರೆ, ಮೊದಲಿಗೆ, ಹೆಂಗಸಲ್ಲದ ಹೆಣ್ಣನ್ನು ಹಣದಾಸೆಯಿಂದ ಬಲಾತ್ಕಾರವಾಗಿ ಅವನ ಕೊರಳಿಗೆ ಕಟ್ಟಿದಾಗ, ಅವನಂತಹ ದುರದೃಷ್ಟಶಾಲಿ ಬೇರೊಬ್ಬನಿಲ್ಲ ವೆಂದು ಯಾರಾದರೂ ಮರುಗಬೇಕಾಗಿತ್ತು."

"ಆ ಹೆಂಗಸಲ್ಲದ ಹೆಣ್ಣೇ ಅವನ ಭಾಗ್ಯೋದಯಕ್ಕೆ ಕಾರಣಳಾಗಿ ಸ್ವರ್ಗಸ್ಥಳಾದುದು ತುಂಬಾ ಅನಿರೀಕ್ಷಿತವಲ್ಲವೇ?"

"ಹೌದು ಲಕ್ಷ್ಮಣ. ಅತ್ಯಂತ ವಿಸ್ಮಯಕರವಾದ ವಿಚಿತ್ರ ಪ್ರಸಂಗ! ಬಡವರ ಮನೆಯ ಹುಡುಗನಿಗೆ ಯಾರೋ ಕಷ್ಟಪಟ್ಟು ಗಳಿಸಿದ ಲಕ್ಷಾಂತರ ರೂಪಾಯಿಗಳ ಆಸ್ತಿ ಕೈಸೇರಿತು. ಮೆಚ್ಚಿದ ಹೆಣ್ಣು ಅವನಿಗೆ ಮಡದಿಯಾಗಿ ದೊರೆತಳು. ನಿಜವಾಗಿಯೂ ಇದೊಂದು ಅದ್ಭುತ ಪವಾಡ!"

"ಇದೇ ಕಾಣದ ಕೈಯ್ಯಿನ ಕೌಶಲ್ಯ!"

—ಎನ್ನುತ್ತಾ ಕೊನೆಯ ಗುಟುಕನ್ನು ಹೀರಿದ ಲಕ್ಷ್ಮಣ.

ಶಾಮು ಹಣಕೊಟ್ಟ ಬಳಿಕ, ಇಬ್ಬರೂ ಹೋಟಲಿನಿಂದ ಹೊರಬಂದು ತಮ್ಮ ತಮ್ಮ ಮನೆಗಳ ಕಡೆಗೆ ಹೊರಟರು.

ತಲೆಯ ತುಂಬಾ ಹಲವಾರು ವಿಷಯಗಳನ್ನು ತುಂಬಿಕೊಂಡು, ಯೋಚನೆಯ ಭಾರದಿಂದ ಶಾಮು ಮನೆ ಸೇರುವ ವೇಳೆಗೆ ಏಳು ಗಂಟೆ

ಯಾಗಿತ್ತು. ಅಷ್ಟರಲ್ಲಾಗಲೇ ನಾಗಪ್ಪನವರು ಅವನಿಗಾಗಿ ಕಾಯುತ್ತಾ ಶತಪಥ ಹಾಕುತ್ತಿದ್ದರು. ಅವರ ಕಣ್ಣುಗಳು ಕೆಂಡವನ್ನು ಉಗುಳುತ್ತಿದ್ದವು.

"ಯಾವಾಗ ಬಂದೆ ಅಣ್ಣಾ?"

—ಎನ್ನುತ್ತಾ ಕೋಣೆಯ ಬೀಗವನ್ನು ತೆರೆದ ಶಾಮು.

"ಬೆಳಿಗ್ಗೆಯೇ ಬಂದೆ."

"ಬಂದವನು ಕಚೇರಿಯ ಹತ್ತಿರ ಬಂದು ರೂಮಿನ ಬೀಗದಕೈ ತೆಗೆದುಕೊಂಡು ಹೋಗಬಾರದಾಗಿತ್ತೆ?"

"ಅಷ್ಟು ಪುರಸತ್ತೆಲ್ಲಿದೆ ನನಗೆ?"

"ಅಂಥ ಅವಸರದ ಕೆಲಸ ಏನು? ಕೋರ್ಟಿಗೆ ಹೋಗಬೇಕಾಗಿತ್ತೆ?"

"ಹ್ಣುಂ. ಕೋರ್ಟು ಕಚೇರಿ ಕೆಲಸ ಇಲ್ಲದೆ ಇದ್ದರೆ ಈ ಪೇಟೆ ಕೋಟೆ ಸುತ್ತುವುದಕ್ಕೆ ನನ್ನ ಹತ್ತಿರ ಹಣ ಹೆಚ್ಚಾಗಿದೆಯೆ?"

—ಎಂದು ಕಸಿವಿಸಿಯಿಂದ ನುಡಿದ ನಾಗಪ್ಪನವರು ತುಸು ಮೌನ ತಳೆದು ಮತ್ತೆ ನುಡಿದರು:

"ಸದ್ಯ, ಅದೂ ಮುಗಿಯಿತಲ್ಲ."

ತನ್ನ ತಂದೆಯ ಕೋಪತಾಪಗಳು ಪರಮಾವಧಿಯನ್ನು ಮುಟ್ಟಿವೆ ಯೆಂದು ಅವರ ಮಾತುಗಳಿಂದ ಸುಲಭವಾಗಿ ಗ್ರಹಿಸಿದ ಶಾಮು ಮೌನವೇ ಸಮಯೋಚಿತವಾದ ಜಾಣತನವೆಂದುಕೊಂಡು ಸುಮ್ಮನೆ ಕುಳಿತಿದ್ದ.

ಕೆಂಡಾಮಂಡಲವಾಗಿದ್ದ ನಾಗಪ್ಪನವರು ಕೋಣೆಯಲ್ಲಿ ಶತಪಥ ತಿರುಗುತ್ತಾ—

"ಅಯೋಗ್ಯರು.... ಪುಂಡರು...."

—ಎಂದು ಸಹಸ್ರನಾಮ ಜಪಿಸತೊಡಗಿದರು.

ಎರಡು ನಿಮಿಷಗಳ ಬಳಿಕ ಶಾಮು ಕೇಳಿದ—

"ಯಾರಣ್ಣ? ಏನಾಯಿತು?"

"ಆಗುವುದೇನು? ಅಯೋಗ್ಯರ ಸಹವಾಸ........"

"ಅವತ್ತು ಕೇಸಿನ ತೀರ್ಮಾನವಾಯಿತೆ?"

ನಾಗಪ್ಪನವರು ಎರಡು ನಿಮಿಷ ಮೌನವಾಗಿದ್ದರು.

ಮತ್ತೆ ಶಾಮುವೇ ಕೇಳಿದ—

" ಜಡ್ಜ್‌ಮೆಂಟ್ ಓದಿದರೋ ಇಲ್ಲವೋ ? "

" ಓದಿದರಪ್ಪ "

" ಏನಾಯಿತು ? "

" ನಿನ್ನ ತಲೆಯಮೇಲೆ ದೊಡ್ಡ ಕಲ್ಲುಬಿತ್ತು. ಇನ್ನು ಕೋರ್ಟಿನ ಕಡೆ ತಲೆಯಿಟ್ಟು ಕೂಡ ಮಲಗುವುದಿಲ್ಲ "

—ಎಂದರು ನಾಗಪ್ಪ.

ನ್ಯಾಯಾಧೀಶರು ಕ್ರಿ. ಪ್ರೊ. ೨೫೪ ನೇ ಸೆಕ್ಷನ್ನಿನ ಪ್ರಕಾರ, ನಾಗಪ್ಪನವರು ಕಟ್ಟಿದ್ದ ಕತೆಯನ್ನು ಸುಳ್ಳು ಎಂದು ತೀರ್ಮಾನಿಸಿದ್ದರು. ಗೌಡರ ಅಳಿಯಂದಿರು ವರ್ಷಾನುಗಟ್ಟಲೆಯ ಜಿದ್ದಿನಿಂದ ಶ್ರೀನಿವಾಸನನ್ನು ಹೊಡೆದಿದ್ದರೆಂದು ನಾಗಪ್ಪನವರು ಕಟ್ಟಿದ ಕತೆ ಸುಳ್ಳಲ್ಲದೆ ನಿಜವೆ? ದೀರ್ಘಾವಧಿಯವರೆಗೂ ನಡೆದ ಮೊಕದ್ದಮೆಯ ಖರ್ಚು ಲೆಕ್ಕವಿಡಲು ಸಾಧ್ಯವಾಗದಷ್ಟು ಏರಿಹೋಗಿತ್ತು. ಮುನ್ನೂರು ರೂಪಾಯಿಗಳ ಪುಟ್ಟಗಂಟಿನಲ್ಲೇ ಮುಕ್ತಾಯಗೊಳಿಸಬೇಕೆಂದು ಯೋಚಿಸಿದ್ದ ನಾಗಪ್ಪನವರು ಕಿಟ್ಟು - ನಾಣಿಯರ ವರದಕ್ಷಿಣೆಯ ಹಣವನ್ನೆಲ್ಲಾ ವಕೀಲರಿಗೂ ಸಾಕ್ಷಿಗಳಿಗೂ ತೆತ್ತಿದ್ದರು. ಈಗ, ಮೊಕದ್ದಮೆ ತೀರ್ಮಾನವಾದಾಗ, ಗೌಡರ ಅಳಿಯಂದಿರ ಕೋರ್ಟು ಖರ್ಚೂ ತಾವೇ ತೆರಬೇಕಾಗಿತ್ತು. ಅಲ್ಲದೆ ಆ ಬಗ್ಗೆ ಎದುರುಪಕ್ಷದ ವಕೀಲರು ಎರಡು ಸಾವಿರ ಕೊಡಬೇಕೆಂದು ನೋಟೀಸು ಕೊಟ್ಟಿದ್ದರು.

ನಾಗಪ್ಪನವರಿಗೆ ಆಕಾಶವೇ ಕಳಚಿಬಿದ್ದಂತಾಗಿತ್ತು. ಸಾಲದೆಂಬಂತೆ, ಉರಿಯುವ ಬೆಂಕಿಗೆ ತುಪ್ಪ ಹಾಕಿದ ಹಾಗೆ, ಅವರು ಬರೆದ 'ಅತಿ ತುರ್ತಿನ ಕಾಗದ'ಕ್ಕೆ ಮೈಸೂರಿನಿಂದ ಜಯರಾಯರು " ನನ್ನ ಹೆಂಡತಿ ತೀರಿಕೊಂಡಳು. ಈಗಿನ ನನ್ನ ಕಷ್ಟದಲ್ಲಿ ನಾನ್ನೂರು ರೂಪಾಯಿಗಳನ್ನು ಕಳುಹಿಸಲು ಅಶಕ್ತನಾಗಿದ್ದೇನೆ. ತಾವು ದಯವಿಟ್ಟು ಇನ್ನೂ ಕಾಲಾವಕಾಶವನ್ನು ಕೊಡಬೇಕು " ಎಂದು ಉತ್ತರ ಬರೆದಿದ್ದರು. ಆಗಲೇ ನಾಗಪ್ಪನವರಿಗೆ ನೆತ್ತಿ ಉರಿಯುತ್ತಿತ್ತು. ಮೊಕದ್ದಮೆಯ ತೀರ್ಪು ಕೇಳಿದ ಮೇಲಂತೂ ಮೈಯ್ಯೆಲ್ಲಾ ಉರಿಯತೊಡಗಿತು. ಆ ಅವಮಾನವನ್ನು ಸಹಿಸಲಾರದೆ—

" ನಾನೀಗಲೇ ಊರಿಗೆ ಹೊರಡುತ್ತೇನೆ. ಒಂದು ರೂಪಾಯಿ ಇದ್ದರೆ ಕೊಡು - ರೈಲುಚಾರ್ಜಿಗೆ ಬೇಕು "

—ಎಂದು ಚಡಪಡಿಸುತ್ತಾ ನುಡಿದರು.

"ಈಗ ಯಾವ ರೈಲಿದೆ?"

"ಒಂಬತ್ತು ಗಂಟೆಗೆ 'ಮೆಯಿಲ್' ಇದೆ"

"ಅದು ನಮ್ಮ ಸ್ಟೇಷನ್ನಿನಲ್ಲಿ ನಿಲ್ಲುವುದಿಲ್ಲ ಅಣ್ಣ"

"ಆ ವಿಷಯ ನನಗೂ ಗೊತ್ತಿದೆಯಯ್ಯ. ನಾನು ವೈಟ್ ಫೀಲ್ಡ್ ನಲ್ಲಿಯೇ ಇಳಿದು ಆರು ಮೈಲಿ ನಡೆದುಹೋಗುತ್ತೇನೆ."

"ಕತ್ತಲೆಯಲ್ಲಿ ಅಷ್ಟುದೂರ ನಡೆದುಹೋಗುವ ಕಷ್ಟವೇಕೆ? ಅರ್ಧ ರಾತ್ರಿಯಲ್ಲಿ ನೀನು ಊರು ಸೇರದಿದ್ದರೆ ಏನು ಮುಳುಗಿಹೋಗುತ್ತದೆ? ಬೆಳಿಗ್ಗೆ ಹೋದರಾಗದೆ?"

—ಸ್ವಲ್ಪ ಕಟುವಾದ ಧ್ವನಿಯಲ್ಲಿಯೇ ನುಡಿದ ಶಾಮು.

ಆದರೆ ನಾಗಪ್ಪನವರು ತಮ್ಮ ನಿರ್ಧಾರವನ್ನು ಬದಲಿಸಲಿಲ್ಲ. ಆಗಿನ ತಮ್ಮ ಪರಿಸ್ಥಿತಿಯಲ್ಲಿ, ಕತ್ತಲೆಯಲ್ಲಿ ಮುಖ ಮರೆಸಿಕೊಂಡು ಮನೆ ಸೇರುವುದೇ ಒಳ್ಳೆಯದೆಂದು ಅವರು ನಿಶ್ಚಯಿಸಿದ್ದರು.

"ನಾನು ಈಗಲೇ ಹೋಗಬೇಕಾಗಿದೆ. ನೀನು ರೈಲುಚಾರ್ಜಿಗೆ ಒಂದು ರೂಪಾಯಿ ಕೊಡುತ್ತೀಯೋ ಅಥವಾ ನಡೆದುಕೊಂಡೇ ಹೊರಟು ಬಿಡಲೋ?"

ಅವರೊಡನೆ ಇನ್ನು ಹೆಚ್ಚು ಮಾತನಾಡಿ ಪ್ರಯೋಜನವಿಲ್ಲವೆಂದು ಶಾಮು ಐದು ರೂಪಾಯಿ ನೋಟೊಂದನ್ನು ತೆಗೆದಿತ್ತ. ನಾಗಪ್ಪನವರು ಅದನ್ನು ತೆಗೆದುಕೊಂಡು ಮರುಮಾತನಾಡದೆ ರೈಲು ನಿಲ್ದಾಣದ ಕಡೆಗೆ ಹೊರಟರು. ಆತುರದಲ್ಲಿ ಬುದ್ಧಿಶೂನ್ಯರಾಗಿದ್ದ ಅವರು ತಾವು ತಂದಿದ್ದ ಕೈಚೀಲವನ್ನು ಶಾಮುವಿನ ಕೋಣೆಯಲ್ಲಿಯೇ ಮರೆತು ಹೊರಟು ಹೋದರು.

ಹೋಟಲಿನಲ್ಲಿ ಊಟ ಮುಗಿಸಿ ಬಂದು, ಮಲಗುವ ಸಿದ್ಧತೆಯಲ್ಲಿದ್ದಾಗ, ಶಾಮುವಿನ ಕಣ್ಣಿಗೆ ಆಕಸ್ಮಿಕವಾಗಿ ಆ ಕೈಚೀಲ ಕಾಣಿಸಿತು. ಅವನು ಕುತೂಹಲದಿಂದ ಅದನ್ನು ತೆಗೆದು ನೋಡಿದ. ಮೊಕದ್ದಮೆಯ ದಫ್ತರಗಳ ಜೊತೆಗೆ ಒಂದು ಚಿಕ್ಕ ಕಾಗದ ಅವನ ಗಮನವನ್ನು ಸೆಳೆಯಿತು. ಅದನ್ನು ತೆಗೆದು ಓದತೊಡಗಿದ—

“ ಶ್ರೀ|| ಮಹಾಮನವರಿಗೆ ನಾಗರತ್ನ ಮಾಡುವ ನಮಸ್ಕಾರಗಳು. ನಾನು ಈಗ ಸುಖವಾಗಿದ್ದೇನೆ. ದೈಹಿಕವಾಗಿಯೂ ಮಾನಸಿಕವಾಗಿಯೂ ನೆಮ್ಮದಿಯಿಂದ ಇದ್ದೇನೆ. ಒಬ್ಬರ ಹಂಗಿನಲ್ಲಿ ಬದುಕಬೇಕಾಗಿದ್ದ ಕಾಲ ಮುಗಿದು ಹೋಯಿತು. ಅಂಕೆ ಶಿಕ್ಷೆಗಳಿಲ್ಲದೆ ಬೆಳೆದ ನಿಮ್ಮ ಮಗನ ಜೊತೆಯಲ್ಲಿ, ಧನಪಿಶಾಚಿಗಳಾದ ನಿಮ್ಮ ಮನೆಯಲ್ಲಿ ಜೀವಿಸಿರುವುದಕ್ಕಿಂತ, ಬಡತನದಿಂದ ಒಮ್ಮೆಂದೊಮ್ಮೆಗೇ ಭಾಗ್ಯವಂತರಾಗಲು ಬಯಸಿ, ಮೈಮಾರುವ ಕಸುಬಿಗಿಳಿದಿರುವ ನಮ್ಮ ತಾಯಿಯ ಮನೆಯಲ್ಲಿ ಬದುಕಿ ಬಾಳುವುದಕ್ಕಿಂತ, ಸ್ವತಂತ್ರಳಾಗಿಯೂ, ಸ್ವಾವಲಂಬಿಯಾಗಿಯೂ, ಏಕಾಂಗಿಯಾಗಿಯೂ ಇರುವುದರಲ್ಲಿ ನನಗೆ ಸಂತೋಷವೂ ಸುಖವೂ ಇದೆ. ನನ್ನನ್ನು ಹುಡುಕಿಸುವುದಾಗಲಿ, ಪೋಲೀಸರಿಗೆ ದೂರು ಕೊಡುವುದಾಗಲಿ, ದಾಂಪತ್ಯಸಂಬಂಧವಾಗಿ ಕೋರ್ಟಿಗೆ ಹೋಗುವುದಾಗಲಿ—ಮಾಡಿದಲ್ಲಿ, ಅದರ ಎಲ್ಲ ಖರ್ಚುವೆಚ್ಚಗಳನ್ನೂ ನೀವೇ ವಹಿಸತಕ್ಕದ್ದು. ಅದಕ್ಕೆ ನಾನು ಯಾವ ಬಗೆಯಿಂದಲೂ ಜವಾಬ್ದಾರಳಲ್ಲ.

ಇನ್ನೊಂದು ಮಾತು—

“ ವರದಕ್ಷಿಣೆಗೆ ಆಸೆಪಟ್ಟು, ನಿಮ್ಮ ಗಂಡುಮಕ್ಕಳಿಗೆ ಈಡು–ಜೋಡಿಲ್ಲದ ಹೆಂಡತಿಯರನ್ನು, ನನ್ನಂತಹ ನೀತಿಗೆಟ್ಟ ಹುಡುಗಿಯರನ್ನು, ಮದುವೆಯಾಗುವವರು ಮನಸ್ಸೊಪ್ಪದ ಕನ್ಯೆಯರನ್ನು ತಂದು ವಿವಾಹಮಾಡಬೇಡಿ. ವರದಕ್ಷಿಣೆ ಎನ್ನುವುದು ಹಣ–ಹೆಣ್ಣು ಎನ್ನುವುದು ಜೀವ. ಎಷ್ಟು ಹಣ ರಾಶಿಯಾಗಿ ಬಿದ್ದರೂ, ಅದು ಜೀವಕ್ಕೆ ಸಮವಾಗುವುದಿಲ್ಲ. ವರದಕ್ಷಿಣೆಯ ಹಣದಾಸೆಗೆ ಕಂಡವರ ಮನೆಯ ಹೆಣ್ಣುಮಕ್ಕಳನ್ನು ಬಲಿ ತೆಗೆದುಕೊಳ್ಳಬೇಡಿ. ಅದು ನಿಮ್ಮ ಉನ್ನತಿಗೆ ಎಷ್ಟು ಕಾರಣವೋ, ಇನ್ನೊಬ್ಬರ ಅಧೋಗತಿಗೂ ಅಷ್ಟೇ ಕಾರಣವಾಗಿದೆ. ಸುಖ, ಭಾಗ್ಯ, ಪದವಿಗಳಿಗೆ ನೀವು ಆಸೆಪಟ್ಟು, ನಿಮ್ಮ ಗಂಡುಮಕ್ಕಳನ್ನು ಮಾರಿದರೆ, ಹೆಣ್ಣು ಹೆತ್ತವರು ತಿರುಪೆ, ಬಡತನ, ವೇಶ್ಯಾವೃತ್ತಿಗಳಿಗೆ ಇಳಿಯುವಂತಾಗುತ್ತದೆ. ವಯಸ್ಸಿನಲ್ಲಿ ನಿಮಗಿಂತ ಕಿರಿಯಳಾದರೂ ಸ್ವಾನುಭವದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಚೆನ್ನಾಗಿ ಆಲೋಚಿಸಿ ನೋಡಿ. ನನ್ನ ಬಾಳು ವ್ಯರ್ಥವಾಯಿತೆಂದು ನನಗೆ ತುಂಬಾ ದುಃಖವಾಗುತ್ತಿದೆ. ಅದಕ್ಕೆ ಕಾರಣ ನಾನೊಬ್ಬಳೇ ಅಲ್ಲ; ಅನೇಕ ಮಂದಿ. ಅವರಲ್ಲಿ ನೀವೂ ಒಬ್ಬರು!—ತುಂಬಾ ಮುಖ್ಯರಾದವರು. ನಿಮ್ಮ ಕೃತ್ಯದ

ಬಿಸಿ ಒಂದಲ್ಲ ಒಂದು ದಿನ ನಿಮಗೆ ತಾಗದಿರಲಾರದು. ಆದ್ದರಿಂದ ನೀವು ಈಗಿನಿಂದಲೇ ಎಚ್ಚರಿತ್ತುಕೊಂಡಿರುವುದು ಒಳ್ಳೆಯದು. ಅಂತೂ ಸಹಸ್ರಾರು ಮಂದಿ ಅಭಾಗ್ಯ ಹೆಣ್ಣುಮಕ್ಕಳಿಗೆ ನನಗೆ ಒದಗಿದಂತಹ ಸ್ಥಿತಿ ಒದಗದಿರಲೆಂದು ನನ್ನ ಆಸೆ."

"ಇಂತು ನಮಸ್ಕಾರಗಳು
"ನಾಗರತ್ನ"

—ಕಾಗದ ಓದಿ ಮುಗಿಸಿ ನಿಟ್ಟುಸಿರಿಟ್ಟ ಶಾಮು.

ಅದರಲ್ಲಿ ಬರೆದ ತಾರೀಕಾಗಲಿ, ಸ್ಥಳ-ವಿಳಾಸಗಳಾಗಲಿ ಇರಲಿಲ್ಲ. ಬಹುಶಃ ನಾಗರತ್ನ ಮನೆ ಬಿಟ್ಟುಹೋದ ಒಂದೆರಡು ತಿಂಗಳನಂತರ ಈ ಕಾಗದ ಬಂದಿರಬಹುದೆಂದು ಶಾಮು ಊಹಿಸಿದ. ಅಂತೂ ಸುಂದರು, ಕಿಟ್ಟು, ನಾಣಿ ಮತ್ತು ತನ್ನ ಮದುವೆ ಈ ಕಾಗದ ಬಂದನಂತರವೇ ನಡೆದಿದ್ದುದರಿಂದ, ನಾಗರತ್ನಳ ಲೇಖಣಿ ತನ್ನ ತಂದೆಯ ಮೇಲೆ ಲೇಶವೂ ಪರಿಣಾಮವನ್ನುಂಟು ಮಾಡಿಲ್ಲವೆಂದು ಅವನಿಗೆ ಖಚಿತವಾಯಿತು.

ಮರುದಿನ ಬೆಳಿಗ್ಗೆ ಕಚೇರಿಗೆ ಹೋದಾಗ, ಅನಂತುವಿನ ಕಾಗದ ಸಿಕ್ಕಿತು. ನಾಗರತ್ನಳ ವಿಷಯವನ್ನು ತಿಳಿಯುವ ಆತುರದಿಂದ ಶಾಮು ಅದನ್ನು ತೆಗೆದುಕೊಂಡು ಓದಿದ.

"ನೀನು ಹೇಳಿದಂತೆ 'ರತ್ನ' ಎಂಬ ಹೆಸರಿನ ಹುಡುಗಿ 'ಶರಣಾಲಯ'ದಲ್ಲಿ ಇಲ್ಲ. 'ನಾಗರತ್ನ' ಎಂಬ ಹುಡುಗಿ ಹಿಂದೆ ಇದ್ದಳಂತೆ. ಆಕೆಗೆ ನರ್ಸ್ ಶಿಕ್ಷಣವಾಗಿ, ಈಗ ಯಾವುದೋ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿದ್ದಾಳಂತೆ. ಈಗ ಆಕೆ ಇರುವ ಸ್ಥಳವನ್ನಾಗಲಿ, ಅವಳ ಪೂರ್ವೋತ್ತರಗಳನ್ನಾಗಲಿ ಬಹಿರಂಗಪಡಿಸುವುದು 'ಶರಣಾಲಯ'ದ ನಿಯಮಗಳಿಗೆ ವಿರೋಧವೆಂದು ಇಲ್ಲಿನ ಮೇಟ್ರನ್ ತಿಳಿಸಿದರು"

—ಎಂದು ಅನಂತ ಬರೆದಿಟ್ಟು ಹೋಗಿದ್ದ.

ನಾಗರತ್ನಳೇ ಜಗದೀಶನಿಗೆ ಬುದ್ಧಿವಾದ ಹೇಳಿದ 'ರತ್ನ' ಎಂದು ಊಹಿಸಲು ಶಾಮುವಿಗೆ ಹೆಚ್ಚು ತಡವಾಗಲಿಲ್ಲ. ಅಲ್ಲದೆ, ತನ್ನ ತಂದೆಗೆ ಬರೆದಿರುವ ಕಾಗದವನ್ನು ಓದಿದ ಬಳಿಕ, ತನ್ನ ಅತ್ತಿಗೆ ನಾಗರತ್ನಳೇ 'ಶರಣಾಲಯ'ವನ್ನು ಸೇರಿ ನರ್ಸ್ ಶಿಕ್ಷಣ ಪಡೆದ 'ನಾಗರತ್ನ'ಳಿರಬಹುದೆಂಬ

ನಂಬಿಕೆಯೂ ಅವನಲ್ಲಿ ಮೂಡಿತು. ಸಾಧ್ಯವಾದಷ್ಟು ಬೇಗ, ಆಕೆ ಯಾವ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿದ್ದಾಳೆಂಬುದನ್ನು ಗೊತ್ತು ಹಚ್ಚಲು ಪ್ರಯತ್ನಿಸಬೇಕೆಂದು ಅವನು ನಿಶ್ಚಯಿಸಿದ.

ಸುಮಾರು ಎಂಟು ಗಂಟೆಯ ವೇಳೆಗೆ ಮಾಲೀಕರ ಕಾರು ಕಚೇರಿಯ ಬಳಿಗೆ ಬಂದಿತು. ಮಾಲೀಕರು ಮಂತ್ರಿಗಳೊಡನೆ ಅವರ ಕಾರಿನಲ್ಲಿಯೇ ಬರುವುದಾಗಿ ಹೇಳಿದ್ದರಿಂದ, ಮಾಲೀಕರ ಕಾರಿನಲ್ಲಿ ಶಾಮು ಒಬ್ಬನೇ ಕುಳಿತು ತನ್ನ ಹಳ್ಳಿಯನ್ನು ಸೇರಿದ.

ಅಗ್ರಹಾರವನ್ನು ಪ್ರವೇಶಿಸುವ ಮುನ್ನವೇ ಚಪ್ಪರಗಳ ಸಾಲು ಅತಿಥಿಗಳಿಗೂ ಆಗಂತುಕರಿಗೂ ವೈಭವದ ಸ್ವಾಗತವನ್ನು ಕೋರುತ್ತಿದ್ದವು. ಊರಿನ ಬೀದಿಗಳಲ್ಲಿ ತಳಿರುತೋರಣಗಳು ವಿಜೃಂಭಿಸುತ್ತಿದ್ದವು. ದೊಡ್ಡಗೌಡರು ಊರಿನ ಮುಖ್ಯಸ್ಥರೊಡನೆ ಪಂಚಾಯಿತಿ ಹಾಲಿನ ಬಳಿ ಕಾದುನಿಂತಿದ್ದರು.

ಸಮಾರಂಭಕ್ಕೆ ಇನ್ನೂ ವೇಳೆಯಿದ್ದುದರಿಂದ, ಶಾಮು ತನ್ನ ಮನೆಯ ಬಳಿ ಇಳಿದು, ಕಾರನ್ನು ಮಾತ್ರ ಪಂಚಾಯ್ತಿ ಭವನದ ಬಳಿಗೆ ಕಳುಹಿಸಿಕೊಟ್ಟ. ಹೊರಗಿನ ಕೋಣೆಯಲ್ಲಿ ವಾಸಮಾಡುತ್ತಿದ್ದ ಕಿಟ್ಟುವೂ ಅವನ ಹೆಂಡತಿಯೂ ಕಾರಿನಿಂದ ಇಳಿದ ಶಾಮುವನ್ನು ಕಂಡು ಆಶ್ಚರ್ಯಚಕಿತರಾದರು.

" ಅಂತೂ ಅಣ್ಣತಮ್ಮಂದಿರೆಲ್ಲಾ ಇವತ್ತು ಒಂದು ಕಡೆ ಸೇರಿದಿರಿ ! "

—ಎಂದು ಆಶ್ಚರ್ಯವನ್ನು ಸೂಚಿಸುವ ದನಿಯಲ್ಲಿ ನುಡಿದಳು ಸರಸು.

ಕಿಟ್ಟುವನ್ನೂ ಶಾಮುವನ್ನೂ ಉದ್ದೇಶಿಸಿ, ಇಬ್ಬರಿಗೂ ಅನ್ವಯವಾಗುವಂತೆಯೇ ಆ ಮಾತನ್ನು ಆಡಿದ್ದಳು ಸರಸು.

ಶಾಮು ನಗುತ್ತಾ—

" ಇವತ್ತು ಅತ್ತಿಗೆಯ ಕೈಯ್ಯಿಂದ ಒಂದು ಕಪ್ಪು ಕಾಫಿ ಕುಡಿದು, ಆ ಮೇಲೆ ಒಳಗೆ ಹೋಗಬೇಕೆಂದು ನಿಶ್ಚಯಿಸಿದ್ದೇನೆ "

—ಎಂದ ಸರಸುವಿನ ಕಡೆಗೆ ನೋಡುತ್ತಾ.

"ಅಯ್ಯೋ, ಇವತ್ತು ನನ್ನ ಅತ್ತೆಮ್ಮನವರು ನನಗೆ ಒಲೆಹಚ್ಚುವ ಕೆಲಸವನ್ನೇ ತಪ್ಪಿಸಿದ್ದಾರೆ. ನಮ್ಮೆಲ್ಲರಿಗೂ ಒಳಗಡೆ ಔತಣದ ಅಡಿಗೆಯಾಗುತ್ತಿದೆ! "

—ಎಂದಳು ಸರಸು.

ಅಷ್ಟರಲ್ಲಿ ಹೊರಗಡೆ ಬಂದ ಸುಮಿತ್ರೆ ಶಾಮುವನ್ನು ನೋಡಿ—

" ಅಮ್ಮಾ ಚಿಕ್ಕಣ್ಣಯ್ಯನೂ ಬಂದುಬಿಟ್ಟ "

—ಎಂದು ಕೂಗಿ ಹೇಳಿದಳು.

ತಂಗಿಯ ಮುಖವನ್ನು ಕಂಡು ನಸುನಗುತ್ತಾ ಒಳಗೆ ಪ್ರವೇಶಿಸಿದ ಶಾಮು ಕೇಳಿದ—

" ಅಪ್ಪಾ ಇದ್ದಾರೆಯೇನೇ ಚುಮ್ಮಿ? "

" ಇಲ್ಲ ಅಣ್ಣಯ್ಯ."

" ರಾತ್ರಿ ಬರಲಿಲ್ಲವೆ? "

" ಬಂದರು."

" ಎಷ್ಟು ಹೊತ್ತಿಗೆ? "

" ಒಂದು ಗಂಟೆಯಾಗಿತ್ತು."

" ಈಗ ಎಲ್ಲಿಗೆ ಹೋದರು? "

" ತಾಲ್ಲೋಕು ಕಚೇರಿಯಲ್ಲಿ ಕೆಲಸವಿದೆ, ಅಲ್ಲಿಂದ ಬೆಂಗಳೂರಿಗೆ ಹೋಗಬೇಕಾಗಿದೆ ಅಂತ ಬೆಳಗಿನ ಜಾವದಲ್ಲಿಯೇ ಎದ್ದು ಕೋಟೆಗೆ ನಡೆದುಕೊಂಡು ಹೋದರು "

—ಎಂದಳು ಸುಮಿತ್ರೆ.

ನಾಗಪ್ಪನವರು ಊರು ಬಿಟ್ಟು ಹೋಗಿರುವುದರ ನಿಜವಾದ ಕಾರಣ ಶಾಮುವಿಗೆ ಬೇಗನೆ ಹೊಳೆಯಿತು. ಮೊಕದ್ದಮೆಯ ತೀರ್ಪಿನಿಂದ ಅವಮಾನಿತರಾದ ಅವರು ಊರಿನವರಿಗೂ, ಬೀಗರಾದ ಇನಾಂದಾರ್ ರಾಘವಯ್ಯನವರಿಗೂ, ಮಗ ಸುಂದರುವಿಗೂ ಮುಖ ತೋರಿಸಲು ಹೆದರಿ, ಸಂದಿಗ್ಧ ಪರಿಸ್ಥಿತಿಯಿಂದ ಪಾರಾಗಲು ಕಣ್ಮರೆಯಾಗಿದ್ದಾರೆಂದು ಶಾಮು ಯೋಚಿಸಿದ.

" ಅಣ್ಣಯ್ಯ, ಇವತ್ತು ನಮ್ಮ ಮನೆಗೆ ಯಾರು ಬಂದಿದ್ದಾರೆ ಗೊತ್ತೆ? "

" ಸುಂದರಣ್ಣ! "

" ನಿನಗೆ ಹೇಗೆ ಗೊತ್ತು? "

" ಸುಮ್ಮನೆ ಹೇಳಿದೆನಮ್ಮ."

" ಸುಮ್ಮನೆ ಅಲ್ಲ, ನಿಜವಾಗಿಯೂ ಬಂದಿದ್ದಾನೆ. ಜೊತೆಗೆ ಹೊಸ ಅತ್ತಿಗೆ, ಅತ್ತೆ— ಎಲ್ಲರೂ ಬಂದಿದ್ದಾರೆ! "

—ಎಂದು ಸುಮಿತ್ರೆ ಹೇಳುತ್ತಿದ್ದಂತೆಯೇ ಶಾಮು ಒಳಗಡೆ ಬಂದಿದ್ದ.

ಪತ್ರಿಕೆಯನ್ನು ಕೈಯ್ಯಲ್ಲಿ ಹಿಡಿದು, ತಾಯಿಯೊಡನೆ ಮಾತನಾಡುತ್ತಾ ಅಂಗಳದಲ್ಲಿ ಕುಳಿತಿದ್ದ ಸುಂದರು ಹೂನಗೆಯಿಂದ ಶಾಮುವಿನ ಕಡೆಗೆ ನೋಡಿ—

" ಈಗ ಬಂದೆಯಾ ? " ಎಂದ.

" ಹ್ಞಂ. ನೀನು ಯಾವಾಗ ಬಂದೆ? "

" ಇವತ್ತು ಬೆಳಿಗ್ಗೆ."

" ನಿನ್ನೆ ನನ್ನ ರೂಮಿಗೆ ಬರುತ್ತೇನೆಂದು ಫೋನ್ ಮಾಡಿದ್ದೆಯಲ್ಲಾ— ಏಕೆ ಬರಲಿಲ್ಲ? "

" ಅಪ್ಪ ನಿನ್ನ ರೂಮಿಗೆ ಬಂದಿದ್ದಾರೆಂದು ತಿಳಿಯಿತು. ನಿನ್ನೆ ಅವರ ಕೇಸು ತೀರ್ಮಾನವಾಯಿತಂತೆ. ನಮ್ಮ ವಕೀಲರು ಹೇಳಿದರು. ಅದರಿಂದ ಅವರ ಮನಸ್ಸು ಕೆಟ್ಟಿರುವಾಗ, ನಾನು ಬೇರೆ ಅವರಿಗೆ ಮುಖ ತೋರಿಸಿ, ವೃಥಾ ಅವರ ಕೋಪತಾಪಕ್ಕೆ ಏಕೆ ಕಾರಣವಾಗಬೇಕೆಂದು ಯೋಚಿಸಿ, ನಿನ್ನ ರೂಮಿಗೆ ಬರಲಿಲ್ಲ."

" ಅವರು ರಾತ್ರಿಯೇ ಅಲ್ಲಿಂದ ಹೊರಟುಬಿಟ್ಟರು "

" ಇವತ್ತು ನಾವು ಬರುವ ಸುದ್ದಿ ಹೇಗೆ ತಿಳಿಯಿತೋ ಏನೋ— ಇಲ್ಲಿಂದಲೂ ಅವರು ಹೊರಟುಬಿಟ್ಟಿದ್ದಾರೆ! "

—ಎಂದ ಸುಂದರು.

ಅವನ ಮಾತಿಗೆ ಶಾಮುವೂ ವೆಂಕಮ್ಮನವರೂ ನಕ್ಕರು.

" ಅಮ್ಮ ನಿನಗೀಗ ತುಂಬಾ ಸಂತೋಷವಾಗಿದೆಯಲ್ಲವೆ? "

" ಆಗದಿರುತ್ತದೆಯೆ ಮಗು? ನನ್ನ ಮಕ್ಕಳು ಸಂತೋಷವಾಗಿದ್ದರೆ ನನಗೂ ಸಂತೋಷವೇ."

" ನೀನು ಬಯಸಿದ ನಿನ್ನ ಅಣ್ಣನ ಮಗಳೇ ನಿನ್ನ ಸೊಸೆಯಾಗಿ ಬಂದಿರುವುದು ಅದೃಷ್ಟ! "

" ಅದು ರತ್ನಳ ಅದೃಷ್ಟ "

" ಸುಂದರಣ್ಣನ ಅದೃಷ್ಟವಲ್ಲವೇ? "

" ಅದೇನೋ ನನಗೆ ತಿಳಿಯದು. ಮುಖ್ಯವಾಗಿ ಜಯಜಯಾಂತ ಕೊನೆಯಲ್ಲಿ ಅರಿಷಿಣ–ಕುಂಕುಮ ಸೂರೆಮಾಡಿಕೊಂಡು ಹೋದ ಸ್ವರ್ಣ ತನ್ನ ಗಂಡನಿಗೆ ಕೊಟ್ಟ ಸರ್ವಸುಖದ ಬಳುವಳಿ ಇದು! "

—ಎಂದರು ವೆಂಕಮ್ಮ.

ತಾಯಿಯ ಮಾತು ಮಕ್ಕಳಿಬ್ಬರಿಗೂ ಹೆಚ್ಚು ಸಮಂಜಸವಾಗಿ ತೋರಿತು.

ಅವರು ಮಾತನಾಡುತ್ತಿದ್ದಂತೆಯೇ ಸುಮಿತ್ರ ಶಾಮುವಿಗೆ ಕಾಫಿ ತಂದಿತ್ತು.

" ನಾಣಿ ಶೀನಣ್ಣ ಎಲ್ಲಿ, ಕಾಣಲೇ ಇಲ್ಲವಲ್ಲ ? "

" ನಾಣಿ ಪಂಚಾಯ್ತಿ ಹಾಲಿನ ಹತ್ತಿರ ಇದ್ದಾನೆ. ಹೊಸದಾಗಿ ಬಂದಿರುವ ಡಾಕ್ಟರು ಈಗಾಗಲೇ ಅವನಿಗೆ ತುಂಬಾ ಸ್ನೇಹಿತರಾಗಿಬಿಟ್ಟಿದ್ದಾರಂತೆ! ಶೀನು ಅರಳಿಕಟ್ಟೆಯ ಮೇಲೆ ಕುಳಿತು ಹರಟೆ ಹೊಡೆಯುತ್ತಿರುತ್ತಾನೆ"

—ಎಂದರು ವೆಂಕಮ್ಮ.

ಶಾಮು ಅಡಿಗೆಯ ಕೋಣೆಯ ಕಡೆಗೆ ನಡೆದು, ತನ್ನ ಸೋದರತ್ತೆ ಪದ್ಮನನ್ನೂ, ಆಕೆಯ ಮಗಳೂ ತನ್ನ ಅತ್ತಿಗೆಯೂ ಆದ ರತ್ನಳನ್ನೂ, ನಾಣಿಯ ಹೆಂಡತಿ ಲಲಿತೆಯನ್ನೂ ಮಾತನಾಡಿಸಿಕೊಂಡು ಹೊರಬರುವಷ್ಟರಲ್ಲಿ ಸುಂದರು ಸಮಾರಂಭಕ್ಕೆ ಹೊರಡಲು ಸಿದ್ಧನಾಗಿದ್ದ.

" ಅಮ್ಮಾ, ನೀನು, ಅತ್ತೆ, ಅತ್ತಿಗೆಯರು, ಚುಮ್ಮಿ - ಪಂಚಾಯ್ತಿ ಹಾಲಿನ ಹತ್ತಿರ ಬರುವುದಿಲ್ಲವೆ ? "

" ಬರುತ್ತೇವೆ. ನೀವು ಮೊದಲು ಹೊರಡಿ "

—ಎಂದರು ವೆಂಕಮ್ಮ.

ಸುಂದರು, ಶಾಮು ಕಿಟ್ಟುವನ್ನು ಕರೆದುಕೊಂಡು ಸಮಾರಂಭದ ಚಪ್ಪರಕ್ಕೆ ಹೊರಟರು.

ಮೂವರೂ ಆಂಜನೇಯದೇವರ ಗುಡಿಯ ಆವರಣವನ್ನು ಹೊಕ್ಕು, ಅಲ್ಲಿ ಬಡಬಗ್ಗರಿಗೆ ಅನ್ನದಾನ ಮಾಡುವ ಏರ್ಪಾಟನ್ನು ಪರಿಶೀಲಿಸಿ, ' ಪಂಚಾಯ್ತಿ ಹಾಲ್ 'ನ ಬಳಿಗೆ ಬರುವವೇಳೆಗೆ ಇನಾಂದಾರ್ ರಾಘವಯ್ಯನವರೂ, ಆರೋಗ್ಯ ಮಂತ್ರಿಗಳೂ, ಮುಖ್ಯ ಅತಿಥಿಗಳೂ, ಭಾಷಣಕಾರರೂ ಆದ ' ನವಕರ್ನಾಟಕ ' ಪತ್ರಿಕೆಯ ಮಾಲೀಕರೂ ಕಾರುಗಳಲ್ಲಿ ಬಂದಿಳಿದರು. ಸುಂದರು, ದೊಡ್ಡಗೌಡರು ಮತ್ತು ಊರಿನ ಮುಖ್ಯಸ್ಥರು ಅವರನ್ನು ಸ್ವಾಗತಿಸಿ, ನಿಂಬೆಯ ಹಣ್ಣು, ಹಾರ ತುರಾಯಿಗಳನ್ನು ಅರ್ಪಿಸಿದರು

ಸಂಭ್ರಮದಿಂದ ಆರೋಗ್ಯ ಮಂತ್ರಿಗಳು ಆಸ್ಪತ್ರೆಗಾಗಿ ಪ್ರತ್ಯೇಕ ಕಟ್ಟಡ ಕಟ್ಟಲು ಶಂಕುಸ್ಥಾಪನೆ ಮಾಡಿದರು. ಹತ್ತಿರದಲ್ಲಿಯೇ ಸುಸಜ್ಜಿತವಾಗಿದ್ದ ವೇದಿಕೆಯ ಮೇಲೆ ಕುಳಿತ ಬಳಿಕ ಸುಂದರು ಸ್ವಾಗತ ಭಾಷಣ ಮಾಡಿದ. ಅನಂತರ ಆರೋಗ್ಯ ಮಂತ್ರಿಗಳು ಎದ್ದು ನಿಂತು 'ಬಡತನಕ್ಕಿಂತಲೂ ಭಯಂಕರವಾದ ಶತ್ರು ರೋಗ. ಅದನ್ನು ತಡೆಗಟ್ಟುವ ಸಾಧನಗಳನ್ನು ಪ್ರತಿಯೊಬ್ಬ ಮಾನವನೂ ಸೂಕ್ತವಾಗಿ ಉಪಯೋಗಿಸಕೊಳ್ಳಲೇಬೇಕು' ಎಂದು ಸುದೀರ್ಘ ಭಾಷಣ ಮಾಡಿದರು. 'ನವಕರ್ನಾಟಕ' ಪತ್ರಿಕೆಯ ಮಾಲೀಕರು ಮಾತನಾಡುತ್ತಾ 'ಸಾರ್ವಜನಿಕ ಸೇವಾಕಾರ್ಯದಲ್ಲಿ ಶ್ರೀಮಂತರು ಹೆಚ್ಚು ಆಸಕ್ತಿ ವಹಿಸುತ್ತಿರುವುದು ಮಾನವ ಕಲ್ಯಾಣದ ಶುಭಸೂಚನೆ' ಎಂದು ಹೇಳಿ, ಆಸ್ಪತ್ರೆಯನ್ನು ತೆರೆಯಲು ಕಾರಣಳಾದ ಸ್ವರ್ಗವಾಸಿ ಸ್ವರ್ಣಳ ನಾರೀಹೃದಯದ ವೈಶಾಲ್ಯವನ್ನು ಕೊಂಡಾಡಿದರು. ಅನಂತರ ರಾಘವಯ್ಯನವರು ವಿನಮ್ರರಾಗಿ ಎದ್ದುನಿಂತು, 'ಸ್ವರ್ಣಾದೇವಿ–ಸುಂದರರಾವ್ ಆಸ್ಪತ್ರೆ'ಯ ಪ್ರಾರಂಭೋತ್ಸವವನ್ನು ನಡೆಸಿಕೊಡಬೇಕೆಂದು ಆರೋಗ್ಯ ಮಂತ್ರಿಗಳನ್ನು ಪ್ರಾರ್ಥಿಸಿದರು.

ಎಲ್ಲರೂ ಪಂಚಾಯ್ತಿ ಭವನದ ಕಡೆಗೆ ನಡೆದರು. ಆರೋಗ್ಯ ಮಂತ್ರಿಗಳು ಭವನದ ಬಾಗಿಲು ತೆರೆದು ಒಳಹೊರಟರು. ಅವರ ಹಿಂದೆ ಡಾಕ್ಟರು ರಾಘವಯ್ಯನವರು, 'ನವಕರ್ಣಾಟಕ' ಮಾಲೀಕರು, ಸುಂದರು, ಗೌಡರು ಮೊದಲಾದ ಊರಿನ ಪ್ರಮುಖರು ಒಳಗೆ ನಡೆದರು.

ಒಂದೇ ಒಂದು ವಿಶಾಲ ಅಂಗಳವಿದ್ದ ಭವನದಲ್ಲಿ ಅರ್ಧಭಾಗಕ್ಕೆ ಒಂದು ಸ್ಕ್ರೀನ್ ಅಳವಡಿಸಿ ಕಾಂಪೌಂಡಿಂಗ್ ರೂಂ ಮಾಡಿಕೊಳ್ಳಲಾಗಿತ್ತು. ಉಳಿದ ಅರ್ಧಭಾಗದಲ್ಲಿ, ಪ್ರವೇಶದ್ವಾರದ ಕಡೆಗೆ ಡಾಕ್ಟರು ಕುಳಿತುಕೊಳ್ಳಲು ಅನುಕೂಲವಾಗುವಂತೆ ಕುರ್ಚಿ ಮೇಜುಗಳನ್ನು ಹಾಕಿ, ಉಳಿದ ಸ್ಥಳವನ್ನು ಬಟ್ಟೆಯ ತೆರೆಯಿಂದ ಪ್ರತ್ಯೇಕಿಸಿ, ಅಲ್ಲಿ ರೋಗಿಗಳ ಪರೀಕ್ಷೆಗೆ ಒಂದು ಎತ್ತರವಾದ ಮಂಚವನ್ನು ಹಾಕಿ ಸಜ್ಜುಗೊಳಿಸಲಾಗಿತ್ತು.

ಆರೋಗ್ಯ ಮಂತ್ರಿಗಳು 'ಕಾಂಪೌಂಡಿಂಗ್' ಪ್ರವೇಶಿಸಿ, ಬಗೆಬಗೆಯ ಔಷಧಿಗಳಿಂದ ತುಂಬಿದ್ದ ಹೊಸಹೊಸ ಸೀಸೆಗಳನ್ನು ನೋಡುತ್ತಾ ಮುಗುಳು ನಗೆಯಿಂದ ಡಾಕ್ಟರೊಡನೆ ಒಂದೆರಡು ಮಾತನಾಡಿದರು.

ರಾಘವಯ್ಯನವರು ನಾಗಪ್ಪನವರ ಮನೆಗೆ ಬಂದು, ಎಲ್ಲರ ಯೋಗ ಕ್ಷೇಮವನ್ನೂ ವಿಚಾರಿಸಿದರು. ಸ್ವರ್ಣ ತೀರಿಕೊಂಡುದಕ್ಕೆ ದುಃಖವನ್ನು ವ್ಯಕ್ತಪಡಿಸಿ, ಕಣ್ಣೀರಿಟ್ಟ ವೆಂಕಮ್ಮನವರನ್ನು ಕಂಡು ರಾಘವಯ್ಯನವರ ಹೃದಯ ಭಾರವಾಗಿತ್ತು.

" ಇನ್ನೊಂದು ಸಾರಿ ಬಂದಾಗ ದಯವಿಟ್ಟು ಅಲಮೇಲಮ್ಮನವರನ್ನು ಕರೆದುಕೊಂಡು ಬನ್ನಿ " ಎಂದರು ವೆಂಕಮ್ಮ.

ಸುಮಾರು ಹನ್ನೆರಡು ಗಂಟೆಗೆ ಊರಿನ ಶಾಲೆಯಲ್ಲಿ ಮಂತ್ರಿಗಳಿಗೂ ಅವರೊಡನೆ ಬಂದಿದ್ದವರಿಗೂ ಭೋಜನವಾಯಿತು. ಬೆಂಗಳೂರಿನಿಂದ ಬಂದಿದ್ದ ಅಡಿಗೆಯ ಭಟ್ಟರು ಸೊಗಸಾಗಿ ಅಡಿಗೆ ಮಾಡಿದ್ದರಿಂದ ಅತಿಥಿಗಳಿಗೆ ಸಂತೃಪ್ತಿಯಾಗಿತ್ತು.

ಭೋಜನಾನಂತರ, ವಿಶ್ರಾಂತಿಗೆ ಸಮಯಾವಕಾಶವಿಲ್ಲವೆಂದೂ, ನಿಯೋಜಿತ ಕಾರ್ಯಕಲಾಪಗಳ ಕಡೆಗೆ ಗಮನವೀಯಬೇಕಾಗಿದೆಯೆಂದೂ ಹೇಳಿ, ಆರೋಗ್ಯಮಂತ್ರಿಗಳು ಕಾರು ಹತ್ತಿದರು. ಅವರೊಡನೆಯೇ 'ನವಕರ್ನಾಟಕ' ಪತ್ರಿಕೆಯ ಮಾಲೀಕರೂ, ರಾಘವಯ್ಯನವರೂ ಹೊರಟರು. ಶಾಮುವೂ ಮಾಲೀಕರ ಕಾರಿನಲ್ಲಿಯೇ ಹೊರಟು ಬೆಂಗಳೂರು ಸೇರಿದ.

ಆ ಸಂಜೆ ವೆಂಕಮ್ಮನವರು ಸುಂದರು–ರತ್ನರಿಗೆ ಸಂಭ್ರಮದಿಂದ ಆರತಿ ಮಾಡಿ ಆನಂದಿಸಿ, ಮರುದಿನ ನವದಂಪತಿಗಳನ್ನು ಬಾಯ್ತುಂಬ ಹರಿಸಿ ಬೀಳ್ಕೊಟ್ಟರು.

ಆ ಬಳಿಕ, ಎರಡು ದಿನಗಳು ಕಳೆದ ಮೇಲೆ, ಒಂದು ಸಂಜೆಯ ಮುಸುಕು ಕತ್ತಲೆಯಲ್ಲಿ ನಾಗಪ್ಪನವರು ಧೈರ್ಯವಾಗಿ ಮನೆಗೆ ಬಂದರು !

೧೦

ದೀಪಾವಳಿ ಹಬ್ಬಕ್ಕೆ ಅಳಿಯನನ್ನು ಕರೆಸಬೇಕೆಂದು ವೆಂಕಮ್ಮನವರು ಹೇಳಿದಾಗ, ಅನ್ಯಮನಸ್ಕರಾಗಿದ್ದ ನಾಗಪ್ಪನವರು ಮೊದಲು ಒಪ್ಪಲಿಲ್ಲ ಕೊನೆಗೆ ಬಲವಂತಮಾಡಿದಾಗ, ಅವರು ರಾಜುವಿಗೆ ಕಾಗದ ಬರೆದು ಹಾಕಿದ್ದರು. ಆದರೆ ಅದಕ್ಕೆ ಬಂದ ಉತ್ತರ ವಿಷಾದಕರವಾಗಿತ್ತು.

ಸೀತಾರಾಮಯ್ಯನವರೇ ಆ ಕಾಗದ ಬರೆದಿದ್ದರು—

‘ ನೀವು ಕೊಡಬೇಕಾದ ಇನ್ನೂರು ರೂಪಾಯಿಗಳನ್ನು ಆದಷ್ಟು ಶೀಘ್ರವಾಗಿ ಪಾವತಿಮಾಡುವವರೆಗೂ ನಮ್ಮ ಹುಡುಗನನ್ನು ಕಳುಹಿಸುವುದಿಲ್ಲ. ನಿಮ್ಮ ಹುಡುಗಿಯ ಮೇಲೆ ನಿಮಗೆ ಪ್ರೀತಿಯಿದ್ದರೆ, ಬೇಗನೆ ಹಣವನ್ನು ಕಳುಹಿಸಿಕೊಡಿ. ಅನಂತರ ಚಿ॥ ರಾಜುವನ್ನು ದೀಪಾವಳಿ ಹಬ್ಬಕ್ಕೆ ಕಳುಹಿಸಿಕೊಡುತ್ತೇನೆ. ಇಲ್ಲದಿದ್ದರೆ, ನಿಮ್ಮ ಹುಡುಗಿಯ ಮುಖವನ್ನು ಅವನು ಎಂದೆಂದಿಗೂ ನೋಡುವುದಿಲ್ಲ.’

—ನಾಗಪ್ಪನವರು ಆ ಕಾಗದವನ್ನು ಓದಿದಾಗ, ಸೀತಾರಾಮಯ್ಯನವರ ಮೇಲೆ ಬಂದ ಅವರ ಕೋಪ ಜಯರಾಯರ ಕಡೆಗೆ ತಿರುಗಿತು.

“ ಅಯೋಗ್ಯ ಜನ. ಮೋಸಮಾಡಿಬಿಟ್ಟರು ನನ್ನ. ನಾನ್ನೂರು ನುಂಗಿ ನೀರು ಕುಡಿದರು ”

—ಎಂದು ಮನಸಾರೆ ಶಪಿಸಿದರು.

“ ಎಂದಿದ್ದರೂ ಕೊಡಬೇಕು. ಹೇಗಾದರೂ ಮಾಡಿ ಆ ಇನ್ನೂರು ರೂಪಾಯಿ ಕೊಟ್ಟುಬಿಟ್ಟು, ಅಳಿಯನನ್ನು ದೀಪಾವಳಿಗೆ ಕರೆಸಿ ಅಂದ್ರೆ....”

—ಎಂದರು ವೆಂಕಮ್ಮ.

“ ಹ್ಞು....ಅವನು ಬಂದರೆಷ್ಟು – ಬರದಿದ್ದರೆಷ್ಟು ? ನಾನು ಇನ್ನೂರು ಕೊಡುವುದೂ ಇಲ್ಲ – ಅವನು ಬರುವುದೂ ಬೇಡ ; ಅಳಿಯ ಬರದಿದ್ದರೆ ದೀಪಾವಳಿಯೇನೂ ನಿಂತುಹೋಗುವುದಿಲ್ಲವಲ್ಲ.”

—ಸಿಡಿದು ನುಡಿದರು ನಾಗಪ್ಪ.

ವೆಂಕಮ್ಮನವರು ತಮ್ಮ ಗಂಡನಿಗೆ ಪರಿಪರಿಯಾಗಿ ಹೇಳಿ ನೋಡಿದರು. ಆದರೆ ನಾಗಪ್ಪನವರು ಹಿಡಿದಿದ್ದೇ ಹಟವಾಗಿತ್ತು.

ಸುಮಿತ್ರೆಯ ಕಣ್ಣೀರು ನೋಡಲಾರದೆ ಕೊನೆಗೆ ವೆಂಕಮ್ಮ ಲಲಿತೆಗೆ ಹೇಳಿ, ಶಾಮುವಿಗೆ ಕಾಗದ ಬರೆಸಿದರು—

'ಚಿರಂಜೀವಿ ಶಾಮುವಿಗೆ, ನಿಮ್ಮ ತಾಯಿಯ ಆಶೀರ್ವಾದಗಳು. ಈ ಕಾಗದ ಕಂಡತಕ್ಷಣ ತಡಮಾಡದೆ ಹೊರಟು ಬಾ. ಎಲ್ಲಾ ವಿಷಯವೂ ಇಲ್ಲಿಗೆ ಬಂದ ಮೇಲೆ ತಿಳಿಯುತ್ತದೆ'

—ಎಂದಷ್ಟೇ ಬರೆಸಿ ಅಂಚೆಗೆ ಹಾಕಿಸಿದ್ದರು.

ಎರಡು ದಿನಗಳ ಬಳಿಕ ಶಾಮು ಅಗ್ರಹಾರಕ್ಕೆ ಧಾವಿಸಿಬಂದ. ಬಂದೊಡನೆಯೇ ಅವನ ಮೇಲೆ ಕಾಕದೃಷ್ಟಿಯನ್ನು ಬೀರಿದರು ನಾಗಪ್ಪ.

"ನಿಮ್ಮಮ್ಮ ಮಾವ ಕಾಗದ ಬರೆದಿದ್ದಾರೆಯೋ ದೀಪಾವಳಿಗೆ ಬಾ ಅಂತ?"

ಶಾಮು ಉಡುಪು ಬದಲಿಸಿ ಹೊರಗೆ ಬಂದೊಡನೆಯೇ ಕೇಳಿದರು ನಾಗಪ್ಪ.

"ಬರೆದಿದ್ದಾರೆ ಅಣ್ಣ. ಹಬ್ಬವಂತೂ ಮಾಡುವಹಾಗಿಲ್ಲ. ಸುಮ್ಮನೆ ಬಂದು ಹೋಗಬೇಕೆಂದು ಬರೆದಿದ್ದಾರೆ"

—ಎಂದ ಶಾಮು.

ಗಿರಿಜೆಯೂ ಸಹ ತನ್ನ ಪ್ರಿಯನಿಗೆ ಒಂದು ಕಾಗದ ಬರೆದು, ಅವನನ್ನು ಖಂಡಿತ ಬರಬೇಕೆಂದು ಕೇಳಿಕೊಂಡಿದ್ದಳು.

ಅವಳ ಕಾಗದದಲ್ಲಿ—

"ಅಕ್ಕರೆಯ ದೇವಾ,

ನಿಮ್ಮ ಚರಣದಾಸಿ ಗಿರಿಜೆಯ ಪ್ರಣಾಮಗಳು, ತಾವು ಬರೆದ ಕಾಗದಗಳು ಕೈಸೇರಿದವು. ಆದರೆ ಉತ್ತರ ಬರೆಯಲು ತೋಚದೆ, ಸುಮ್ಮನಾಗಬೇಕಾಯಿತು. ಈಗ ದೀಪಾವಳಿ ಬಂದಿದೆ. ಹಿಂದೊಮ್ಮೆ ಬರೆದಿದ್ದ ಕಾಗದದಲ್ಲಿ ನೀವು ಬರುತ್ತೇನೆಂದು ಬರೆದಿದ್ದಿರಿ. ಅಮ್ಮ ಇದ್ದಿದ್ದರೆ ಈ ಸಾರಿಯ ದೀಪಾವಳಿ ನಿಜವಾಗಿಯೂ ನಯನಮನೋಹರವಾದ ಆನಂದಾವಳಿಯೇ ಆಗುತ್ತಿತ್ತು. ಆದರೆ ಅವರು ನನ್ನನ್ನೆಲ್ಲಾ ಬಿಟ್ಟುಹೋದರು. ಆ ವಿಯೋಗದ ಕಣ್ಣೀರಿನ

ತೀವ ಇನ್ನೂ ಆರಿಲ್ಲ. ಮನೆಯ ದೀಪ ಮಂಕಾಗಿದೆ. ದೀವಳಿಗೆಯ ಹಣತೆಯ ಸಾಲು ತಿಮಿರಾವಳಿಯಲ್ಲಿಯೇ ಮುಳುಗಿದೆ. ಹಬ್ಬದ ಸಂಭ್ರಮವೇನೂ ಇಲ್ಲ. ಆದರೂ ನೀವು ಮಾತ್ರ ಖಂಡಿತ ಬರಬೇಕು. ನಿಮ್ಮನ್ನು ನೋಡುವ ಆಸೆಯನ್ನು ಇನ್ನೆಷ್ಟು ದಿನ ತಾನೆ ತಡೆಗಟ್ಟಲಿ? ಎಷ್ಟೇ ತೊಂದರೆಗಳಿದ್ದರೂ—ಕಷ್ಟವಿದ್ದರೂ ನೀವು ಮಾತ್ರ ದಯವಿಟ್ಟು ಇಲ್ಲಿಗೆ ಬಂದೇಬರಬೇಕು. ನಿಮ್ಮ ನಿರೀಕ್ಷಣೆಯಲ್ಲಿಯೇ ಇದ್ದೇನೆ. ಬರುವಿರಲ್ಲವೆ ?

ಇಂತು, ಸದಾ ನಿಮ್ಮ ಧ್ಯಾನದಲ್ಲಿಯೇ ನಿರತಳಾಗಿರುವ, – ಗಿರಿಜ ”

—ಎಂದು ಬರೆದಿತ್ತು.

ಶಾಮು ಆ ಕಾಗವನ್ನು ಹತ್ತಾರು ಬಾರಿ ಓದಿ ಆನಂದಿಸಿದ್ದ.

ಆದರೆ ಆ ವಿಷಯವನ್ನೆಲ್ಲಾ ತಂದೆಯ ಮುಂದೆ ಹೇಳಬಹುದೆ ?

“ ಹಾಗಾದರೆ ನೀನು ಹೋಗುತ್ತೀಯೋ ? ”

“ ಹೋಗಿಬರೋಣವೆಂದುಕೊಂಡಿದ್ದೇನಣ್ಣ.”

“ ಸುಮ್ಮನೆ ಇರು. ಹೋಗುವುದೂ ಬೇಡ, ಏನೂ ಬೇಡ. ಆ ಮುಠ್ಠಾಳ ಮಾವನಿಂದ ನಾಲ್ಕು ನೂರು ಬರುವವರೆಗೂ ನೀನು ಮೈಸೂರು ರೈಲು ಹತ್ತಬಾರದು.”

—ಕಠೋರವಾಗಿ ನುಡಿದರು ನಾಗಪ್ಪ.

ನಿರ್ದಯನಾದ ತಂದೆಯ ಮುಖವನ್ನೊಮ್ಮೆ ನಿರಾಶೆಯಿಂದ ನೋಡಿ, ಮುಖ ತಿರುಗಿಸಿದ ಶಾಮು.

“ ಈ ಅಯೋಗ್ಯನಿಗೆ ನಾನೇ ಕಾಗದ ಬರೆಯುತ್ತೇನೆ. ಈ ಬೆಂಗಳೂರು ಸೀತಾರಾಮಯ್ಯ ಬರೆದಿರುವ ಹಾಗೆಯೇ ನಾನು ಆ ಜಯರಾಯನಿಗೂ ಬರೆಯುತ್ತೇನೆ ”

—ಎನ್ನುತ್ತಾ ನಾಗಪ್ಪನವರು ಕೂಡಲೇ ಕಾಗದ—ಲೇಖಣಿ ತೆಗೆದು ಕೊಂಡು, ಬರೆಯತೊಡಗಿದರು. ಶಾಮು ನಿರುಪಾಯನಾಗಿ ತಾಯಿಯ ಬಳಿಗೈದಿದ.

ವೆಂಕಮ್ಮನವರು ಸುಮಿತ್ರೆಯ ಸಂಗತಿಯನ್ನು ವಿವರಿಸಿದರು. ಸೀತಾರಾಮಯ್ಯನವರು ಬರೆದಿದ್ದ ಕಾಗದದಲ್ಲಿನ ವಿಷಯವನ್ನೂ ಮಗನಿಗೆ ತಿಳಿಸಿದರು.

" ದೀಪಾವಳಿಗೆ ಇನ್ನು ಎರಡೇ ಎರಡು ದಿನವಿದೆ ಶಾಮು. ಸುಮಿತ್ರೆ ಅತ್ತು ಅತ್ತು ಕಣ್ಣು ಕೆಂಪಗೆ ಮಾಡಿಕೊಂಡಿದ್ದಾಳೆ. ರಾಜು ಬರದಿದ್ದರೆ ತಾನು ಊಟವನ್ನೇ ಮಾಡುವುದಿಲ್ಲವೆಂದು ಹಟಹಿಡಿದಿದ್ದಾಳೆ—ನಿನ್ನೆಯಿಂದ ಉಪವಾಸ."

ತಾಯಿಯ ಮಾತು ಕೇಳಿದ ಶಾಮುವಿಗೆ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡ ಹಾಗಿತ್ತು.

" ಈಗ ನಾನೇನು ಮಾಡಲಿ ಹೇಳಮ್ಮ. ನಾನಾದರೂ ಹಣ ಕೂಡಿಟ್ಟಿದ್ದರೆ, ಇನ್ನೂರು ರೂಪಾಯಿ ಕೊಟ್ಟು, ರಾಜುವನ್ನು ಕರೆದುಕೊಂಡು ಬರುತ್ತಿದ್ದೆ. ಆದರೆ ಬಂದ ಸಂಬಳವನ್ನೆಲ್ಲಾ—ಖರ್ಚು ಕಳೆದು ಮಿಕ್ಕದ್ದು—ಅಣ್ಣ ತೆಗೆದುಕೊಂಡು ಬಿಡುತ್ತಾರೆ. ನಾನು ಹೇಗೆ ಕೂಡಿಡಲಿ ? "

" ನನಗೂ ಗೊತ್ತಿದೆ ಶಾಮು. ಅದಕ್ಕೇ ನಾನು ಬೇರೆ ಯೋಚನೆ ಮಾಡಿದ್ದೇನೆ "

" ಏನಮ್ಮ ಅದು ? "

" ನನ್ನ ಚಿನ್ನದ ಸರ ಇದೆಯಲ್ಲ ಶಾಮು—ಅದನ್ನ ಮಾರಿ, ಸುಮಿತ್ರೆಯ ಗಂಡನಿಗೆ ಇನ್ನೂರು ಕೊಟ್ಟು, ಅವನನ್ನು ದೀಪಾವಳಿಗೆ ಕರೆಸೋಣ."

" ಇದೆಂಥ ಯೋಚನೆಯಮ್ಮ ? "

" ಇನ್ನೇನು ಮಾಡುವುದು ಮಗು ? ಅವಳ ಕಣ್ಣೀರು ನಾನು ನೋಡಲಾರೆ. ಸುಮಿತ್ರೆಯ ಸುಖಕ್ಕಿಂತ ಈ ಚಿನ್ನದ ಸರ ಹೆಚ್ಚೆ? ಹುಡುಗಿ ಗಂಡನ ಜೊತೆಯಲ್ಲಿ ಸುಖವಾಗಿದ್ದರೆ, ಅದೇ ನನಗೆ ಸಂತೋಷ."

ತಾಯಿಯ ಮಾತು ಕೇಳಿ ಶಾಮುವಿನ ಕಣ್ಣಿನಿಂದ ನೀರು ತೊಟ್ಟಿಟ್ಟಿತು.

ಒಳಗೆ ನಡೆದ ವೆಂಕಮ್ಮನವರು ಚಿನ್ನದ ಸರವನ್ನು ತಂದು, ಮಗನ ಕೈಗಿತ್ತು ನುಡಿದರು—

" ನಿಮ್ಮ ತಂದೆಗೆ ಹೇಳಬೇಡ. ಇವತ್ತೇ ಹೋಗಿ, ನಾಳೆ ಬೆಳಗಿನ ರೈಲಿಗೇ ಸುಮಿತ್ರೆಯ ಗಂಡನನ್ನು ಕರೆದುಕೊಂಡು ಬಾ. ನಾಳಿದ್ದೇ ದೀಪಾವಳಿ."

ಶಾಮು ಮನಸ್ಸಿಲ್ಲದ ಮನಸ್ಸಿನಿಂದ ಬೆಂಗಳೂರು ಸೇರಿದ. ದೊಡ್ಡಪೇಟೆ ಚೌಕದ ಸರಾಫುಕಟ್ಟೆಯಲ್ಲಿ ಸರವನ್ನು ತೋರಿಸಿದ್ದಾಯಿತು. ಅದಕ್ಕೆ

ಮುನ್ನೂರೈವತ್ತು ರೂಪಾಯಿ ಖರೀದಿ ಕಟ್ಟಿ, ಶಾಮು ಹಣವನ್ನೆಣಿಸಿಕೊಂಡು, ಸೀತಾರಾಮಯ್ಯನವರ ಮನೆ ಸೇರಿದ.

" ಏನಪ್ಪ, ಅಪರೂಪವಾಗಿ ಬಂದಿದ್ದೀಯೆ ? ಏನು ಸಮಾಚಾರ ? "

—ನಗೆಮುಖದಿಂದಲೇ ಕೇಳಿದರು ಸೀತಾರಾಮಯ್ಯ.

ನಾಗಪ್ಪನವರಿಗೆ ತಾವು ಬರೆದ ಕಾಗದ ಫಲಕಾರಿಯಾಗಿದೆಯೆಂಬುದು ಶಾಮುವಿನ ಮುಖವನ್ನು ನೋಡಿದಾಗಲೇ ಅವರಿಗೆ ಅರಿವಾಗಿತ್ತು.

" ಈ ಹಣ ಕೊಟ್ಟು ಬರಲು ನಮ್ಮ ತಂದೆ ಕಳುಹಿಸಿದ್ದಾರೆ "

—ಎಂದ ಶಾಮು.

" ತುಂಬ ಸಂತೋಷವಪ್ಪ "

—ಎನ್ನುತ್ತಾ ಸೀತಾರಾಮಯ್ಯ ನೋಟುಗಳನ್ನೆಣಿಸಿಕೊಂಡರು.

ಅನಂತರ ಶಾಮುವಿನ ಕಡೆಗೆ ನೋಡುತ್ತಾ—

" ಏಳಪ್ಪ, ಕೈಕಾಲು ತೊಳೆದುಕೋ. ಇಲ್ಲಿಯೇ ಊಟಮಾಡುವೆಯಂತೆ "

—ಎಂದರು.

" ಇಲ್ಲ. ನಾನು ಊರಿಗೆ ಹೋಗಬೇಕು. ನಾಳೆ ಬೆಳಗಿನ ರೈಲಿಗೆ ರಾಜಾರಾಯರನ್ನು ಊರಿಗೆ ಕಳುಹಿಸುತ್ತೀರಾ ? "

" ಆಗಲಪ್ಪ. ಅವನಿಗೆ ಹೇಳಿ ನೋಡುತ್ತೇನೆ."

" ನಾಳೆ ಬೆಳಿಗ್ಗೆ ನಾನು ಇಲ್ಲಿಗೆ ಬೇಗನೆ ಬರುತ್ತೇನೆ. ಹೊರಡಲು ಸಿದ್ಧವಾಗಿರಬೇಕೆಂದು ಅವರಿಗೆ ಹೇಳಿ. ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತೇನೆ "

—ಎನ್ನುತ್ತಾ ಶಾಮು ಶ್ರೀರಾಮಪುರದ ತನ್ನ ಕೋಣೆಯ ಕಡೆಗೆ ಹೆಜ್ಜೆ ಹಾಕಿದ. ನಿರಾಶೆಯ ಮುಗಿಲು ಕವಿದಿದ್ದ ಮನಸ್ಸಿನ ತುಂಬ ಯೋಚನೆಗಳು ಹೊರೆಹೊರೆಯಾಗಿ ತುಂಬಿದ್ದವು. ಮೈಸೂರಿನ ನೆನಪಾಗಿ, ತಾನು ಅಲ್ಲಿಗೆ ಹೋಗದಿದ್ದರೆ ಗಿರಿಜ ಎಷ್ಟು ವ್ಯಸನಪಡುತ್ತಾಳೆಯೋ ಎಂದು ಮಮ್ಮಲ ಮರುಗಿದ. ತನ್ನ ಪರಿಸ್ಥಿತಿಯನ್ನು ವಿವರಿಸಿ, ಅವಳಿಗೆ ಕಾಗದ ಬರೆಯುವುದೇ ಸರಿಯೆಂದು ನಿಶ್ಚಯಿಸಿದ. ಹೋಟಲಿನಲ್ಲಿ ಊಟ ಮುಗಿಸಿ, ಕೊಠಡಿಗೆ ಬಂದೊಡನೆ, ಕಾಗದ ಬರೆಯತೊಡಗಿದ.

" ನನ್ನ ಮುದ್ದು ಕಣ್ಮಣಿ,

ನಿನ್ನ ಕಾಗದ ಕೈ ಸೇರಿದೆ. ಮೈಸೂರಿಗೆ ಬರಬೇಕೆಂದು ನನಗೆ ತುಂಬಾ ಆಸೆಯಿದ್ದಿತು. ಆದರೆ ನಮ್ಮ ತಂದೆ ಅದಕ್ಕೆ ಕಲ್ಲುಹಾಕಿದರು. ಅದರ ವಿವರ ಅವರೇ ನಿಮ್ಮ ತಂದೆಗೆ ಬರೆದ ಕಾಗದದಲ್ಲಿದೆ. ಓದಿನೋಡು. ಅವರ ಮಾತು ಮಿರಿ ನಡೆಯುವ ಎದೆಗಾರಿಕೆ ನನಗಿಲ್ಲ. ಎಂತಲೇ ಹೇಡಿಯಂತೆ ತೆಪ್ಪಗಿದ್ದೇನೆ. ಅವರ ಹಟವೇ ಹಟ. ನಾನು ಶಕ್ತಿ ಇಲ್ಲದ ಜೀವವಾಗಿದ್ದೇನೆ. ವಿಧಿಯ ಕೈಗೊಂಬೆಗಳಾಗಿ, ಈ ಪರಿಸ್ಥಿತಿಯಲ್ಲಿ ನೀನೊಂದು ಕಡೆ – ನಾನೊಂದು ಕಡೆ ದುಃಖಿಸಬೇಕಾಗಿದೆ. 'ಒಳ್ಳೆಯ ಕಾಲ ಬರಲಿ – ಬೇಗ ಬರಲಿ' ಎಂದು ಹಾರೈಸುವುದಷ್ಟೇ ನನ್ನ ಪಾಲಿಗೆ ಉಳಿದಿದೆ. ನೀನು ಸಮಾಧಾನದಿಂದಿರಬೇಕೆಂದು ನನ್ನ ಕೋರಿಕೆ. ಈ ಕೋರಿಕೆಗೆ ಬೆಲೆಕೊಡುವೆಯಲ್ಲವೆ ಚಿನ್ನಾ?

ಬೇಸರಪಡದೆ ಕಾಗದ ಬರೆಯುವೆ ತಾನೆ?

ಸದಾ ನಾನು ನಿನ್ನವನೇ— ...."

—ಕಾಗದ ಬರೆದು ಮುಗಿಸಿದ ನಂತರ ಶಾಮುವಿಗೆ ಸ್ವಲ್ಪ ಸಮಾಧಾನವೆನಿಸಿತು. ದೀಪವಾರಿಸಿ ಮಲಗಿದ ಮೇಲೆಯೂ ಗಿರಿಜೆಯ ನೆನಪು ಅಳಿಯಲಿಲ್ಲ. ಕನಸಿನಲ್ಲೆಲ್ಲಾ ತನ್ನ 'ಕಣ್ಮಣಿ' 'ಬಾಬಾ' ಎಂದು ಕರೆಯುತ್ತಿರುವಂತೆ ಶಾಮುವಿಗೆ ಭಾಸವಾಯಿತು.

ಬೆಳಗಾದೊಡನೆ ಸೀತಾರಾಮಯ್ಯನವರ ಮನೆಗೆ ನಡೆದ ಶಾಮು. ಅಷ್ಟರಲ್ಲಾಗಲೇ ಹೆಂಡತಿಯನ್ನು ನೋಡುವ ಆಸೆಯಿಂದ ರಾಜು ಪ್ರಯಾಣಕ್ಕೆ ಸಿದ್ಧನಾಗಿದ್ದ. ಇಬ್ಬರೂ ರೈಲ್ವೆ ಸ್ಟೇಷನ್ನಿನ ಕಡೆಗೆ ಹೆಜ್ಜೆ ಹಾಕಿದರು.

ಮದುವೆಯಾದ ಬಳಿಕ ರಾಜು ಅಗ್ರಹಾರಕ್ಕೆ ಆಗಮಿಸಿದ್ದು ಅದೇ ಮೊದಲನೆಯ ಬಾರಿ. ದೂರದಲ್ಲಿಯೇ ಅವನು ಬರುತ್ತಿರುವುದನ್ನು ಕಂಡು ಸುಮಿತ್ರೆಯ ಮುಖ ಅರಳಿತು; ಕಣ್ಣೀರು ಮಾಯವಾಯಿತು. ತನ್ನ ಪ್ರಿಯನನ್ನು ಕಂಡು, ನಾಚಿಕೆಗೊಂಡು, ಲಲಿತೆಯ ಬೆನ್ನಹಿಂದೆ ತಿರುಗತೊಡಗಿದಳು.

ಅಳಿಯನನ್ನು ಕಂಡು ಸಂತೋಷವಾಗಿದ್ದರೂ ವೆಂಕಮ್ಮನವರಿಗೆ ಮಗನನ್ನು ಕಂಡು ಮರುಕವಾಗಿತ್ತು.

" ಆ ಹುಡುಗಿ ನೀನು ಬರುತ್ತೀ ಎಂದು ಎಷ್ಟು ಆಸೆಯಿಂದ ಇದ್ದಾಳೋ

" ಅವಳಿಗೆ ನಾನು ಕಾಗದ ಬರೆದಿದ್ದೇನಮ್ಮ "

" ಕಾಗದ ಬರೆದರೆ ನೀನು ಹೋದಷ್ಟು ಸಂತೋಷವಾಗುತ್ತದೆಯೆ ಅವಳಿಗೆ ಶಾಮು ? "

" ಇಲ್ಲಮ್ಮ. ಅಣ್ಣನ ಮಾತು ಮೀರಿಹೋಗುವುದು ಹೇಗೆ ಸಾಧ್ಯ ? "

ಮಗನ ಮಾತು ಕೇಳಿ, ಉಪಾಯಗಾಣದೆ ವೆಂಕಮ್ಮ ನಿಟ್ಟುಸಿರಿಟ್ಟರು.

" ಗಿರಿಜ ತುಂಬ ಒಳ್ಳೆಯ ಹುಡುಗಿ. ನೀನು ಬರುತ್ತೀ ಎಂದು ಆಶೆಯಿಂದ ಕಾದುಕೊಂಡಿರುತ್ತಾಳೆ. ಆದರೆ ನಿಮ್ಮ ತಂದೆಯ ಕಾಗದ ನೋಡಿ, ಅವಳ ಮುಖ ಬಾಡಿಹೋಗುತ್ತದೆ. ಅಲ್ಲವೇ ಶಾಮು ? "

—ಆ ತಾಯಿದೇವಿಯ ಕಂಠ ಗದ್ಗದಿತವಾಗಿತ್ತು.

" ಸಮಾಧಾನ ಮಾಡುವುದಕ್ಕೆ ಆ ಹುಡುಗಿಗೆ ಅಮ್ಮನೂ ಇಲ್ಲ. ಎಷ್ಟು ದುಃಖಿಸುತ್ತದೆಯೋ – ಎಷ್ಟು ಅಳುತ್ತದೆಯೋ ಪಾಪ."

—ಆ ಮಾತು ಹೇಳುವಾಗ ನಿಜವಾಗಿಯೂ ವೆಂಕಮ್ಮನವರೇ ಅಳುತ್ತಿದ್ದರು.

" ನಿಮ್ಮಂಥ ಮಕ್ಕಳಿಗೆ ನಾನು ಸರಿಯಾದ ತಾಯಿಯಲ್ಲ ಮಗು. ನಿಮ್ಮ ದುಃಖ ತೊಡೆಯಲು ಕೈಲಾಗದ ಹೆಳವಿ ನಾನು ! "

" ಹಾಗನ್ನ ಬೇಡಮ್ಮ. ನೀನು ನಿಜವಾಗಿಯೂ ಮಹತಾಯಿ. ಇಲ್ಲದಿದ್ದರೆ ಮಗಳ ಕಣ್ಣೀರು ಒರೆಸಲು ನಿನ್ನ ಚಿನ್ನದ ಸರವನ್ನು ಮಾರುತ್ತಿದ್ದೆಯಾ ? "

" ನಾನಲ್ಲ ಶಾಮು – ಮಹತಾಯಿ. ಆ ದೊಡ್ಡ ಪಟ್ಟ ನಿಮ್ಮ ಅಜ್ಜಿಗೆ ಸಲ್ಲಬೇಕು. ಮಲಮಗಳೆಂದು ಎಳ್ಳಷ್ಟೂ ವಂಚನೆಮಾಡದೆ, ಹೆತ್ತತಾಯಿಗಿಂತ ಹೆಚ್ಚು ಪ್ರೀತಿಯಿಂದ ನನ್ನನ್ನು ಸಲಹಿದ ಆ ನನ್ನ ಚಿಕ್ಕಮ್ಮ ಮಹತಾಯಿ ! ನನ್ನ ಒಂದೊಂದು ಕಷ್ಟದಲ್ಲೂ ಕಣ್ಣೀರು ಹರಿಸಿ, ಆ ಕಷ್ಟಗಳನ್ನೆಲ್ಲಾ ಪರಿಹರಿಸಿ ಕಾಪಾಡಿದ್ದಾಳೆ. ಈ ತಂಪುಹೊತ್ತಿನಲ್ಲಿ ಅವಳನ್ನು ನೆನಸಬೇಕು."

—ಎನ್ನುತ್ತಾ ವೆಂಕಮ್ಮನವರು ಸೆರಗಿನ ತುದಿಯಿಂದ ಕಣ್ಣೀರು ಒರೆಸಿಕೊಂಡರು.

ಮರುದಿನ ಮುಂಜಾನೆ ಅಳಿಯದೇವರಿಗೆ ಅಭ್ಯಂಗ ಸ್ನಾನವಾಯಿತು.

ಹೂಬಾಣ ಹಚ್ಚಿದ ರಾಜು ಅದನ್ನು ಸುಮಿತ್ರೆಯ ಕೈಗಿತ್ತು, ಅವಳ ಬೆನ್ನ ಹಿಂದೆ ನಿಂತ. ನಕ್ಷತ್ರರಾಜಿ ಹೊಮ್ಮಿಬರುತ್ತಿದ್ದಂತೆ ಸುಮಿತ್ರೆಯ ನಗುವೂ ಹರಿದುಬರುತ್ತಿತ್ತು.

ಅದನ್ನು ನೋಡುತ್ತಿದ್ದ ಶಾಮುವಿನ ಮನಸ್ಸು ಗಿರಿಜೆಯನ್ನು ಜ್ಞಾಪಿಸಿಕೊಂಡಿತು. ತಾನೂ ಒಂದು ನಕ್ಷತ್ರಬಾಣವನ್ನು ಹಚ್ಚಿ ಗಿರಿಜೆಯ ಕೈಗಿತ್ತು ತನ್ನ ತೋಳುಗಳಿಂದ ಅವಳ ಬೆನ್ನು ಬಳಸಿನಿಂತ ದೃಶ್ಯ ಕಣ್ಮುಂದೆ ಕಟ್ಟಿತು. ನಿಜವಾಗಿಯೂ ಹಾಗೆಯೇ ನಡೆದಿದ್ದರೆ, ಎಷ್ಟೊಂದು ಸಂತೋಷವಾಗುತ್ತಿತ್ತು ತನಗೆ – ಎಂದುಕೊಂಡ.

ಅರುಣೋದಯವಾಯಿತು. ವೆಂಕಮ್ಮನವರು ಕಾಫಿ, ತಾಲಿಪಿಟ್ಟು ಸಿದ್ಧಮಾಡಿದರು. ತಾನೇ ಹೋಗಿ, ಕಿಟ್ಟುವನ್ನೂ ಸರಸುವನ್ನೂ ಊಟಕ್ಕೆ ಕರೆದು, ತಿಂಡಿಗೂ ಬರಲು ಹೇಳಿಬಂದರು. ಆದರೆ ಸರಸು ತನ್ನ ಗಂಡನನ್ನು ಹೋಗಗೊಡುವಳೆ ?

ಬೆಳಗಿನ ಉಪಾಹಾರಾನಂತರ ರಾಜುವನ್ನು ಕರೆದುಕೊಂಡು ಊರು ತೋರಿಸಲು ಹೊರಟ ನಾಣಿ. ಶಾಮು ಹೊರ ಜಗುಲಿಯ ಮೇಲೆ ಕುಳಿತು, ಬಿಸಿಲುಕಾಯಿಸುತ್ತಾ ಯೋಚನಾ ಮಗ್ನನಾಗಿದ್ದ.

ಹತ್ತುಗಂಟೆಯವೇಳೆಗೆ ಕೆಂಪು ಉಡುಪುತೊಟ್ಟ ಅಂಚೆಯವನ ದರ್ಶನ ವಾಯಿತು. ನೇರವಾಗಿ ಅವನು ನಾಗಪ್ಪನವರ ಮನೆಯ ಬಳಿಗೆ ಬಂದ.

" ಏನಾದರೂ ಕಾಗದವಿದೆಯೇನಪ್ಪ ? "

—ಎಂದು ಶಾಮು ಕೇಳಿದಾಗ,

" ಇಲ್ಲ ಸ್ವಾಮಿ. ಯಾವುದೋ ಟೆಲಿಗ್ರಾಂ ಬಂದಿದೆ "

—ಎಂದ ಆತ.

" ಯಾರದ್ದು ? "

" ಈ ಅಗ್ರಿಸ್ಸಿನೋರು ಎಲ್ಲಿದ್ದಾರೆ ಸ್ವಾಮಿ ? "

ಅಂಚೆಯವನು ತಂತಿಯನ್ನು ತೋರಿಸಿದಾಗ—

" ಇದು ನನ್ನ ಹೆಸರೇ— ಇದೇ ನಮ್ಮ ಮನೆ "

—ಎನ್ನುತ್ತಾ ಶಾಮು ಸಹಿಮಾಡಿ, ಟೆಲಿಗ್ರಾಂ ತೆಗೆದುಕೊಂಡು, ಲಕೋಟೆಯನ್ನು ಹರಿದು, ಓದಿಕೊಂಡ.

ಆಡು ಮೈಸೂರಿನಿಂದ ಜಯರಾಯರು ಕಳುಹಿಸಿದ ತಂತಿ—

'ಗಿರಿಜ ಸ್ವರ್ಗಸ್ಥಳಾದಳು'

—ಸುದ್ದಿಯನ್ನು ಓದಿದ ಶಾಮುವಿಗೆ ಸಿಡಿಲು ಬಡಿದಂತಾಯಿತು. ಮೊದಲೇ ಬಾಡಿದ್ದ ಅವನ ಮುಖ ಇನ್ನಷ್ಟು ಕಂಗೆಟ್ಟಿತು. ತನ್ನ ಶಕ್ತಿಯ ನ್ನೆಲ್ಲಾ ಯಾರೋ ಕಸಿದುಕೊಂಡಂತಾಯಿತು ಅವನಿಗೆ. ಎದೆ ತುಂಬಿ, ಕಣ್ ತುಳುಕಿ, ದಿಕ್ಕುತೋರದೆ ಮಬ್ಬು ಕವಿಯಿತು.

'ಗಿರಿಜಾ........ಗಿರಿಜಾ........ನನ್ನನ್ನು ಬಿಟ್ಟು ಹೊರಟುಹೋದೆಯಾ ಚಿನ್ನಾ'

—ಎಂದು ಅವನ ಮನಸ್ಸು ಪರಿಪರಿಯಾಗಿ ಹಲುಬಿತು.

ಗಿರಿಜ ತೀರಿಕೊಂಡ ಸುದ್ದಿಯನ್ನು ತಿಳಿಸಲು ಶಾಮು ಅಡಿಗೆಮನೆಯ ಕಡೆಗೆ ಧಾವಿಸಿದ. ಅಂಗಳಕ್ಕೆ ಬರುವವೇಳಗೆ ಅವನ ಮನಸ್ಸು ತಡೆದು ನಿಲ್ಲಿಸಿತು.

'ಹಬ್ಬದ ಸಂಭ್ರಮದಿಂದ ಸಂತೋಷದ ಹೊನಲು ಹರಿಯುತ್ತಿರುವ ಮನೆಯಲ್ಲಿ ಈ ದುಃಖದ ಸುದ್ದಿಯನ್ನು ತಿಳಿಸಿ ಕಣ್ಣೀರ ಕಾಲುವೆಯನ್ನು ತೋಡೆಯುವೆಯಾ? ತಂಗಿ ಸುಮಿತ್ರೆ ಗಂಡನ ಸಂದರ್ಶನವನ್ನು ಎಷ್ಟು ಆತುರ ದಿಂದ ಬಯಸಿ, ಸಾಧ್ಯವಾಗದಿದ್ದುದನ್ನು ಸಾಧ್ಯಮಾಡಿಕೊಂಡು, ಸುಖಿಸು ತ್ತಿರುವುದನ್ನು ನೋಡಿ ಸಹಿಸಲಾರೆಯಾ?'

—ಹಂಗಿಸಿ ಹಂಗಿಸಿ ಕೇಳಿದ ಮನಸ್ಸು ಶಾಮುವಿನ ಉದ್ವೇಗವನ್ನು ಭಂಗಿಸಿತು.

'ಹೌದು. ಅದೇ ಸರಿ. ಗಿರಿಜ ಸ್ವರ್ಗಸ್ಥಳಾದ ಸುದ್ದಿ ರಾಜು–ಸುಮಿತ್ರೆ ಯರ ಕಿವಿಗೆ ಬೀಳಬಾರದು. ಅವರ ನೊರೆಹಾಲಿನ ಸುಖದಲ್ಲಿ ಈ ದುಃಖದ ಹುಳಿ ಹಿಂಡಬಾರದು. ಮಮತಾಮೂರ್ತಿಯಾದ ತಾಯಿಗೂ ತಿಳಿಯ ಬಾರದು. ತಿಳಿದರಂತೂ ಆಕೆ ಎಲ್ಲವನ್ನೂ ಬಿಟ್ಟು, ನಿಸ್ತೇಜಳಾಗಿ ಕುಳಿತು ಗೋಳಾಡುತ್ತಾರೆ. ಹೀಗೆ ಮಾಡುವುದರಿಂದ ಯಾರಿಗೆ ಸುಖ? ಅವರೆಲ್ಲರ ನಗೆ ಮುಖವನ್ನು ಅಳುಮುಖವಾಗಿ ಪರಿವರ್ತಿಸುವುದರಲ್ಲಿ ಯಾವ ಲಾಭವಿದೆ? ಈ ದುಃಖವನ್ನೆಲ್ಲಾ ನಾನೇ ಪಡುತ್ತೇನೆ. ಅವರೆಲ್ಲರೂ ನಗುತ್ತಿರಲಿ. ನನ್ನ ಗಿರಿಜೆಗಾಗಿ ನಾನೇ ಕಣ್ಣೀರಿನ ಶ್ರದ್ಧಾಂಜಲಿ ಅರ್ಪಿಸುತ್ತೇನೆ.'

ಶಾಮು ಅಂಗಳದಿಂದ ಹಿಂದಕ್ಕೆ ಮರಳಿದ. ಹೊರಜಗುಲಿಗೆ ಬಂದು ಕುಳಿತು, ಮೊಣಕಾಲಿನ ಮೇಲೆ ತಲೆಯೂರಿ ಯೋಚನಾಮಗ್ನನಾದ.

ಗಿರಿಜೆಯ ಕೊನೆಯ ಗಳಿಗೆಯ ದೃಶ್ಯ ಅವನ ಕಣ್ಮುಂದೆ ಸುಳಿಯುತ್ತಿತ್ತು.

' ನಿಮ್ಮನ್ನು ನೋಡಬೇಕೆಂದು ಎಷ್ಟು ಆಸೆಯಿಟ್ಟುಕೊಂಡಿದ್ದೆ. ಕೊನೆಗೂ ನೀವು ಬಾರದೆ ಹೋದಿರಲ್ಲ ! '

—ಮರುಕ ಹುಟ್ಟುವಂತೆ ಕೇಳುತ್ತಿದ್ದಳು ಗಿರಿಜ.

' ಹಾಡಿಗೆ ಸೋತವರು ಹಣಕ್ಕೆ ಸೋಲಲಿಲ್ಲವಲ್ಲ ! '

—ಗಿರಿಜೆಯ ಆ ಮಾತು ಶಾಮುವನ್ನು ಅಣಕಿಸಿದಂತಾಯಿತು.

' ಹೋಗಲಿ ಬಿಡಿ. ನಾನು ಹೋದರೆ ನಿಮಗೆ ಇನ್ನೊಬ್ಬಳು ಬರುತ್ತಾಳೆ; ಸುಖವಾಗಿರಬಹುದು.'

—ಆ ಧ್ವನಿ, ಆ ಅಭಿನಯ ತನ್ನ ಕರುಳನ್ನೇ ಕೇಳುವಂತಾಯಿತು ಶಾಮುವಿಗೆ.

ಅವಳ ವೀಣೆಯ ನೆನಪಾದಾಗ—

' ನೋಡಿ, ಅದೋ ಅಲ್ಲಿದೆ ನನ್ನ ವೀಣೆ. ನಿಮ್ಮ ಹೊಸ ಹೆಂಡತಿಗೆ ಅದೇ ನನ್ನ ಪ್ರೀತಿಯ ಉಡುಗೊರೆ.'

' ಗಿರಿಜಾ ಗಿರಿಜಾ, ಹೀಗೆಲ್ಲಾ ಹೇಳಬೇಡ ಗಿರಿಜಾ. ನಿನ್ನ ಒಂದೊಂದು ಮಾತೂ ನನ್ನ ಕರುಳಿನ ಮೇಲೆ ಕೆಂಡದಂತೆ ಬಿದ್ದು ಸುಡುತ್ತಿದೆ.'

—ಶಾಮು ಮನಸ್ಸಿನಲ್ಲೇ ಅಂದುಕೊಂಡ.

' ಹ್ಞಂ. ಹೀಗೆಯೇ ಇದ್ದರೆ ನಿಮಗೂ ಸುಖವಿಲ್ಲ, ನನಗೂ ಸುಖವಿಲ್ಲ. ನಾನಿನ್ನು ಹೋಗುತ್ತೇನೆ.'

' ನಿಲ್ಲು ಗಿರಿಜ....ನಿಲ್ಲು....ನಿಲ್ಲು '

' ಹೊತ್ತು ಮಾಡಿದರೆ ಅಲ್ಲಿ ಕರೆಯುತ್ತಿರುವ ಅಮ್ಮ ಸಿಟ್ಟುಮಾಡಿಕೊಳ್ಳುತ್ತಾಳೆ.'

' ನನಗಿಂತ ನಿಮ್ಮ ಅಮ್ಮನೇ ಹೆಚ್ಚೆ ಗಿರಿಜ ? '

' ಅಮ್ಮನಿಗಿಂತ ನನ್ನ ದೇವರು ಯಾವುದರಲ್ಲಿ ಕಡಿಮೆ ? '

' ಹಾಗಾದರೆ ನಿಲ್ಲು ಗಿರಿಜ.'

‘ ಹೊತ್ತಾಯಿತು ರಾಜ.’

‘ ಕೊನೆಯ ಬಾರಿಗೆ ಒಂದು ಮುತ್ತು ಬೇಡವೆ ಚಿನ್ನ ? ’

‘ ಅದನ್ನು ಆ ಕಾಗದದಲ್ಲಿಯೇ ಬರೆದಿರುವಿರಲ್ಲ ದೊರೆ.’

—ಗಿರಿಜ ಗಾಳಿಯಂತೆ ಮೋಡಗಳ ಮೇಲೆ ತೇಲಿಹೋಗುತ್ತಿದ್ದಳು.

‘ ಗಿರಿಜಾ ಗಿರಿಜಾ, ಕೊನೆಯ ಬಾರಿಗೆ ಒಂದು ಹಾಡನ್ನಾದರೂ ಹೇಳು ಗಿರಿಜ ’

ದೂರದೂರಕ್ಕೆ ಹೋಗುತ್ತಿದ್ದ ಗಿರಿಜ ಮೆಲ್ಲಮೆಲ್ಲನೆ ಹಾಡತೊಡಗಿದ್ದಳು—

‘ ಶಾಮ ಸುಂದರನ ಕಂಡು ಮಾರುಹೋದಳು ರಾಧೆ
ಧಾರೆಧಾರೆಯಾಗಿ ಹರಿಯಿತು ಆನಂದದ ಪನ್ನೀರು ’

ಗಿರಿಜ, ದೂರ - ಬಲುದೂರ ಹೊರಟೇ ಹೋದಳು. ಶಾಮುವಿನ ಕಣ್ಣಿಗೆ ಕಾಣಿಸದಷ್ಟು ದೂರದಲ್ಲಿ ಹೋಗುತ್ತಿದ್ದರೂ ಅವಳ ಹಾಡು ಅವನ ಕಿವಿಯಲ್ಲಿ ಗುಂಯ್ ಕೊಡುತ್ತಿತ್ತು. ಆನಂದದ ಪನ್ನೀರಿನ ಬದಲು ಅವನ ನಯನಗಳಿಂದ ದುಃಖದ ಕಣ್ಣೀರು ಧಾರಾವಾಹಿಯಾಗಿ ಹರಿದುಬರುತ್ತಿತ್ತು.

“ ಇದ್ಯಾಕೊ ಶಾಮು, ಹೀಗೆ ಕುಳಿತಿದ್ದೀಯ ? ”

ರಾಜುವಿನೊಡನೆ ಬಂದ ನಾಣಿ ಕೇಳಿದಾಗ, ಭಾವನಾಲೋಕದಲ್ಲಿದ್ದ ಶಾಮುವಿಗೆ ಎಚ್ಚರವಾಯಿತು.

“ ಸುಮ್ಮನೆ ನಾಣಿ, ಬೇಜಾರಾಯ್ತು ”

—ಬಲವಂತದಿಂದ ನಗುತ್ತಾ ನುಡಿದ ಶಾಮು.

“ ಕತೆ - ಗಿತೆ ಬರೆಯುವುದಕ್ಕೆ ಯೋಚನೆ ಮಾಡುತ್ತಿದ್ದೀಯಾ - ಹೇಗೆ ? ”

“ ಹಾಗೇನೂ ಇಲ್ಲಪ್ಪ ”

‘ ತನ್ನದೇ ಒಂದು ಕತೆಯಾಗಿರುವಾಗ, ನಾಣಿಯದೇ ಒಂದು ಕತೆಯಾಗಿರುವಾಗ, ಬೇರೊಂದು ಕತೆಯ ವಿಷಯವನ್ನು ಯೋಚಿಸುವ ಪ್ರಮೇಯವಾದರೂ ಏನು ? ’

—ಎಂದಿತು ಶಾಮುವಿನ ಮನಸ್ಸು.

ಪುಟ್ಟಮಕ್ಕಳಿಲ್ಲದ ಮನೆಯಲ್ಲಿ, ಸುಮಿತ್ರೆ, ರಾಜು, ನಾಣಿಯರೇ ಮಕ್ಕಳಾಗಿದ್ದರು. ಅವರ ವರ್ಣರಂಜಿತ ಸಂತೋಷ-ಸಂಭ್ರಮಗಳೇ ನಾಗಪ್ಪನವರ ಮನೆಯ ಹಬ್ಬದ ವಾತಾವರಣಕ್ಕೆ ವಿಶೇಷ ಕಳೆಯಿತ್ತಿದ್ದಿತು.

ವೆಂಕಮ್ಮನವರು ಹಬ್ಬದ ಔತಣಕ್ಕೆ ತಾವು ಬಹಳ ದಿನಗಳಿಂದಲೂ ಯೋಚಿಸಿದ್ದಂತೆ ಚಿರೋಟಿಯನ್ನೇ ಮಾಡಿದ್ದರು. ಎಲ್ಲರೂ ಊಟಕ್ಕೆ ಕುಳಿತಾಗ—

"ಇದ್ಯಾಕೋ ಮಗು, ನೀನು ಏನೂ ತಿನ್ನಲೇ ಇಲ್ಲ. ಚಿರೋಟಿ ಅಂದರೆ ನಿನಗೆ ತುಂಬಾ ಆಸೆಯಲ್ಲವೇ ?'

—ಎಂದು ಶಾಮುವಿನ ಕಡೆಗೆ ನೋಡುತ್ತಾ ಕೇಳಿದರು ಬಡಿಸುತ್ತಿದ್ದ ವೆಂಕಮ್ಮ.

ಆದರೆ, ಶಾಮುವಿಗೆ ಚಿರೋಟಿ ಬೇಕಿತ್ತೆ? ಗಿರಿಜೆಯ ಶವ ಜಯರಾಯರ ಮನೆಯಲ್ಲಿ ಬಿದ್ದಿರುವಾಗ, ತಾನು ಚಿರೋಟಿ ತಿನ್ನುತ್ತಾ ಸಂತೋಷಿಸಬೇಕೆ?

ಮದುವೆಗೆ ಮುನ್ನ ಗೆಳೆಯರೊಡನೆ ಹೋಟಲಿನಲ್ಲಿ ಸಿಹಿತಿಂಡಿ ತಿಂದಾಗ—

'ಚಿರೋಟಿ-ಹಾಲು ತೆಗೆದುಕೊಂಡಿದ್ದರೆ ಚೆನಾಗಿತ್ತು ಶಾಮು'

—ಎಂದಿದ್ದ ಅನಂತ.

'ಅವನ ಮದುವೆಯಲ್ಲಿ ಅದನ್ನೇ ಮಾಡಿಸುತ್ತಾನೆ ಬಾ'

—ಎಂದು ಲಕ್ಷ್ಮಣ ಹೇಳಿದ್ದ.

ಆದರೆ, ಮದುವೆಯಲ್ಲಿ ಚಿರೋಟಿ ಮಾಡದೆ ಲಾಡುವನ್ನೇ ಮಾಡಿದ್ದರು.

'ಹಾಗಾದರೆ ಚಿರೋಟಿ ಯಾವಾಗ ಮಾಡಿಸುತ್ತೀಯೋ ?'

—ಎಂದು ಲಕ್ಷ್ಮಣ ನಗುತ್ತಾ ಕೇಳಿದಾಗ,

'ಅವನ ಪ್ರಸ್ತಕ್ಕೆ ಮಾಡಿಸುತ್ತಾನೆ!'

—ಎಂದು ಅನಂತು ನಗೆಯಾಡಿದ್ದ.

ಆದರೆ, ಆ ದಿನ ಬರುವ ಮುನ್ನವೇ ಚಿರೋಟಿ ಮಾಡಿದ್ದರು ವೆಂಕಮ್ಮ.

ಈಗ ಅದನ್ನು ತಿನ್ನಲು ಬೆಂಗಳೂರಿನಿಂದ ಅನಂತು – ಲಕ್ಷ್ಮಣರು ಬ...ರೆ?

...ಪರಲೋಕಕ್ಕೆ ತೆರಳಿದ ಗಿರಿಜೆ ಹಿಂತಿರುಗಿ ಬರುವಳೆ?

ಅವರನ್ನೆಲ್ಲಾ ಬಿಟ್ಟು ತಾನು ಹೇಗೆ ತಿನ್ನುವುದು ?

ತಾನು ಚಿರೋಟಿ ತಿನ್ನುವುದು ಗಿರಿಜೆ ಸ್ವರ್ಗಸ್ಥಳಾದ ಸಂತೋಷಕ್ಕಾಗಿಯೆ ?

" ಮಗೂ, ಮಜ್ಜಿಗೆ ಹಾಕಲೇಪ್ಪ ? "

—ತಾಯಿಯ ಮೃದುಧ್ವನಿ ಮಗನನ್ನು ಎಚ್ಚರಿಸಿತು.

" ಹ್ಞಂ. ಹಾಕಮ್ಮ "

—ಎಂದ ಶಾಮು.

" ಭಾವನಿಗೆ ಇನ್ನೆರಡು ಚಿರೋಟಿ ಹಾಕಮ್ಮ "

—ಎಂದ ನಾಣಿ.

ಲಲಿತೆಯೂ ಸುಮಿತ್ರೆಯೂ ವೆಂಕಮ್ಮನವರಿಗೆ ಕಣ್ಣುಸನ್ನೆ ಮಾಡಿ, ಪುಸಲಾಯಿಸಿದರು. ರಾಜುವಿನ ಎಲೆಗೆ ಇನ್ನೆರಡು ಚಿರೋಟಿಗಳು ಉರುಳಿದವು!

" ಚಿಕ್ಕಣ್ಣಯ್ಯ ಸರಿಯಾಗಿ ಊಟಾನೇ ಮಾಡಲಿಲ್ಲವಲ್ಲಮ್ಮ "

ಸುಮಿತ್ರೆಯ ಮಾತು ಲಲಿತೆಯ ದೃಷ್ಟಿಯನ್ನೂ ಶಾಮುವಿನ ಎಲೆಯ ಕಡೆಗೆ ಸೆಳೆಯಿತು. ಅವನ ಪರಿಸ್ಥಿತಿಯನ್ನು ಆಕೆ ತನ್ನ ತಿಳಿವಿಗೆ ನಿಲುಕುವಷ್ಟು ಊಹಿಸಿಕೊಂಡಳು. ಆದರೆ ಸ್ವಲ್ಪ ದೂರದಲ್ಲಿ ಕುಳಿತಿದ್ದ ನಾಗಪ್ಪನವರು ಮಾತ್ರ ತಲೆತಗ್ಗಿಸಿಕೊಂಡು ಚಿರೋಟಿಯ ಮೇಲೆ ಚಿರೋಟಿ ಇಳಿಸುತ್ತಿದ್ದರು!

ರಾತ್ರಿ ಹಣತೆಯ ಸಾಲು ಮನೆಯ ಒಳಹೊರ ಹೊಸಿಲುಗಳ ಮೇಲೆ ಬೆಳಗಿತು. ಬಾಗಿಲ ಹೊರಗಿನ ಪುಟ್ಟಪುಟ್ಟ ಮಾಡುಗಳಲ್ಲಿ ಪಿಳ್ಳಾರಿಯ ಮೇಲೆ ಕುಳಿತ ಹಣತೆ ಬಹು ದೂರದವರೆಗೂ ಬೆಳಕುಬೀರುತ್ತಿತ್ತು. ಜಗುಲಿಯ ಅಂಚು ದೀಪದ ತೋರಣ ಕಟ್ಟಿಕೊಂಡು ವಿಜೃಂಭಿಸಿತು. ರಾಜು–ಸುಮಿತ್ರೆಯರೊಡನೆ ನಾಣಿಯೂ ಮತಾಪು ಹೂಬಾಣಗಳನ್ನು ಹಚ್ಚುತ್ತಾ ಕೇಕೆ ಹಾಕಿ ನಗುತ್ತಿದ್ದ. ತನ್ನ ಗಂಡ ಇಂದಿನ ದಿನವಾದರೂ ಸಂತೋಷವಾಗಿರುವರಲ್ಲ – ಎಂದು ಲಲಿತೆ ಆನಂದಿಸಿದಳು. ಆದರೆ ಶಾಮು....?

ಮನೆಯ ತುಂಬ ಬೆಳಕು ತುಂಬಿದ್ದರೂ ಅವನ ಮನಸ್ಸಿನ ತುಂಬ ಮಾತ್ರ ಕತ್ತಲೆ ತುಂಬಿತ್ತು. ಮನೆಮಂದಿಯೆಲ್ಲ ನಗುತ್ತಿದ್ದರೂ ಅವನ

ಹೃದಯ ಅಳುತ್ತಿತ್ತು. ಕವಿ ಸಹಜಭಾವನಾಲೋಕದಲ್ಲಿ ಕಣ್ಣೀರಿನ ಹಾಡು ಸೃಷ್ಟಿಯಾಗುತ್ತಿತ್ತು—

" ಮನೆಮನೆಯಲ್ಲಿ ದೀಪಾವಳಿ
ಮನಸಿಗೆ ಕವಿದಿದೆ ತಿಮಿರಾವಳಿ........"

ಆಗ ಗಿರಿಜೆಯ ಧ್ವನಿ ಕೇಳಿಸಿದಂತಾಗುತ್ತಿತ್ತು—

" ಶಾಮ ಸುಂದರನ ಕಂಡು ಮಾರುಹೋದಳು ರಾಧೆ |
ಧಾರೆಧಾರೆಯಾಗಿ ಹರಿಯಿತು ಆನಂದದ ಪನ್ನೀರು || "

ರಾತ್ರಿಯೆಲ್ಲ ನಿದ್ರೆಯಿಲ್ಲದೆ, ಶಾಮು ಅತ್ತು ಅತ್ತು ತಲೆದಿಂಬನ್ನೆಲ್ಲಾ ತೋಯಿಸಿದ. ಒಂದು ಹೊತ್ತಿನಲ್ಲಿ ಎದ್ದಿದ್ದ ವೆಂಕಮ್ಮ ಅದನ್ನು ಸೂಕ್ಷ್ಮವಾಗಿ ಗಮನಿಸಿದ್ದರು.

" ಯಾಕೆ ಮಗು, ನಿದ್ದೆ ಬರಲಿಲ್ಲವೆ ? "

" ಬರುತ್ತಿದೆಯಮ್ಮ....ತುಂಬ ನಿದ್ದೆ...."

ಶಾಮು ಮುಸುಕೆಳೆದುಕೊಂಡು ಮುಖ ಮುಚ್ಚಿಕೊಂಡ.

ಮರುದಿನ ಬೆಳಗ್ಗೆ ರಾಜು ಬೆಂಗಳೂರಿಗೆ ಹೊರಟುನಿಂತ. ಸ್ವಲ ದೂರದಲ್ಲಿ ನಿಂತಿದ್ದ ಸುಮಿತ್ರೆ ಮುಖ ಬಾಡಿಸಿಕೊಂಡಿದ್ದಳು.

" ಇಷ್ಟುಬೇಗ ಹೊರಡಬೇಕೇ ? "

—ಅದು ಅವನ ಅತ್ತೆ ವೆಂಕಮ್ಮನವರ ಪ್ರಶ್ನೆ. ನಾಗಪ್ಪನವರಂತೂ ಅಳಿಯನನ್ನು ಹೆಚ್ಚು ಮಾತನಾಡಿಸುವ ಹವ್ಯಾಸಕ್ಕೇ ಹೋಗಿರಲಿಲ್ಲ. ಎಲ್ಲಕ್ಕೂ ವೆಂಕಮ್ಮನವರೇ ಸೊಂಟಕಟ್ಟಿ ನಿಂತಿದ್ದರು.

" ಹೆಚ್ಚುದಿನ ಇರಲು ನನಗೆ ರಜ ಇಲ್ಲ. ದೀಪಾವಳಿಗೆ ಕೊಟ್ಟಿದ್ದ ರಜ ಮುಗಿದುಹೋಯಿತು. ನನ್ನ ಸ್ವಂತ ರಜವನ್ನೆಲ್ಲ ಉಪಯೋಗಿಸಿಕೊಂಡು ಬಿಟ್ಟಿದ್ದೇನೆ "

" ಇನ್ನೊಂದು ದಿನವಾದರೂ ಇದ್ದು ಬಿಟ್ಟು ಹೋಗಿ "

" ಆಗುವುದಿಲ್ಲ "

" ಸುಮಿತ್ರ, ನೀನಾದರೂ ಹೇಳಿ ನಿಲ್ಲಿಸಿಕೊಳ್ಳಮ್ಮ "

ವೆಂಕಮ್ಮನವರೂ ರಾಜುವೂ ಅವಳ ಕಡೆಗೆ ನೋಡಿದರು.

" ನಾನೂ ಎಷ್ಟೆಷ್ಟೋ ಹೇಳಿದೆ. ಆದರೂ ಹೋಗಲೇಬೇಕೆಂದು ಹಟಹಿಡಿದಿದ್ದಾರೆ – ನೋಡಮ್ಮ "

—ಸುಮಿತ್ರೆಗೆ ಇನ್ನೇನು ಅಳುಬರುವುದರಲ್ಲಿತ್ತು.

" ಈ ಸಾರಿ ನಾನು ನಿಲ್ಲುವುದು ಸಾಧ್ಯವೇ ಇಲ್ಲ. ಇನ್ನೊಂದೆರಡು ವಾರಗಳ ನಂತರ ಒಂದು ಸಾರಿ ಬಂದುಹೋಗುತ್ತೇನೆ "

—ಎನ್ನುತ್ತಾ ರಾಜು ನಾಗಪ್ಪನವರ ಬಳಿಗೆ ಬಂದು ' ಹೋಗಿ ಬರುತ್ತೇನೆ 'ಂದು ಹೇಳಿ, ನಾಣಿಯೊಡನೆ ಹೊರಹೊರಟ.

" ಸ್ಟೇಷನ್‌ವರೆಗೂ ಬರ್ತೀಯೇನೋ ಶಾಮು ? "

" ಇಲ್ಲ ನಾಣಿ. ನೀನೇ ಹೋಗಿಬಾ."

" ಯಾಕೋ, ಒಂದು ತರಹಾ ಇದ್ದೀಯೆ ? "

" ಏನೂ ಇಲ್ಲಪ್ಪ. ನೀನು ಹೋಗಿ ಭಾವನನ್ನು ಹುಷಾರಾಗಿ ರೈಲು ಹತ್ತಿಸು "

—ಎಂದ ಶಾಮು.

ಅವರು ಹೋದನಂತರ ಶಾಮು ಅದೇ ಜಗುಲಿಯ ತನ್ನ ಸ್ವಸ್ಥಾನವನ್ನು ಅಲಂಕರಿಸಿದ. ಆದರೆ ಅವನ ಮನಸ್ಸು ಮೈಸೂರಿಗೆ ಓಡಿ ಹೋಗಿತ್ತು........

....ದೀಪಾವಳಿಗೆ ಬಂದ ಅಳಿಯ ಹಿಂತಿರುಗಲು ಸಿದ್ಧನಾಗಿ ನಿಂತಿದ್ದ.

ಅತ್ತೆ ಜಾನಕಮ್ಮನವರು—

" ಇನ್ನೆರಡು ದಿನ ಇದ್ದು ಹೋದರೆ ನಮಗೆಲ್ಲ ತುಂಬ ಸಂತೋಷವಾಗುತ್ತದೆ "

—ಎಂದರು ವಾತ್ಸಲ್ಯದಿಂದ.

ಸ್ವಲ್ಪದೂರದಲ್ಲಿ, ಬಾಗಿಲ ಮರೆಯಲ್ಲಿ ನಿಂತಿದ್ದ ಗಿರಿಜ ಎವೆಯಿಕ್ಕದೆ ತನ್ನನ್ನೇ ನೋಡುತ್ತಿದ್ದಳು.

ಅವಳನ್ನು ಮಾತನಾಡಿಸಬೇಕೆಂದು ತನಗೆ ಆಸೆ. ಆದರೆ ಜಾನಕಮ್ಮನವರು ಬಳಿಯಲ್ಲಿಯೇ ನಿಂತಿದ್ದಾರೆ. ಜಯರಾಯರೂ ಹತ್ತಿರದಲ್ಲಿಯೇ ನಿಂತು ಕನ್ನಡಕದ ಧೂಳನ್ನು ಉಜ್ಜುತ್ತಿದ್ದಾರೆ. ಹಿರಿಯರೆದುರಿನಲ್ಲಿ ಇನಿಯಳನ್ನು ಮಾತನಾಡಿಸುವುದು ಹೇಗೆ ?

"ಹಿರಿಯರಿರುವರೆಂದು ನಾಚಿ ನುಡಿಯಲಾರದವಳ ಕೊರಗು,
ತೆರೆದ ತುಟಿಯು ನಡುಕ, ಇನಿಸು ಬೆವತು ಕೆಂಪಗಾದಕೆನ್ನೆ,
ನೀರ ತೆರೆಯ ಹಿಂದೆ ಕಣ್ಣು ಬೀರುತಿರುವ ಬಯಕೆನೋಟ,—
ಊರಿಗಿದನು ನೋಡಿ ನೋಡಿ ಹೊರಡಲಾರೆ, ನಿಲ್ಲಲಾರೆ!"

—ಕವಿ 'ತೀ. ನಂ. ಶ್ರೀ' ಬರೆದ ಪ್ರೇಮಗೀತೆಯು ನೆನಪಾಯಿತು. ಹೊರಟುನಿಂತವನು ಏನೋ ನೆನಪುಮಾಡಿಕೊಂಡವನಂತೆ ತನ್ನ ಕೋಣೆಯ ಕಡೆಗೆ ಹೆಜ್ಜೆ ಹಾಕಿದ ಶಾಮು.

ಗಿರಿಜೆಯು ಹಿಂಬಾಲಿಸಿದಳು.

"ಏನು ಮರೆತುಬಿಟ್ಟದ್ದಿರಿ?"

"ನಿನ್ನನ್ನು ಮಾತನಾಡಿಸುವುದನ್ನೇ ಮರೆತಿದ್ದೆ ಗಿರಿಜ!"

"ಅವಳ ಅಂಗಾಂಗಗಳೆಲ್ಲವೂ ನಾಚಿಕೆ ನಟಿಸಿದವು.

"ನಾನು ಹೋಗಿಬರಲೆ ಗಿರಿಜ?"

"......................."

"ಮಾತನಾಡೆ ಮಳ್ಳಿ."

"ಬೇಡವೆಂದು ತಡೆದರೆ ಅಪಶಕುನ; 'ಹೋಗಿ' ಎಂದರೆ ಪ್ರೀತಿಯಿಲ್ಲ ವೆನ್ನುತ್ತೀರಿ!....ನಾನೇನು ಹೇಳಲಿ?"

"ಸುಭಾಷಿತ-ಅಮರು ಶತಕಗಳನ್ನೆಲ್ಲಾ ಓದಿರುವ ಹಾಗೆ ಕಾಣುತ್ತದೆ!... ಹೌದೇ ಚಿನ್ನಾ?"

—ಶಾಮು ಅವಳ ಭುಜಗಳನ್ನು ಹಿಡಿದು, ಮುಖದ ಹತ್ತಿರ ಮುಖವಿಟ್ಟು ಕೇಳಿದ:

"ದೀವಳಿಗೆಗೆ ಬಂದವನಿಗೆ ಉಡುಗೊರೆ ಕೊಡದೆ ಹಾಗೆಯೇ ಕಳುಹಿಸುತ್ತೀಯಾ?"

"ನನ್ನ ಸ್ವಾಮಿಗೆ ಏನು ಕೊಡಲಿ?"

"ಪ್ರೀತಿಯಿಂದ ಏನು ಕೊಟ್ಟರೂ ಸರಿಯೆ—ಅದೇ ತೃಪ್ತಿ."

"ನನ್ನ ಸರ್ವಸ್ವವೂ ನಿಮ್ಮದೇ ಅಲ್ಲವೇ?"

"ಹಾಗಾದರೆ ಏನು ಬೇಕಾದರೂ ತೆಗೆದುಕೊಳ್ಳಲೆ ಗಿರಿಜಾ?"

"ನನ್ನ ದೇವರಿಗೆ ಎಂದಾದರೂ ಅಡ್ಡಿ ಮಾಡಿದ್ದೇನೆಯೇ?"

—ಸುಮಧುರ ಸಂಗೀತದಂತಿತ್ತು ಆ ವಾಣಿ.

ಶಾಮು ಗಿರಿಜೆಯನ್ನು ಆಲಂಗಿಸಲು ಮುಂಬರಿದ.

ಆದುವರೆಗೂ ಪ್ರತಿಮೆಯಂತೆ ನಿಂತಿದ್ದ ಸೊಬಗಿನ ಖಣಿ ಗಿರಿಜ ಇದ್ದಕ್ಕಿದ್ದಂತೆ ಮಾಯವಾದಳು........

" ಗಿರಿಜಾ....ಗಿರಿಜಾ...."

ಉತ್ತರಿಸುವವರಾರು ?

ಭ್ರಮೆಯ ಚಿತ್ರ ಭ್ರಮರದಂತೆ ಹಾರಿಹೋಗಿತ್ತು !

" ಚಿಕ್ಕಣ್ಣಯ್ಯ, ಅಮ್ಮ ಕರೀತಾಳೆ."

—ಸುಮಿತ್ರೆ ಎಚ್ಚರಿಸಿದಳು.

ಹೊರಜಗುಲಿಯ ಮೇಲೆ ಕುಳಿತಿದ್ದ ಶಾಮು ಭಾರವಾದ ಮನಸ್ಸಿನಿಂದ ಎದ್ದು ಒಳಗೆ ಹೋದ. ಅವನ ಕಾಂತಿವಿಹೀನವಾದ ಮುಖ, ಕಣ್ಣೀರು ಹರಿಹರಿದು ಆಳವಾಗಿದ್ದ ಕಣ್ಣುಗಳು ವೆಂಕಮ್ಮನನ್ನು ಗಾಬರಿಪಡಿಸಿದವು.

" ಮಗು, ನಿನ್ನನ್ನ ನೋಡಿದರೆ ನನಗೆ ತುಂಬ ಸಂಕಟವಾಗುತ್ತದಪ್ಪ."

ಶಾಮು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ.

" ಯಾಕೆ ಶಾಮು, ಏನಾಯಿತು ? "

" ಏನೂ ಇಲ್ಲಮ್ಮ "

ಶಾಮುವಿನ ಕಂಠ ಗದ್ಗದವಾಗಿತ್ತು. ಅದನ್ನು ಗಮನಿಸಿದ ಸುಮಿತ್ರ—

" ಚಿಕ್ಕಣ್ಣಯ್ಯ ಅಳ್ತಾ ಇದಾನಮ್ಮ "

—ಎಂದಳು ತಾಯಿಯ ಕಡೆಗೆ ತಿರುಗಿ.

ಮಗನ ಮುಖವನ್ನು ಮರುಕದಿಂದ ವೀಕ್ಷಿಸಿ, ಅವನ ಬಳಿಯಲ್ಲಿಯೇ ಕುಳಿತು—

" ಶಾಮು....ಶಾಮು...."

—ಎಂದರು ವೆಂಕಮ್ಮ ಅವನ ಭುಜವನ್ನಲುಗಿಸುತ್ತಾ.

ಎರಡು ಕ್ಷಣಗಳ ಬಳಿಕ—

" ಅಮ್ಮ, ಗಿರಿಜ....ಗಿರಿಜ...."

—ಎಂದು, ಮುಂದೆ ಮಾತನಾಡಲಾಗದೆ ಅಷ್ಟಕ್ಕೇ ನಿಲ್ಲಿಸಿದ ಶಾಮು.

" ಏನಾಯಿತಪ್ಪ ? ಗಿರಿಜ ಏನು ಮಾಡಿದಳು ? "

" ಏನೂ ಆಗಲಿಲ್ಲಮ್ಮ. ಗಿರಿಜ...."

" ಹೇಳು ಮಗು, ಅವಳಿಗೇನಾಯಿತಪ್ಪ ? "

" ಗಿರಿಜ ಸತ್ತು ಹೋದಳಮ್ಮ."

—ಆ ಮಾತನ್ನು ವೆಂಕಮ್ಮನವರು ನಂಬಲಿಲ್ಲ.

" ನೋಡಮ್ಮ, ನಿನ್ನೆಯೇ ಟೆಲಿಗ್ರಾಂ ಬಂದಿತು "

—ಎಂದು ಶಾಮು ತಂತಿಯ ಕಾಗದವನ್ನು ತೋರಿಸಿ ವಿವರಿಸಿದಾಗ, ಅವರು ಒಮ್ಮೆಗೇ ಕುಗ್ಗಿ ಕುಸಿದರು.

ಸುಮಿತ್ರೆ–ಲಲಿತೆಯರಿಗೂ ಸುದ್ದಿ ತಿಳಿದಾಗ, ಅವರ ಮುಖಗಳೂ ಕಂಗೆಟ್ಟವು. ಎಲ್ಲರ ಕಣ್ಣುಗಳಲ್ಲಿಯೂ ಕರೆಸಿಕೊಳ್ಳದೆಯೇ ಗಂಗೆ ಹರಿದು ಬಂದಳು.

ಸಂಗತಿ ನಾಗಪ್ಪನವರಿಗೂ ತಿಳಿಯಿತು. ಆದರೆ ಅವರ ಕಲ್ಲುಮನಸ್ಸು ಕಠೋರವಾಗಿ ನುಡಿಸಿತು—

" ಅವಳು ಹೋದರೆ,'ಪೀಡೆ ಕಳೆಯಿತು. ಇನ್ನೊಂದು ಸೊಗಸಾದ ಹುಡುಗಿಯನ್ನು ತಂದು ಕಟ್ಟುತ್ತೇನೆ. ಕೈತುಂಬ ವರದಕ್ಷಿಣೆ ತರುವ ಲಾವಣ್ಯ ಲಕ್ಷ್ಮಿಯನ್ನು ಹುಡುಕಿ ನನ್ನ ಮಗನಿಗೆ ಮದುವೆಮಾಡುತ್ತೇನೆ "

—ತಂದೆಯ ಮಾತನ್ನು ಕೇಳಿದ ಶಾಮು ಕಿವಿ ಮುಚ್ಚಿಕೊಂಡ.

ಹಿಂದಿನ ದಿನ, ದೀಪಾವಳಿಯ ಆನಂದಕೇಳಿಯಿಂದ ನಗೆಯ ಸುಧೆಯಲ್ಲಿ ಮಿಂದಿದ್ದ ಮನೆ ಅಂದು ಶೋಕಾವಳಿಯ ತಿಮಿರಾವರಣದಲ್ಲಿ ಮುಳುಗಿ, ಕಣ್ಣೀರಿನ ಕಡಲಾಯಿತು !

೧೧

ಶಾಮುವಿಗೆ ಯಾವ ಕೆಲಸ ಮಾಡುವುದಕ್ಕೂ ಉತ್ಸಾಹವೇ ಇರಲಿಲ್ಲ. ಪತ್ರಿಕಾಕಚೇರಿಗೆ ಬರುತ್ತಿದ್ದ ಟೆಲಿಪ್ರಿಂಟರ್ ಸುದ್ದಿಗಳನ್ನು, ಕೇವಲ ಯಂತ್ರದಂತೆ, ಕನ್ನಡಕ್ಕೆ ಪರಿವರ್ತಿಸುವ ಕೆಲಸವೂ ಬೇಸರವಾಗಿತ್ತು. ಊಟ ತಿಂಡಿಗಳ ಕಡೆಗೆ ಗಮನ ಕಡಿಮೆಯಾಗಿತ್ತು. ಅವನ ಪರಿಸ್ಥಿತಿಯನ್ನು ನೋಡಿ ಸಂಕಟಪಡುತ್ತಿದ್ದ ಅನಂತು–ಲಕ್ಷ್ಮಣರು ಬಗೆಬಗೆಯ ಸಮಾಧಾನ ಹೇಳಿದ್ದರು. ಆದರೆ ಗಿರಿಜೆಯ ನೆನಪು ಶಾಮುವಿನ ಮನಃಪಟಲದಿಂದ ಅಳಿಸಿ ಹೋಗಿರಲಿಲ್ಲ. ಅವಳ ಚಿತ್ರ ಕಣ್ಮುಂದೆ ನಿಂತಾಗ, ಅವಳ ಪಕ್ಕದಲ್ಲಿ ವರದಕ್ಷಿಣೆಯ ಭೂತವೊಂದು ಶಾಮುವನ್ನು ಅಣಕಿಸಿದಂತಾಗುತ್ತಿತ್ತು.

ಒಂದು ದಿನ, ಅನಂತು–ಲಕ್ಷ್ಮಣರು ಶಾಮುವಿನ ಕೋಣೆಯಲ್ಲಿ ಕುಳಿತು ಮಾತಿಗೆ ತೊಡಗಿದ್ದರು. ಅದು ಶಾಮುವಿಗೆ ಸಮಾಧಾನದ ಮಾತು—

" ಹೋದ ಜೀವ ಮರಳಿ ಬರುವುದೇ ಶಾಮು ? "

" ಅದೊಂದೇ ಜೀವ ಹೋಗಿಲ್ಲ ಲಕ್ಷ್ಮಣ. ಅದು ನನ್ನ ಮನಸ್ಸನ್ನೂ ಜೊತೆಯಲ್ಲಿ ಸೆಳೆದುಕೊಂಡು ಹೋಗಿದೆ "

" ಎಂದಿದ್ದರೂ ಒಂದು ದಿನ ಹೋಗಲೇಬೇಕಾಗಿತ್ತು. ಆದರೆ ನಿರೀಕ್ಷೆಗೆ ಸಿಲುಕದಷ್ಟು ಬೇಗನೆ ಹೋಯಿತು ! "

" ಅದು ವೇದಾಂತ ಅನಂತು "

—ಎಂದ ಶಾಮು ನಿರುದ್ವಿಗ್ನನಾಗಿ.

ಕ್ಷಣಕಾಲ ಮೌನವಾವರಿಸಿತು.

ಬಳಿಕ ಲಕ್ಷ್ಮಣ ಹೇಳಿದ—

" ಶಾಮು, ಹೀಗೆಯೇ ದುಃಖಿಸುತ್ತಾ ದಿನಗಟ್ಟಲೆ ಕುಳಿತರೆ ಏನು ಪ್ರಯೋಜನ ? "

"ನಾನಿನ್ನೇನು ಮಾಡಬೇಕೆನ್ನುತ್ತೀ ಲಕ್ಷ್ಮಣ?"

"ಪರಿಸ್ಥಿತಿಗೆ ಪ್ರಚೋದಕವಾಗಿರುವ ಕಾರಣವನ್ನು ಹುಡುಕಬೇಕು."

"ಅದು ನಿನಗೆ ಗೊತ್ತಿಲ್ಲವೆ ಅನಂತು?"

"ಗಿರಿಜೆಯ ಪ್ರಾಣಹರಣವೆಂದು ಗೊತ್ತಿದೆ ಶಾಮು. ಆದರೆ ಆಕೆಗೆ ಅಂತಹ ಸ್ಥಿತಿ ಏಕೆ ಒದಗಿತು ಎಂದು ವಿಚಾರಿಸಬೇಡವೆ?"

—ಅದು ಅನಂತುವಿನ ಪ್ರಶ್ನೆ.

"ವರದಕ್ಷಿಣೆಯ ವ್ಯಾಮೋಹವೇ ಮುಖ್ಯ ಕಾರಣವೆಂದು ಸ್ಪಷ್ಟವಾಗ ಲಿಲ್ಲವೆ?"

—ಎಂದ ಶಾಮು.

ಮತ್ತೆ, ಮೂವರೂ ತುಸುಹೊತ್ತು ಮೌನವಾಂತರು.

ಶಾಮು ತನ್ನ ಮೇಜಿನ ಪೆಟ್ಟಿಗೆಯನ್ನೆಳೆದು ಒಂದು ಲಕೋಟೆಯನ್ನು ತೆಗೆದು ಲಕ್ಷ್ಮಣನ ಕೈಯ್ಯಲ್ಲಿಟ್ಟ.

"ಏನಿದು?"

"ಗಿರಿಜೆಯ ಕಾಗದ"

"ಯಾವಾಗ ಬಂದಿತು?"

"ಅವಳು ಸತ್ತಮೇಲೆ."

ಶಾಮುವಿನ ಮಾತು ಕೇಳಿ ಅನಂತು–ಲಕ್ಷ್ಮಣರು ಪರಸ್ಪರ ಮುಖ ನೋಡಿಕೊಂಡರು.

"ಓದು ಲಕ್ಷ್ಮಣ. ಅವಳು ಹೇಗೆ ಸತ್ತಳು ಎಂಬುದು ಗೊತ್ತಾಗುತ್ತದೆ. ಸಾಯುವ ಮುನ್ನ ಬರೆದು ಅಂಚೆಗೆ ಹಾಕಿದ ಕಾಗದ, ಅವಳು ಸತ್ತಮೇಲೆ ನನಗೆ ತಲಪಿದೆ"

—ಎಂದ ಶಾಮು ಗೆಳೆಯರ ಕಡೆಗೆ ನೋಡುತ್ತಾ.

ಅನಂತು—ಲಕ್ಷ್ಮಣರ ಕುತೂಹಲ ಕೆರಳಿತು.

"ಓದಬಹುದು ತಾನೆ?"

—ಗೆಳೆಯರಿಬ್ಬರೂ ಜೋಡುಧ್ವನಿಯಲ್ಲಿ ಕೇಳಿದರು.

"ಓದಬೇಕೆಂದೇ ನಿಮ್ಮ ಕೈಗೆ ಕೊಟ್ಟಿದ್ದೇನೆ"

—ಎಂದ ಶಾಮು, ಹಾಗೆಯೇ ಮೇಜಿಗೆ ತಲೆಯೂರಿದ.

ಅನಂತು – ಲಕ್ಷ್ಮಣರು ಒಬ್ಬರೆ ಪಕ್ಕದಲ್ಲಿ ಒಬ್ಬರು ನಿಂತು ಆತುರ ದಿಂದ ಕಾಗದವನ್ನು ಓದತೊಡಗಿದರು—

" ಪ್ರಾಣಪ್ರಿಯಾ,

ನಿಮ್ಮ ಕಾಗದ ಕೈಸೇರಿತು. ತೀರ್ಥರೂಪು ಮಾವನವರು ನಮ್ಮ ತಂದೆಯವರಿಗೆ ಬರೆದಿದ್ದ ಕಾಗದವನ್ನೂ ಸಹ ನಾನು ಓದಿದೆ. ಅವರಿಗೆ ನನ್ನ ಮೇಲಾಗಲಿ, ನಮ್ಮ ಮನೆತನದ ಮೇಲಾಗಲಿ ಲೇಶವೂ ವಿಶ್ವಾಸವಿಲ್ಲವೆಂಬುದು ಅವರ ಕಾಗದದಿಂದ ಸ್ಪಷ್ಟವಾಗಿ ಮನದಟ್ಟಾಯಿತು. ವರದಕ್ಷಿಣೆಯ ಹಣದಲ್ಲಿ ಬಾಕಿಯಾಗಿದ್ದ ನಾಲ್ಕು ನೂರು ರೂಪಾಯಿಗಳನ್ನು ಆದಷ್ಟು ಬೇಗ ನಿಮ್ಮ ತಂದೆಯವರಿಗೆ ತಲಪಿಸಬೇಕೆಂದು ನನ್ನ ತಂದೆಯವರು ನಿಶ್ಚಯಿಸಿ, ಹಣವನ್ನು ಕೂಡಿಟ್ಟಿದ್ದರು. ದೀಪಾವಳಿಗೆ ಮೊದಲೇ ಆ ಹಣ ನಿಮ್ಮ ಕೈಸೇರುವುದ ರಲ್ಲಿತ್ತು. ಆದರೆ ಅನಿರೀಕ್ಷಿತವಾಗಿ ನನ್ನ ತಾಯಿ ಹಾಸಿಗೆ ಹಿಡಿದರು. ಸುಮಾರು ಆರು ನೂರು ರೂಪಾಯಿಗಳವರೆಗೂ ಔಷಧಿಗಾಗಿ ಖರ್ಚಾಯಿತು. ಎಂತೆಂತಹ 'ಸಂಜೀವಿನಿ'ಗಳೂ, 'ರಾಮಬಾಣ'ಗಳೂ ಅಮ್ಮನನ್ನು ಉಳಿಸಿಕೊಡಲು ಅಸಮರ್ಥವಾದವು. ಅವರು ನಮ್ಮನ್ನೆಲ್ಲಾ ಕಣ್ಣೀರಿನಲ್ಲಿ ಮುಳುಗಿಸಿ, ಗಾಳಿಯಲ್ಲಿ ತೇಲಿಹೋದರು. ಆ ಮೇಲೆ ನಮ್ಮ ತಂದೆ, ನಾವು ವಾಸವಾಗಿರುವ ಮನೆಯನ್ನೂ ಆಧಾರಮಾಡಿ, ಸಾಲತೆಗೆದು, ಅಮ್ಮನ ಅಂತ್ಯಕರ್ಮಗಳನ್ನು ಪೂರೈಸಿ, ಉಳಿದ ಹಣದಲ್ಲಿ ಸಂಸಾರ ನಿರ್ವಹಣೆಗಾಗಿ ಮಾಡಿದ್ದ ಸಣ್ಣ–ಪುಟ್ಟ ಸಾಲಗಳನ್ನು ತೀರಿಸಿದರು. ನಿಮಗೆ ಕೊಡಬೇಕಾಗಿದ್ದ ನಾನ್ನೂರು ರೂಪಾಯಿ ಗಳನ್ನು ಈ ಪರಿಸ್ಥಿತಿಯಲ್ಲಿ ಹೇಗೆ ಕೊಡಲು ಸಾಧ್ಯ? ತಂದೆಯವರು ತುಂಬ ಚಿಂತಿಸಿದರು. ಒಂದು ದಿನ ನನ್ನನ್ನು ಕರೆದು, 'ಗಿರಿಜ, ನಿನ್ನ ಗಂಡನ ಋಣ ತೀರಿಸಿ, ನಿನ್ನ ಬಾಳು ಸುಖಮಯವಾಗುವುದನ್ನು ನಾನು ನೋಡು ತ್ತೀನೆಯೆ ಮಗು? ಅದು ನನ್ನಿಂದ ಸಾಧ್ಯವಾಗುತ್ತದೆಯೇನಮ್ಮಾ?'–ಎಂದು ಕಣ್ಣೀರು ಹಾಕಿಕೊಂಡು ಹೇಳಿದರು. ನಾಲ್ಕು ನೂರು ತೀರಿಸುವುದು ಅವರಿಂದ ಸಾಧ್ಯವಿಲ್ಲವೆಂದು ಅವರ ಧ್ವನಿಯ ಭಾವ ಸೂಚಿಸುತ್ತಿತ್ತು. ಕುಟುಂಬದ ಕಷ್ಟವೆಲ್ಲ ಅವರ ಮಾತಿನಲ್ಲಿ ಅಡಕವಾಗಿತ್ತು. ನಾನೂ ಪರಿಪರಿಯಾಗಿ ಯೋಚಿಸಿದೆ. ನನ್ನಿಂದ ಯಾರಿಗೂ ಸುಖವಿಲ್ಲವೆಂಬ ನಿರ್ಧಾರಕ್ಕೆ ಬಂದೆ. ಅತ್ತ ನೀವು – ಇತ್ತ ನಾನು; ಮಧ್ಯದಲ್ಲಿ ವರದಕ್ಷಿಣೆಯ ಅಗ್ನಿಕುಂಡ ಒಬ್ಬರ

ನ್ನೊಬ್ಬರು ನೋಡದಂತೆ, ತನ್ನ ಕೆಂಜ್ವಾಲೆಯಿಂದ ಭೂವ್ಯೋಮವನ್ನು ಒಂದಾಗಿಸಿದೆ; ನಿಮ್ಮ ತಂದೆಯ ಮಾತಿಗೆ ಕಟ್ಟುಬಿದ್ದು, ನೀವು ನನ್ನ ಮುಖವನ್ನೂ ನೋಡುವಂತಿಲ್ಲ—ನಾಲ್ಕು ನೂರು ರೂಪಾಯಿಗಳ ಋಣ ಹರಿಯುವವರೆಗೆ. ಅದು ಹರಿಯುವಂತೆಯೂ ಇಲ್ಲ. ನಮ್ಮ ತಂದೆಯವರು ಒಳಗೇ ಸಂಕಟವನ್ನನುಭವಿಸುತ್ತಾ ಸಣ್ಣಗಾಗುತ್ತಿರುವುದನ್ನು ನಾನು ನೋಡಲಾರೆ. ನಿಮ್ಮನ್ನಗಲಿದ ವಿರಹಬಾಧೆಯನ್ನು ಸಹಿಸುತ್ತಾ ಬದುಕಿರಲಾರೆ........

'ಆತ್ಮಹತ್ಯೆ' ಪಾಪವೆನ್ನುತ್ತಾರೆ. ಅದು ಪಾಪವಾದರೆ, ಬದುಕಿದ್ದು, ಸುತ್ತುಮುತ್ತಲಿನ ಜನರಿಗೆ ವೃಥಾ ತೊಂದರೆ ಕೊಟ್ಟು, ಸಂಕಟಪಡಿಸುವುದು ಪುಣ್ಯದ ಕೆಲಸವೆ? ಅದನ್ನು ನಾನೊಪ್ಪುವುದಿಲ್ಲ. ನನ್ನ ಮನಸ್ಸಾಕ್ಷಿ, ನಾನು ಮಾಡುತ್ತಿರುವುದು ಸರಿಯೆಂದು ಹೇಳುತ್ತಿದೆ. ಎಂತಲೇ, ಮರಣಮಂದಿರವನ್ನು ಹೊಗಲು ನಾನು ಸಿದ್ಧಳಾಗಿದ್ದೇನೆ. ನನ್ನಿಂದ ಯಾರಿಗೂ ತೊಂದರೆಯಾಗಬಾರದು. ನನ್ನ ದೊರೆ, ಈ ಗಿರಿಜೆಯನ್ನು ಮರೆತುಬಿಡಿ. ನಿಮ್ಮ ತಂದೆ - ತಾಯಿಯರಿಗೆ ಮೆಚ್ಚಿಗೆಯಾಗುವ, ಕೈತುಂಬ ವರದಕ್ಷಿಣೆ ಕೊಟ್ಟು ನಿಮ್ಮ ಮನೆಗೆ ಬರುವ, ನಿಮಗೆ ಅನುರೂಪಳಾಗಿರುವ ಬೇರೊಬ್ಬ ಹುಡುಗಿಯನ್ನು ಮದುವೆಯಾಗಿ ಸುಖವಾಗಿರಿ. ಇದೇ ಭಗವಂತನಲ್ಲಿ ನನ್ನ ಕೊನೆಯ ಪ್ರಾರ್ಥನೆ.

ನನಗೆ ಚಿರಮುತ್ತೈದೆತನವನ್ನು ಕರುಣಿಸಿದ ನನ್ನ ಮುದ್ದು ಮಾಣಿಕ್ಯವೇ—

ನಾನಿನ್ನು ಹೊರಡುತ್ತೇನೆ.

ಅಪ್ಪಣೆ ಕೊಟ್ಟು, ಈ ಚರಣದಾಸಿಯನ್ನು ಮನ್ನಿಸಿ.

—ಗಿರಿಜ"

—ಕಾಗದ ಓದಿ ಮುಗಿಸಿದಾಗ ಗೆಳೆಯರ ಕಂಠ ಬಿಗಿದಿತ್ತು. ಲಕ್ಷ್ಮಣನ ಕಣ್ಣುಗಳಿಂದ ಅವನಿಗೆ ಅರಿವಿಲ್ಲದಂತೆಯೇ ಹನಿಯುದುರುತ್ತಿತ್ತು.

"ಗಿರಿಜ ಇಷ್ಟು ತಿಳುವಳಿಕೆಯುಳ್ಳವಳೆಂದು ನಾನು ನಂಬಿರಲಿಲ್ಲ"

—ಎಂದ ಅನಂತು.

" ಅವಳ ಸಾಹಿತ್ಯಜ್ಞಾನ, ಗಿರಿಯಂತೆ ಗಂಭೀರವಾದ ಶೈಲಿ ನಿಜವಾಗಿಯೂ ಮೆಚ್ಚುವಂತಹದೇ. ಪಾಪ, ಆ ಭಗ್ನ ಹೃದಯ ಎಷ್ಟೊಂದು ಸಂಕಟ ಅನುಭವಿಸಿತೋ...."

—ಎಂದು ಭಾವುಕನಂತೆ ನುಡಿದ ಲಕ್ಷ್ಮಣ.

ಮೇಜಿನ ಮೇಲೆ ತಲೆಯೊರಗಿಸಿದ್ದ ಶಾಮು ಮೆಲ್ಲನೆ ಮುಖವನ್ನು ಮೇಲೆತ್ತಿ—

" ಅವಳನ್ನು ಆಹುತಿ ತೆಗೆದುಕೊಂಡ ಪಿಶಾಚ ಯಾವುದೆಂಬುದು ಈಗ ತಿಳಿಯಿತೇ ? "

—ಎಂದು ಗದ್ಗದಿತನಾಗಿ ಕೇಳಿದ.

" ತಿಳಿಯಿತು ಶಾಮು. ಅದು ವರದಕ್ಷಿಣೆಯ ಪಿಶಾಚ "

—ಎಂದು ಲಕ್ಷ್ಮಣ ಹಾಗೆಯೇ ತನ್ನ ಮಾತನ್ನು ಮುಂದುವರಿಸಿದ :

" ಅದನ್ನು ನಿರ್ಮೂಲಮಾಡುವ ದಾರಿಯಿಲ್ಲವೆ ಅನಂತು ? "

" ಒಬ್ಬೊಬ್ಬರೇ ಕುಳಿತು ಆ ಪಿಶಾಚವನ್ನು ಅಟ್ಟುವ ಉಪಾಯವನ್ನು ಊಹಿಸುವುದು ಆನೆಗೆ ಉಡಿಗೆ ಹೊಲಿಸಿದಂತೆ – ಪ್ರಪಂಚಕ್ಕೆ ಹಚ್ಚಡ ಹೊದಿಸಿದಂತೆ ಆಗುತ್ತದೆ "

" ನಿನ್ನ ಮಾತು ನಿಜ – ಅನಂತು "

—ಎಂದ ಶಾಮು.

" ಸರ್ಕಾರ ಕಾನೂನು – ಕಾಯಿದೆ ಮಾಡಿದರೆ ಈ ವರದಕ್ಷಿಣೆಯ ಪದ್ಧತಿ ತೊಲಗಬಹುದಲ್ಲವೆ ? "

—ಲಕ್ಷ್ಮಣ ಮತ್ತೊಮ್ಮೆ ಪ್ರಶ್ನಿಸಿದ.

" ಅದು ಕೇವಲ ಭ್ರಮೆ. ಕಾನೂನು ಕಾಯಿದೆಗಳನ್ನು ಕಾಯುವ ಪೋಲೀಸರು ಮದುವೆಯ ಮಂಗಳಕಾರ್ಯದಲ್ಲಿ ತಲೆಯಿಟ್ಟರೆ, ಅದು ಸುಖಾಂತವಾಗುವುದಿಲ್ಲ. ಸುಗಮವಾಗಿ ನಡೆಯುವ ಮದುವೆಗಳಿಗೂ ಕಲ್ಲುಬೀಳುವ ಪ್ರಸಂಗ ಬರುತ್ತವೆ. ಈ ವರದಕ್ಷಿಣೆಯ ವ್ಯವಹಾರ ಕನ್ಯಾದಾತ – ಸ್ವೀಕಾರ ಪಾತ್ರರ ನಡುವಣ ಸ್ವಂತ ವಿಷಯ. ಅದರಲ್ಲಿ ಸರ್ಕಾರ ತಲೆಯಿಡುವುದು ಯಾವುದೇ ದೃಷ್ಟಿಯಿಂದಲೂ ಒಳಿತಲ್ಲ "

—ಎಂದ ಅನಂತು.

" ಹಾಗಾದರೆ ಈ ನಿರೋಧಾಜ್ಞೆಯನ್ನು ವಿಧಿಸುವುದು ಧರ್ಮಸಂಸ್ಥೆಗಳಿಂದಲಾದರೂ ಸಾಧ್ಯವಿಲ್ಲವೆ ? "

" ಹೇಗಾಗುತ್ತದೆ ಲಕ್ಷ್ಮಣ ? "

" ವರದಕ್ಷಿಣೆ ತೆಗೆದುಕೊಳ್ಳುವವರಿಗೂ—ಕೊಡುವವರಿಗೂ ಬಹಿಷ್ಕಾರ ಹಾಕುತ್ತೇವೆ—ಎಂದು ಮಠಗಳವರು ಕಟ್ಟುಮಾಡಿದರೆ ಆಗುವುದಿಲ್ಲವೆ ? "

" ಅದೂ ಪ್ರಯೋಜನವಿಲ್ಲ ಲಕ್ಷ್ಮಣ. ಧಾರ್ಮಿಕ ಸಂಸ್ಥೆಗಳ ಬುಡವೇ ಭದ್ರವಿಲ್ಲದ ಇಂದು ಯಾರ ಕಟ್ಟುಕಟ್ಟಳೆಗಳೂ ಲಕ್ಷ್ಯಕ್ಕೆ ಬರುವುದಿಲ್ಲ. ಆಗ ಮಾತುಕತೆಗಳು ಗುಟ್ಟಿನಲ್ಲಿಯೇ ನಡೆಯುತ್ತವೆ. ಕೊಡುವವರು ಯಾರಿಗೂ ಗೊತ್ತಾಗದ ಹಾಗೆಯೇ ಕೊಡುತ್ತಾರೆ. ತೆಗೆದುಕೊಳ್ಳುವವರು ಸಹ ಯಾರಿಗೂ ತಿಳಿಯದ ಹಾಗೆಯೇ ತೆಗೆದುಕೊಳ್ಳುತ್ತಾರೆ. ಅದು ಅವರಿಬ್ಬರ ನಡುವಣ ವ್ಯವಹಾರ. ಕೊಡುವುದಕ್ಕೆ ಕೈಲಾಗದವರನ್ನು ತೆಗೆದುಕೊಳ್ಳುವವರು ಹತ್ತಿರಕ್ಕೇ ಸೇರಿಸುವುದಿಲ್ಲ ! ಆಗ ' ಹೆಣ್ಣು ಹೆತ್ತವರ ಪಾಡು—ಕಣ್ಣಿಗೆ ಸುಣ್ಣ ಹಚ್ಚಿಕೊಂಡು ನೋಡು '—ಎಂಬಂತಾಗುತ್ತದೆ."

" ಅನಂತುವಿನ ಮಾತು ಒಪ್ಪುವಂತಹುದು "

—ಎಂದ ಶಾಮು.

" ಹಾಗಾದರೆ ಇನ್ನಾವ ದಾರಿ ಇದೆ ? "

—ಅದು ಲಕ್ಷ್ಮಣನ ಪ್ರಶ್ನೆ.

" ಹಿಂದೊಮ್ಮೆ ನಾವು ತೀರ್ಮಾನಕ್ಕೆ ಬಂದಂತೆ, ಜನತೆಯ ಸಂಸ್ಕೃತಿ ಬೆಳೆಯಬೇಕು ಲಕ್ಷ್ಮಣ. ಪರಸ್ಪರ ಅರಿತುಕೊಳ್ಳುವ ಶಕ್ತಿ ವೃದ್ಧಿಯಾದರೆ, ಒಬ್ಬರ ಕಷ್ಟಸುಖ ಇನ್ನೊಬ್ಬರಿಗೆ ತಿಳಿದು, ಅವರವರಲ್ಲಿ ಅನ್ಯೋನ್ಯತೆ ಬೆಳೆದು, ' ತನ್ನಂತೆಯೇ ಆತ—ಆತನಂತೆಯೇ ತಾನು ' ಎನ್ನುವ ಅರಿವು ಮೂಡಬೇಕು. ಆಗಲೇ ಸಮಾಜ ಸತ್ಪಥದಲ್ಲಿ ಸಾಗಿ ಪ್ರಗತಿಹೊಂದುವುದು. ಈ ವರದಕ್ಷಿಣೆಯ ಪಿಶಾಚಿಯಂಥ ಹಲವಾರು ನೀಚ ಸಂಪ್ರದಾಯಗಳು ನಿರ್ಮೂಲನಾಗುವುವು."

—ಅನಂತನ ವಿವರಣೆಗೆ, ಮತ್ತೆ ಲಕ್ಷ್ಮಣ :

" ಈ ವರದಕ್ಷಿಣೆಯ ನೀಚಪದ್ಧತಿಗೆ ನಮ್ಮ ಸಮಾಜದ ಆರ್ಥಿಕ ಅವ್ಯವಸ್ಥೆಯೇ ಕಾರಣವೆಂದು ನನಗನ್ನಿಸುತ್ತದೆ" ಎಂದ.

" ಇಲ್ಲ. ಆ ವಾದವನ್ನು ನಾನೊಪ್ಪಲಾರೆ. ಒಂದು ಗಂಡು—ಒಂದು ಹೆಣ್ಣು ಆತ್ಮೀಯ ಗೆಳೆತನದಿಂದ ಹೊಂದಿಕೊಂಡಿರಲು ಹಣ ಸುರಿಯಬೇಕೆನ್ನುವುದು ಮೂಢತನ "

—ಎಂದ ಶಾಮು.

" ಹೌದು ಹೌದು "

—ಎಂದು ಅನಂತ–ಲಕ್ಷ್ಮಣರು ಶಾಮುವಿನ ಮಾತಿಗೆ ಒಪ್ಪಿಕೊಂಡರು.

ರಾತ್ರಿ ಹೊತ್ತು ಮೀರಿತ್ತು. ಲಕ್ಷ್ಮಣನ ಕೈಗಡಿಯಾರ ಒಂಭತ್ತು ತೋರಿಸುತ್ತಿತ್ತು. ಶಾಮು ಗೆಳೆಯರಿಬ್ಬರನ್ನೂ ಬೀಳ್ಕೊಟ್ಟು ಹಾಸಿಗೆ ಹಾಸಿದ. ಆದರೆ ಅವನಿಗೆ ನಿದ್ದೆ ಬರುವುದೆ? ವರದಕ್ಷಿಣೆಯ ಮೂಲೋತ್ಪಾಟನೆಯನ್ನು ಹುಡುಕುತ್ತ ಅವನ ಮನಸ್ಸು ಮರೀಚಿಕೆಯ ಬೆನ್ನುಹತ್ತಿತು........

—' ಈ ವಿವಾಹ ಪ್ರವಾಹದಲ್ಲಿ ಹರಿದುಬರುತ್ತಿರುವ ವರದಕ್ಷಿಣೆಯ ವಿಷವಾಹಿನಿಗೆ ಯಾರು ಕಾರಣರು ? ಇದು ಯಾರ ತಪ್ಪು ? '

—' ವರದಕ್ಷಿಣೆ ಕೊಟ್ಟವರು—ವರದಕ್ಷಿಣೆ ತೆಗೆದುಕೊಂಡವರು ! '

—' ಕೊಟ್ಟವರದ್ದು ತಪ್ಪಿಲ್ಲ; ತೆಗೆದುಕೊಂಡವರದ್ದೇ ತಪ್ಪು ! '

—' ಕೊಡುವುದರಿಂದ ತಾನೆ ತೆಗೆದುಕೊಳ್ಳುತ್ತಾರೆ. ಆದ್ದರಿಂದ ತೆಗೆದುಕೊಳ್ಳುವವರದ್ದೇನೂ ತಪ್ಪಿಲ್ಲ. ಕೊಟ್ಟವರದ್ದೇ ತಪ್ಪು.'

—' ಕೊಡದೇ ಇದ್ದರೆ ಮದುವೆಯೇ ಬೇಡವೆನ್ನುತ್ತಾರಲ್ಲ—ಗಂಡಿನ ಕಡೆಯವರು! ಹಣದ ಮುಖ ನೋಡಿಕೊಂಡು ಕುಳಿತರೆ, ಹಾಗೆಯೇ ಹೆಣ್ಣಿನ ಮುಖವನ್ನೂ ನೋಡಿಕೊಂಡು ಕುಳಿತಿರಬೇಕಾಗುತ್ತದೆ!! '

—' ತೆಗೆದುಕೊಳ್ಳುವವರು ಬೇಡವೆಂದು ಔದಾಸೀನ್ಯ ತೋರಿಸಿದರೆ, ಕೊಡುವವರೂ ಸಹ ಉಪಚಾರದಲ್ಲಿಯೇ ಮಾತು ಮುಗಿಸಿ, ಎರಡು ಕಡೆಯವರೂ ಉದ್ದೇಶಿಕ ಕಾರ್ಯದತ್ತ ಗಮನಿಸದೆ ತೆಪ್ಪಗಾಗುತ್ತಾರೆ! '

—' ಅಲ್ಲಿಗೆ ತೆಗೆದುಕೊಳ್ಳುವುದೂ ತಪ್ಪಿತು ; ಕೊಡುವುದೂ ತಪ್ಪಿತು—ಹೆಣ್ಣನ್ನಲ್ಲ; ಹಣವನ್ನು ! '

—ಆದರೆ, ತೆಗೆದುಕೊಳ್ಳುವವರು ' ಬೇಡ ' ಎನ್ನುವ ಕಾಲ ಎಂದು ಬರುತ್ತದೆ?

ಅಂದೇ ಕೊಡುವವರು ಪಡುವ ಕಷ್ಟ ತಪ್ಪುತ್ತದೆ—

ಅಂದೇ ಹೆಣ್ಣು ಹೆತ್ತವರ ಪಾಡು ನಿಶ್ಚಿಂತವಾಗುತ್ತದೆ—
ಅಂದೇ ಮದುವೆಯಾಗುವ ಗಂಡುಗಳು ಸ್ವತಂತ್ರರಾಗುತ್ತಾರೆ—
ಅಂದೇ ಹೊಸ ಸಂಸಾರಗಳು ಸುಖ ಕಾಣುತ್ತವೆ—
ಅಂದೇ ಸಮಾಜ ಪ್ರಗತಿಪಥದಲ್ಲಿ ನಡೆಯುವಂತಾಗುತ್ತದೆ—
—ಆದರೆ, ಆ ಸುದಿನ ಎಂದು ಬರುತ್ತದೆ? ಹೇಗೆ ಬರುತ್ತದೆ?
ಕಾನೂನಿನಿಂದಲೇ?
ಕೊಡುವುದು ನಿಲ್ಲಿಸಿದಂದಿನಿಂದಲೇ?
ಸ್ತ್ರೀಯರು ಪುರುಷರಿಗೆ ಸರಿಸಮನಾಗಿ ನಿಂತ ದಿನವೇ?
ಧರ್ಮಸಂಸ್ಥೆಗಳ ಪ್ರಯತ್ನದಿಂದಲೇ?
ಆಧುನಿಕ ನಾಗರಿಕತೆ ವಿಶಾಲವಾಗಿ ಬೆಳೆಯುವುದರಿಂದಲೇ?
ಪ್ರತಿ ಮಾನವನ ಆತ್ಮಸಂಸ್ಕಾರದಿಂದಲೇ?
—ಹೇಗೆ? ಎಂದು? ಯಾವುದರಿಂದ?
ಗುರಿಗಾಣದ ಹರಿಣಿಯಂತೆ ಹರಿದಾಡಿತು ಮನಸ್ಸು.

ಆ ತೊಳಲಾಟದಲ್ಲಿ ಎಷ್ಟು ಹೊತ್ತಿಗೆ ನಿದ್ರೆ ಬಂದಿತೋ, ಶಾಮುವಿಗೆ ಅದರ ಪರಿವೆಯೇ ಇಲ್ಲ.

ಆ ನಿದ್ರೆಯಲ್ಲಿ ಎಂತಹ ಕನಸು............

ಸ್ವರ್ಣ ಸುಂದರಿಯಂತೆ ಆ ಮುಗುಧೆ ಗಿರಿಜಾ ಶಾಮುವಿನ ಬಳಿ ಬಂದು ನಿಂತಿದ್ದಳು.

'ಜನ್ಮಜನ್ಮಾಂತರದಲ್ಲೂ ನಿಮ್ಮ ಪಾದಸೇವೆಯನ್ನು ಕೊಡಿ ದೇವ. ಆದರೆ ಈ ಜನ್ಮದಲ್ಲಿ ಮಾತ್ರ ನೀವು ಹೀಗೆಯೇ ಒಂಟಿಬಾಳು ಬಾಳುತ್ತಿದ್ದರೆ ನನಗೆ ತುಂಬಾ ದುಃಖವಾಗುತ್ತದೆ ದೊರೆ.'

'ನೀನಿಲ್ಲದಮೇಲೆ ನನ್ನದು ಒಂಟಿಬಾಳೇ ಅಲ್ಲವೇ ಗಿರಿಜ?'

'ನಾನು ಸದಾ ನಿಮ್ಮವಳೇ ನನ್ನ ರಾಜಾ; ತನುವಿಲ್ಲದ ಮನಸ್ಸಿನ ರಾಣಿ! ಅಷ್ಟರಿಂದಲೇ ನನ್ನ ದೇವರಿಗೆ ಯಾವ ಸುಖ—ಯಾವ ತೃಪ್ತಿ? ಅನಂಗನೆಯ ಜೊತೆಗೆ ಅಂಗನೆಯೊಬ್ಬಳನ್ನು ನನ್ನ ದೊರೆ ಕೈಹಿಡಿದರೆ ನನಗೆಷ್ಟು ಆನಂದವಾಗುತ್ತದೆ ಗೊತ್ತೆ ನನ್ನರಸೆ?'

'ನನ್ನ ಕಣ್ಮಣಿಯೇ ಈ ಮಾತು ಹೇಳುತ್ತಿರುವಳೆ?'

'ಹೌದು....ಹೌದು'

—ಎನ್ನುತ್ತಾ ಗಿರಿಜ ಮುಸುಕುಮುಸುಕಾಗಿ, ಹಾಗೆಯೇ ಮಾಯವಾದಳು.

ಶಾಮುವಿನ ಕನಸು ಕಳೆದು, ಮನಸ್ಸು ತುಂಬಿ, ಅವನ ಕೋಣೆಯ ತುಂಬ ಹೊಸ ಬೆಳಕು ಹರಿದಾಡಿತು.

೧೨

ಆಷಾಢದ ಗಾಳಿ ಜ್ಯೇಷ್ಠಮಾಸದಲ್ಲಿಯೇ ಪ್ರಾರಂಭವಾಗಿತ್ತು. ಹಗಲು ರಾತ್ರಿಗಳ ಪರಿವೆಯಿಲ್ಲದೆ ಮುಗಿಲಿನುದ್ದಕ್ಕೂ ಬೀಸುತ್ತಿದ್ದ ಸುಂಟರಗಾಳಿ ಹಾದಿ ನಡೆಯುವವರ ಕಣ್ಣಿಗೆ ಮಣ್ಣೆರಚಿ ಹೋಗುತ್ತಿತ್ತು. ಚೈತ್ರ-ವೈಶಾಖಮಾಸಗಳಲ್ಲಿ ಚಿಗುರಿ ಅರಳಿದ ತರುವಿಸರ ವಲ್ಲಿಗಳು ಗಾಳಿಯ ವೇಗಕ್ಕೆ ಹೆದರಿ, ತಮ್ಮ ಜೀವಗಳನ್ನು ಬಿಗಿ ಹಿಡಿದು, ವಿನಯದಿಂದ ತಲೆ ತಗ್ಗಿಸುತ್ತಿದ್ದವು, ಒಣಗಿನಿಂತು ಹೆಮ್ಮೆಯಿಂದ ಮೆರೆಯುತ್ತಿದ್ದ ಏಕಾಕಿ ವೃಕ್ಷಗಳ ಸೊಕ್ಕು ಮುರಿಯುವ ಪಣತೊಟ್ಟು, ಅವು ಕೆಳಗುರುಳುವವರೆಗೂ ತನ್ನ ಶಕ್ತಿಯನ್ನು ಪ್ರಯೋಗಮಾಡುತ್ತಿತ್ತು ಗಾಳಿ. ಅದರ ಕೃಪಾಕಟಾಕ್ಷ ನಾಗಪ್ಪನವರ ಮನೆಯ ಮೇಲೆ ಬೀಳದಿರುವುದೆ?

ಬಿದ್ದೇಬಿತ್ತು-ಚಾವಣಿಯಂಚಿನ ಹೆಂಚಿನ ಸಾಲು ಒಂದರ ಹಿಂದೊಂದು!

“ಅಂಚಿಗೆ ದಿಂಡು ಕಟ್ಟಿಸದೆ, ಹಾಗೆಯೇ ಬಿಟ್ಟರೆ ತುಂಬಾ ಅಪಾಯ ಸ್ವಾಮಿ”

—ಎಂದು ನೆರೆಹೊರೆಯವರು ಹಲವಾರು ಬಾರಿ ಹೇಳಿದ್ದರು. ಆ ಕ್ಷಣದಲ್ಲಿ ನಾಗಪ್ಪನವರ ಗಮನಕ್ಕೆ ಬರುತ್ತಿದ್ದ ಆ ಮಾತುಗಳು ಮರುಕ್ಷಣ ದಲ್ಲಿಯೇ ಔದಾಸೀನ್ಯದಿಂದ ದಮನವಾಗುತ್ತಿದ್ದವು.

ಆದರೆ ಆ ದಿನ, ಯಾವುದೋ ನಿರೀಕ್ಷಣೆಯ ಆನಂದದಲ್ಲಿ ಮೈಮರೆತು, ತಮ್ಮಷ್ಟಕ್ಕೆ ತಾವೇ ನಗುತ್ತಾ ಮನೆಯ ಸಮೀಪಕ್ಕೆ ಬಂದಾಗ, ಅದೇ ಸಮಯಕ್ಕೆ ಗಾಳಿಯ ವೇಗಕ್ಕೆ ಉರುಳಿದ ಹೆಂಚು ನಾಗಪ್ಪನವರ ತಲೆಯ ಎಡಪಾರ್ಶ್ವಕ್ಕೆ ಅಪ್ಪಳಿಸಿತು! ‘ಅಯ್ಯೋ’ ಎಂದು ಅವರು ಕುಸಿದು ಕುಳಿತಾಗ, ವೆಂಕಮ್ಮ ಓಡಿಬಂದರು. ಅಷ್ಟರಲ್ಲಾಗಲೇ ನಾಗಪ್ಪನವರ ತಲೆಯಿಂದ ರಕ್ತ ಬುಳಬುಳನೆ ಹರಿಯತೊಡಗಿತ್ತು. ‘ಶೀನೂ, ನಾಣೀ,

ಕಿಟ್ಟೂ–ಎಂದು ಒಂದೇ ಸಮನೆ ಕೂಗಿಕೊಂಡರು ವೆಂಕಮ್ಮ. ಎಲ್ಲರೂ ನಾಗಪ್ಪನವರನ್ನು ಸುತ್ತುಗಟ್ಟಿ ನಿಂತರು.

"ಅಮ್ಮಾ, ಕುಂಕುಮ ಗಿಡುಗೆ ರಕ್ತ ನಿಲ್ಲಲಿ"

ಎನ್ನುತ್ತಾ ಸುಮಿತ್ರೆ ಕುಂಕುಮದ 'ಪಂಚವಾಳ'ವನ್ನು ತಂದಿತ್ತಳು. ನಾಣಿ ಬಟ್ಟೆ ನೆನಸಿಕೊಂಡು ಬಂದು ತಂದೆಯ ತಲೆಗೆ ಪಟ್ಟಿಕಟ್ಟಿದ. ಕಿಟ್ಟು–ನಾಣಿಯರ ಸಹಾಯದಿಂದ ನಾಗಪ್ಪನವರು ಮೆಲ್ಲನೆ ಎದ್ದು ಒಳಗೆ ನಡೆದು ಅಂಗಳದಲ್ಲಿ ಕುಳಿತರು. ಅವರ ಸ್ಥಿತಿಯನ್ನು ಕಂಡ ಅಕ್ಕಪಕ್ಕದ ಮನೆಯವರಿಗೆಲ್ಲಾ 'ಅಯ್ಯೋ' ಎನ್ನಿಸಿತ್ತಾದರೂ ನಗುವೂ ಬಂದಿತ್ತು.

"ಏನು ಗ್ರಹಚಾರವೋ? ಬೆಳಗಾಗ ಯಾರ ಮುಖ ನೋಡಿದ್ದಿರೋ!"

—ಎಂದರು ವೆಂಕಮ್ಮ.

"ಹೌದು ಕಣೆ, ಆ ರಾಕ್ಷಸಿ ಕಿಟ್ಟುವಿನ ಹೆಂಡತಿಯ ಮುಖ ನೋಡಿದೆ. ನಾನು ಏಳುವ ಹೊತ್ತಿಗೆ ಸರಿಯಾಗಿ ಅವಳು ನನ್ನಮುಂದೆ ಹಾದು ಹೋದಳು!"

—ಎಂದರು ನಾಗಪ್ಪ.

ಅವರು ಎಷ್ಟು ಮೆಲ್ಲನೆ ಆ ಮಾತು ಆಡಿದ್ದರೂ ಸರಸುವಿನ ಹಾವುಕಿವಿಗೆ ಕೇಳಿಸಿಯೇ ಕೇಳಿಸಿತು. ಅವಳು ತನ್ನ ಕೋಣೆಯಿಂದಲೇ ಆರ್ಭಟಿಸಿದಳು—

"ಹ್ಞಾಂ, ನಾನು ರಾಕ್ಷಸಿ—ಇವರು ದೇವತೆ! ನನ್ನ ಮುಖ ನೋಡಿದ ಪುಣ್ಯ—ಇಷ್ಟಕ್ಕೇ ನೀವು ಬದುಕಿಕೊಂಡಿರಿ. ಇಲ್ಲದಿದ್ದರೆ ಇಷ್ಟು ಹೊತ್ತಿಗೆ ಬೊಂಬು–ಗಳು ಸಿದ್ಧಮಾಡಿಸಬೇಕಾಗುತ್ತಿತ್ತು!!"

ಈ ಅಮಂಗಳದ ಮಾತನ್ನು ಸಹಿಸುವುದು ವೆಂಕಮ್ಮನವರಿಗೆ ಸಾಧ್ಯವಾಗಲಿಲ್ಲ. ಆದರೆ ಕೋಪಿಸಿಕೊಳ್ಳುವುದು ಅವರ ಸ್ವಭಾವವಲ್ಲ.

"ಯಾಕಮ್ಮ ಸರಸು, ಆ ಮಾತು ಆಡುತ್ತಿದ್ದೀ? ನಾನು ಸುಮಂಗಲಿಯಾಗಿರುವುದರಿಂದ ನಿನಗೆ ತೊಂದರೆಯಾಗಿದೆಯೇ ತಾಯಿ?"

—ವೆಂಕಮ್ಮನವರ ಮೃದುವಾದ ಮಾತು ಮರುಕದ ದನಿಯೊಡನೆ ಬೆರೆತು, ಸರಸುವಿನ ಕಿವಿಹೊಕ್ಕು, ಮುಖ ಕಪ್ಪಾಗಿ, ಬಾಯಿ ಮುಚ್ಚಿಸಿತು. ಕುಸು ತಡೆದು ನಾಗಪ್ಪನವರು ವಿಷಯವನ್ನು ಬದಲಾಯಿಸಿ ಮಾತಿಗೆ ತೊಡಗಿದರು—

"ಶಾಮುವಿಗೆ ಕಾಗದ ಬರೆದಿದ್ದೇನೆ. ಇವತ್ತು ಸಂಜೆಯ ರೈಲಿಗೆ ಅವನು ಬರುತ್ತಾನೆ. ಏನಾದರೂ ಹೆಚ್ಚುಗಟ್ಟಲೆ ಅಡಿಗೆ ಮಾಡಬೇಕು ಕಣೆ."

"ಇದೇನು, ಇವತ್ತು ಎಂದೂ ಇಲ್ಲದ ಪ್ರೀತಿ ಮಗನ ಮೇಲೆ ?"

"ಮುಖ್ಯ ಹುಡುಗನ ಮನಸ್ಸು ಪ್ರಸನ್ನವಾಗಬೇಕು ಕಣೆ. ಆಗಲೇ ಅವನನ್ನು ಯಾವ ಮಾತಿಗಾದರೂ ಒಪ್ಪಿಸಬಹುದು !"

"ಅಂತಹ ವಿಷಯವೇನು ?"

"ವಿಷಯವೇನು – ಸಾಮಾನ್ಯದ್ದೇ !"

"ಅಂದರೆ ?"

"ಅಲ್ಲವೆ, ಅವನನ್ನ ಹೀಗೆಯೇ ಒಬ್ಬಂಟಿಗನನ್ನಾಗಿ ಎಷ್ಟು ದಿನ ಬಿಟ್ಟಿರುವುದಕ್ಕಾಗುತ್ತದೆಯೆ ?

"ಯಾವುದಾದರೂ ಹೆಣ್ಣು ಬಂದಿದೆಯೇನು ?"

"ಹ್ಞೂ, ಭಾರಿ ಕಡೆಯಿಂದಲೇ ಬಂದಿದೆ. ನಮ್ಮ ಸುಂದರುವಿನ ಮಾವನನ್ನು ಮೀರಿಸುವಂತಹ ದೊಡ್ಡ ಕುಳ. ಅವರಿಗೂ ಒಬ್ಬಳೇ ಮಗಳಂತೆ. ಕೇಳಿದಷ್ಟು ವರದಕ್ಷಿಣೆ ಕೊಡುತ್ತಾರಂತೆ. ಮೊನ್ನೆಸಾರಿ ಬೆಂಗಳೂರಿಗೆ ಹೋಗಿದ್ದಾಗ ನಾರಾಯಣನ ಕಚೇರಿಯಲ್ಲಿ ಅವರ ಪರಿಚಯವಾಯಿತು. ಅವರಿಂದ ಹದಿನೈದು ಸಾವಿರಕ್ಕೆ ಕಡಿಮೆಯಿಲ್ಲದಂತೆ ಗಿಟ್ಟಿಸಬಹುದು. ಇಂಥ ಸಂಬಂಧ ಸಿಕ್ಕಿದ್ದು ಶಾಮುವಿನ ಅದೃಷ್ಟ."

'ಅದೃಷ್ಟವೋ ದುರದೃಷ್ಟವೋ ಯಾರು ಬಲ್ಲರು !'

—ಎಂದು ಮನಸ್ಸಿನಲ್ಲಿಯೇ ಅಂದುಕೊಂಡರು ವೆಂಕಮ್ಮ.

'ಅದೃಷ್ಟ ಅದೃಷ್ಟ ಎಂದು ಹೇಳಿಕೊಂಡು ಒಂದುಸಾರಿ ಸುಂದರುವನ್ನು ದುರದೃಷ್ಟದ ಬಾಯಿಗೆ ತಳ್ಳಿದ್ದಾಯಿತು. ಇನ್ನು ಶಾಮು ಬಾಕಿ ಇದ್ದಾನೆ'

—ಎಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಂಡರು ಆ ತಾಯಿದೇವಿ.

"ಯಾಕೆ, ಸುಮ್ಮನಾಗಿಬಿಟ್ಟೆ ?"

"ಇನ್ನೊಂದು ಮದುವೆಗೆ ಶಾಮು ಇಷ್ಟು ಬೇಗನೆ ಒಪ್ಪುತ್ತಾನೆಯೆ ಅಂದ್ರೆ ?"

"ಒಪ್ಪದೆ ಏನು ಮಾಡುತ್ತಾನೆ ? ನನ್ನ ಮಾತೆಂದರೆ ಅವನಿಗೆ ವೇದವಾಕ್ಯ !"

—ಎಂದರು ನಾಗಪ್ಪ.

ಅವರ ಮಾತು ಸುಳ್ಳಾಯಿತು.

ಸಂಜೆ ಬೆಂಗಳೂರಿಂದ ಬಂದ ಶಾಮು, ಮೊದಲು ತಂದೆಯನ್ನು ಮಾತ ನಾಡಿಸಲಿಲ್ಲ. ಅವರನ್ನು ಕಂಡೂ ಕಾಣದಂತೆ ಅಂಗಳ ದಾಟಿ, ನಡುಮನೆಗೆ ಬಂದು, ತನ್ನ ಕೈಚೀಲವನ್ನು ಅಲ್ಲಿಯೇ ಇಟ್ಟು, ಉಡುಪು ಬದಲಿಸಿದ. ಅಷ್ಟರಲ್ಲಿ ಅಲ್ಲಿ ಸುಮಿತ್ರೆ ಸುಳಿದಳು.

" ಅಮ್ಮ ಎಲ್ಲಿ ಚುಮ್ಮಿ? "

" ಹಿತ್ತಿಲು ಒಪ್ಪಾರದ ಹತ್ತಿರ ಕೂತಿದ್ದಾಳೆ ಅಣ್ಣಯ್ಯ "

ಶಾಮು ಹಿತ್ತಿಲಿಗೇ ನಡೆದ.

ಲಲಿತೆಯೊಡನೆ ಮಾತನಾಡುತ್ತಾ ಕುಳಿತಿದ್ದ ವೆಂಕಮ್ಮ ಮಗನನ್ನು ಕಂಡು—

" ಈಗ ಬಂದೆಯಾ ಮಗು? "

—ಎಂದು ಕೇಳಿದರು.

" ಹೌದಮ್ಮ "

—ಎನ್ನುತ್ತಾ ಶಾಮು ಅವರ ಬಳಿಯೇ ಹೋಗಿ ನಿಂತ.

" ನಡಿ, ಕೈಕಾಲು ತೊಳೆದುಕೊ. ಊಟಮಾಡುವಿಯಂತೆ "

" ಇಷ್ಟು ಹೊತ್ತಿಗೇ ಏನಮ್ಮ ಅವಸರ – ನಿಧಾನವಾಗಿ ಮಾಡಿದ ರಾಯಿತು "

" ಹೋಗಲಿ, ಕೂತುಕೋ ಇಲ್ಲೇ "

—ಎಂದರು ವೆಂಕಮ್ಮ.

ಶಾಮು ತಾಯಿಯ ಬಳಿಯಲ್ಲಿಯೇ ಕುಳಿತ.

" ಈಚೆಗೆ ನೀನು ಕಡ್ಡಿಯಹಾಗೆ ಆಗಿಬಿಟ್ಟದ್ದೀಯಲ್ಲೋ ಪುಟ್ಟಾ "

" ನಿನ್ನ ಕಣ್ಣಿಗೆ ಹಾಗೆ ಕಾಣಿಸುತ್ತದಮ್ಮ! ದಿನದಿನಕ್ಕೂ ನಾನು ದಾಂಡಿಗನಾಗುತ್ತಿದ್ದೇನೆ. ಅಲ್ಲವೆ ಅತ್ತಿಗೆ? "

" ಆ ಮಾತು ಯಾರು ನಂಬುತ್ತಾರೆ? ಅತ್ತೆಮ್ಮನವರು ಹೇಳಿದಂಗೆ ಕಡ್ಡಿಯ ಹಾಗೇ ಆಗಿದ್ದೀರಿ! "

—ಎಂದಳು ಲಲಿತೆ.

" ಸರಿಹೋಯಿತು ನಿಮ್ಮಿಬ್ಬರಿಗೂ ಜೊತೆ ! "

—ಎಂದು ನಕ್ಕ ಶಾಮು.

" ಅತ್ತಿಗೆ, ನಮ್ಮಣ್ಣನಿಗೆ ವರ್ಗದ ಆರ್ಡರು ಬಂತೆ ? "

" ಇಲ್ಲವಲ್ಲ ! "

" ನಿಮಗೆ ಹೇಗೆ ಗೊತ್ತು ? ನೀವು ಅವನೊಡನೆ ಮಾತೇ ಆಡುವುದಿಲ್ಲ ! "

" ಅದೂ ನಿಜವೆ. ನನಗೆ ಸರಿಯಾಗಿ ಗೊತ್ತಿಲ್ಲ; ಬಂದಿದೆಯೋ ಏನೋ ! "

" ಇನ್ನೂ ಬಂದಿಲ್ಲ ಅತ್ತಿಗೆ. ನಾಳೆಯೋ ನಾಳಿದ್ದೋ ಬರುತ್ತದೆ. ಇವತ್ತು ಆರ್ಡರು ಮಾಡಿಸಿ ಬಂದಿದ್ದೇನೆ "

—ಎಂದ ಶಾಮು.

ಲಲಿತೆಯ ಕುತೂಹಲ ಕೆರಳಿತು.

" ಯಾವ ಊರಿಗೆ ? "

" ನಿಮಗೆ ಯಾವ ಊರು ಇಷ್ಟ ? "

" ಯಾವುದಾದರೂ ದೂರದ ಊರಾದರೆ ಅನುಕೂಲ ! "

" ನಿಮ್ಮ ಗಂಡನ ಮದುವೆಗೆ ನನ್ನನ್ನು ಕರೆಯುತ್ತೀರೋ ಇಲ್ಲವೋ ? "

" ನಿಮ್ಮ ಅಣ್ಣನವರ ಮದುವೆಗೆ ನೀವಿಲ್ಲದಿದ್ದರೆ, ಮುಂದೆ ನಿಂತು ಕೆಲಸ ನಡೆಸುವವರಾರು ? "

—ಲಲಿತ ನಗೆಯಲ್ಲಿ ಮಾತು ಮಿಾಯಿಸಿದಳು.

" ಅಂದ ಹಾಗೆ ಯಾವ ಊರಿಗೆ ವರ್ಗವಾಗಿದೆ ? "

" ಒಳಗೆರೆಹಳ್ಳಿ ಅಂತ ಒಂದು ಊರಿದೆಯಂತೆ. ಮಾಗಡಿ ತಾಲ್ಲೋಕಿನಲ್ಲೋ ಅಥವಾ ರಾಮನಗರ ತಾಲ್ಲೋಕಿನಲ್ಲೋ ಇರಬೇಕು—ನನಗೆ ಸರಿಯಾಗಿ ತಿಳಿಯದು. ಅಲ್ಲಿನ ಮಿಡ್ಲ್ ಸ್ಕೂಲಿಗೆ ವರ್ಗವಾಗಿದೆ."

" ಸದ್ಯ, ಯಾವುದೋ ಒಂದೂರು. ಯಾರಿಗೂ ತಿಳಿಯದ ಕೊಂಪೆಯಾದರೆ ಸರಿ ! "

—ಎಂದಳು ಲಲಿತ.

" ಹಾಗಾದರೆ ಇವತ್ತು ರಾತ್ರಿಯಿಂದಲೇ ಗಂಟುಮೂಟೆ ಕಟ್ಟುವುದಕ್ಕೆ ಮೊದಲುಮಾಡುತ್ತೀಯೇನೇ ಲಲಿತಾ ? "

—ನಗುತ್ತಾ ಕೇಳಿದರು ವೆಂಕಮ್ಮ.

ಲಲಿತೆಯೂ ಶಾಮುವೂ ಅವರ ನಗುವಿಗೆ ಜೊತೆಯಾಗಿ ನಕ್ಕರು.

ಅದೇ ಸಮಯಕ್ಕೆ ಬೀಸಿದ ಗಾಳಿಯ ವೇಗಕ್ಕೆ ಒಪ್ಪಾರದ ಕಡೆಯ ಹೆಂಚು ಉರುಳಿತು.

" ಸದ್ಯ, ನನ್ನ ತಲೆಯ ಮೇಲೆ ಬೀಳಲಿಲ್ಲ ! "

—ಎಂದ ಶಾಮು.

" ಬೆಳಿಗ್ಗೆ ನಿಮ್ಮ ತಂದೆಯ ತಲೆಯ ಮೇಲೆ ಬಿದ್ದು ರಣರಂಪವಾಗಿದೆ– ನೋಡಿದೆಯೇನೋ ?

—ಎಂದು ವೆಂಕಮ್ಮ ಮಗನ ಮುಖವನ್ನು ಬೆರಗಿನಿಂದ ನಿಟ್ಟಿಸಿದರು.

" ಒಳ್ಳೆಯದೇ ಆಯಿತು ಬಿಡಮ್ಮ. ಅಣ್ಣನಿಗೆ ಬುದ್ಧಿ ಬರುತ್ತದೆ! "

—ಎಂದು ಶಾಮು ನುಡಿದಾಗ, ಮತ್ತೊಮ್ಮೆ ನಗುವಿನ ಹೊಳೆ ಹರಿಯಿತು.

" ಅಮ್ಮಾ, ನನ್ನನ್ನು ಅಣ್ಣ ಯಾಕೆ ಬರಹೇಳಿದ್ದು ? "

—ಮಗನ ಪ್ರಶ್ನೆಗೆ ಉತ್ತರಿಸಲೋ ಬೇಡವೋ ಎಂದು ವೆಂಕಮ್ಮನವರ ಮನಸ್ಸು ಉಯ್ಯಾಲೆಯಾಡಿತು. ಮೊದಲೇ ಅವನಿಗೆ ವಿಷಯವನ್ನು ತಿಳಿಸುವುದು ಕ್ಷೇಮವೆಂದು ನಿಶ್ಚಯಿಸಿ, ನಾಗಪ್ಪನವರು ಹೇಳಿದ್ದ ದ್ವಿತೀಯ ವಿವಾಹದ ಸಂಗತಿಯನ್ನು ತಿಳಿಸಿದರು ವೆಂಕಮ್ಮ.

" ಓಹೋ ! ಹತ್ತು ಸಾವಿರವೋ ಹದಿನೈದು ಸಾವಿರವೋ ವರದಕ್ಷಿಣೆ ಗಂಟು ಸಿಕ್ಕುತ್ತದೆಂದು ಹಂಚಿಕೆ ಹಾಕಿದ್ದಾರೆಯೋ ಅಣ್ಣ ? ಸುಂದರಣ್ಣನಿಗೆ ಬಂದ ವರದಕ್ಷಿಣೆ ಹತ್ತು ಸಾವಿರ ರೂಪಾಯಿಗಳು ಇಪ್ಪತ್ತೆರಡು ಸಾವಿರಕ್ಕೆ ಏರಿದೆ ಎಂದು ಹಿಗ್ಗುತ್ತಿದ್ದವರು, ಈಗ ಈ ಹಣ ಬಂದರೆ ಅದನ್ನೂ ಆ ಬ್ಯಾಂಕರನ ಬಾಯಿಗೆ ಸುರಿದು, ಲಕ್ಷಾಧಿಪತಿ ಅಂತ ಅನ್ನಿಸಿಕೊಳ್ಳಬೇಕೆಂದಿದ್ದಾರೆಯೇನೋ ! "

—ಶಾಮು ವ್ಯಂಗ್ಯವಾದ ಮಾತನ್ನು ಅಣಕಿಸುವ ದನಿಯಲ್ಲಿ ನುಡಿದಾಗ:

" ನಿನಗೆ ಇಷ್ಟವಿಲ್ಲದಿದ್ದರೆ ' ಬೇಡ ' ಎಂದು ಹೇಳಿಬಿಡೋ ಮಗು– ನಿದಾಕ್ಷಿಣ್ಯವಾಗಿ "

—ಎಂದರು ವೆಂಕಮ್ಮ.

" ಅಷ್ಟು ಹೇಳಿದರೆ ಅವರು ಬದುಕಿಕೊಂಡಾರು ! ಇನ್ನೊಂದು ಸಂಗತಿ ಹೇಳಿದರೆ, ಅವರ ಗುಂಡಿಗೆಯೇ ಒಡೆದೀತು !! "

" ಏನು ಶಾಮು ಅದು ? "

" ಆಮೇಲೆ ಹೇಳುತ್ತೇನೆ ಸುಮ್ಮನಿರಮ್ಮ. ಮೊದಲು ದೀಪ ಹಚ್ಚಿ, ಅನ್ನ ಹಾಕು ಬಾ "

— ಎನ್ನುತ್ತಾ ಒಳಕ್ಕೆ ನಡೆದ ಶಾಮು.

ಅವನ ಹಿಂದೆಯೇ ಹೆಜ್ಜೆ ಹಾಕುತ್ತಾ ವೆಂಕಮ್ಮನವರು ಅಡಿಗೆಮನೆಯನ್ನು ಸೇರಿದರು.

ಮೌನವಾಗಿಯೇ ಸಾಗಿತು ಊಟ.

ಗಂಡನ ಆದಿಷ್ಟದಂತೆ, ಮಗನಿಗಾಗಿ ಚಿತ್ರಾನ್ನ, ಪಾಯಸ ಮಾಡಿದ್ದರು ವೆಂಕಮ್ಮ.

" ನನಗೆಲ್ಲಾ ಗೊತ್ತಮ್ಮ. ಅಣ್ಣನೇ ಹೇಳಿ ಈ ಅಡಿಗೆಯನ್ನು ಮಾಡಿಸಿದ್ದಾರೆ ಅಂತ ! "

— ಎಂದು ನಕ್ಕ ಶಾಮು.

ವೆಂಕಮ್ಮನವರೂ ಹುಸಿನಗೆ ನಕ್ಕರು.

ಊಟ ಮುಗಿಸಿ ಶಾಮು ಅಂಗಳಕ್ಕೆ ಬಂದಾಗ, ನಾಗಪ್ಪನವರು 'ಅಹಹಾ !' ಎಂದು ನರಳುತ್ತಾ ನೋವನ್ನು ಸೂಚಿಸಿ ಶಾಮುವಿನ ಗಮನವನ್ನು ಸೆಳೆದರು.

" ಇದೇನಣ್ಣ ತಲೆಗೆ ಪಟ್ಟಿ ? "

" ಏನೋಪ್ಪ, ಗ್ರಹಚಾರಕಾಲ........"

" ಔಷಧಿ ಹಾಕಿದ್ದೀಯ ತಾನೆ ? "

" ಹ್ಞ, ಆ ಪಂಡಿತರ ಮುಲಾಮು ಹಚ್ಚಿದ್ದೇನೆ."

" ಯಾಕೆ, ನಮ್ಮ ಆಸ್ಪತ್ರೆಗೆ ಹೋಗಿ ಔಷಧಿ ಹಾಕಿಸಿಕೊಂಡು ಬಂದಿದ್ದರೆ ಆಗುತ್ತಿರಲಿಲ್ಲವೆ ? "

" ಆಗುತ್ತಿತ್ತು. ಆದರೆ ಅಲ್ಲಿ ಡಾಕ್ಟರ್ ಮೊದಲ್ಗೊಂಡು ಜವಾನನವರೆಗೆ ಎಲ್ಲರೂ ಹೊಸಬರು ಬಂದುಬಿಟ್ಟಿದ್ದಾರೆ. ನನಗೆ ಗುರುತಿಲ್ಲ.

ಅದಕ್ಕೋಸ್ಕರ ಮನೆಯಲ್ಲೇ ತಂದಿಟ್ಟಿದ್ದ ಮುಲಾಮು ಹಚ್ಚಿದ್ದೇನೆ........ ವಿಪರೀತ ಉರಿ........"

—ಎಂದು ನೋವಿನ ದನಿಯಲ್ಲಿ ನುಡಿದರು ನಾಗಪ್ಪ.

'ಇವತ್ತು ಗಾಯ ಮಾತ್ರ ಉರಿಯುತ್ತದೆ. ನಾಳೆ ಮೈಯೆಲ್ಲಾ ಉರಿಯುತ್ತದೆ'

—ಎಂದು ಶಾಮು ಮನಸ್ಸಿನಲ್ಲಿಯೇ ಅಂದುಕೊಂಡ.

ಗಾಳಿಯ ರಭಸ ಹೆಚ್ಚಾಯಿತು. 'ಮರ್ರೋ' ಎಂದು ಬರುತ್ತಿದ್ದ ಅದರ ಶಬ್ದ ಕಿವಿಯನ್ನೇ ಮುಚ್ಚಿಸುತ್ತಿತ್ತು. ಸುತ್ತಲಿನ ಸ್ವಲ್ಪ ದೂರದಲ್ಲಿ 'ಕಟ್‌ಕಟ್ ಕಟಿಲ್' ಎನ್ನುತ್ತಾ ಮರದ ಕೊಂಬೆಯೊಂದು ಮುರಿದುಬಿದ್ದ ಸದ್ದು ಶಾಮುವಿಗೆ ಕೇಳಿಸಿತು.

"ಇಷ್ಟು ಅವಸರವಾಗಿ ನನ್ನನ್ನು ಕರೆಸಿದ್ದು ಯಾಕೆ ಅಣ್ಣ ?"

ತಾವು ಆಡಬೇಕೆಂದಿದ್ದ ಮಾತನ್ನು ಹೇಗೆ ಪ್ರಾರಂಭಿಸುವುದೆಂದು ಯೋಚಿಸುತ್ತಿದ್ದ ನಾಗಪ್ಪನವರಿಗೆ ಮಗನ ಪೀಠಿಕೆಯಿಂದ ಅನುಕೂಲವೇ ಆಯಿತು. ಕೂಡಲೇ ಅವರು ತಾವು ನಿಯೋಜಿಸಿದ್ದ ಅವನ ಮರುಮದುವೆಯ ವಿಷಯವನ್ನು ಉತ್ಸಾಹದಿಂದ ವಿವರಿಸಿದರು.

ತಂದೆಯ ಮಾತು ಮುಗಿದ ಬಳಿಕ—

"ನನಗೆ ಇಷ್ಟವಿಲ್ಲಣ್ಣ"

—ಎಂದು ಒಂದೇ ಮಾತಿನಲ್ಲಿ ಉತ್ತರಿಸಿದ ಶಾಮು.

"ಹಾಗನ್ನಬಹುದೇ ಮಗು? ಇಂಥ ಸಂಬಂಧ ಸಿಕ್ಕುವುದು ಸುಲಭವೆ ?

ದೇವರು ಭಾಗ್ಯಕೊಟ್ಟಾಗ ಬಿಡಬಾರದು. ಅನೂ ಹತ್ತೋ–ಹದಿನೈದೋ ಸಾವಿರ ರೂಪಾಯಿ ಬಂದರೆ ಯಾರನ್ನು ಕೆಡಿಸಿತು ?"

"ಯಾರನ್ನೇನು—ಎಲ್ಲರನ್ನೂ ಕೆಡಿಸಿತು. ಸಂಸಾರವನ್ನೇ ನಾಶ ಮಾಡಿತು. ಇನ್ನು ಈ ಹತ್ತು–ಹದಿನೈದು ಸಾವಿರಕ್ಕೆ ಕೈಯೊಡ್ಡಿ, ಅದನ್ನೂ ತೆಗೆದುಕೊಂಡು ಹೋಗಿ ಆ ಬ್ಯಾಂಕರನಿಗೆ ಕೊಟ್ಟುಬಾ. ಬಡ್ಡಿಗೆ ಬಡ್ಡಿ ಸೇರಿಸಿ ಸುಸ್ತಿ ಬಡ್ಡಿ ಕೊಡುತ್ತಾನೆ! ನೀನೂ ಸುಸ್ತಾಗುತ್ತೀಯೆ !!"

"ಯಾಕೊ ಶಾಮು, ಹಾಗನ್ನುತ್ತೀಯೆ ?"

" ಇನ್ನು ಹೇಗೆ ಹೇಳಲಿ? ಈಗ ನಿನ್ನ ಬ್ಯಾಂಕರನ ಗತಿ ಏನಾಗಿದೆ ಗೊತ್ತೆ ನಿನಗೆ? "

" ಏನಾಗಿದೆ ? "

" ಅವನು ಮುಳುಗಿದ ! "

" ನಿಜವೇನೋ ಶಾಮು ? "

" ಸುಳ್ಳು ಹೇಳುತ್ತೇನೆ ಅಂತ ತಿಳಿದುಕೊಂಡೆಯಾ? ಬೆಳಗಿನಿಂದ ಅವನ ಮನೆಯ ಮುಂದೆ ಪೋಲೀಸು ಕಾವಲು ನಿಂತಿದೆ. ಅವನಿಗೆ ಹಣ ಕೊಟ್ಟವರಲ್ಲಿ ಇಬ್ಬರು ಈ ಸುದ್ದಿ ಕೇಳಿ ಗುಂಡಿಗೆ ಒಡೆದು ಸತ್ತರಂತೆ. ಅವನ ಮನೆಯ ಮುಂದೆ ಜನಜಾತ್ರೆ! ಬೇಕಾದರೆ ಇವತ್ತಿನ ಪೇಪರ್ ನೋಡು – ತಂದಿದ್ದೇನೆ. ನಮ್ಮ ಪತ್ರಿಕೆಯ ವರದಿಗಾರ ಅಲ್ಲಿಗೆ ಹೋಗಿ, ನೋಡಿಕೊಂಡು ಸುದ್ದಿ ತಂದಿದ್ದಾನೆ."

—ಎನ್ನುತ್ತಾ ಶಾಮು ತನ್ನ ಕೈಚೀಲದಿಂದ ಪತ್ರಿಕೆಯನ್ನು ತೆಗೆದು ನಾಗಪ್ಪನವರ ಕೈಗಿತ್ತ. ಅದುವರೆಗೂ ಅವನ ಮಾತನ್ನು ನಂಬದೆ ಇದ್ದ ನಾಗಪ್ಪನವರು ಪತ್ರಿಕೆ ಓದುತ್ತ ಓದುತ್ತ ಗಾಬರಿಯಿಂದ ಕಣ್ಣರಳಿಸಿ, ಬಾಯಿ ಬಿಡುತ್ತಾ, ನಿಮಿಷಾರ್ಧದಲ್ಲಿ ಕೆಳಗುರುಳಿದರು ; ಸ್ಮೃತಿ ತಪ್ಪಿತು.

" ಅಯ್ಯೋ, ಇದೇನಾಯ್ತೋ ಶಾಮು ? "

—ಎಂದು ಚೀರಿದರು ವೆಂಕಮ್ಮ.

ಕಿಟ್ಟು, ನಾಣಿ, ಸರಸು, ಲಲಿತ – ಎಲ್ಲರೂ ಅಂಗಳಕ್ಕೆ ಧಾವಿಸಿದರು.

ಸುಮಿತ್ರೆ ಪುಟ್ಟ ಚೊಂಬಿನ ತುಂಬ ನೀರು ತಂದಳು. ಶಾಮು ತಂದೆಯ ತಲೆಗೆ ನೀರು ಚಿಮುಕಿಸಿ ತಟ್ಟಿದ.

ಸ್ವಲ್ಪ ಹೊತ್ತಿನ ಬಳಿಕ ನಾಗಪ್ಪನವರಿಗೆ ಎಚ್ಚರವಾಯಿತು. ಅವರು ನಿಧಾನವಾಗಿ ಕಣ್ಣು ತೆರೆಯುತ್ತಿದ್ದಂತೆಯೇ 'ಠಣ್....ಠಣಾರ್' ಎಂದು ಚಾವಣಿಯ ಹೆಂಚುಗಳೆರಡು ಬಿದ್ದ ಸದ್ದು ಕೇಳಿಸಿತು. ಕೂಡಲೇ ತಮ್ಮ ತಲೆಯನ್ನು ಮುಟ್ಟಿನೋಡಿಕೊಂಡರು ನಾಗಪ್ಪ.

" ಲಕ್ಷಾಧಿಕಾರಿ ಆಗ್ತೀನಿ ಅಂತ ನಂಬಿದ್ದೆನಲ್ಲೋ! ಅಯ್ಯೋ ಪಾಪಿ, ನನ್ನ ಹಣವನ್ನೆಲ್ಲಾ ನುಂಗಿ, ನೀರು ಕುಡಿದು, ನನ್ನನ್ನು ಭಿಕ್ಷಾಧಿಕಾರಿಯಾಗಿ ಮಾಡಿದೆಯಲ್ಲೋ ಚಂಡಾಲಾ ! "

—ನಡುಗುವ ತುಟಿಗಳಿಂದ ಮುರುಕು ಮುರುಕಾಗಿ ಮಾತನಾಡಿದರು ನಾಗಪ್ಪ.

“ ಅಣ್ಣನಿಗೆ ಚಳಿಯಾಗುತ್ತಿದೆಯೇನೋ! ಇನ್ನೊಂದು ರಗ್ಗು ಹೊದಿಸೇ ಚುಮ್ಮಿ”

—ಎಂದ ಶಾಮು.

ನಾಗಪ್ಪನವರಿಗೆ ನಿಜವಾಗಿಯೂ ಚಳಿಯಾಗುತ್ತಿತ್ತು. ಕೈಕಾಲುಗಳು ಕಂಪಿಸುತ್ತಿದ್ದವು. ತುಟಿ ಗಡಗಡನೆ ನಡುಗುತ್ತಿತ್ತು. ಮೈ ಬೆಚ್ಚಗಾಗ ತೊಡಗಿತ್ತು.

ಆದರೂ—

“ ಅಯ್ಯಯ್ಯೋ ! ನನ್ನ ಇಪ್ಪತ್ತೆರಡು ಸಾವಿರ ಹೋಯ್ತಲ್ಲಾ !! ಬಡ್ಡಿ ಬೇಡ–ಅಸಲಾದರೂ ಹತ್ತು ಸಾವಿರ ಸಿಕ್ಕಿದರೆ ಸಾಕು ಭಗವಂತಾ !!!

—ಎಂದು ತೊದಲ್ನುಡಿಯಲ್ಲಿ ಹಲುಬುತ್ತಿದ್ದರು.

“ ಮಲಗಿಕೋಪ್ಪ. ಹೆಚ್ಚು ಮಾತಾಡಿ ಆಯಾಸಮಾಡಿಕೊಳ್ಳ ಬೇಡ. ಮೊದಲೇ ನಿನ್ನ ಮೈಗೆ ಸರಿಯಾಗಿಲ್ಲ. ಮತ್ತೆ ಇನ್ನೇನಾದರೂ ಆಗಿಬಿಟ್ಟೀತು ! ”

—ಎಂದು ಶಾಮು ಮೈಮುರಿಯುತ್ತಾ ಎದ್ದುನಿಂತ.

ಸುಮಿತ್ರೆ ಹಾಸಿಗೆಗಳನ್ನು ಹಾಸಿದ್ದಳು. ಎಲ್ಲರೂ ಮಲಗಿದ ಮೇಲೆ ವೆಂಕಮ್ಮನವರು ದೀಪವನ್ನು ಸಣ್ಣಗೆ ಮಾಡಿದರು. ಆದರೆ ನಾಗಪ್ಪನವರಿಗೆ ನಿದ್ರೆ ಬರುವುದೇ ? ಅವರು ‘ ಹತ್ತು ಸಾವಿರ....ಹತ್ತು ಸಾವಿರ ’ ಎಂದು ಬಡಬಡಿಸುತ್ತಲೇ ಇದ್ದರು.

ಹೊರಗಡೆ ಗಾಳಿಯ ‘ಮರ್ರೋ’ ಶಬ್ದ ಕರ್ಕಶವಾಗಿ ಕೇಳಿಬರುತ್ತಿತ್ತು. ಮನೆ - ಮರಗಳನ್ನುರುಳಿಸತ್ತೇನೆಂದು ಭೀಕರ ಘೋಷಣೆ ಮಾಡುತ್ತಾ, ಯಾರನ್ನೂ ಲಕ್ಷಿಸದೆ, ಕತ್ತಲೆಯ ಕರಾಳರೂಪವನ್ನು ಭೇದಿಸಿಕೊಂಡು, ನಾಗಪ್ಪನವರ ಮನೆಯ ಹೊರಬಾಗಿಲಿಗೆ ಗಟ್ಟಿಯಾಗಿ ಅಪ್ಪಳಿಸಿ, ಅದು ‘ ಆಗಲೋ – ಈಗಲೋ ’ ಮುರಿದು ಬೀಳುತ್ತೇನೆಂದು ಗೋಳಿಡುವಂತೆ ಮಾಡುತ್ತಿದ್ದಿತು.

ಆದರೆ ನಾಗಪ್ಪನವರಿಗೇನು ಅತ್ತಕಡೆ ಗಮನವಿದೆಯೆ ?

ಅವರ ಗಮನವೆಲ್ಲ ಕಳೆದುಹೋದ ಹತ್ತು ಸಾವಿರದ ಮೇಲೆಯೇ ಸ್ತಬ್ಧವಾಗಿ ನಿಂತಿತ್ತು.

ಅರ್ಧಲಕ್ಷದ ಕನಸು ಕಟ್ಟಿದ್ದ ನಾಗಪ್ಪನವರು ಶಾಮುವಿಗೆ ಎರಡನೆಯ ಸಂಬಂಧ ಬಂದಾಗ ಲಕ್ಷಾಧಿಪತಿಯಾಗುವ ಆಸೆ ಇಟ್ಟುಕೊಂಡಿದ್ದರು. ಆದರೆ ಬ್ಯಾಂಕರನು ಹಣವನ್ನು ನುಂಗಿ, ತಮ್ಮನ್ನು ಮುಳುಗಿಸುವನೆಂದು ಅವರು ತಿಳಿದಿರಲಿಲ್ಲ.

" ಅಯ್ಯೋ, ನನ್ನ ಹಣ ನೀರಿಗೆ ಹೋಯಿತಲ್ಲಾ ! ಒಂದು ಕಾಸೆ–ಎರಡು ಕಾಸೆ........ಹತ್ತು ಸಾವಿರ ರೂಪಾಯಿ ! ಬಡ್ಡಿ ಬೆಳೆದು ದೊಡ್ಡದಾಗಿದ್ದ ಇಪ್ಪತ್ತೆರಡು ಸಾವಿರ ರೂಪಾಯಿ !! "

—ಕ್ಷಣಕ್ಷಣವೂ ಹಲುಬುತ್ತಾ ಹೊರಳಾಡುತ್ತಿದ್ದರು ನಾಗಪ್ಪ.

ನಡುರಾತ್ರಿ ಮೀರಿದ್ದಾಗ, ಒಮ್ಮೆ ಧಿಗ್ಗನೆ ಎದ್ದು ಕುಳಿತು—

" ಶಾಮು....ಶಾಮು...."

—ಎಂದು ಕೂಗಿಕೊಂಡರು.

ಆಗತಾನೆ ನಿದ್ರೆಯ ಜೋಂಪಿನಲ್ಲಿದ್ದ ಶಾಮು ತಟ್ಟನೆ ಎಚ್ಚತ್ತು—

" ಕರೆದೆಯಾ ಅಣ್ಣ ? "

—ಎಂದು ಕೇಳಿದ.

" ಹೌದಪ್ಪ. ಬಾರೋ ಇಲ್ಲಿ "

ಶಾಮು ಹೊದಿಕೆ ಸರಿಸಿ, ದೀಪ ದೊಡ್ಡದು ಮಾಡಿ, ತಂದೆಯ ಬಳಿಗೈದಿದ.

" ಏನಣ್ಣ ? "

" ನಾನು ಹೇಳಿದ ಮಾತಿಗೆ ಒಪ್ಪಿಕೊಳ್ಳೊ ಮಗು "

" ಏನು ಹೇಳಣ್ಣ ? "

" ಅದೇ—ಆ ಹುಡುಗಿಯನ್ನು ನೀನು ಮದುವೆಯಾದರೆ, ಕೊನೆಯ ಪಕ್ಷ ಹದಿನೈದು ಸಾವಿರ ವರದಕ್ಷಿಣೆ ಸಿಕ್ಕುತ್ತದೆ. ಹತ್ತು ಸಾವಿರ ಕಳೆದುಕೊಂಡ ದುಃಖ ಸ್ವಲ್ಪವಾದರೂ ನನಗೆ ಕಡಿಮೆಯಾಗುತ್ತದೆ."

" ನಿನಗೇನು ಹುಚ್ಚು ಹಿಡಿದಿದೆಯೇ ಅಣ್ಣ ? "

" ಹೌದಪ್ಪ. ನೀನು ಈ ಸಂಬಂಧ ಬೇಡವೆಂದರೆ ನನಗೆ ಹುಚ್ಚೇ ಹಿಡಿಯುತ್ತದೆ."

" ಹಾಗೇ ಆಗಲಿ ಬಿಡು! ಅದರಿಂದ ಯಾರಿಗೂ ನಷ್ಟವಿಲ್ಲ!! "

" ನಿನಗೆ ಇಷ್ಟು ಕಠಿಣ ಮನಸ್ಸೇನೋ ಶಾಮು? "

" ಹೌದಪ್ಪ. ನಿರ್ದಯನಾದ ತಂದೆಯ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಸ್ವಲ್ಪಮಟ್ಟಿಗಾದರೂ ಕಠಿಣಮನಸ್ಸು ಬೇಡವೆ? "

" ಹಾಗನ್ನಬಹುದೇನೋ ಶಾಮೂ? "

" ಬೆಳಿಗ್ಗೆ ಮಾತನಾಡೋಣ; ಮಲಗಿಕೋ ಅಣ್ಣ."

" ನನಗೆ ಸಮಾಧಾನವೇ ಇಲ್ಲಪ್ಪ."

" ದುರಾಸೆ ಬಿಟ್ಟು, ದೇವರ ಮೇಲೆ ಮನಸ್ಸಿಟ್ಟು ಮಲಗಿಕೊ, ಸಮಾಧಾನ ತಾನಾಗಿಯೇ ಸಿಕ್ಕುತ್ತದೆ "

—ಎನ್ನುತ್ತಾ ಶಾಮು ಎದ್ದು ನಿಂತ.

ಅವನ ಮಾತಿನ ವೇಗವನ್ನೂ, ಮನಸ್ಸಿನ ಉದ್ವೇಗವನ್ನೂ ಮೀರಿಸು ವಂತೆ ಬಂದ ಗಾಳಿಯ ಪ್ರಚಂಡ ವೇಗ ಚಾವಣಿಯಿಂದ ಹೆಂಚಿನ ಮಳೆ ಯನ್ನೇ ಸುರಿಸಿತು.

" ಈ ಮನೆಗೂ ಏನೋ ಗ್ರಹಚಾರ ಬಂದಿದೆ! "

—ಎಂದುಕೊಳ್ಳುತ್ತಾ ಶಾಮು ದೀಪ ಸಣ್ಣಗೆ ಮಾಡಿ ಮಲಗಿದ.

ಇನ್ನೂ ನಾಲ್ಕೈದು ನಿಮಿಷಗಳೂ ಕಳೆದಿರಲಿಲ್ಲ. ಅಷ್ಟರಲ್ಲಿ ಸಾಕ್ಷಾ ತ್ತಾಗಿ ಬಂದಿತ್ತು ಗ್ರಹಚಾರ!

ಗಾಳಿಗೆ ಹೆದರಿದ ಚಾವಣಿ, ಹಾರಿ, ಕಿಟ್ಟುವಿನ ಕೋಣೆಯ ಹೆಂಚುಗಳು 'ಟಪಟಪ'ನೆ ಉದುರಿದವು.

" ಅಯ್ಯಯ್ಯೋ, ನಾ ಸತ್ತೆ! "

—ಎಂದು ಕೂಗಿಕೊಂಡಳು ಸರಸು.

ಆಗತಾನೆ ಮಲಗಿದ್ದ ಶಾಮು ಗಾಬರಿಯಿಂದ ಎದ್ದು, ದೀಪ ದೊಡ್ಡದು ಮಾಡಿ, ಹೊರಕೋಣೆಯ ಕಡೆಗೆ ಧಾವಿಸಿದ.

ಕಿಟ್ಟುವೂ ಸರಸುವೂ ಹೊರಗೆ ನಿಂತು, ಬೆಚ್ಚಿದವರಂತೆ ಕೋಣೆಯೊಳಗೆ ಇಣುಕುತ್ತಿದ್ದರು. ಕಿಟ್ಟುವಿನ ಕೋಣೆಯ ತುಂಬ ಹೆಂಚು ತುಂಬಿ, ಚಾವಣಿ

ಯಿಲ್ಲದ ಬೋಡುಗೋಡೆಗಳು 'ಬಿಕೋ' ಎಂದು ನಿಂತಿದ್ದುದು ಫಣಾರನೆ ಮಿಂಚಿದ ಮಿಂಚಿನ ಬೆಳಕಿನಲ್ಲಿ ಗೋಚರಿಸಿತು.

" ಏನಾಯಿತು ಕಿಟ್ಟು ? "

ಶಾಮುವಿನ ಪ್ರಶ್ನೆಗೆ, ಅಂಗಳದ ಕಡೆಯಿಂದ ಬಂದ ಎದೆ ಇರಿಯುವ ಸದ್ದು ಉತ್ತರ ಹೇಳಿತು. ಮೂವರೂ ಅತ್ತ ಓಡಿ, ನೋಡಿದಾಗ ಅಂಗಳದ ಅರ್ಧಭಾಗದ ಚಾವಣಿ ಹಾರಿಹೋಗಿತ್ತು. 'ಬಿಡೋ' ಎಂದು ಬೀಸುತ್ತಿದ್ದ ಗಾಳಿ ಅಂಕೆ-ಶಂಕೆಯಿಲ್ಲದೆ ಅಂಗಳಕ್ಕೆ ನುಗ್ಗಿ ದೀಪವಾರಿಸಿತ್ತು. ಸುಮಿತ್ರೆಯೂ ವೆಂಕಮ್ಮನವರೂ ಎದ್ದು ಹೊರಗೆ ಓಡಿದರು. ನಾಗಪ್ಪನವರೂ ತಮ್ಮ ಎದೆಯನ್ನು ಅಂಗೈಯಲ್ಲಿ ಬಿಗಿಯಾಗಿ ಹಿಡಿದು, 'ಅಯ್ಯಯ್ಯೋ' ಎನ್ನುತ್ತಾ ಹೊರಗೆ ಬಂದರು. ಊರುಗೋಲು ಸಿಕ್ಕದೆ ಕತ್ತಲೆಯಲ್ಲಿ ತಡಕಾಡುತ್ತಿದ್ದ ಶ್ರೀನಿವಾಸನ ತಲೆಯ ಮೇಲೆ 'ಕಟ್ ಕಟ್ ಕಟಿಲ್' ಎಂದು ಮರದ ತೊಲೆಯೊಂದು ಮುರಿದುಬಿತ್ತು. 'ಹ್ಹಾ' ಎಂದು ಕೂಗುತ್ತಾ ಕೆಳಗೆ ಬಿದ್ದ. ಆಗಸದಲ್ಲಿ ಗುಡುಗು ಭೋರಿಟ್ಟಿತು.

" ಶೀನು ಬರಲಿಲ್ಲ. ಅವನಿಗೇನಾಯ್ತೋ ನೋಡು ಮಗೂ "

—ಎಂದು ಶಾಮುವನ್ನು ಉದ್ದೇಶಿಸಿ ನುಡಿದರು ವೆಂಕಮ್ಮ.

ಕಿಟ್ಟು, ನಾಣಿ ಕತ್ತಲೆಯಲ್ಲಿಯೇ ಅಂಗಳಕ್ಕೆ ಧಾವಿಸಿ, ಶ್ರೀನಿವಾಸನು ಮಲಗಿದ್ದ ಸ್ಥಳವನ್ನು ಮಿಂಚಿನ ಬೆಳಕಿನಿಂದ ಗುರುತು ಹಿಡಿದು, ಅತ್ತ ನಡೆದರು.

ಮುಲುಕುತ್ತಾ ನರಳುತ್ತಾ ಬಿದ್ದಿದ್ದ ಶ್ರೀನಿವಾಸನನ್ನು—

" ಏನಾಯಿತು ಶೀನಣ್ಣ ? ಎದ್ದು ಬಾ ಹೊರಗೆ "

—ಎಂದು ಕರೆದ ನಾಣಿ.

' ತೊಲೆ ಬಿತ್ತು ಕಣೋ—ತಲೇ ಮೇಲೆ.... ಅಯ್ಯಯ್ಯೋ...."

—ಎಂದು ನರಳಿದ ಶ್ರೀನಿವಾಸ.

ಕಿಟ್ಟು-ನಾಣಿಯರು ಅವನನ್ನು ಹಿಡಿದುಕೊಂಡು ಹೊರಕ್ಕೆ ಸಾಗಿಸಿದರು.

ಗುಡುಗು ಭೋರ್ಗರೆಯಿತು. ಗಾಳಿಯ ವೇಗ ನಡುಗಿಸುವಷ್ಟು ಜೋರಾಗಿ ಮೊರೆಯಿಟ್ಟಿತು. ಮಿಣ್ಣನೆ ಹೊಳೆದ ಮಿಂಚಿನ ಬೆಳಕಿನಲ್ಲಿ

ಶ್ರೀನಿವಾಸನನ್ನು ಕಂಡ ವೆಂಕಮ್ಮ ಅವನ ತಲೆಯಿಂದ ಹರಿದುಬರುತ್ತಿದ್ದ ರಕ್ತಪ್ರವಾಹವನ್ನು ನೋಡಲಾರದೆ ಕಣ್ಣುಮುಚ್ಚಿಕೊಂಡು, 'ಅಯ್ಯೋ!' ಎಂದು ಚೀರಿ ಕೆಳಗುರುಳಿದರು. ಲಲಿತ ತಡಮಾಡದೆ ಸೆರಗಿನ ತುದಿಯನ್ನು ಹರಿದು ಶ್ರೀನಿವಾಸನ ತಲೆಗೆ ಕಟ್ಟತೊಡಗಿದಳು.

ಬಾನಬಯಲಿನ ರಣರಂಗದಲ್ಲಿ, ಭೀಕರಾಕೃತಿಯಿಂದ ಸೆಟೆದು ನಿಂತಿದ್ದ ಗುಡುಗು-ಮಿಂಚುಗಳಿಗೆ ಗಾಳಿ ರಣಗೀತೆಯನ್ನು ಹಾಡಿ ಉದ್ರೇಕಿಸಿತು. ಎಲ್ಲೆಲ್ಲಿಂದಲೋ ಬಂದ ಮುಗಿಲ ಸೇನೆಯ ತುಂಡುಗಳು ಅಗ್ರಹಾರದ ನೆತ್ತಿಯ ಮೇಲೆ ಒಂದುಗೂಡಿ ನಿಂತವು. ವಂಚಿಸಿ ವಂಚಿಸಿ ಬೆಳಕು ಬೀರುತ್ತಿದ್ದ ಮಿಂಚು, ಗುಡಿಗಿನೊಡನೆ ಬೆರೆತು ಕಂಚಿನ ನಾದದಿಂದ 'ಸಿಡಿಲು' ಸಿಡಿಮದ್ದನ್ನು ಸಿಡಿಸಿತು. ಹೆದರಿ ಸೋತ ಮೋಡ ಕರಗಿ ಹನಿಯಿಟ್ಟಿತ್ತು. ಆದರ ಸಾವಧಾನ ವನ್ನು ಸಹಿಸಲಾರದೆ ಗಾಳಿ ಮತ್ತೊಮ್ಮೆ ರಭಸದಿಂದ ಅಪ್ಪಳಿಸಿತು. ಬುಳ ಬುಳನೆ ಹರಿದ ಮೋಡದ ಕಣ್ಣೀರು ಮಳೆಯ ನೀರಾಗಿ, ಚಾವಣಿಯಿಲ್ಲದ ನಾಗಪ್ಪನವರ ಮನೆಯ ತುಂಬ ತುಂಬಿಕೊಂಡಿತು. ಹೊರಗೆ ನಿಂತಿದ್ದ ನಾಗಪ್ಪನವರ ಸಂಸಾರವೂ ಕಣ್ಣೀರಿನ ಕಡಲಿನಲ್ಲಿ ಮುಳುಗಿದ್ದಿತು.

"ಮಳೆಯಲ್ಲಿ ನಿಂತು ಅನ್ಯಾಯವಾಗಿ ನೆನೆಯುತ್ತಿದ್ದೇವಲ್ಲಮ್ಮ. ಸೀತಕ್ಕನ ಜಗುಲಿಗಾದರೂ ಹೋಗೋಣ ನಡೆಯಿರಿ"

--ಎಂದ ಶಾಮು.

ಕಿಟ್ಟು - ನಾಣಿಯರು ಶ್ರೀನಿವಾಸನನ್ನು ಹೊತ್ತುಕೊಂಡು ನೆರೆಮನೆಯ ಕಡೆಗೆ ನಡೆದರು. ಉಳಿದವರೂ ಅವರನ್ನು ಹಿಂಬಾಲಿಸಿ ಸೀತಕ್ಕನ ಜಗುಲಿ ಯನ್ನು ಸೇರಿದರು.

"ನನ್ನ ಹುಟ್ಟು ಅಡಗಿಹೋಯ್ತಲ್ಲೋ........ಅಯ್ಯೋ, ನಾನಿನ್ನು ಚೇತರಿಸಿಕೊಳ್ಳುತ್ತೇನೆಯೇ ದೇವರೇ?....ಶಾಮೂ....ಶಾಮೂ...."

—ಎಂದು ಆರ್ತರಾಗಿ ಕೂಗಿದರು ನಾಗಪ್ಪ.

"ಸುಮ್ಮನೆ ಇರಣ್ಣ"

"ಹ್ಯಾಗಿರಲಪ್ಪಾ ಸುಮ್ಮನೆ? ನನ್ನ ಮಾತು ಕೇಳೋ ಮಗು. ನೀನು ಒಪ್ಪದೆ ಇದ್ದರೆ ನಮ್ಮ ಬಾಳು ನಾಯಿಬಾಳಾಗುತ್ತದೆ ಶಾಮು. ಸಂಸಾರ

ಬೀದಿಯ ಪಾಲಾಗುತ್ತದೆ. ಆ ಹುಡುಗಿಯನ್ನು ನೀನು ಮದುವೆಯಾದರೆ ಮನೆಯಲ್ಲಿ ಲಕ್ಷ್ಮಿ ತಾಂಡವವಾಡುತ್ತಾಳೆ. ಈ ವನವಾಸ ಬೇಡ."

" ಈಗಾಗಿರುವುದು ಸಾಲದೇನಣ್ಣ ? ಅದೋ ನೋಡು ಆ ಕಡೆ - ದರಿದ್ರಲಕ್ಷ್ಮಿ ತಾಂಡವವಾಡುತ್ತಾ ಇರುವುದು ಕಾಣಿಸುವುದಿಲ್ಲವೆ ? ಪ್ರಕೃತಿಯೇ ಮುನಿದುಕೊಟ್ಟಿರುವ ಶಾಪ – ಈ ಮನೆಯನ್ನೇ ಉರುಳಿಸಿ ಎಚ್ಚರಿಸುತ್ತಿರುವುದು ನಿನಗೆ ತಿಳಿಯಲಿಲ್ಲವೆ ? ನಿನ್ನ ವರದಕ್ಷಿಣೆಯ ಆಸೆಯಿಂದ ಈಗಾಗಲೇ ನಮ್ಮ ಸಂಸಾರ ಬೀದಿಯ ಪಾಲಾಗಿರುವುದು ನಿನ್ನ ಕಣ್ಣಿಗೆ ಬೀಳುತ್ತಿಲ್ಲವೆ ?

" ಹೌದು ಮಗು ; ಅದನ್ನೆಲ್ಲಾ ಸರಿಪಡಿಸುವುದಕ್ಕಾಗಿಯೇ ಕೈತುಂಬ ವರದಕ್ಷಿಣೆ ಕೊಟ್ಟು ಕೈಹಿಡಿಯುವ ಕನ್ಯೆ ಮನೆ ಹುಡುಕಿಕೊಂಡು ಬಂದಿದ್ದಾಳೆ"

" ಇನ್ನೂ ಬುದ್ಧಿ ಬರಲಿಲ್ಲವೆ ಅಣ್ಣಾ ? ವರದಕ್ಷಿಣೆ ನಿನ್ನ ಮನೆಯನ್ನೇ ಹಾಳುಮಾಡಿದೆಯಲ್ಲಾ ! ನಮ್ಮ ತುಂಬಿದ ಸಂಸಾರವನ್ನೇ ಕಣ್ಣೀರಿನಲ್ಲಿ ಮುಳುಗಿಸಿದೆಯಲ್ಲಾ ! ಇದನ್ನೆಲ್ಲಾ ಕಂಡು ಕಂಡು, ಮತ್ತೆ ಆ ವರದಕ್ಷಿಣೆಯ ಉರಿಗೆಂಡವನ್ನು ಉಡಿಯಲ್ಲಿ ಕಟ್ಟಿಕೊಳ್ಳುತ್ತಿರುವೆಯಲ್ಲಾ ! ಅದು ನಿನ್ನ ಸಂಸಾರವನ್ನೇ ಉರಿಸುತ್ತಿದ್ದರೂ, ಅದರ ಪರಿವೆಯೇ ಇಲ್ಲದಂತೆ ಇರುವೆಯಲ್ಲಾ ! "

—ಶಾಮುವಿನ ಮಾತುಗಳು ನಾಗಪ್ಪನವರ ಮನಸ್ಸಿಗೆ ರಾಚಿದಂತೆ ಮಳೆಯ ಇರುಚಲು ಹನಿಯೂ ಅವರ ಮುಖಕ್ಕೆ ರಾಚಿತು. ಅವರು ಮುಖ ಮುಚ್ಚಿಕೊಂಡರು.

ಶಾಮು ಮತ್ತೆ ಪ್ರಾರಂಭಿಸಿದ—

" ನಿನ್ನ ' ವರದಕ್ಷಿಣೆ 'ಯ ದುರಾಸೆಯೊಂದಿಲ್ಲದಿದ್ದರೆ, ನಂದಗೋಕುಲದಂತಹ ನಮ್ಮ ಸಂಸಾರ ಆನಂದದಿಂದ ಮೆರೆಯುತ್ತಿತ್ತು. ಆದರೆ ನೀನೇ ಅದನ್ನು ಹಾಳುಮಾಡಿ, ನಿನ್ನ ಮಕ್ಕಳ ಸುಖಕ್ಕೆ ಕಲ್ಲುಹಾಕಿದೆ. ನಗೆಯ ಲಹರಿಯಲ್ಲಿಯೇ ಗಾನರಸವನ್ನು ಸೂಸುವ ನಕ್ಷತ್ರಗಳಂತೆ ನಲಿಯಬೇಕಾದ ನಿನ್ನ ಮಕ್ಕಳನ್ನು ವರದಕ್ಷಿಣೆಯ ಕರಾಳ ಮೇಘಾವೃತವಾದ ನಿರಾಶೆಯ ಪಾಲುಮಾಡಿದೆ.

ಆಗ ಹೊಳೆದ ಕ್ಷಣಕಾಲದ ಮಿಂಚಿನ ಬೆಳಕಿನಲ್ಲಿ ಒಬ್ಬರ ಮುಖವನ್ನೊಬ್ಬರು ನೋಡಿದರು.

" ಅದೋ ನೋಡು, ಶೀನಣ್ಣ. ಅವನ ಬಾಳು ನಿನ್ನ ವರದಕ್ಷಿಣೆಯ ಧಾಳಿಗೆ ಸಿಕ್ಕಿ ಹಾಳಾಗಿರುವುದನ್ನು ಕಂಡು ನಿನಗೆ ಸಂಕಟವಾಗುವುದಿಲ್ಲವೆ? ವರದಕ್ಷಿಣೆ ಇಲ್ಲದೆ ಬಂದ ಒಳ್ಳೆಯ ಹುಡುಗಿಯನ್ನು ಬಿಟ್ಟು, ನಿನಗಿಷ್ಟ ಬಂದ ಹುಡುಗಿಯನ್ನು ಹಣದ ಆಸೆಯಿಂದ ಅವನ ಕುತ್ತಿಗೆಗೆ ಕಟ್ಟಿ, ಅವನ ದುಷ್ಟತನಕ್ಕೆ ಪ್ರೋತ್ಸಾಹ ಕೊಟ್ಟ ಫಲ ಕ್ರಿಮಿನಲ್ ಕೇಸಿನ ತೀರ್ಪಿನಿಂದ ನಿನಗೆ ಸಿಕ್ಕಿದೆಯಲ್ಲವೆ? ಆ ವರದಕ್ಷಿಣೆಯ ಹಣದಿಂದ ನೀನು ಕಟ್ಟಿಸಿದ ಮನೆ ನಿನ್ನ ಕಣ್ಣೆದುರಿಗೇ ಹಾಳಾಗುತ್ತಿರುವುದನ್ನು ನೋಡುತ್ತಿರುವೆಯಲ್ಲವೆ? ಹ್ಞ್ಞಂ.... ಮಾತನಾಡಣ್ಣ."

ಮಾತನಾಡುವರೆ ನಾಗಪ್ಪ?

ಶಾಮುವೇ ಮುಂದುವರಿಸಿದ—

" ಸುಂದರಣ್ಣನ ಮೊದಲ ಸಂಸಾರ ಹೇಗಿತ್ತೆಂಬುದು ನಿನಗೆ ಗೊತ್ತಿಲ್ಲವೆ ಅಣ್ಣ? ಉಪಕಾರ ಮಾಡಿದ ಮಾವನನ್ನು ವಂಚಿಸಿ, ನಂಬಿಕೊಂಡಿದ್ದ ಅತ್ತಿಗೆ ಮೋಸ ಮಾಡಿ, ಆಸೆ ಇಟ್ಟುಕೊಂಡಿದ್ದ ರತ್ನಳನ್ನು ಕೈಬಿಟ್ಟು, ಹಣವನ್ನು ಹುಡುಕುವ ಹದ್ದಿನಂತೆ 'ಹಣ ಹಣ' ಎಂದು ಬೊಬ್ಬೆಯಿಡುತ್ತಾ, ಹೆಂಗಸಲ್ಲದ ಹೆಣ್ಣನ್ನು ಸುಂದರಣ್ಣನಿಗೆ ಕಟ್ಟಿ, ಅವನ ಬಾಳನ್ನು ಬೆಂಗಾಡಾಗಿ ಮಾಡಿದ್ದು ನಿನಗೆ ತೃಪ್ತಿಯಿಲ್ಲವೇ ಅಣ್ಣ?"

ನಾಗಪ್ಪನವರ ಬಾಯಿಗೆ ಬೀಗಮುದ್ರೆಯಾಗಿತ್ತು. ಅವರ ಕಣ್ಮುಂದೆ ಕಪ್ಪುಹಳ್ಳಿಯ ನಾಗರತ್ನ ನಾಗಿಣಿಯಂತೆ ನಿಂತು ನರ್ತಿಸುತ್ತಿದ್ದಳು. ಬಿನ್ನಾಣದ ಸ್ವರ್ಣ ಅಣಕಿಸಿ ನಕ್ಕು, ಕಾರುಹತ್ತಿ ಕೈಬೀಸಿ ಹೋದಳು— ರುದ್ರಭೂಮಿಯ ಕಡೆಗೆ!

" ನಾಣಿಯ ಬಾಳಾದರೂ ಸುಖವಾಗಿದೆಯೆಂದುಕೊಂಡಿರುವೆಯಾ? ದಿನದಿನಕ್ಕೂ ಅವನು ಕ್ಷೀಣಿಸಿಹೋಗುತ್ತಿರುವುದನ್ನು ನೀನು ಗಮನಿಸುತ್ತಿಲ್ಲವೇ? ಅದಕ್ಕೇನು ಕಾರಣ ಗೊತ್ತೆ?-ನಿನ್ನ ವರದಕ್ಷಿಣೆಯ ಪಿಶಾಚ! ಬಯಸಿದ ಹುಡುಗಿ ಹೆಂಡತಿಯಾಗಲು ನಿನ್ನ ವರದಕ್ಷಿಣೆಯ ಪಿಶಾಚ ಒಪ್ಪದೆಹೋಯಿತು. ಒಲ್ಲದ ಗಂಡನಿಗೆ ಒಲಿದ ಹೆಂಡತಿಯಾಗಿ ಅತ್ತಿಗೆ ಈ ಮನೆಗೆ ಬಂದಳು. ಸುಖಪಡಲು ಬಂದವಳು ಗಂಡನ ಕೊರಗನ್ನು ಕಂಡು ಸುರುಟಿಕೊಂಡಳು. ಅತ್ತ ನಾಣಿ—ಇತ್ತ ಲಲಿತತ್ತಿಗೆ; ನಡುವೆ ನಿನ್ನ ವರದಕ್ಷಿಣೆಯ ಬೆಂಕಿ!

ಅದನ್ನು ನೋಡುತ್ತ ದಿಕ್ಕುತೋರದೆ ನಿಂತು ಸಂಕಟಪಡುತ್ತಿರುವ ಇನ್ನೊಂದು ಜೀವ—ಶಾಂತು!! ಈ ಮೂವರ ಬಾಳನ್ನೂ ನಿನ್ನ ಹಟ-ದುರಾಸೆಗಳ ದಳ್ಳುರಿ ದಹಿಸುತ್ತಿದೆ. ಏನೂ ಅರಿಯದವನಂತೆ ನೀನು ಮಾತ್ರ ತೆಪ್ಪಗಿದ್ದೀಯೆ. ನಿಜವಾಗಿಯೂ ನೀನು ಮನುಷ್ಯನೇನಣ್ಣ ? ”

‘ ಅಲ್ಲ ! ’

—ಎಂದು ಗಂಭೀರವಾಗಿ ನುಡಿಯಿತು ಗುಡುಗು. ಅದರ ಮಾತು ಕೇಳಿ ನಕ್ಕಿತು ಮಿಂಚು. ರೊಯ್ಯನೆ ಬಂದು ಮೈ ಅಪ್ಪಳಿಸಿತು ಕೋಪೋದ್ರಿಕ್ತ ಗಾಳಿ. ‘ ನಿಜ ನಿಜ ’ ಎಂದು ಕೂಗಿಡುವಂತೆ ಇರುಚಲು ಎರಚಿದ ಮಳೆರಾಯ.

“ ಅಮ್ಮ, ತುಂಬ ನೆನೆದುಹೋದೆವಲ್ಲೆ. ಸೀತಕ್ಕನ ಮನೆಯ ಬಾಗಿಲು ತಟ್ಟಲೇನೆ ? ”

—ಸುಮಿತ್ರೆ ಅಳುತ್ತಳುತ್ತ ಕೇಳಿದಳು.

ಅವಳಿಗಿಂತ ಮೊದಲೇ ಅಳುತ್ತಿದ್ದರು ವೆಂಕಮ್ಮ.

ಶಾಮುವಿನ ಮಾತುಗಳು ಅವರ ಕಣ್ಮುಂದೆ ತಮ್ಮ ಸಂಸಾರದ ಸಂಪೂರ್ಣ ಚಿತ್ರವನ್ನು ನಿಲ್ಲಿಸಿತ್ತು. ನಾಗರತ್ನ-ಶ್ರೀನಿವಾಸ, ಸುಂದರು-ಸ್ವರ್ಣ, ಚಿಕ್ಕಮ್ಮ, ಚಂದ್ರು, ಪದ್ಮಮ್ಮ, ರತ್ನ, ಕಿಟ್ಟು-ಸರಸು, ಲಲಿತ-ನಾಣಿ-ಶಾಂತು, ಗಿರಿಜ - ಶಾಮು ಸಾಲುಸಾಲಾಗಿ ಒಬ್ಬರಪಕ್ಕದಲ್ಲೊಬ್ಬರು ನಿಂತಿದ್ದರು. ಅವರೆಲ್ಲಾ ತನ್ನನ್ನು ಬಗೆಬಗೆಯಾಗಿ ಪ್ರಶ್ನಿಸುತ್ತಿರುವಂತೆ ಭಾಸವಾಯಿತು. ಕಣ್ಣಿನಲ್ಲಿ ಧಾರಾವಾಹಿನಿ ; ಬಿಗಿದ ಕಂಠದಲ್ಲಿ ತಡೆದು ನಿಂತ ಮಾತು ; ತುಸು ದೂರದಲ್ಲಿ ಹಾಳು ಸುರಿಯುತ್ತಿರುವ ಮನೆ ; ನಡುರಾತ್ರಿಯನ್ನು ಮೀರಿದ ಹೊತ್ತಿನಲ್ಲಿ ದಿಕ್ಕುಗಾಣದೆ ನಿಂತ ಸಂಸಾರ—

‘ ಅಯ್ಯೋ, ನಾನಿದನ್ನೆಲ್ಲಾ ನೋಡಲಾರೆ ಭಗವಂತ ! ’

—ಎಂದು ಬಿಸುಸುಯ್ದರು ವೆಂಕಮ್ಮ.

“ ಬಾಗಿಲು ತಟ್ಟಲೇನೇ ಅಮ್ಮ ? ”

—ಸುಮಿತ್ರೆ ಮತ್ತೊಮ್ಮೆ ಕೇಳಿದಾಗ ‘ ಹ್ಞುಂ ’ ಎಂದರು ವೆಂಕಮ್ಮ.

“ ರತ್ನಮ್ಮನೋರೇ.... ರತ್ನಮ್ಮನೋರೇ.... ”

—ಎಂದು ಸುಮಿತ್ರೆ ಕೂಗುತ್ತಾ ಬಾಗಿಲು ತಟ್ಟಿದುದನ್ನು ನೋಡಿ, ಬಳಿಯಲ್ಲಿಯೇ ನಿಂತಿದ್ದ ಶಾಮು ಆಶ್ಚರ್ಯಚಕಿತನಾಗಿ ಕೇಳಿದ :

" ಇದೇನೇ ಚುಮ್ಮಿ, ಸೀತಕ್ಕನ ಮನೆಯ ಬಾಗಿಲು ತಟ್ಟುತ್ತಾ, 'ರತ್ನಮ್ಮನೋರೇ ಎನ್ನುತ್ತಿದ್ದೀ? ನಿನಗೇನು ಬುದ್ಧಿ ಸರಿಯಾಗಿದೆಯೋ ಇಲ್ಲವೋ ? "

" ನನ್ನ ಬುದ್ಧಿಯೇನೂ ಕೆಟ್ಟಿಲ್ಲ ಅಣ್ಣಯ್ಯ "

" ಹಾಗಾದರೆ, 'ರತ್ನಮ್ಮನೋರೇ' ಎಂದು ಕರೆಯುತ್ತಿರುವುದೇಕೆ ? "

" ಸೀತಕ್ಕ ಒಳಗಿನ ಅಂಗಳದಲ್ಲಿ ಮಲಗಿರುತ್ತಾರೆ. ರತ್ನಮ್ಮನವರಾದರೆ ಬಾಗಿಲ ಬದಿಯ ಕೋಣೆಯಲ್ಲಿದ್ದಾರೆ. ಕೂಗಿದ ತಕ್ಷಣ ಅವರಿಗೆ ಕೇಳಿಸುತ್ತದೆ."

" ಯಾರವರು ? "

" ನಮ್ಮೂರಿನ ಆಸ್ಪತ್ರೆಗೆ ಹೊಸದಾಗಿ ಬಂದಿರುವ ನರ್ಸ್. ಸೀತಕ್ಕನ ಮನೆಯಲ್ಲಿಯೇ ಬಾಡಿಗೆಗೆ ಇದ್ದಾರೆ."

—ಎಂದಳು ಸುಮಿತ್ರೆ.

ಶಾಮುವಿಗೆ ತಟ್ಟನೆ 'ಶರಣಾಲಯ'ದ ನೆನಪಾಯಿತು. ಅಲ್ಲಿ ನರ್ಸ್ ಶಿಕ್ಷಣಪಡೆದ ರತ್ನಳೇ ಇಲ್ಲಿಗೆ ಬಂದಿರಬಹುದೆ ಎಂಬ ಸಂದೇಹ ಮೂಡಿತು.

ಸುಮಿತ್ರೆ ಮತ್ತೆ ಬಾಗಿಲುತಟ್ಟಿ ಕೂಗಿದಳು.

ತುಸು ಹೊತ್ತಿನ ಬಳಿಕ, ದೀಪಹಿಡಿದುಕೊಂಡು ಬಂದ ಸೀತಕ್ಕ ಬಾಗಿಲು ತೆರೆದಳು.

" ನಿದ್ದೆಮಾಡಿ ಬಿಟ್ಟಿದ್ದೆಯಾ ಸೀತು ? "

" ಇಲ್ಲಕ್ಕ "

—ಎಂದು ಉತ್ತರಿಸಿದಳು ವೆಂಕಮ್ಮನವರ ಪ್ರಶ್ನೆಗೆ ಸೀತಕ್ಕ.

ದೀಪದ ಬೆಳಕಿನಲ್ಲಿ ಸೀತಕ್ಕನ ಮುಖ ನೋಡಿದಾಗ ತಮ್ಮ ದುಃಖವನ್ನೇ ಮರೆತು ವೆಂಕಮ್ಮ ಗಾಬರಿಯ ಧ್ವನಿಯಲ್ಲಿ ಕೇಳಿದರು—

" ಯಾಕೆ ಸೀತು, ಅತ್ತಿರುವ ಹಾಗಿದೆ ? "

" ಇಲ್ಲಕ್ಕ. ರತ್ನಮ್ಮನವರು ತಾವು ಅನುಭವಿಸಿದ್ದನ್ನೆಲ್ಲಾ ಹೇಳುತ್ತಿದ್ದರು. ಆ ಕಥೆ ಕೇಳುತ್ತಾ ನನಗೇ ತಿಳಿಯದ ಹಾಗೆ ಕಣ್ಣೀರು ಬಂತು – ಅಷ್ಟೆ "

" ಹ್ಞಂ. ಎಲ್ಲರ ಬಾಳೂ ಕಣ್ಣೀರೇ ಆಗಿಹೋಯಿತು ! "

—ಎಂದು ವೆಂಕಮ್ಮನವರು ನಿಟ್ಟುಸಿರಿಡುತ್ತಿದ್ದಂತೆಯೇ, ಸುಮಿತ್ರೆ - ಲಲಿತೆಯರು ಸೀತಕ್ಕನ ಮನೆಯೊಳಕ್ಕೆ ನಡೆದರು. ಅವರ ಬಟ್ಟೆಗಳಿಂದ ತೊಟ್ಟಿಡುತ್ತಿದ್ದ ನೀರನ್ನು ಕಂಡು—

" ಇದೇನಕ್ಕ, ಈ ಪಾಡು ? "

—ಎಂದು ಕೇಳಿದಳು ಸೀತಕ್ಕ.

" ಅಲ್ಲಿ ನೋಡಮ್ಮ "

—ಎಂದು ವೆಂಕಮ್ಮನವರು ನುಡಿದಾಗ ಸೀತಕ್ಕನ ದೃಷ್ಟಿಗೆ ಮಿಂಚಿನ ಬೆಳಕಿನಲ್ಲಿ ಗೋಚರಿಸಿತು - ಚಾವಣಿ ಹಾರಿ ಈಜುವ ಕೊಳವಾಗಿದ್ದ ಸಾಗಪ್ಪ ನವರ ಮನೆ.

ಎಲ್ಲರೂ ಒಳಗೆ ನಡೆದರು. ಶೀನುವನ್ನು ಒಂದು ಮೂಲೆಯಲ್ಲಿ ಮಲಗಿಸಿ, ಅವನ ಪಕ್ಕದಲ್ಲಿಯೇ ಕಿಟ್ಟು ನಾಣಿಯರು ಕುಳಿತರು. ಲಲಿತ - ಸುಮಿತ್ರೆ ಯರಿಗೆ ಸ್ವಲ್ಪ ದೂರದಲ್ಲಿ ಸರಸು ಕುಳಿತಳು. ಗೋಡೆಗೆ ಒರಗಿದ್ದ ನಾಗಪ್ಪ ನವರು ತಲೆಯ ಮೇಲೆ ಕೈಹೊತ್ತು ಚಿಂತಾಮಗ್ನರಾಗಿದ್ದರು.

ಅಂಗಳದ ಹಿಂಬದಿಯ ನಡುಮನೆಯಲ್ಲಿ ಕುಳಿತು, ವೆಂಕಮ್ಮನವರು ನಡೆದ ಸಂಗತಿಯನ್ನೆಲ್ಲಾ ಸೀತಕ್ಕನಿಗೆ ತಿಳಿಸಿದರು.

" ಹೀಗಾಗುತ್ತದೆಂದು ಯಾರು ನೆನಸಿದ್ದರು ಅಕ್ಕ ? "

—ಎನ್ನುತ್ತಾ, ನಿಟ್ಟುಸಿರಿಟ್ಟು,

" ರತ್ನಮ್ಮನ ಕತೆ ಕೇಳಿದ್ದರೆ ನೀನೇನು ಹೇಳುತ್ತಿದ್ದೆಯೋ ? "

—ಎಂದು ವೆಂಕಮ್ಮನವರ ಮುಖ ನೋಡಿದಳು ಸೀತಕ್ಕ.

" ನಾನು ಹೇಳುವುದೇನಿದೆ ಸೀತು? ಒಂದಲ್ಲ ಒಂದು ದಿನ ನನ್ನ ಸಂಸಾರಕ್ಕಂತೂ ಇಂತಹ ಗತಿ ಬಂದೇಬರುತ್ತದೆಂಬುದು ನನಗೆ ಮೊದಲೇ ಗೊತ್ತಿತ್ತು ! "

—ಎಂದರು ವೆಂಕಮ್ಮ.

ದಿನದಿನಕ್ಕೆ ಅಧೋಗತಿಗೆ ಇಳಿಯುತ್ತಿದ್ದ ಮನೆಯ ಪರಿಸ್ಥಿತಿಯನ್ನು ಕಂಡು, ಆ ಬಗ್ಗೆ ಚಿಂತಿಸಿ ಚಿಂತಿಸಿ, ಮುಕ್ತಾಯಘಟ್ಟವನ್ನು ಊಹಿಸಿದ್ದ ರೇನೋ ಆಕೆ.

" ನೀನು ರತ್ನಮ್ಮನ್ನು ನೋಡಿಲ್ಲವೆ ಅಕ್ಕ ? "

" ನೆರೆಮನೆಯಲ್ಲಿ ಇರುವಾಕೆಯನ್ನು ನೋಡದೆ ಏನಮ್ಮ? ಆದರೆ ಆಕೆಯೊಡನೆ ನಾನು ಮಾತನಾಡಿಲ್ಲ—ಅಷ್ಟೆ."

" ಯಾರೊಡನೆಯೂ ಆಕೆ ಮಾತಿಗೆ ಹೋಗುವುದಿಲ್ಲ ಅಕ್ಕ. ತಾನಾಯಿತು, ಆಸ್ಪತ್ರೆಯಲ್ಲಿ ತನ್ನ ಕೆಲಸವಾಯಿತು. ಬಿಡುವಿದ್ದಾಗ ಪುಸ್ತಕ ಓದುತ್ತಾ ತನ್ನ ಮನೆಗೆಲಸ ಮಾಡಿಕೊಳ್ಳುತ್ತಾಳೆ. ನಾನೋ ಅಥವಾ ಶಾಂತುವೋ ಮಾತನಾಡಿಸಿದರೆ, 'ಹ್ಞ ಹ್ಞ' ಹೇಳಿ ಸುಮ್ಮನಾಗಿಬಿಡುತ್ತಾಳೆ"

" ಹುಡುಗಿ ಒಳ್ಳೆ ಗುಣವಂತೆಯೆಂದು ಕಾಣುತ್ತದೆ—ಅಲ್ಲವೆ ಸೀತೂ?"

" ಹೌದಕ್ಕ."

" ಜೊತೆಗೆ, ಕಷ್ಟ ಅನುಭವಿಸಿದ್ದಾಳೆಂದು ಹೇಳುತ್ತಿದ್ದೀಯೆ. ಅದಕ್ಕೇ ಮೆತ್ತಗಾಗಿದ್ದಾಳೆ!"

" ನಿಜ ಅಕ್ಕ"

—ಎಂದು ಸೀತಕ್ಕ ಹೇಳುವಷ್ಟರಲ್ಲಿ,

" ಏಳಿ, ಚಾಪೆಯ ಮೇಲೆ ಕೂತುಕೊಳ್ಳಿ. ನೆಲ ಕೊರೆಯುತ್ತಿದೆ"

—ಎನ್ನುತ್ತಾ ರತ್ನ ತನ್ನ ಕೋಣೆಯಿಂದ ತಂದ ಚಾಪೆಯನ್ನು ಅವರ ಬಳಿ ಹಾಸಿದಳು. ಕುಳಿತಿದ್ದಂತೆಯೇ ವೆಂಕಮ್ಮನವರೂ ಸೀತಕ್ಕನೂ ಚಾಪೆಯ ಮೇಲಕ್ಕೆ ಸರಿದರು.

" ಶಾಂತಾ, ಕುಂಕುಮದ ಬಟ್ಟಲು ಕೊಡೆ"

—ಎನ್ನುತ್ತಾ ಸುಮಿತ್ರೆ ನಡುಮನೆಗೆ ಬಂದಳು.

ಅಡಿಗೆ ಮನೆಯ ಹೊಸಿಲಿನ ಬಳಿ ಕುಳಿತಿದ್ದ ಶಾಂತ ಕುಂಕುಮದ ಬಟ್ಟಲು ತಂದುಕೊಡುವಷ್ಟರಲ್ಲಿ—

" ಹಾಗೆಯೇ ಒಂದು ಬಟ್ಟೆ ತೆಗೆದುಕೊಂಡು ಬಾರೆ ಅವ್ವಾ"

—ಎಂದು ಶಾಮು ಕೂಗಿ ಹೇಳಿದುದು ಕೇಳಿಸಿತು.

ವೆಂಕಮ್ಮನವರು ಬಳಿಯಲ್ಲಿಯೇ ನಿಂತಿದ್ದ ಸುಮಿತ್ರೆಯ ಕಡೆಗೆ ಪ್ರಶ್ನಾರ್ಥಕ ನೋಟವನ್ನು ಬೀರಿದರು.

" ಸೀನಣ್ಣನ ತಲೆಯಿಂದ ಇನ್ನೂ ರಕ್ತ ಸುರಿಯುತ್ತಲೇ ಇದೆಯಮ್ಮ. ನಿಂತೇ ಇಲ್ಲ. ಅದಕ್ಕೇ ಚಿಕ್ಕಣ್ಣಯ್ಯ ಬಟ್ಟೆ ತಗೊಂಡುಬಾ ಅಂತ ಹೇಳುತ್ತಿದ್ದಾನೆ"

—ಎಂದಳು ಸುಮಿತ್ರೆ.

ಕೂಡಲೇ ರತ್ನಮ್ಮ—

" ಎಲ್ಲಿ, ಬಾಮ್ಮ ನೋಡೋಣ "

—ಎನ್ನುತ್ತಾ ಸುಮಿತ್ರೆಯನ್ನು ಎಳೆದುಕೊಂಡು ಹೊರಟಳು.

ಮೊದಲು ತನ್ನ ಕೋಣೆಗೆ ಹೋಗಿ, ' ಪ್ರಥಮ ಚಿಕಿತ್ಸೆಯ ಪೆಟ್ಟಿಗೆ' (First-aid Box) ತೆಗೆದುಕೊಂಡು ಸುಮಿತ್ರೆಯೊಡನೆ ಅಂಗಳಕ್ಕೆ ಬಂದಳು.

ಶೀನುವಿನ ತಲೆಗೆ ಕಟ್ಟಿದ್ದ ಬಟ್ಟೆ ರಕ್ತಮಯವಾಗಿತ್ತು. ರತ್ನಮ್ಮ ಅದನ್ನು ಬಿಚ್ಚಿ, ರಕ್ತಬರುತ್ತಿದ್ದಡೆಗೆ ಔಷಧಿ ಹಾಕಿ, ಹತ್ತಿಯಿಟ್ಟು, ' ಬ್ಯಾಂಡೇಜ್ ' ಕಟ್ಟತೊಡಗಿದಳು. ಅವಳು ವಹಿಸಿದ್ದ ಆತ್ಮೀಯವಾದ ಆಸಕ್ತಿಯನ್ನು ಗಮನಿಸುತ್ತಾ, ಅವಳ ಮುಖವನ್ನೇ ಮೌನವಾಗಿ ನೋಡುತ್ತಿದ್ದ ಶಾಮು.

ತುಸುದೂರದಲ್ಲಿ ಕುಳಿತ್ತಿದ್ದ ನಾಗಪ್ಪನವರ ಮನಸ್ಸು – ಅವರು ಅಗ್ರಹಾರಕ್ಕೆ ಬಂದ ಮೊದಲದಿನಗಳನ್ನು ಸ್ಮರಿಸುತಿತ್ತು. ಅನಂತಯ್ಯನವರು ಕಣ್ಮುಂದೆ ಸುಳಿದರು. ವರದಕ್ಷಿಣೆ ತರಲಿಲ್ಲವೆಂದು ವೆಂಕಮ್ಮನವರ ಮೇಲೆ ಕೋಪಗೊಂಡು, ಅವರು ಕಾಲು ಹಿಡಿದು ' ದಮ್ಮಯ್ಯಾ ' ಎಂದಿದ್ದಾಗ, ' ಬಿಡೇ ಕಾಲಅ – ಅನಿಷ್ಟ ' ಎಂದು ತಾನು ಒದೆದುದು, ವೆಂಕಮ್ಮನ ಹಣೆಗೆ ಪೆಟ್ಟುತಾಕಿದುದು ನೆನಪಿನ ಸುಳಿಯಲ್ಲಿ ನೆಲೆನಿಂತಿತು. ವಾಸಕ್ಕೆ ಸಣ್ಣ ಕೋಣೆಯೊಂದನ್ನು ಕೊಟ್ಟು, ಅತ್ಯಂತ ಆತ್ಮೀಯತೆಯಿಂದ ನೋಡಿಕೊಳ್ಳುತ್ತಿದ್ದ ಗೌಡರು ಎದುರಿಗೆ ಬಂದುನಿಂತರು. ' ನನ್ನ ಸ್ನೇಹಕ್ಕೆ ನೀವು ಮಾಡಿದ ಉಪಕಾರ ಇದೇ ಏನು ಸ್ವಾಮಿ ? ' ಎಂದು ಅವರು ಅಣಕಿಸುವ ಧ್ವನಿಯಲ್ಲಿ ನುಡಿದಂತಾಯಿತು. ' ಸಾವಿರದಿನ್ನೂರು ನಿಮ್ಮದೇ ಮೇಲೆ ಸುರೀಲಿಲ್ವೆ ? ನಿಮ್ಮ ಮಗ ಅನ್ನೋ ಹಕ್ಕು ಆ ಹೊತ್ತೇ ನೀವು ಕಳಕೊಂಡಿರಿ ' ಎಂದು ನುಡಿದಿದ್ದ ಸರಸೂನ ಮಾತು ಕಿವಿಯಲ್ಲಿ ಪ್ರತಿಧ್ವನಿಸಿತು. ' ನಾನು ಮದುವೆಯಾಗುವ ಗಂಡು. ನಿಮಗ್ಯಾಕೆ ಕೊಡಬೇಕು ವರದಕ್ಷಿಣೆ ? ' ಎಂದು ನುಡಿದ ನಾಣಿಯ ದಿಟ್ಟತನದ ಚಿತ್ರ ಕಣ್ಣುಮುಂದೆ ಕಟ್ಟಿತು. ' ನೀವೇನೋ ಸಾವಿರದಿನ್ನೂರು ಕೇಳಿದ್ದಿರಿ, ಆದರೆ ನಮ್ಮ ತಂದೆ ಕೈಲಾಗದೆ ಎಂಟುನೂರು ಕೊಟ್ಟರು. ಪಾಪ, ಅದೆಲ್ಲಿಗೆ ಸಾಕು ನಿಮಗೆ ? ನಾನು – ಹೋಗುತ್ತೇನೆ

ನಿಮ್ಮ ಮಗನಿಗೆ ಇನ್ನೊಂದು ಹೆಣ್ಣು ತಂದು ಮದುವೆ ಮಾಡಿ. ಎರಡು ಕೈತುಂಬ ಹಿಡಿಸುವಷ್ಟು ವರದಕ್ಷಿಣೆಯ ನೋಟಿನ ಕಟ್ಟುಗಳನ್ನು ತರುವ ಹುಡುಗಿಯೇ ನಿಮ್ಮ ಕಣ್ಣಿಗೆ ಬಿದ್ದರೆ ಸಂತೋಷವಲ್ಲವೆ? ಹಹ್ಹಹ್ಹಾ!' ಎಂದು ಗಿರಿಜ ಮುಸುಕು ಮುಸುಕಾಗಿ ಕಾಣಿಸಿಕೊಂಡು ನುಡಿದಂತಾಯಿತು. 'ನಾವು ಬಡವರು. ಒಂದು ಸಾವಿರ ವರದಕ್ಷಿಣೆ ಎಲ್ಲಿಂದ ತರೋಣ?' ಎಂದು ದೈನ್ಯದ ಧ್ವನಿಯಲ್ಲಿ ಸೀತಕ್ಕ ನುಡಿಯುತ್ತಿರುವಂತೆ ಕೇಳಿಸಿತು! ಹತ್ತಾರು ಕಡೆಯಿಂದ ತಮ್ಮನ್ನು ನೋಡಿ ಅಣಕಿಸುತ್ತಿರುವಂತೆ ನಾಗಪ್ಪ ನವರಿಗೆ ಭಾಸವಾಯಿತು. ಇಷ್ಟಕ್ಕೆಲ್ಲಾ ಕಾರಣ ಅವನೇ....ಅವನೇ.... ಅವನ ವರದಕ್ಷಿಣೆಯ ದುರಾಸೆಯೇ....' ಎಂದು ಎಲ್ಲರೂ ತನ್ನ ಕಡೆಗೇ ಬೊಟ್ಟುಮಾಡಿ ತೋರಿಸುತ್ತಿರುವಂತಾಯಿತು. ಅವರ ಮನಸ್ಸು ಪಶ್ಚಾತ್ತಾಪ ದಿಂದ ನೊರೆಯಿಡುತ್ತಿತ್ತು. 'ನಾನೇ ಅಪರಾಧಿ....ನಾನೇ ಅಪರಾಧಿ!' ಎಂದು ಅವರ ಒಳದನಿ ಒಂದೇ ಸಮನೆ ಕೂಗಿಕೊಳ್ಳುತ್ತಿತ್ತು. ಎದೆಯಲ್ಲಿ ದುಃಖದ ಕೊರತೆ ಚಿಮ್ಮುತ್ತಿತ್ತು.

ಝಾವದ ಕೋಳಿ ಕೂಗಿತು. ಅಷ್ಟರಲ್ಲಾಗಲೇ ಶೀನುವಿಗೆ ಔಷಧೋಪ ಚಾರ ಮುಗಿಸಿ ರತ್ನಮ್ಮ ಸೀತಕ್ಕನ ಬಳಿ ಕುಳಿತಿದ್ದಳು. ಲಲಿತ, ಸುಮಿತ್ರೆ, ಸರಸು, ಶಾಂತು – ಎಲ್ಲರೂ ನಡುಮನೆಯಲ್ಲಿಯೇ ಕುಳಿತು ವೆಂಕಮ್ಮನವರು ಹೇಳುತ್ತಿದ್ದ ತಮ್ಮ ಬಾಲ್ಯದ ನೆನಪುಗಳನ್ನು ಕೇಳುತ್ತಿದ್ದರು.

ಅಂಗಳದಲ್ಲಂತೂ ನೀರವತೆ ಆವರಿಸಿತ್ತು. ಅದನ್ನು ಮೆಲ್ಲನೆ ಭಂಗ ಮಾಡಲು ಶಾಮು ತಂದೆಯ ಕಡೆಗೆ ತಿರುಗಿ—

"ಅಣ್ಣಾ"

—ಎಂದು ಮೃದುವಾಗಿ ಕೂಗಿದ.

ಅವನ ಮೆಲ್ದನಿಯಷ್ಟೇ ನಿಧಾನವಾಗಿ ತಲೆಎತ್ತಿದರು ನಾಗಪ್ಪ.

"ಹೀಗೆಯೇ ಕುಳಿತರೆ ಏನು ಪ್ರಯೋಜನ ಅಣ್ಣಾ?"

"ನಾನೇನು ಮಾಡಲಿ ಶಾಮು?"

ನಾಗಪ್ಪನವರ ಕಂಠ ಗದ್ಗದವಾಗಿ, ಕಣ್ಣುಗಳಲ್ಲಿ ನೀರುತುಂಬಿತ್ತು.

"ಇಷ್ಟು ಹೊತ್ತು ಏನು ಯೋಚಿಸುತ್ತಿದ್ದೆ ಅಣ್ಣ?"

ನಾಗಪ್ಪನವರ ತುಟಿ ಬಿಗಿದಿತ್ತು. ಹೃದಯದಿಂದ ಹೊಮ್ಮುತ್ತಿದ್ದ

ದುಃಖ ಬಾಯ್ತುಂಬಿ ಕೆನ್ನೆಯುಬ್ಬಿಸಿತ್ತು. ಉಬ್ಬಿದ ಕೆನ್ನೆಯ ಮೇಲೆ ಕಣ್ಣೀರ ವಾಹಿನಿ ಹರಿಯಿತು.

"ಇಷ್ಟು ತಪ್ಪೂ ನನ್ನದೇ ಶಾಮು. ವರದಕ್ಷಿಣೆಯ ಹಣಕ್ಕೆ ಆಸೆಪಟ್ಟು, ನಿಮ್ಮೆಲ್ಲರ ಸುಖಕ್ಕೂ ಕಲ್ಲುಹಾಕಿದೆ. ನನ್ನ ಸಂಸಾರವನ್ನೇ ಹಾಳುಮಾಡಿದೆ"

—ಎಂದು ತೊದಲುತ್ತಾ ನುಡಿದರು ನಾಗಪ್ಪ.

ತಂದೆಯ ಒಳಗಣ್ಣು ತೆರೆಯಿತೆಂದುಕೊಂಡ ಶಾಮು ಆನಂದದಿಂದ ಉಬ್ಬಿ, ಆತ್ಮೀಯತೆಯಿಂದ ತಂದೆಯ ಬಳಿಗೈದಿ, ಅವರ ಕೆನ್ನೆಯ ಮೇಲೆ ಕೈಯ್ಯಾಡಿಸಿ, ಕಣ್ಣೀರು ತೊಡೆಯತೊಡಗಿದ.

ಹೊರಡಗೆ ಗಾಳಿ ಶಾಂತವಾಗಿ, ಮಳೆ ನಿಂತಿದ್ದಿತು. ಮೂಡಲ ಬಾನಂಚು ಬಿಳಿಗೆಂಪಾಗಿ, ಎಳೆಗಿರಣದ ಸರಳನ್ನೆಸೆಯುತ್ತಾ ಬಾಲಸೂರ್ಯ ಮೇಲಮೇಲಕ್ಕೆ ಏರುತ್ತಿದ್ದ.

"ಅಣ್ಣಾ, ಇದೇಕೆ ಕಣ್ಣೀರು? ಅದೋ ನೋಡು, ಹೊಸ ಸೂರ್ಯ ಹುಟ್ಟುತ್ತಿದ್ದಾನೆ; ಹೊಸ ಬೆಳಕು ಬೆಳಗುತ್ತಿದೆ. ಹೊಸ ರಾಗ ಹಾಡುತ್ತಾ ಹಕ್ಕಿಗಳು ಹಾರಾಡತೊಡಗಿವೆ. ಮಧುರವಾಗಿ ಬರುತ್ತಿದೆ ಮಂದಾನಿಲ. ಈ ಕಸದ ಬಾಳನ್ನು ಬದಿಗೆ ಸರಿಸಿ, ಹೊಸ ಹುಮ್ಮಸ್ಸಿನಿಂದ, ಹೊಸ ಉತ್ಸಾಹ ದಿಂದ ಹೊಸಬಾಳನ್ನು ಬಾಳೋಣ; ಬಾ ಅಣ್ಣ."

—ಶಾಮುವಿನ ಕಾವ್ಯಮಯ ಸಂದೇಶ ನಾಗಪ್ಪನವರ ಮುಖದಲ್ಲಿ ಗೆಲುವು ಮೂಡಿಸಿತು.

ಅಷ್ಟರಲ್ಲಿ ಅತ್ತ ಸುಳಿದ ಸುಮಿತ್ರೆ—

"ಅಮ್ಮ, ಅಣ್ಣ ನಗುತ್ತಿದ್ದಾರೆ ನೋಡಿ"

—ಎಂದು ಕೂಗಿದಳು.

ನಡುಮನೆಯಲ್ಲಿ ಕುಳಿತಿದ್ದ ವೆಂಕಮ್ಮನವರು ಅಂಗಳಕ್ಕೆ ಬಂದರು. ಉಳಿದವರೂ ಅವರ ಹಿಂದೆಯೇ ಬಂದರು.

ನಾಗಪ್ಪನವರ ಮುಖದಲ್ಲಿ ಜ್ಞಾನೋದಯದ ಕಾಂತಿ ಮಿಂಚುತ್ತಿತ್ತು.

"ಅಣ್ಣ, ಹಿಂದೆ ಆದ ತಪ್ಪುಗಳನ್ನೆಲ್ಲಾ ಸರಿಪಡಿಸುವ ಅವಕಾಶ ಈಗ ಒದಗಿದೆ"

—ಎಂದ ಶಾಮು.

" ಆಗಲಿ ಮಗು. ಸರಿಪಡಿಸೋಣ."

" ಈಗ ದೊಡ್ಡತ್ತಿಗೆ—ಶೀನಣ್ಣನ ಹೆಂಡತಿ—ಬಂದರೆ, ಆಕೆಯನ್ನು ಆದರಿಸಲು ಸಿದ್ಧನಾಗಿರುವೆಯಾ? ಆಕೆಯನ್ನು ಒಳ್ಳೆಯ ರೀತಿಯಿಂದ ಕಾಣುವೆಯಾ ? "

—ಶಾಮುವಿನ ಮಾತಿಗೆ ಕೂಡಲೇ ಉತ್ತರಿಸದೆ, ವೆಂಕಮ್ಮನವರ ಮುಖವನ್ನು ನೋಡಿದರು ನಾಗಪ್ಪ.

" ಇನ್ನು ಅವಳೇಕೆ ಬರುತ್ತಾಳೆ ನಮ್ಮ ಮನೆಗೆ ? "

—ವೆಂಕಮ್ಮ ನಿರಾಶೆಯ ಧ್ವನಿಯಲ್ಲಿ ಹೇಳಿದರು.

" ಬರಬಾರದೆ ? "

" ಹಾಗೆಂದು ನಾನು ಹೇಳಲಿಲ್ಲ. ಬಂದರೆ ಅವಳನ್ನು ನನ್ನ ಮಗಳ ಹಾಗೆ ನೋಡಿಕೊಳ್ಳುತ್ತೇನೆ ಶಾಮು "

—ಎಂದರು ವೆಂಕಮ್ಮ.

" ಅಣ್ಣ, ನೀನೇನು ಹೇಳುತ್ತಿ ? "

" ನಿಮ್ಮ ತಾಯಿಯ ಮಾತೇ ನನ್ನ ಮಾತು."

" ಹಾಗಾದರೆ ಅತ್ತಿಗೆಯನ್ನು ಈಗ ಬರಹೇಳಲೇ ? "

" ಎಲ್ಲಿದ್ದಾಳೆ ? "

—ವೆಂಕಮ್ಮ ಕೇಳಿದರು.

" ಅಂತೂ ಶಾಮು ಅವಳನ್ನು ಹೇಗೋ ಕಂಡುಹಿಡಿದು ಬಿಟ್ಟಿದ್ದಾನೆ ನೋಡಕ್ಕ ! "

—ಎಂದು ಆಶ್ಚರ್ಯ ಸೂಚಿಸಿದಳು ಸೀತಕ್ಕ.

" ಸೀತಕ್ಕನಿಗೆ ಎಲ್ಲ ವಿಷಯಾ ತಿಳಿದಿದೆ. ಅವರೇ ಅತ್ತಿಗೆಯನ್ನು ಕರೆದುಕೊಂಡು ಬರುತ್ತಾರೆ ! "

—ಎಂದು ನಕ್ಕ ಶಾಮು.

ತನ್ನ ಮರೆಯಲ್ಲಿ ನಿಂತಿದ್ದ 'ರತ್ನಮ್ಮ'ನನ್ನು ಕರೆದುಕೊಂಡು ವೆಂಕಮ್ಮನವರ ಮುಂಗಡೆ ನಿಲ್ಲಿಸಿದಳು ಸೀತಕ್ಕ.

ಅರೆಕ್ಷಣ ಅವಳ ಮುಖವನ್ನು ನಿಟ್ಟಿಸಿದ ವೆಂಕಮ್ಮನವರು—

" ನಾಗರತ್ನಾ...."

—ಎಂದು ಕೂಗುತ್ತಾ ಅವಳನ್ನು ಅಪ್ಪಿಕೊಂಡರು.

" ಅತ್ತೇ...."

—ಎನ್ನುತ್ತಾ ನಾಗರತ್ನ ಅವರ ಎದೆಯನ್ನು ಅಪ್ಪಿಕೊಂಡರು.

ತನ್ನ ಮದುವೆಯಲ್ಲಿ ನಡೆದ ಒಂದು ಪ್ರಸಂಗದಲ್ಲಿ ಹೀಗೆಯೇ ತನ್ನನ್ನು ತನ್ನ ಅತ್ತೆ ಅಪ್ಪಿಕೊಂಡುದು ನಾಗರತ್ನಳ ನೆನಪಿನಲ್ಲಿ ಸುಳಿಯಿತು.

ಎರಡು ಕ್ಷಣಗಳ ಬಳಿಕ ಅಪ್ಪುಗೆಯಿಂದ ಬಿಡಿಸಿಕೊಂಡು, ವೆಂಕಮ್ಮ ನವರಿಗೂ ನಾಗಪ್ಪನವರಿಗೂ ನಮುಸ್ಕರಿಸಿದಳು ನಾಗರತ್ನ.

" ನಿನ್ನ ಗಂಡನಿಗೂ ನಮುಸ್ಕಾರ ಮಾಡು ತಾಯಿ "

—ಎಂದರು ವೆಂಕಮ್ಮ.

ನಾಗರತ್ನ ಶ್ರೀನಿವಾಸನ ಕಾಲುಮುಟ್ಟಿ ನಮುಸ್ಕರಿಸಿದಳು.

" ದೇವರು ಅವನ ಬಾಳನ್ನೂ ಬೆಳಕುಮಾಡಿದ"

ಎಂದು ಶ್ರೀನಿವಾಸನ ಕಡೆಗೆ ನೋಡಿ, ಕೃತಜ್ಞತೆಯಿಂದ ನುಡಿದರು. ವೆಂಕಮ್ಮ.

ಸರಸು, ಲಲಿತೆ, ಸುಮಿತ್ರೆಯರು ಬೆರಗುಗಣ್ಣುಗಳಿಂದ ಆ ದೃಶ್ಯವನ್ನು ನೋಡಿದರು.

ಎರಡು ನಿಮಿಷಗಳ ಬಳಿಕ—

" ಅತ್ತಿಗೆ, ನಿನ್ನ ಕೋರಿಕೆ ತಾನಾಗಿಯೇ ಈಡೇರುವ ದಿನ ಈಗ ಬಂದಿದೆ. ನಿನಗೆ ಸಂತೋಷವೇ ತಾನೆ ? "

—ಎಂದು ಕೇಳಿದ ಲಲಿತೆಯ ಕಡೆಗೆ ನೋಡುತ್ತಾ ಶಾಮು.

" ನನ್ನ ದೇವರಿಗೆ ಸಂತೋಷವಾದರೆ ನನಗೂ ಸಂತೋಷವೇ ! "

—ಎನ್ನುತ್ತಾ ಅರಳಿದ ಕಣ್ಣುಗಳಿಂದ ನಾಣಿಯ ಕಡೆಗೆ ನೋಡಿದಳು. ಲಲಿತೆ.

" ಏನು ರಾಮು ಅದು ? "

—ನಾಣಿ ಕೌತುಕದಿಂದ ಕೇಳಿದ.

ಆ ಪ್ರಶ್ನೆಗೆ ಉತ್ತರಿಸದೆ ಶಾಮು ತಾಯಿಯ ಮುಖ ನೋಡಿದ. ವೆಂಕಮ್ಮನವರು ಸೀತಕ್ಕನ ಕಡೆಗೆ ನೋಡಿದರು. ಶಾಂತು ತಾಯಿಯನ್ನು ದಿಟ್ಟಿಸಿದಳು.

“ ಈಗ ಮುಖ್ಯವಾಗಿ ಸೀತು ‘ ಹ್ಞ ’ ಅನ್ನಬೇಕು–ಅಲ್ಲವೆ ಶಾಮು ? ”

“ ಹೌದಮ್ಮ. ಆಗಲೆ ನಮಗೆಲ್ಲ ನಿಜವಾದ ಸಂತೋಷ.”

“ ಆರು ಕಾಸಿಗೆ ಬಂದವಳಲ್ಲ, ಮೂರು ಕಾಸಿಗೆ ಹೋದವಳಲ್ಲ; ನನ್ನ ಮಾತಿಗೂ ಬೆಲೆ ಇದೆಯೆ ಅಕ್ಕಾ ? ”

—ಸೀತಕ್ಕ ಕೇಳಿದಳು.

“ ಹೌದಮ್ಮ ನಿನ್ನ ಮಾತಿಗೆ ಇರುವ ಬೆಲೆ ಈಗ ಇನ್ನಾವುದಕ್ಕೂ ಇಲ್ಲ! ನೀನು ‘ ಹ್ಞ ’ ಎಂದು ಒಪ್ಪಿಗೆಕೊಟ್ಟರೆ, ಆಗ ನಿನಗೇ ಗೊತ್ತಾಗುತ್ತದೆ.”

—ಎಂದರು ವೆಂಕಮ್ಮ.

ಸೀತಕ್ಕ ‘ ಹ್ಞ ’ ಎಂದಳು. ವೆಂಕಮ್ಮ ಚುಟುಕಿನಲ್ಲಿ ವಿಷಯವನ್ನು ತಿಳಿಸಿದರು.

“ ಶಾಂತುವನ್ನು ನನ್ನ ತಂಗಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತೇನೆ ಸೀತಕ್ಕ. ಲೋಕದ ಕಣ್ಣಿಗೆ ಅವಳು ‘ ಸವತಿ ’ ಯಾದರೂ ನನ್ನ ಕಣ್ಣಿಗೆ ಮಾತ್ರ ಶಾಂತು ನನ್ನ ಮುದ್ದು ತಂಗಿ ! ”

—ಎನ್ನುತ್ತಾ ಲಲಿತ ಶಾಂತುವನ್ನು ಬಾಚಿ ತಬ್ಬಿಕೊಂಡಳು.

“ ಇದೇನು ಕನಸೋ—ನನಸೋ ! ”

—ಎಂದುಕೊಂಡ ನಾಣಿ ಬೆರಗುಗಣ್ಣುಗಳಿಂದ ಶಾಂತು–ಲಲಿತೆಯು ರನ್ನೇ ದಿಟ್ಟಿಸಿ ನೋಡಿದ.

“ ನಾಣಿ, ಇನ್ನು ಮೇಲೆ ಶಾಂತು ನಿನ್ನ ರಾಣಿ; ಲಲಿತತ್ತಿಗೆ ನಿನ್ನ ಪಾಲಿನ ದೇವತೆ ”

—ಎಂದ ಶಾಮು.

ಲಲಿತ ಶಾಂತುವಿನ ಕೈಯನ್ನು ನಾಣಿಯ ಕೈಯ್ಯಲ್ಲಿಟ್ಟಾಗ, ನಾಗಪ್ಪ ನವರು ಆನಂದಭಾಷ್ಪ ಹರಿಸಿದರು.

ಶಾಂತ–ನಾಣಿ ವೆಂಕಮ್ಮನವರ ಕಾಲಿಗೆ ಎರಗಿದಾಗ, ಆ ತಾಯಿ ದೇವಿಯ ಕಣ್ಣುಗಳಿಂದ ಮುತ್ತಿನಹನಿ ಅವರಿಬ್ಬರ ಮೇಲೆಯೂ ತೊಟ್ಟಿಟ್ಟು, ಅದೇ ಆಶೀರ್ವಾದವಾಯಿತು.

ಪಕ್ಕದಲ್ಲಿಯೇ ನಿಂತಿದ್ದ ಲಲಿತೆಯನ್ನು ತಬ್ಬಿಕೊಂಡು, ಮೃದುವಾಗಿ ಅವಳ ತಲೆಯನ್ನು ನೇವರಿಸುತ್ತಾ—

" ನೀನು ನನ್ನ ಸೊಸೆಯಲ್ಲಮ್ಮ. ನನ್ನ ಚಿಕ್ಕಮ್ಮನ ಹಾಗೆ ನೀನೂ ಒಬ್ಬಳು ದೇವಿ ! "

—ಎಂದರು ವೆಂಕಮ್ಮ.

ತುಂಬಿದಂತಃ ಕರುಣದಿಂದ ಬಂದ ತಾಯಿಯ ಮಾತು ಶಾಮುವಿಗೆ ಗಿರಿಜೆಯ ನೆನಪುಕೊಟ್ಟಿತು.

' ಅವಳಿದ್ದಿದ್ದರೆ ಲಲಿತತ್ತಿಗೆಯ ಜೊತೆಗೆ ಇನ್ನೊಬ್ಬ ದೇವಿಯಾಗುತ್ತಿದ್ದಳು ! '

—ಎಂದುಕೊಂಡ ಶಾಮು.

ಅವನ ಕಿವಿಯಲ್ಲಿ ಗಿರಿಜೆಯ ಹಾಡು ಮಧುರವಾಗಿ ಗುಂಯ್ ಗುಟ್ಟಿತು—

" ಶಾಮಸುಂದರನ ಕಂಡು ಮಾರುಹೋದಳು ರಾಧೆ ||
ಧಾರೆಧಾರೆಯಾಗಿ ಹರಿಯಿತು ಆನಂದದ ಪನ್ನೀರು || "

ಶಾಮು ತಲೆಯೆತ್ತಿ ಸುತ್ತಲೂ ನೋಡಿದ. ಎಲ್ಲರ ಕಣ್ಣುಗಳಲ್ಲಿಯೂ, ನಿಜವಾಗಿಯೂ ಆನಂದದ ಪನ್ನೀರೇ ಹರಿದಿತ್ತು.

ಈ ವರ್ಷದಲ್ಲಿ ನಮ್ಮ ವಾಚಕರಿಗೆ ರಸದೌತಣ

ಕನ್ನಡ ವಾಚಕವೃಂದಕ್ಕೇ ಸಂತೋಷದ ಸುದ್ದಿ

ಹುಟ್ಟಿದಂದಿನಿಂದ ಸಾಯುವವರೆಗೆ ಮಾನವನು ನಡೆಸುವ ವಿವಿಧ ರೀತಿಯ
ಜೀವನವನ್ನು ನೀವು ಹಲವಾರು ಭಾಷೆಗಳ ಸಾಹಿತ್ಯದಲ್ಲಿ
ಹಲವಾರು ರೀತಿಯಲ್ಲಿ ಓದಿರಬಹುದು. ಆದರೆ

ಸತ್ತನಂತರ ಹುಟ್ಟುವವರೆಗಿನ ರಹಸ್ಯ ಜೀವನ

ವೈಚಿತ್ರ್ಯವನ್ನು ಎಲ್ಲಾದರೂ ಓದಿದ್ದೀರಾ ?
ವಿಶ್ವಸಾಹಿತ್ಯದಲ್ಲೇ ಅತಿ ವಿರಳವಾದ ಕಥಾವಸ್ತು !
ಕನ್ನಡ ಸಾಹಿತ್ಯದಲ್ಲಿಯಾಗಲಿ ಅಥವಾ ಭಾರತದ ಇನ್ಯಾವ ಭಾಷೆಯಲ್ಲಿ
ಯಾಗಲಿ ಇದುವರೆಗೆ ಪ್ರಕಟವಾಗದ, ಅತಿ ನೂತನ ರೀತಿಯ,
ಅದ್ಭುತ ಪ್ರಧಾನ ಕಾದಂಬರಿ

ನಾ ಸತ್ತಮೇಲೆ....!

ವಾಸ್ತವಿಕತೆ–ಕಲ್ಪನೆ, ವಿಡಂಬನೆ–ವಿಚಾರ ಪ್ರಚೋದನೆಗಳ ಸಮ್ಮಿಳನವಾದ
ಕುತೂಹಲಕಾರಕವಾದ ರಮ್ಯ ಕಲಾಕೃತಿ

ಬದುಕಲು ಹುಟ್ಟಿ ಬಂದ ಮಾನವ ಸಾಯುವ ಸಮಯದಲ್ಲಿ ಪಡೆಯುವ ವಿಚಿತ್ರ ಅನುಭವ ಎಂತಹುದು ? ಸಾಯುವ ಮುನ್ನ ಮಾನವನಿಗಿದ್ದ ತೀರದ ಆಸೆ–ವಾಸನೆಗಳು, ಅವನು ಸತ್ತನಂತರ ಈಡೇರುವುವೆ ? ಆತನ ಆತ್ಮವೆಲ್ಲಿ ಹೋಗುತ್ತದೆ ? ನಕ್ಷತ್ರಲೋಕ, ಮಂಗಳಲೋಕ ಮತ್ತಿತರ ಗ್ರಹವಾಸಗಳಲ್ಲಿ ಆತ್ಮನು ಸಂಚರಿಸುವಾಗ ಕಂಡ ವೈಚಿತ್ರಗಳೇನು ? —ಇತ್ಯಾದಿ ವಿಷಯ ವೈವಿಧ್ಯತೆಯನ್ನೊಳಗೊಂಡ ಅಪೂರ್ವ ಕಾದಂಬರಿ.

ಪ್ರಕಟವಾಗುವುದು

ಸುದರ್ಶನ ಪ್ರಕಾಶನ

ತಾರಾನಿವಾಸ : : ತಿಪಟೂರು

ಸುದರ್ಶನ ಪ್ರಕಟನೆಗಳು

ಮೊದಲ ನೋಟ	ನುಡಿಮುತ್ತು
ಅಭಯ	ಮೋಡ ಚದುರಿತು
ಸ್ವಯಂವರ	ಸಂಸ್ಕೃತಿ
ಬಾಳ ಬಂಧನ	ಮಂಜುಳ
ಕಲಾವಿದ	ಒಬ್ಬಟ್ಟಿನ ಕಂಟ್ರಾಕ್ಟು
ಮಂಗಳ ದೀಪ	ಗೃಹಪ್ರವೇಶ
ರಷ್ಯಾದ ಕತೆಗಳು	ಸಾಹಿತ್ಯ ಸ್ವರೂಪ
ನಪುಂಸಕ	ಕೇದಿಗೆ ವನ
ಮಸಣದ ಹೂವು	ಅಳಿಯ ದೇವರು
ಅಪವಾದ	ವಿಶ್ವರಂಗ
ನತದೃಷ್ಟೆ	ರಾಜೇಶ್ವರಿ
ಶಕ್ತಿಪೂಜೆ	ಕವಲುದಾರಿ
ಸೇಡಿನ ಕಿಡಿ	ತೆರೆದ ಕಣ್ಣು
ಸಾಕ್ಷಾತ್ಕಾರ	ಪೂಜಾತಂತ್ರ
ಮಾವನ ಮನೆ	ತಂಬೂರಿ ತಮ್ಮಯ್ಯ
ಹೊಸ ಬಾಳು	ಮಾವನ ಮಗಳು
ಮಂತ್ರಶಕ್ತಿ	ಮಂಗಲಾಕ್ಷತೆ
ಪ್ರೇಮ ಬಂಧನ	ಪುಸ್ತಕ ಭಂಡಾರಗಳು
ಪುಸ್ತಕ ಹೇಳಿದ ಕಥೆ	ಕೀಚಕ
ಜೀವನಾದ	ತುಂಬಿದ ಮನೆ
ಹೃದಯಗೀತ	ಪಕೋಡಪ್ರಿಯ
ಧರ್ಮದೇವತೆ	ಗಾನಯೋಗಿ
ಮದುವೆಯ ಹಾಡು	ಕೊನೆಯ ದಾರಿ
ಬಿರಿದ ಭೂಮಿ	ಅಡಿಗೆ ಮನೆ
ಬನಶಂಕರಿ	ಟೀಪು ಪೈಗಂಬರ್
ಕಾರ್ಕೋಟಕ	ಹಸಿರು ನೆಲ
ಗಂಗಾ–ಗೌರಿ	ಪರದೇಶಿ
ನಕ್ಷತ್ರ ಗಾನ	ಸತ್ತವನು ಎದ್ದು ಬಂದಾಗ

ಹೇಮಂತನ ಮಗಳು

ಪ್ರಕಾಶಕರು :

ಸುದರ್ಶನ ಪ್ರಕಾಶನ

ತಾರಾನಿವಾಸ :: ತಿಪಟೂರು